
ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಅಭಿಮಾನ

ಭಾರತ–ಪಾಕಿಸ್ತಾನ ನಡುವಿನ ಕ್ರಿಕೆಟ್ ಪಂದ್ಯದ ವೇಳೆ ಭಾರತ ತಂಡದ ಅಭಿಮಾನಿಯೊಬ್ಬರು ಕಾಣಿಸಿಕೊಂಡಿದ್ದು ಹೀಗೆ



GM UNIVERSITY

Srishyla Educational Trust ®

GM UNIVERSITY
DAVANAGERE

WE ARE NOW A UNIVERSITY

The best invites the best

Start your journey of becoming a successful professional and responsible citizen today! Make the choice that will help shape your life through elevated scholarly exposure, pedagogy and learning at a University founded on the distinguished legacy of over 23 years of academic excellence of the GMIT & GMS Academy

Choose courses in the second round under CET Code:

E-303

ADMISSIONS OPEN 2023-24



Faculty of Engineering

B.Tech

- Computer Science & Engg.
- Information Science & Engg.
- Computer Science (AIML)
- Computer Science (Info Security)
- Computer Science (Data Science)
- Computer Science (Business System)
- Computer Science (Cyber Security)
- Computer Science (Cloud Computing)
- Computer Science (IOT)
- Electronics & Communications Engg.
- Electrical & Electronics Engg.

Diploma

- Computer Science & Engg.
- Electronics and Communication Engg.
- Mechanical Engg.

Faculty of Computer Application

UG Program

Bachelor of Computer Application (Data Science)

PG Program

Master of Computer Application (MCA)

Faculty of Commerce & Management

- Master of Commerce (M.Com.)
- Master of Business Administration (MBA)

Ph. D.

- Computer Science & Engg.
- Biomedical Engg.
- Electrical & Electronics Engg.
- Electronics and Communication Engg.
- Management Studies

GM UNIVERSITY

(Established under the Karnataka State Act No. 19 of 2023)

P. B. Road, Davanagere, Karnataka - 577 006

Admission Contact:

+91 63642 59993
+91 96200 96346
+91 93640 99720 / 721

Toll Free No.: 1800 123 7099

admissions@gmu.ac.in

www.gmu.ac.in

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ನೋಟ
ಮುಂಬೈನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಬಾಲಿವುಡ್ ನಟಿ ಸೈಯಾಮಿ ಖೇರ್ ಪಾಲ್ಗೊಂಡಿದ್ದರು



ಬನ್ನಿ ಓದೋಣ !

ಸಮಾಜ ಕಲ್ಯಾಣ ಇಲಾಖೆ

ಭಾರತದ ಸಂವಿಧಾನ

ಪ್ರಸ್ತಾವನೆ

ಭಾರತದ ಜನಗಳಾದ ನಾವು
ಭಾರತವನ್ನು ಒಂದು ಸಾರ್ವಭೌಮ ಸಮಾಜವಾದೀ
ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ
ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ;
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ:
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು
ಉಪಾಸನಾ ಸ್ವಾತಂತ್ರ್ಯ:
ಸ್ಥಾನಮಾನ ಹಾಗೂ ಅವಕಾಶ ಸಮಾನತೆ
ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು
ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು ಸುನಿಶ್ಚಿತಗೊಳಿಸಿ ಅವರಲ್ಲಿ
ಭ್ರಾತೃಭಾವನೆಯನ್ನು ವೃದ್ಧಿಗೊಳಿಸಲು
ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;
ನಮ್ಮ ಸಂವಿಧಾನ ಸಭೆಯಲ್ಲಿ
1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ
ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ,
ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.

ಭಾರತದ ಸಂವಿಧಾನ ಪೀಠಿಕೆಯನ್ನು ಓದುವ ಮೂಲಕ
ಕರ್ನಾಟಕ ಸರ್ಕಾರವು ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನವನ್ನು ಆಚರಿಸಲಿದೆ



15ನೇ ಸೆಪ್ಟೆಂಬರ್ 2023, ಬೆಳಿಗ್ಗೆ 10.00 ಗಂಟೆಗೆ
ಸನ್ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಉಪ ಮುಖ್ಯಮಂತ್ರಿಗಳು
ಮತ್ತು ಮಾನ್ಯ ಸಮಾಜ ಕಲ್ಯಾಣ ಸಚಿವರು,
ಸಹಸ್ರಾರು ಮಕ್ಕಳು ಮತ್ತು ಲಕ್ಷಾಂತರ ನಾಗರಿಕರಿಗೆ
ಭಾರತದ ಸಂವಿಧಾನ ಪೀಠಿಕೆಯನ್ನು
ಓದಲು ನೆರವಾಗುವರು.

Govt of Karnataka - SWD - International Day of Democracy
ವಿವರಗಳಿಗೆ QR CODE SCAN ಮಾಡಿ.



ಡಾ. ಹೆಚ್.ಸಿ. ಮಹದೇವಪ್ಪ,
ಮಾನ್ಯ ಸಮಾಜ ಕಲ್ಯಾಣ ಸಚಿವರು, ಭಾರತದ ಸಂವಿಧಾನದಲ್ಲಿ ಪ್ರತಿಪಾದಿತವಾಗಿರುವ ಪ್ರಜಾಪ್ರಭುತ್ವ ತತ್ವಗಳ ಕುರಿತು ಮಾತನಾಡುತ್ತಿರುವುದು.

ಇಂದಿನಿಂದ ನೋಂದಣಿ ಪ್ರಾರಂಭ.
ದಿನಾಂಕ: 12.09.2023,
ಸಂಜೆ 6.00 ಗಂಟೆಗೆ ಕೊನೆಗೊಳ್ಳಲಿದೆ

AMBEDKAR DEVELOPMENT CORPORATION | KARNATAKA MAHARSHI VALMIKI SCHEDULED TRIBES DEVELOPMENT CORPORATION LTD | KARNATAKA ADIJAMBAVA DEVELOPMENT CORPORATION | LIDKAR | KARNATAKA BHOVI DEVELOPMENT CORPORATION | KSSKDC | KARNATAKA THANDA

ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿ ಸಾಧಿಸಲು ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು; ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

www.thepreamble-swdkar.in ThePreambleGoK

ಭಾನುವಾರ, ಸೆಪ್ಟೆಂಬರ್ 3, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 245 | ಪುಟ 24
www.prajavani.net
prajavani.net | prajavani | prajavani | prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಭಾನುವಾರದ ಪುರವಣಿ
ಒಲಿಂಪಿಕ್ಸ್‌ನಲ್ಲಿ ಬಿ-ಬಾಯಿಂಗ್ ಸ್ಪರ್ಧೆ ಸೇರ್ಪಡೆಯಾದದ್ದೇ ಧಾರಾವಿಯಲ್ಲಿ ಕನಸುಗಳು ಗರಿಗೆದರಿವೆ

2080ರ ವೇಳೆಗೆ ಅಂತರ್ಜಲ ಮಟ್ಟ ಮೂರು ಪಟ್ಟು ಕುಸಿತ? 7
ಗದಗ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ರೈತರಿಗೆ ಬಂಪರ್ ಬೆಲೆ
ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ: ದೇವೇಗೌಡ 6
ಕ್ವಿಂಟಲ್ ಹೆಸರುಕಾಳಿಗೆ ₹15,001 8



ಕೆರೆ ಒಡಲಿಗೆ ಬೆಂಗಳೂರಿನ ಚರಂಡಿ ನೀರು ● ತರಕಾರಿ ಗುಣಮಟ್ಟ ಕುಸಿತ

ಅವಳಿ 'ವ್ಯಾಲಿ'ಯಲ್ಲಿ ಅಪಾಯ

3ನೇ ಹಂತದ ಶುದ್ಧೀಕರಣ ಆದರೆ
- ಕೊಳಚೆ ನೀರಿನಲ್ಲಿರುವ ನೈಟ್ರೇಟ್, ಸೀಸ, ರಂಜಕದಂತಹ ರಾಸಾಯನಿಕ ನಿವಾರಣೆ ಆಗುತ್ತದೆ
- ಅಪಾಯಕಾರಿ ಸೂಕ್ಷ್ಮಾಣು ಜೀವಿ ಹಾಗೂ ಬ್ಯಾಕ್ಟೀರಿಯಾ ನಿವಾರಣೆ
- ಕೈಗಾರಿಕೆ, ವಾಣಿಜ್ಯ ಹಾಗೂ ಆಸ್ಪತ್ರೆ ತ್ಯಾಜ್ಯಗಳ ಅಪಾಯಕಾರಿ ರಾಸಾಯನಿಕಗಳಿಗೆ ಕಡಿವಾಣ
- ಜಾನುವಾರುಗಳಿಗೆ ಕುಡಿಯಲು ಬಳಸಬಹುದು
- ಕೃಷಿ, ತೋಟಗಾರಿಕೆಗೆ ಬಳಸಬಹುದು

- ಕೆ.ಓಂಕಾರ ಮೂರ್ತಿ
- ಡಿ.ಎಂ.ಕುರ್ಕೆ ಪ್ರಶಾಂತ್

ಒಳನೋಟ
ನಿದ್ರಾವಸ್ಥೆಯಲ್ಲಿ ಸರ್ಕಾರ
ಪ್ರತಿಕ್ರಿಯಿಸಿ: 9606038256
feedback@prajavani.co.in

ಕೋಲಾರ/ಚಿಕ್ಕಬಳ್ಳಾಪುರ: ಮೂರ್‍ನಾಲ್ಕು ವರ್ಷಗಳಿಂದ ನಾವು ಬೆಳೆಯುತ್ತಿರುವ ತರಕಾರಿ, ಸೊಪ್ಪು ಮೊದಲಿನಂತೆ ಇಲ್ಲ. ರುಚಿ, ಬಣ್ಣ ಬದಲಾಗಿದೆ. ಮೊದಲಿನ ಗುಣಮಟ್ಟ ಕಾಯ್ದುಕೊಳ್ಳಲು ಆಗುತ್ತಿಲ್ಲ. ವರ್ತಕರು ಇದೇ ಕಾರಣ ನೀಡಿ ಖರೀದಿಸಲು ಹಿಂಜರಿಯುತ್ತಿದ್ದಾರೆ. ಸ್ಥಳೀಯ ಮಾರುಕಟ್ಟೆಯಲ್ಲೂ ಇದೇ ಕತೆ. ಏನು ಮಾಡೋದು ತೋಚುತ್ತಿಲ್ಲ...

ರಾಜಧಾನಿ ಬೆಂಗಳೂರು ಮಾರುಕಟ್ಟೆಗೆ ನಿತ್ಯ ತರಕಾರಿ, ಸೊಪ್ಪು ಪೂರೈಸುವ ಕೋಲಾರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ರೈತರನ್ನು ಮಾತನಾಡಿಸಿದಾಗ ಸಿಗುವ ಸಾಮಾನ್ಯ ಉತ್ತರವಿದು.

ಹೀಗೇಕೆ ಎಂದು ತರಕಾರಿ ಮಂಡಿ ವರ್ತಕರನ್ನು ವಿಚಾರಿಸಿದರೆ, 'ಹೌದು, ಈಗ ಬೆಳೆಯುವ ತರಕಾರಿ, ಸೊಪ್ಪು ಮತ್ತು ಟೊಮೆಟೊದಲ್ಲಿ ಮೊದಲಿನ ಗುಣಮಟ್ಟ ಇಲ್ಲ. ಬಹಳ ದಿನ ಸಂಗ್ರಹಿಸಿಡಲು ಆಗುತ್ತಿಲ್ಲ. ಬೇಗ ಕೊಳೆತು ಹೋಗುತ್ತಿವೆ. ಹೊರ ರಾಜ್ಯಗಳಿಗೆ ಕಳಿಸಲು ಆಗುತ್ತಿಲ್ಲ. ಕೋಲಾರ, ಚಿಕ್ಕಬಳ್ಳಾಪುರದ ತರಕಾರಿ, ಸೊಪ್ಪು ಎಂದು ಹೇಳಿದರೆ ಸಾಕು ಖರೀದಿಸಲು ಬೆಂಗಳೂರಿನ ಕೆಲ ಗ್ರಾಹಕರು ಮೂಗು ಮುರಿಯುತ್ತಾರೆ' ಎನ್ನುವ ಕಾರಣ ಮುಂದಿಡುತ್ತಾರೆ.

ಎರಡು ವರ್ಷಗಳಿಂದ ಟೊಮೆಟೊ ಗುಣಮಟ್ಟ ಕುಸಿಯುತ್ತಿದೆ, ಬೇಗ ಕೊಳೆತು ಹೋಗುತ್ತಿದೆ. ಮೊದಲಿನಂತೆ ಬಹಳ ದಿನ ಸಂಗ್ರಹಿಸಿಡಲು ಆಗುತ್ತಿಲ್ಲ. ಯಾವುದೇ ತಳಿಯ ಟೊಮೆಟೊ ಬೆಳೆದರೂ ಮೊದಲಿನ ಗುಣಮಟ್ಟ ಕಾಯ್ದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಟೊಮೆಟೊ ದಾರಿ ಮಧ್ಯೆಯೇ ಕೆಡುತ್ತಿದೆ. ಮೂರ್‍ನಾಲ್ಕು ವರ್ಷಗಳ ಹಿಂದೆ ಹೀಗೆ ಆಗುತ್ತಿರಲಿಲ್ಲ. ಟೊಮೆಟೊ ಗುಣಮಟ್ಟ ಕುಸಿಯಲು, ಫಸಲು ಕಡಿಮೆಯಾಗಲು ಕೆ.ಸಿ.ವ್ಯಾಲಿ ನೀರು ಪ್ರಮುಖ ಕಾರಣ ಎನ್ನುವುದು ಸಿಎಂಆರ್ ಟೊಮೆಟೊ ಮಂಡಿ ಮಾಲೀಕ ಸಿಎಂಆರ್ ಶ್ರೀನಾಥ್ ವಾದ.

'ಕೆಲ ದಿನಗಳಿಂದ ನನ್ನ ತಾಯಿ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದಾರೆ. ನಿಯಮಿತವಾಗಿ ಚಿಕಿತ್ಸೆಗಾಗಿ ಬೆಂಗಳೂರಿನ ಖಾಸಗಿ ಆಸ್ಪತ್ರೆಯೊಂದಕ್ಕೆ ಕರೆದುಕೊಂಡು ಹೋಗುತ್ತೇನೆ. ಯಾವಾಗಲೂ ಬೆಂಗಳೂರು ಗ್ರಾಮಾಂತರ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಅನೇಕರು ಅಲ್ಲಿರುತ್ತಾರೆ. ಹೆಚ್ಚಿನವರು ತುರಿಕೆ, ಚರ್ಮರೋಗ ಸಮಸ್ಯೆಗೆ ಚಿಕಿತ್ಸೆ ಪಡೆಯಲು ಬಂದಿರುತ್ತಾರೆ.

4ನೇ ಪುಟ ನೋಡಿ

ಕಾಯಿಲೆ ಎದುರಿಸಲು ಸಿದ್ಧರಾಗಿ: ವಿಜ್ಞಾನಿ ಡಾ.ಟಿ.ವಿ.ರಾಮಚಂದ್ರ



ಕೆ.ಸಿ ಮತ್ತು ಎಚ್.ಎನ್.ವ್ಯಾಲಿ ನೀರಿನಲ್ಲಿ ಕೈಗಾರಿಕೆ ಮತ್ತು ಆಸ್ಪತ್ರೆ ತ್ಯಾಜ್ಯ ಸೇರಿವೆ. ಆದ್ದರಿಂದ ಮೂರನೇ ಹಂತದ ಶುದ್ಧೀಕರಣ ಅತ್ಯಗತ್ಯ. ಅಂತರ್ಜಲ ಮರುಪೂರಣಕ್ಕೆ ಈ ಯೋಜನೆ ಅಗತ್ಯವಾಗಿದ್ದರೂ ಕೇವಲ ಎರಡು ಹಂತದಲ್ಲಿ ನೀರನ್ನು ಸಂಸ್ಕರಿಸಿದರೆ ಖಂಡಿತ ಸುರಕ್ಷಿತ ಅಲ್ಲ. ಸದ್ಯಕ್ಕೆ ಸಮಸ್ಯೆ ಗೋಚರಿಸದಿದ್ದರೂ ಭವಿಷ್ಯದಲ್ಲಿ ಖಂಡಿತ ಅಪಾಯ ಕಾದಿದೆ. ಎರಡು ವರ್ಷದಿಂದ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಭಾರಿ ಮಳೆ ಆಗಿದೆ. ಹೀಗಾಗಿ ಸಮಸ್ಯೆ ತೀವ್ರಗೊಂಡಿಲ್ಲ.

ಎರಡು ಹಂತದ ಶುದ್ಧೀಕರಣದ ನಂತರವೂ ನೀರಿನಲ್ಲಿ ಕ್ಯಾಡ್ಮಿಯಂ, ಕ್ರೋಮಿಯಂ, ತಾಮ್ರ, ನಿಕ್ಕೆಲ್, ಸೀಸ, ಸತು ಮುಂತಾದ ಲೋಹಧಾತು, ರಾಸಾಯನಿಕ ಅಂಶ ಕಂಡು ಬಂದಿವೆ. ಇವು ಆಹಾರದಲ್ಲಿ ಸೇರಿ ಆರೋಗ್ಯದ ಮೇಲೆ ಭಾರಿ ಪರಿಣಾಮ ಉಂಟು ಮಾಡುತ್ತಿವೆ. ವರ್ತೂರು ಕೆರೆ ಸುತ್ತ ಅಂತರ್ಜಲ ಕಲುಷಿತಗೊಂಡಿದೆ. ಇಲ್ಲಿ ಬೆಳೆದ ಮೂಲಂಗಿ, ಗಜ್ಜರಿ, ಕೋಸು ಹಾಗೂ ತರಕಾರಿಯಲ್ಲಿ ಲೋಹಧಾತುವಿನ ಅಂಶ ಕಂಡು ಬಂದಿದೆ. ಆ ಪ್ರದೇಶದ ಬಾವಿ, ಕೊಳವೆಬಾವಿ ನೀರಿನಲ್ಲಿ ನೈಟ್ರೇಟ್ ಅಂಶ ಪತ್ತೆಯಾಗಿದೆ.

ಇಲ್ಲಿ ಬೆಳೆದ ತರಕಾರಿ, ಸೊಪ್ಪುಗಳನ್ನು ದೀರ್ಘ ಕಾಲ ಸೇವಿಸಿದರೆ ಕಿಡ್ನಿ ವೈಫಲ್ಯ, ಯಕೃತ್ ಸಮಸ್ಯೆ, ಹೃದಯ ಸಂಬಂಧಿ ಕಾಯಿಲೆ, ಚರ್ಮ ವ್ಯಾಧಿ ಕಾಣಿಸಿಕೊಳ್ಳುತ್ತವೆ.

4ನೇ ಪುಟ ನೋಡಿ

ಆದಿತ್ಯ ಎಲ್–1 ಆಗಸದತ್ತ ನೆಗೆತ

ಇಸ್ರೊಗೆ ಮತ್ತೊಂದು ಗರಿ ● ಸೂರ್ಯ ವೀಕ್ಷಣಾಲಯ ಯಶಸ್ವಿ ಉಡ್ಡಯನ

ಶ್ರೀಹರಿಕೋಟ (ಆಂಧ್ರ ಪ್ರದೇಶ) (ಪಿಟಿಐ): ಸೂರ್ಯನ ಅಧ್ಯಯನದ ಉದ್ದೇಶದ, ಭಾರತದ ಮಹತ್ವಾಕಾಂಕ್ಷೆಯ ಆದಿತ್ಯ ಎಲ್1 ವೀಕ್ಷಣಾಲಯವನ್ನು ಹೊತ್ತ ರಾಕೆಟ್ ಅನ್ನು ಶನಿವಾರ ಯಶಸ್ವಿಯಾಗಿ ಉಡ್ಡಯನ ಮಾಡಲಾಗಿದೆ. ಚಂದ್ರಯಾನ–3ರ ಯಶಸ್ಸಿನ ನಂತರದ ಮೂರನೇ ದಿನವೇ ಇಸ್ರೊ ಮತ್ತೊಂದು ಹಿರಿಮೆಗೆ ಪಾತ್ರವಾಗಿದೆ.

23.40 ತಾಸುಗಳ ಕ್ಷಣಗಣನೆ ಬಳಿಕ ಪಿಎಸ್‌ಎಲ್‌ವಿ ಉಡಾವಣಾ ವಾಹನವು ಶನಿವಾರ ಬೆಳಿಗ್ಗೆ 11.50ರ ಹೊತ್ತಿಗೆ ಶ್ರೀಹರಿಕೋಟದ ಉಡ್ಡಯನ ಕೇಂದ್ರದಿಂದ ಆಗಸದತ್ತ ಚಿಮ್ಮಿತು.

ಪಿಎಸ್‌ಎಲ್‌ವಿಯ ಅತ್ಯಂತ ದೀರ್ಘ ಪಯಣ ಇದಾಗಿದ್ದು, ಒಟ್ಟು 63 ನಿಮಿಷ ಹಾರಾಟ ನಡೆಸಿದೆ ಎಂದು ಇಸ್ರೊ ಹೇಳಿದೆ. ಆದಿತ್ಯ ಎಲ್1 ಬಾಹ್ಯಾಕಾಶದಲ್ಲಿಯೇ ನೆಲೆಯೂರಿ ಸೂರ್ಯನ ಅಧ್ಯಯನ ನಡೆಸಲಿರುವ ಮೊದಲ ವೀಕ್ಷಣಾಲಯ ಎನಿಸಿಕೊಳ್ಳಲಿದೆ. 15 ಲಕ್ಷ ಕಿ.ಮೀ. ಪ್ರಯಾಣದ ಬಳಿಕ ಇದನ್ನು ಲಗ್ರಾಂಜಿಯನ್ ಬಿಂದುವಿನಲ್ಲಿ ನೆಲೆಗೊಳಿಸಲಾಗುವುದು.

5ನೇ ಪುಟ ನೋಡಿ



ಆದಿತ್ಯ ಎಲ್1 ವೀಕ್ಷಣಾಲಯವನ್ನು ಹೊತ್ತ ರಾಕೆಟ್ ಶ್ರೀಹರಿಕೋಟದ ಉಡ್ಡಯನ ಕೇಂದ್ರದಿಂದ ಶನಿವಾರ ಆಗಸದತ್ತ ಚಿಮ್ಮಿತು –ಪಿಟಿಐ ಚಿತ್ರ

100 ಮೀಟರ್ ಸಾಗಿದ ಪ್ರಜ್ಞಾನ್

ಚಂದ್ರಯಾನ–3ರ ರೋವರ್ ಪ್ರಜ್ಞಾನ್, ಲ್ಯಾಂಡರ್ ವಿಕ್ರಮ್‌ನಿಂದ ಸುಮಾರು ನೂರು ಮೀಟರ್‌ನಷ್ಟು ದೂರ ಸಾಗಿದೆ. ಲ್ಯಾಂಡರ್ ಮತ್ತು ರೋವರ್‌ಗಳೆರಡೂ ಅತ್ಯುತ್ತಮವಾಗಿ ಕೆಲಸ ಮಾಡುತ್ತಿವೆ. ಲ್ಯಾಂಡರ್ ಮತ್ತು ರೋವರ್ ರಾತ್ರಿಯಲ್ಲಿ ಕಾರ್ಯಾಚರಣೆ ಸ್ಥಗಿತಗೊಳಿಸುವ ಪ್ರಕ್ರಿಯೆಯನ್ನು ಇನ್ನು ಒಂದೆರಡು ದಿನಗಳಲ್ಲಿ ನಡೆಸಬೇಕು. ಏಕೆಂದರೆ, ಚಂದ್ರನ ಮೇಲಿನ ರಾತ್ರಿಯನ್ನು ಇವುಗಳು ತಾಳಿಕೊಳ್ಳಬೇಕಾಗಿದೆ ಎಂದು ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್ ಹೇಳಿದ್ದಾರೆ.

ಪ್ರಯಾಣದ ಸುತ್ತ...

- ಆದಿತ್ಯ ಎಲ್1 ಅನ್ನು ಭೂಮಿಯ ಕೆಳ ಹಂತದ ಕಕ್ಷೆಯಲ್ಲಿ ಮೊದಲಿಗೆ ಇರಿಸಲಾಗುವುದು
- ಆದಿತ್ಯ ಎಲ್1ನಲ್ಲಿ ಇರುವ ವ್ಯವಸ್ಥೆಯು ಇದನ್ನು ಭೂಮಿಯ ಗುರುತ್ವಾಕರ್ಷಣ ವ್ಯಾಪ್ತಿಯಿಂದ ಹೊರಗೆ ಒಯ್ಯಲಿದೆ
- ನಂತರ ಆದಿತ್ಯ ಎಲ್1 ಲಗ್ರಾಂಜಿಯನ್ ಬಿಂದುವಿನತ್ತ ಪ್ರಯಾಣ ಆರಂಭಿಸಲಿದೆ
- ಬಳಿಕ, ಸೂರ್ಯನ ಸಮೀಪದ ಲಗ್ರಾಂಜಿಯನ್ ಬಿಂದುವಿನ ಸುತ್ತಲಿನ ಕಕ್ಷೆಗೆ ಸೇರಿಸಲಾಗುವುದು
- ಆದಿತ್ಯ ಎಲ್1ನಲ್ಲಿ ಒಟ್ಟು ಏಳು ಉಪಕರಣಗಳಿವೆ
- ಇದು ದಿನವೊಂದಕ್ಕೆ 1,440 ಫೋಟೊಗಳನ್ನು ಕಳುಹಿಸಲಿದೆ.


ಪ್ರಮಾಣಪತ್ರಗಳಲ್ಲಿ ಆಧಾರ್ ಸಂಖ್ಯೆ ಮುದ್ರಣಕ್ಕೆ ಯುಜಿಸಿ ನಿಷೇಧ

ನವದೆಹಲಿ (ಪಿಟಿಐ): 'ಪದವಿ ಪ್ರಮಾಣಪತ್ರಗಳು ಹಾಗೂ ತಾತ್ಕಾಲಿಕ ಪ್ರಮಾಣಪತ್ರಗಳ ಮೇಲೆ ವಿದ್ಯಾರ್ಥಿಗಳ ಆಧಾರ್ ಸಂಖ್ಯೆಯನ್ನು ಮುದ್ರಿಸದಂತೆ ವಿಶ್ವವಿದ್ಯಾಲಯ ಅನುದಾನ ಆಯೋಗವು (ಯುಜಿಸಿ) ಎಲ್ಲ ವಿಶ್ವವಿದ್ಯಾಲಯಗಳಿಗೆ ಸೂಚನೆ ನೀಡಿದೆ.

'ನೇಮಕಾತಿ ಅಥವಾ ಪ್ರವೇಶದ ಸಮಯದಲ್ಲಿ ದಾಖಲೆಗಳ ಪರಿಶೀಲನೆಗಾಗಿ ಹಾಗೂ ನಂತರ ಇತರ ಬಳಕೆಗಾಗಿ ಪದವಿ ಪ್ರಮಾಣಪತ್ರ ಹಾಗೂ ತಾತ್ಕಾಲಿಕ ಪ್ರಮಾಣಪತ್ರಗಳಲ್ಲಿ ವಿದ್ಯಾರ್ಥಿಗಳ ಪೂರ್ಣ ಆಧಾರ್ ಸಂಖ್ಯೆಯನ್ನು ಮುದ್ರಿಸುವ ಸಲುವಾಗಿ ರಾಜ್ಯ ಸರ್ಕಾರಗಳು ಪರಿಶೀಲನೆ ನಡೆಸುತ್ತಿವೆ' ಎಂಬ ವರದಿ ಬಂದ ಕಾರಣ ಯುಜಿಸಿ ಈ ನಿರ್ದೇಶನ ನೀಡಿದೆ. 'ಪದವಿಗಳು ಮತ್ತು ತಾತ್ಕಾಲಿಕ ಪ್ರಮಾಣಪತ್ರಗಳಲ್ಲಿ ಆಧಾರ್ ಸಂಖ್ಯೆಗಳನ್ನು ಮುದ್ರಿಸಲು ಅನುಮತಿಯಿಲ್ಲ. ಉನ್ನತ ಶಿಕ್ಷಣ ಸಂಸ್ಥೆಗಳು ಭಾರತೀಯ ವಿಶಿಷ್ಟ ಗುರುತುಚೀಟಿ ಪ್ರಾಧಿಕಾರದ ನಿಯಮಗಳು ಮತ್ತು ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕು' ಎಂದೂ ಅವರು ಸೂಚಿಸಿದ್ದಾರೆ.

ಆಧಾರ್ ಸಂಖ್ಯೆಯನ್ನು ಪಡೆದುಕೊಳ್ಳುವ ಯಾವುದೇ ಸಂಸ್ಥೆಯು ಅದಕ್ಕೆ ಸಂಬಂಧಿಸಿದ ಯಾವುದೇ ಮಾಹಿತಿಯನ್ನು ಬಹಿರಂಗಪಡಿಸಬಾರದು ಎಂಬ ನಿಯಮ ಇದೆ ಎಂದು ಯುಜಿಸಿ ಕಾರ್ಯದರ್ಶಿ ಮನೀಶ್ ಜೋಷಿ ಹೇಳಿದ್ದಾರೆ.

ಮಾಧವನ್ ಎಫ್‌ಟಿಐಐ ಅಧ್ಯಕ್ಷ




ನವದೆಹಲಿ (ಪಿಟಿಐ): ಪುಣೆಯ ಭಾರತೀಯ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆಯ (ಎಫ್‌ಟಿ ಐಐ) ಅಧ್ಯಕ್ಷರಾಗಿ ನಟ, ಚಿತ್ರ ನಿರ್ಮಾಪಕ ಆರ್. ಮಾಧವನ್ ಅವರನ್ನು ನಾಮನಿರ್ದೇಶನ ಮಾಡಲಾಗಿದೆ.

ಈ ಕುರಿತ ಸುದ್ದಿಯನ್ನು ಕೇಂದ್ರ ಸಚಿವ ಅನುರಾಗ್ ಠಾಕೂರ್ ಅವರು 'ಎಕ್ಸ್' ವೇದಿಕೆಯಲ್ಲಿ ಹಂಚಿ ಕೊಂಡಿದ್ದಾರೆ.

'ನಿಮ್ಮ ಅಪಾರ ಅನುಭವ ಮತ್ತು ನೈತಿಕ ಬಲವು ಈ ಸಂಸ್ಥೆಯನ್ನು ಸಮೃದ್ಧಗೊಳಿಸಲಿದೆ. ಸಕಾರಾತ್ಮಕ ಬದಲಾವಣೆ ತಂದು ಸಂಸ್ಥೆಯನ್ನು ಉನ್ನತ ಮಟ್ಟಕ್ಕೆ ಒಯ್ಯಲಿದೆ ಎನ್ನುವ ಭರವಸೆ ನನ್ನದು. ನಿಮಗೆ ಶುಭವಾಗಲಿ' ಎಂದು ಹಾರೈಸಿದ್ದಾರೆ.

'ಇಸ್ರೊ' ವಿಜ್ಞಾನಿ ನಂಬಿ ನಾರಾಯಣನ್ ಜೀವನಾಧಾರಿತ 'ರಾಕೆಟ್ರಿ: ದ ನಂಬಿ ಎಫೆಕ್ಟ್' ಸಿನಿಮಾದ ಮೂಲಕ ಮಾಧವನ್ ಚಿತ್ರ ನಿರ್ಮಾಪಕರಾಗಿದ್ದು, ಈ ಸಿನಿಮಾಕ್ಕೆ ರಾಷ್ಟ್ರಪ್ರಶಸ್ತಿ ದೊರೆತಿದೆ.

ಚಿನಕುರಳಿ
ಪ್ರಕಾಶ್ ಶೆಟ್ಟಿ



ರಾಜಸ್ಥಾನ: ಗರ್ಭಿಣಿ ಮೇಲೆ ದೌರ್ಜನ್ಯ, 10 ಮಂದಿ ಸೆರೆ

ಪತಿಯಿಂದ ಪತ್ನಿ ಬೆತ್ತಲೆ ಮೆರವಣಿಗೆ

ಜೈಪುರ (ಪಿಟಿಐ): ಗರ್ಭಿಣಿ ಪತ್ನಿಯನ್ನು ಗಂಡನು ಗ್ರಾಮಸ್ಥರ ಎದುರಿನಲ್ಲಿ ಬೆತ್ತಲೆಗೊಳಿಸಿ ಮೆರವಣಿಗೆ ನಡೆಸಿರುವ ಘಟನೆ ರಾಜಸ್ಥಾನದ ಪ್ರತಾಪಗಢ ಜಿಲ್ಲೆಯ ಹಳ್ಳಿಯೊಂದರಲ್ಲಿ ನಡೆದಿದೆ.

ಬುಡಕಟ್ಟು ಸಮುದಾಯಕ್ಕೆ ಸೇರಿದ 21 ವರ್ಷದ ಈ ಮಹಿಳೆಯ ಬೆತ್ತಲೆ ಮೆರವಣಿಗೆಯ ವಿಡಿಯೊ ಜಾಲತಾಣಗಳಲ್ಲಿ ಹರಿದಾಡಿದ್ದು, ದೇಶದಾದ್ಯಂತ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ತಪ್ಪಿತಸ್ಥ ಪತಿ ಸೇರಿದಂತೆ ಕೃತ್ಯಕ್ಕೆ ಸಹಕರಿಸಿದ ಆರೋಪದ ಮೇಲೆ 10 ಮಂದಿಯನ್ನು ಪೊಲೀಸರು ಶನಿವಾರ ಬಂಧಿಸಿದ್ದಾರೆ. ಬಾಲಕನನ್ನು ವಶಕ್ಕೆ ಪಡೆಯಲಾಗಿದೆ. ಪ್ರಕರಣದ ತನಿಖೆಗಾಗಿ ರಾಜಸ್ಥಾನ ಸರ್ಕಾರವು ಎಸ್‌ಐಟಿ ರಚಿಸಿದೆ.

ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಧರಿಯಾವಾಡದಲ್ಲಿ ಸಂತ್ರಸ್ತ ಕುಟುಂಬದ ಸದಸ್ಯರನ್ನು ಭೇಟಿ ಮಾಡಿ ₹ 10 ಲಕ್ಷ ಪರಿಹಾರ ಘೋಷಿಸಿದ್ದಾರೆ. ಸಂತ್ರಸ್ತೆಗೆ ಸರ್ಕಾರಿ ಉದ್ಯೋಗ ನೀಡುವ ಭರವಸೆ ನೀಡಿದ್ದಾರೆ. 'ಕೌಟುಂಬಿಕ ಕಲಹದಿಂದ ಮಹಿಳೆಯ ಮೇಲೆ ದೌರ್ಜನ್ಯ ಎಸಗಿರುವುದು ಅಮಾನವೀಯ. ಸರ್ಕಾರ ಇದನ್ನು ಸಹಿಸುವುದಿಲ್ಲ' ಎಂದು ಗೆಹಲೋತ್ ಹೇಳಿದ್ದಾರೆ.

'ವಿವಾಹೇತರ ಸಂಬಂಧ': 'ಮದುವೆ ಬಳಿಕ ಗಂಡನ ಬಗ್ಗೆ ಅತೃಪ್ತಿಗೊಂಡಿದ್ದ ಸಂತ್ರಸ್ತೆಯು ಬೇರೊಬ್ಬರ ಜೊತೆ ಸಂಬಂಧ ಹೊಂದಿ ಆತನೊಟ್ಟಿಗೆಯೇ ವಾಸಿಸುತ್ತಿದ್ದರು. ಇದರಿಂದ ಪತಿ ಹಾಗೂ ಆತನ ಮನೆಯವರು ಕುಪಿತಗೊಂಡಿದ್ದರು. ಆಕೆಯನ್ನು ಅಪಹರಿಸಿ ಕೃತ್ಯ ನಡೆದಿರುವ ಗ್ರಾಮಕ್ಕೆ ಕರೆತಂದಿದ್ದ ಅವರು, ಗ್ರಾಮಸ್ಥರ ಎದುರು ಥಳಿಸಿದ್ದರು. ಬಳಿಕ ಬೆತ್ತಲೆ ಮೆರವಣಿಗೆ ನಡೆಸಿದ್ದಾರೆ. ಗುರುವಾರ ಈ ಕೃತ್ಯ ನಡೆದಿದೆ' ಎಂದು ಡಿಜಿಪಿ ಉಮೇಶ್ ಮಿಶ್ರಾ ತಿಳಿಸಿದ್ದಾರೆ.

ಮುಖ್ಯಮಂತ್ರಿ ಅವರ ಸೂಚನೆ ಮೇರೆಗೆ ಹೆಚ್ಚಿನ ತನಿಖೆಗಾಗಿ ಎಡಿಜಿಪಿ (ಅಪರಾಧ) ದಿನೇಶ್ ಎಂ.ಎನ್. ಅವರನ್ನು ಶುಕ್ರವಾರ ರಾತ್ರಿಯೇ ಗ್ರಾಮಕ್ಕೆ ಕಳುಹಿಸಲಾಗಿದೆ. ಸರ್ಕಾರವು ಈ ಕೃತ್ಯವನ್ನು ಗಂಭೀರವಾಗಿ ಪರಿಗಣಿಸಿದ್ದು, ಪ್ರತಾಪಗಢ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗ್ರಾಮದಲ್ಲಿಯೇ ಮೊಕ್ಕಾಂ ಹೂಡಿದ್ದಾರೆ ಎಂದು ತಿಳಿಸಿದ್ದಾರೆ.

> ಇಂತಹ ಕೃತ್ಯ ಸಹಿಸುವುದಿಲ್ಲ. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮಕ್ಕೆ ಸರ್ಕಾರ ಬದ್ಧ. ಪ್ರಕರಣದ ವಿಚಾರಣೆಗೆ ತ್ವರಿತ ವಿಲೇವಾರಿ ನ್ಯಾಯಾಲಯ ಸ್ಥಾಪಿಸಲಾಗುವುದು
> **ಅಶೋಕ್ ಗೆಹಲೋತ್**
> ಮುಖ್ಯಮಂತ್ರಿ, ರಾಜಸ್ಥಾನ

> ಜಾಲತಾಣಗಳಲ್ಲಿ ವಿಡಿಯೊ ಹರಿದಾಡುತ್ತಿದ್ದರೂ ಸರ್ಕಾರಕ್ಕೆ ಇದರ ಅರಿವು ಇಲ್ಲ. ರಾಜಸ್ಥಾನಕ್ಕೆ ಕಳಂಕ ತರುವ ಈ ವಿಡಿಯೊವನ್ನು ಜನರು ಹಂಚಿಕೊಳ್ಳಬಾರದು
> **ವಸುಂಧರಾ ರಾಜೇ**
> ಮಾಜಿ ಮುಖ್ಯಮಂತ್ರಿ

ಸ್ತ್ರೀಯರಿಗೆ ಸುರಕ್ಷತೆ ಇಲ್ಲ: ನಡ್ಡಾ ಟೀಕೆ

'ಮಹಿಳೆಯ ಬೆತ್ತಲೆ ಮೆರವಣಿಗೆ ವಿಡಿಯೊ ಆಘಾತ ತಂದಿದೆ. ರಾಜಸ್ಥಾನದಲ್ಲಿ ಮಹಿಳೆಯರಿಗೆ ಸುರಕ್ಷತೆ ಇಲ್ಲ. ಮುಖ್ಯಮಂತ್ರಿ ಮತ್ತು ಸಚಿವರು ಒಳಜಗಳ ಶಮನದಲ್ಲಿಯೇ ಮುಳುಗಿದ್ದಾರೆ. ಉಳಿದ ಅವಧಿಯಲ್ಲಿ ದೆಹಲಿಯಲ್ಲಿರುವ ಹೈಕಮಾಂಡ್ ಅನ್ನು ಸಮಾಧಾನಪಡಿಸುವುದೇ ಅವರ ಕೆಲಸವಾಗಿದೆ' ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಟೀಕಿಸಿದ್ದಾರೆ.

ಭಾರಿ ಮಳೆ ಸಾಧ್ಯತೆ 'ಯೆಲ್ಲೊ ಅಲರ್ಟ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಉತ್ತರ ಒಳನಾಡು, ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಕೆಲವು ಜಿಲ್ಲೆಗಳಲ್ಲಿ ಭಾನುವಾರ ಮತ್ತು ಸೋಮವಾರ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮುನ್ಸೂಚನೆ ನೀಡಿದೆ.

ಭಾನುವಾರ ಬೀದರ್, ಕಲಬುರಗಿ, ಸೋಮವಾರ ಕಲಬುರಗಿ, ಬಾಗಲಕೋಟೆ, ಕೊಪ್ಪಳ ಜಿಲ್ಲೆಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ.

ಬೆಳಗಾವಿ, ಚಾಮರಾಜನಗರ, ಕೋಲಾರ, ರಾಮನಗರ ಜಿಲ್ಲೆಯ ಅಲ್ಲಲ್ಲಿ ಉತ್ತಮ ಮಳೆಯಾಗುವ ನಿರೀಕ್ಷೆಯಿದೆ. ಬೆಂಗಳೂರಿನಲ್ಲೂ ಮೋಡ ಕವಿದ ವಾತಾವರಣ ಇರಲಿದ್ದು, ಸಂಜೆ ಅಥವಾ ರಾತ್ರಿ ಜೋರು ಮಳೆಯಾಗಲಿದೆ ಎಂದು ಐಎಂಡಿ ತಿಳಿಸಿದೆ.

ಶನಿವಾರ ಬೆಳಿಗ್ಗೆ 8.30ಕ್ಕೆ ಕೊನೆಯಾದಂತೆ ಕಳೆದ 24 ಗಂಟೆಯಲ್ಲಿ ಯಾದಗಿರಿಯ ಶಹಾಪುರದಲ್ಲಿ 12 ಸೆಂ.ಮೀ, ಮಂಡ್ಯದ ಮಳವಳ್ಳಿಯಲ್ಲಿ 9, ಬಾಗಲಕೋಟೆಯ ಕೂಡಲಸಂಗಮ, ಮಂಡ್ಯದ ಮದ್ದೂರಿನಲ್ಲಿ ತಲಾ 6, ಕೊಪ್ಪಳದ ತಾವರಗೆರೆ, ಚಾಮರಾಜನಗರ ಜಿಲ್ಲೆಯ ಬಂಡೀಪುರ, ಚಿತ್ರದುರ್ಗದಲ್ಲಿ ತಲಾ 5 ಸೆಂ.ಮೀ ಮಳೆ ಸುರಿದಿದೆ.

ಬೆಂಗಳೂರಿನಲ್ಲಿ ಮಳೆ: ನಗರದ ಹಲವೆಡೆ ಶನಿವಾರ ಸಂಜೆ ಮಳೆ ಸುರಿದು ತಂಪೆರೆಯಿತು. ರಾಜರಾಜೇಶ್ವರಿ ನಗರ, ಕೆಂಗೇರಿ, ಕೋಣನಕುಂಟೆ, ಉತ್ತರಹಳ್ಳಿ ಭಾಗದಲ್ಲಿ ಜೋರು ಮಳೆಯಾಗಿದೆ.

ಉದಯ್ ಕೋಟಕ್ ರಾಜೀನಾಮೆ



ನವದೆಹಲಿ (ಪಿಟಿಐ): ಕೋಟಕ್ ಮಹೀಂದ್ರ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಸ್ಥಾನಕ್ಕೆ ಉದಯ್ ಕೋಟಕ್ ಅವರು ರಾಜೀನಾಮೆ ನೀಡಿದ್ದಾರೆ. ಈ ಕುರಿತು ಬ್ಯಾಂಕ್ ಷೇರುಪೇಟೆಗೆ ಶನಿವಾರ ಮಾಹಿತಿ ನೀಡಿದೆ.

ಜಂಟಿ ವ್ಯವಸ್ಥಾಪಕ ನಿರ್ದೇಶಕ ದೀಪಕ್ ಗುಪ್ತಾ ಅವರು ಡಿಸೆಂಬರ್ 31ರವರೆಗೆ ಸಿಇಒ ಆಗಿ ಕಾರ್ಯ ನಿರ್ವಹಿಸಲಿದ್ದಾರೆ. ಉದಯ್ ಅವರು ಬ್ಯಾಂಕ್‌ನಲ್ಲಿ ಶೇ 26ರಷ್ಟು ಷೇರುಪಾಲು ಹೊಂದಿದ್ದಾರೆ ಎಂದು ಹೇಳಿದೆ.

'ಬದಲಾವಣೆ ಪ್ರಕ್ರಿಯೆಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಮೂರು ತಿಂಗಳು ಮುಂಚಿತವಾಗಿಯೇ ಹೊರಹೋಗುವ ನಿರ್ಧಾರ ತೆಗೆದುಕೊಂಡಿದ್ದೇನೆ' ಎಂದು ಬ್ಯಾಂಕ್‌ನ ಅಧ್ಯಕ್ಷ ಪ್ರಕಾಶ್ ಆಪ್ಟೆ ಅವರಿಗೆ ಉದಯ್ ಬರೆದಿರುವ ಪತ್ರದಲ್ಲಿ ಹೇಳಿದ್ದಾರೆ.

ಮೂರು ರಸ್ತೆಗಳ 28 ವೃತ್ತಗಳಲ್ಲಿ ಪ್ರಾಯೋಗಿಕ ಜಾರಿ • ಜಪಾನ್ ಕಂಪನಿಗೆ ನಿರ್ವಹಣೆ ಹೊಣೆ • ದೇಶದಲ್ಲೇ ಮೊದಲ ಪ್ರಯತ್ನ

ಸುಗಮ ಸಂಚಾರಕ್ಕೆ 'ಮೊಡೆರಾಟೊ' ವ್ಯವಸ್ಥೆ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ನಗರದ ಸಂಚಾರ ದಟ್ಟಣೆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಮುಂದಾಗಿರುವ ನಗರ ಭೂ ಸಾರಿಗೆ ನಿರ್ದೇಶನಾಲಯ, ದೇಶದಲ್ಲಿ ಮೊದಲ ಬಾರಿಗೆ ಸ್ವಯಂಚಾಲಿತ ಸಿಗ್ನಲ್ ತಂತ್ರಜ್ಞಾನವನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಲು ತಯಾರಿ ಆರಂಭಿಸಿದೆ.

ಬೆಂಗಳೂರು, ದಟ್ಟಣೆ ನಗರಿಯಾಗಿ ಮಾರ್ಪಟ್ಟಿದೆ. ಹೊರವರ್ತುಲ ರಸ್ತೆಗಳು, ಪ್ರಮುಖ ರಸ್ತೆಗಳು ಹಾಗೂ ವೃತ್ತಗಳಲ್ಲಿ ದಟ್ಟಣೆ ಸಾಮಾನ್ಯವಾಗಿದೆ. ನಿತ್ಯದ ಕೆಲಸಕ್ಕೆ ಹೋಗುವ ಜನ, ದಟ್ಟಣೆಯಲ್ಲಿ ಸಿಲುಕಿ ಪರದಾಡುತ್ತಿದ್ದಾರೆ.

ನಗರದ ಹಲವೆಡೆ ಸಿಗ್ನಲ್‌ಗಳ ಅಸಮರ್ಪಕ ನಿರ್ವಹಣೆಯೂ ದಟ್ಟಣೆಗೆ ಕಾರಣವಾಗುತ್ತಿದೆ. ಇದೇ ಕಾರಣಕ್ಕೆ ವೃತ್ತಗಳಲ್ಲಿ ಸ್ವಯಂಚಾಲಿತ ಸಿಗ್ನಲ್ ವ್ಯವಸ್ಥೆ ಜಾರಿಗೊಳಿಸಲು ಭೂ ಸಾರಿಗೆ ನಿರ್ದೇಶನಾಲಯ (ಡಲ್ಟ್) ಈಗಾಗಲೇ ಯೋಜನೆ ರೂಪಿಸಿದೆ.

ಜಪಾನ್‌ನಲ್ಲಿ ಬಳಕೆಯಲ್ಲಿರುವ 'ವಾಹನಗಳ ದಟ್ಟಣೆ ಆಧರಿಸಿ ಸ್ವಯಂಚಾಲಿತ ಸಿಗ್ನಲ್ ನಿರ್ವಹಣೆ ತಂತ್ರಜ್ಞಾನ (ಮೊಡೆರಾಟೊ)' ವ್ಯವಸ್ಥೆಯನ್ನು ನಗರದಲ್ಲಿ ಜಾರಿಗೆ ತರಲು ಸಿದ್ಧತೆ ಆರಂಭವಾಗಿದೆ. ಸೆಪ್ಟೆಂಬರ್ ಅಥವಾ ಅಕ್ಟೋಬರ್‌ನಲ್ಲಿ 'ಮೊಡೆರಾಟೊ' ಕಾರ್ಯಾಚರಣೆ ಆರಂಭವಾಗುವ ಸಾಧ್ಯತೆ ಇದೆ.

'ನಗರದ ದಟ್ಟಣೆಗೆ ಪ್ರಮುಖ ಕಾರಣವೇನು ಎಂಬುದರ ಬಗ್ಗೆ ಅಧ್ಯಯನ ನಡೆಸಲಾಗಿತ್ತು. ಸಿಗ್ನಲ್‌ಗಳ ಅಸಮರ್ಪಕ ನಿರ್ವಹಣೆಯಿಂದ ದಟ್ಟಣೆ ಉಂಟಾಗುತ್ತಿರುವುದು ಕಂಡುಬಂದಿತ್ತು. ಹೀಗಾಗಿ, ಸ್ವಯಂಚಾಲಿತ ಸಿಗ್ನಲ್ ವ್ಯವಸ್ಥೆಯಿಂದ ದಟ್ಟಣೆ ತಗ್ಗಿಸಲು ಯೋಜನೆ ರೂಪಿಸಲಾಗಿದೆ' ಎಂದು ಡಲ್ಟ್‌ನ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ದೇಶದಲ್ಲಿಯೇ ಮೊದಲ ಬಾರಿಗೆ ಬೆಂಗಳೂರಿನಲ್ಲಿ 'ಮೊಡೆರಾಟೊ' ವ್ಯವಸ್ಥೆ ಜಾರಿಗೊಳಿಸಲಾಗುತ್ತಿದೆ. ಇದರಿಂದ ಲಾಭವೇನು? ಕಾರ್ಯನಿರ್ವಹಣೆ ಹೇಗೆ? ನಗರದಲ್ಲಿ ಈ ವ್ಯವಸ್ಥೆ ಫಲಕಾರಿಯಾಗುತ್ತದೆಯೇ? ಎಂಬಿತ್ಯಾದಿ ಪ್ರಶ್ನೆಗಳಿವೆ. ಹೀಗಾಗಿ, ನಗರದ ಕೇಂದ್ರ ವಾಣಿಜ್ಯ ಪ್ರದೇಶದ (ಸಿಬಿಡಿ) 28 ವೃತ್ತಗಳಲ್ಲಿ ಮಾತ್ರ ಪ್ರಾಯೋಗಿಕವಾಗಿ ಈ ತಂತ್ರಜ್ಞಾನ ಅಳವಡಿಸಲಾಗುತ್ತಿದೆ' ಎಂದರು.



ಮೊಡೆರಾಟೊ ವ್ಯವಸ್ಥೆಯಡಿ ಹೊಸದಾಗಿ ಅಳವಡಿಸಿರುವ ಸಿಗ್ನಲ್‌ಗಳು
– ಪ್ರಜಾವಾಣಿ ಚಿತ್ರ/ಕಿಶೋರ್‌ಕುಮಾರ್ ಬೋಳಾರ್

ನೂತನ ಸಿಗ್ನಲ್‌ಗಳ ಅಳವಡಿಕೆ: 28 ವೃತ್ತಗಳಲ್ಲಿ ಮೊಡೆರಾಟೊ ವ್ಯವಸ್ಥೆ ಅಳವಡಿಸಿ ನಿರ್ವಹಣೆ ಮಾಡುವ ಜವಾಬ್ದಾರಿಯನ್ನು ಜಪಾನ್‌ನ ನಗೋಯಾ ಎಲೆಕ್ಟ್ರಿಕ್ ವರ್ಕ್ಸ್ ಕಂಪನಿಗೆ ವಹಿಸಲಾಗಿದೆ. ಕಂಪನಿ ಅಧಿಕಾರಿಗಳು, ಸ್ಥಳೀಯ ಕಾರ್ಮಿಕರ ಸಹಾಯದಿಂದ ಈಗಾಗಲೇ ಸಿಗ್ನಲ್‌ಗಳನ್ನು ಅಳವಡಿಸಲಾಗಿದೆ.

ಸದ್ಯ ಕಾರ್ಯನಿರ್ವಹಿಸುತ್ತಿರುವ ಸಿಗ್ನಲ್‌ಗಳ ಬಳಿಯೇ ನೂತನ ಸಿಗ್ನಲ್‌ಗಳನ್ನು ಅಳವಡಿಸಲಾಗಿದೆ. ಜೊತೆಗೆ, ಸಿಗ್ನಲ್‌ಗೆ ಹೊಂದಿಕೊಂಡಿರುವ ರಸ್ತೆಗಳಲ್ಲಿ ವಾಹನಗಳ ದಟ್ಟಣೆ ಅಳೆಯುವ ಸೆನ್ಸರ್ ಉಪಕರಣಗಳನ್ನು ಅಳವಡಿಸಲಾಗಿದೆ. ಆದರೆ, ಸದ್ಯ ವಸ್ತ್ರದಿಂದ ಮುಚ್ಚಲಾಗಿದೆ. ಕೆಲ ವೃತ್ತಗಳಲ್ಲಿ ಸಿಗ್ನಲ್ ಹಾಗೂ ಸೆನ್ಸರ್ ಉಪಕರಣ ಅಳವಡಿಕೆ ಕೆಲಸ ಪ್ರಗತಿಯಲ್ಲಿದೆ.

482 ವೃತ್ತಗಳಲ್ಲಿ ಮೊಡೆರಾಟೊ ವ್ಯವಸ್ಥೆ: 'ನಗರದಲ್ಲಿ 40 ಸಾವಿರ ವೃತ್ತಗಳಿದ್ದು, 888 ವೃತ್ತಗಳಲ್ಲಿ ಸಿಗ್ನಲ್ ವ್ಯವಸ್ಥೆ ಇದೆ. 388 ವೃತ್ತಗಳಲ್ಲಿ ಸಮಯ ಆಧರಿತ ಸಿಗ್ನಲ್‌ಗಳಿದ್ದು, 500 ವೃತ್ತಗಳಲ್ಲಿ ಸಿಬ್ಬಂದಿಯೇ ಸಿಗ್ನಲ್ ನಿರ್ವಹಣೆ ಮಾಡುತ್ತಿದ್ದಾರೆ. ಪ್ರಮುಖವಾಗಿರುವ 482 ವೃತ್ತಗಳಲ್ಲಿ ಮೊಡೆರಾಟೊ ವ್ಯವಸ್ಥೆ ಜಾರಿಗೆ ತರುವ ಉದ್ದೇಶವಿದೆ' ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಎಂ.ಎನ್. ಅನುಚೇತ್ ತಿಳಿಸಿದರು.

'ಎಂ.ಜಿ ರಸ್ತೆ, ಹಳೆ ಮದ್ರಾಸ್ ರಸ್ತೆ, ಹೊಸೂರು ರಸ್ತೆಯ 28 ವೃತ್ತಗಳಲ್ಲಿ ಮೊಡೆರಾಟೊ ವ್ಯವಸ್ಥೆಯ ಪ್ರಾಯೋಗಿಕ ಜಾರಿಗೆ ಒಪ್ಪಿಗೆ ಸಿಕ್ಕಿದೆ. ಉಳಿದ ವೃತ್ತಗಳಲ್ಲಿ ಈ ವ್ಯವಸ್ಥೆ ಅಳವಡಿಕೆ ಹಂತ ಹಂತವಾಗಿ ನಡೆಯಲಿದೆ' ಎಂದರು.

ಕಾರ್ಯನಿರ್ವಹಣೆ ಹೇಗೆ ?


'ಸಿಗ್ನಲ್ ರಸ್ತೆಗಳಲ್ಲಿ ಸಾಲುಗಟ್ಟಿ ನಿಲ್ಲುವ ವಾಹನಗಳ ದಟ್ಟಣೆ ಆಧರಿಸಿ ಸಿಗ್ನಲ್ ನಿರ್ವಹಣೆ ಮಾಡುವ ತಂತ್ರಜ್ಞಾನವೇ ಮೊಡೆರಾಟೊ. ಇದು ದಿನದ 24 ಗಂಟೆಯೂ ಕಾರ್ಯಾಚರಣೆ ನಡೆಸಲಿದೆ' ಎಂದು ಡಲ್ಟ್ ಅಧಿಕಾರಿಯೊಬ್ಬರು ಹೇಳಿದರು.

'ವೃತ್ತಗಳಿಗೆ ಹೊಂದಿಕೊಂಡಿರುವ ಎಲ್ಲ ರಸ್ತೆಗಳಲ್ಲಿ ಸಾಲುಗಟ್ಟಿ ನಿಲ್ಲುವ ವಾಹನಗಳ ದಟ್ಟಣೆಯನ್ನು ಸೆನ್ಸರ್ ಮೂಲಕ ಮೊಡೆರಾಟೊ ವ್ಯವಸ್ಥೆ ಗ್ರಹಿಸಲಿದೆ. ಯಾವ ರಸ್ತೆಯಲ್ಲಿ ಹೆಚ್ಚು ವಾಹನಗಳು ಇವೆಯೋ, ಅಂಥ ವಾಹನಗಳನ್ನು 'ಹಸಿರು' ಸಿಗ್ನಲ್ ನೀಡಿ ಮುಂದಕ್ಕೆ ಕಳುಹಿಸಲಿದೆ. ನಿಗದಿತ ಸಮಯಕ್ಕೂ ಮೊದಲೇ ರಸ್ತೆ ಖಾಲಿಯಾದರೆ, 'ಕೆಂಪು' ಸಿಗ್ನಲ್ ನೀಡಿ ಬೇರೆ ರಸ್ತೆಯಲ್ಲಿರುವ ವಾಹನಗಳ ಸಂಚಾರಕ್ಕೆ 'ಹಸಿರು' ಸಿಗ್ನಲ್ ನೀಡಲಿದೆ' ಎಂದು ಅಧಿಕಾರಿ ವಿವರಿಸಿದರು.

'ಕೇವಲ ಒಂದೇ ವೃತ್ತದ ವಾಹನಗಳ ದಟ್ಟಣೆಯನ್ನು ಈ ವ್ಯವಸ್ಥೆ ಅಳೆಯುವುದಿಲ್ಲ. ಬದಲಿಗೆ, ಅಕ್ಕ-ಪಕ್ಕದಲ್ಲಿರುವ ವೃತ್ತಗಳ ವಾಹನ ದಟ್ಟಣೆ ಬಗ್ಗೆಯೂ ಗ್ರಹಿಸಲಿದೆ. ಒಂದು ವೃತ್ತದ ದಟ್ಟಣೆಯಿಂದ ಮತ್ತೊಂದು ವೃತ್ತದ ದಟ್ಟಣೆ ಮೇಲೆ ಪರಿಣಾಮ ಬೀರದಂತೆ ಸಿಗ್ನಲ್‌ಗಳ ನಿರ್ವಹಣೆ ಮಾಡಲಿದೆ. ಹೀಗಾಗಿ, ದಟ್ಟಣೆ ನಿಯಂತ್ರಣಕ್ಕೆ ಬರುವ ಭರವಸೆ ಇದೆ' ಎಂದು ಅವರು ಹೇಳಿದರು.

'ಆಂಬುಲೆನ್ಸ್‌ಗೆ ದಾರಿ ಸದ್ಯಕ್ಕಿಲ್ಲ'

'ಮೊಡೆರಾಟೊ ವ್ಯವಸ್ಥೆಯು ಎಲ್ಲ ವಾಹನಗಳನ್ನು ಸಮಾನ ದೃಷ್ಟಿಯಿಂದ ಅಳೆಯುತ್ತದೆ. ರಸ್ತೆಯಲ್ಲಿ ವಾಹನಗಳ ದಟ್ಟಣೆ ಕಡಿಮೆ ಮಾಡುವುದು ಹಾಗೂ ಅಕ್ಕ-ಪಕ್ಕದ ರಸ್ತೆಗಳಲ್ಲಿ ದಟ್ಟಣೆ ಉಂಟಾಗದಂತೆ ನೋಡಿಕೊಳ್ಳುವುದು ಈ ವ್ಯವಸ್ಥೆ ಉದ್ದೇಶ. ಹೀಗಾಗಿ, ಆಂಬುಲೆನ್ಸ್ ಬಂದಾಗ ದಾರಿ ಮಾಡಿಕೊಡುವ ವ್ಯವಸ್ಥೆ ಸದ್ಯಕ್ಕಿಲ್ಲ. ಸಿಬ್ಬಂದಿಯೇ ಸಿಗ್ನಲ್ ನಿರ್ವಹಣೆ ಮಾಡಿ ದಾರಿ ಮಾಡಿಕೊಡಬೇಕು' ಎಂದು ಸಂಚಾರ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.



ನಗರದ ಎಂ.ಜಿ. ರಸ್ತೆಯಲ್ಲಿ ವಾಹನಗಳ ದಟ್ಟಣೆ ಅಳೆಯಲು ಅಳವಡಿಸಿರುವ ಸೆನ್ಸರ್ ಉಪಕರಣ – ಪ್ರಜಾವಾಣಿ ಚಿತ್ರ

'ಬಹುದಿನಗಳ ಕನಸು'

'ನಗರದ ದಟ್ಟಣೆಗೆ ಪರಿಹಾರ ಕಂಡುಹಿಡಿಯುವ ಪರ್ಯಾಯ ವ್ಯವಸ್ಥೆಗಾಗಿ ಹಲವು ವರ್ಷಗಳಿಂದ ಹುಡುಕಾಟ ನಡೆಸಲಾಗುತ್ತಿತ್ತು. ಜಪಾನ್‌ನ ಮೊಡೆರಾಟೊ ವ್ಯವಸ್ಥೆ ಬಗ್ಗೆ ತಿಳಿಯುತ್ತಿದ್ದಂತೆ 2014ರಲ್ಲಿ ಯೋಜನೆಯ ಪ್ರಸ್ತಾವ ಸಿದ್ಧಪಡಿಸಲಾಗಿತ್ತು' ಎಂದು ಡಲ್ಟ್ ಅಧಿಕಾರಿಯೊಬ್ಬರು ಹೇಳಿದರು.

'ಯೋಜನೆ ಕೆಲ ವರ್ಷ ನೆನೆಗುದಿಗೆ ಬಿದ್ದಿತ್ತು. 2021ರ ಜುಲೈನಲ್ಲಿ ಪ್ರಸ್ತಾವಕ್ಕೆ ಮರುಜೀವ ಸಿಕ್ಕಿತು. ಇದಾದ ನಂತರ 2022ರಲ್ಲಿ ಯೋಜನೆ ಜಾರಿಯಾಗಬೇಕಿತ್ತು. ತಾಂತ್ರಿಕ ಕಾರಣದಿಂದ ಅದು ಸಾಧ್ಯವಾಗಲಿಲ್ಲ. ಇದೀಗ, ಯೋಜನೆ ಜಾರಿಗೆ ಎಲ್ಲ ಸಿದ್ಧತೆ ಮಾಡಿಕೊಳ್ಳಲಾಗಿದೆ' ಎಂದು ತಿಳಿಸಿದರು.



ನಗರದ ಎಂ.ಜಿ. ರಸ್ತೆಯ ಅನಿಲ್ ಕುಂಬ್ಳೆ ವೃತ್ತದಲ್ಲಿ ಅಳವಡಿಸಿರುವ ಮೊಡೆರಾಟೊ ವ್ಯವಸ್ಥೆಯ ಸಿಗ್ನಲ್ – ಪ್ರಜಾವಾಣಿ ಚಿತ್ರ/ಪುಷ್ಕರ್ ವಿ.

ಜೆಜೆಎಂ ಕಾಮಗಾರಿ ತಪಾಸಣೆ: ಚೆನ್ನೈ ಕಂಪನಿ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಜಲ ಜೀವನ್ ಮಿಷನ್ (ಜೆಜೆಎಂ) ಯೋಜನೆಯಡಿ ಕೈಗೊಳ್ಳಲಾದ ಕಾಮಗಾರಿಗಳ ಗುಣಮಟ್ಟ ತಪಾಸಣೆಗಾಗಿ ಚೆನ್ನೈನ ಬ್ಯೂರೊ ವೆರಿಟಾಸ್ ಪ್ರೈವೇಟ್ ಲಿಮಿಟೆಡ್ ಎಂಬ ಕಂಪನಿಯನ್ನು ನೇಮಕ ಮಾಡಲಾಗಿದೆ.

'ಜೆಜೆಎಂ ಯೋಜನೆಯಡಿ ಕಳಪೆ ಕಾಮಗಾರಿಗಳು ನಡೆದಿವೆ' ಎಂದು ಹಲವು ಶಾಸಕರು ದೂರಿದ್ದರು. ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳ ಸಮಗ್ರ ತನಿಖೆಗೂ ಆಗ್ರಹಿಸಿದ್ದರು. ಜೆಜೆಎಂ ಅಡಿ ಕೈಗೊಂಡಿರುವ ಎಲ್ಲ ಕಾಮಗಾರಿಗಳನ್ನೂ ತಪಾಸಣೆ ನಡೆಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಭರವಸೆ ನೀಡಿದ್ದರು.

ಜೆಜೆಎಂ ಕಾಮಗಾರಿಗಳ ಗುಣಮಟ್ಟ ತಪಾಸಣೆಗಾಗಿ ಬ್ಯೂರೊ ವೆರಿಟಾಸ್ ಪ್ರೈವೇಟ್ ಲಿಮಿಟೆಡ್‌ನ ಸೇವೆಯನ್ನು ನೇರವಾಗಿ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆಯ ಸೆಕ್ಷನ್ 4-ಜಿ ಅಡಿಯಲ್ಲಿ ವಿನಾಯ್ತಿ ನೀಡಿ ಆರ್ಥಿಕ ಇಲಾಖೆ ಆಗಸ್ಟ್ 25ರಂದು ಆದೇಶ ಹೊರಡಿಸಿದೆ. ಒಟ್ಟು ₹ 8.14 ಕೋಟಿ ವೆಚ್ಚದಲ್ಲಿ ಈ ಕಂಪನಿಯ ಸೇವೆಯನ್ನು ಪಡೆಯಲಾಗುತ್ತಿದೆ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಪ್ರಿಯಾಂಕ್ ಖರ್ಗೆ, 'ಜಲ ಜೀವನ್ ಮಿಷನ್ ಅಡಿ ಕೈಗೆತ್ತಿಕೊಂಡಿರುವ ಬೃಹತ್ ಕಾಮಗಾರಿಗಳಲ್ಲಿ ಶೇಕಡ 15ರಷ್ಟನ್ನಾದರೂ ತಪಾಸಣೆ ನಡೆಸಲಾಗುವುದು. ಕಳಪೆ ಕಾಮಗಾರಿ ನಡೆದಿರುವ ಕುರಿತು ವರದಿಗಳು ಬಂದ ಬಳಿಕ ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಗುವುದು. ಈ ಕಾಮಗಾರಿಗಳಲ್ಲಿ ಅಕ್ರಮ ನಡೆದಿರುವುದು ಪತ್ತೆಯಾದರೆ ಅದಕ್ಕೆ ಕಾರಣರಾದವರ ವಿರುದ್ಧ ಕ್ರಮ ಜರುಗಿಸಲಾಗುವುದು' ಎಂದರು.

ಈ ಯೋಜನೆಯಡಿ ಕೈಗೊಂಡ ಕಾಮಗಾರಿಗಳ ಗುಣಮಟ್ಟದ ಕುರಿತು ಹಲವು ಶಾಸಕರು ಸಂಶಯ ವ್ಯಕ್ತಪಡಿಸಿದ್ದರು. ಪೈಪ್ ಲೈನ್ ಮತ್ತು ನೀರು ಪೂರೈಕೆ ವ್ಯವಸ್ಥೆಯಲ್ಲಿ ದೋಷಗಳಿವೆ ಎಂದು ದೂರಿದ್ದರು. ಈ ಬಗ್ಗೆ ತಪಾಸಣೆ ನಡೆಸಿ ವರದಿ ಸಲ್ಲಿಸಲು ಕಂಪನಿಗೆ ಎರಡು ತಿಂಗಳ ಕಾಲಾವಕಾಶ ನೀಡಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮೂಲಗಳು ತಿಳಿಸಿವೆ.

ಕಲಾವಿದರ ಭೇಟಿಗೆ ಅವಕಾಶ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಒಂದೇ ಸೂರಿನಡಿ 27 ಕಲಾವಿದರನ್ನು ಭೇಟಿ ಮಾಡಿ, ಅವರೊಂದಿಗೆ ಸಂವಾದ ನಡೆಸುವ ಅವಕಾಶವನ್ನು ನಗರದ ಜನರಿಗೆ 'ಆರ್ಟ್ ಪಾರ್ಕ್ ಬೆಂಗಳೂರು' ಕಲ್ಪಿಸಿದ್ದು, ಸೆ.3ರಂದು ಬೆಳಿಗ್ಗೆ 11ರಿಂದ ಸಂಜೆ 5 ಗಂಟೆಯವರೆಗೆ ಜೆ.ಸಿ. ರಸ್ತೆಯ ರವೀಂದ್ರ ಕಲಾಕ್ಷೇತ್ರದ ಬಳಿಯಿರುವ ಶಿಲ್ಪ ಉದ್ಯಾನದಲ್ಲಿ 'ಮೀಟ್ ದಿ ಆರ್ಟಿಸ್ಟ್' ಶೀರ್ಷಿಕೆಯಡಿ ಕಾರ್ಯಕ್ರಮ ಹಮ್ಮಿಕೊಂಡಿದೆ.

ಇದು ಕಲಾವಿದ ಎಸ್.ಜಿ. ವಾಸುದೇವ್ ಅವರ ಪರಿಕಲ್ಪನೆಯಾಗಿದ್ದು, ಪ್ರತಿ ತಿಂಗಳು ನಡೆಯಲಿದೆ. 2014ರಲ್ಲಿ ಮೊದಲ ಬಾರಿ ಈ ಕಾರ್ಯಕ್ರಮ ನಡೆಸಲಾಗಿತ್ತು. ಪ್ರಖ್ಯಾತ ಕಲಾವಿದರು ಇಡೀ ದಿನ ಶಿಲ್ಪ ಉದ್ಯಾನದಲ್ಲಿ ಕಲಾಕೃತಿಗಳನ್ನು ತಯಾರಿಸಲಿದ್ದಾರೆ. ಅವರ ಕಾರ್ಯವಿಧಾನವನ್ನು ವೀಕ್ಷಿಸಿ, ಕಲಾಕೃತಿಗಳ ಬಗ್ಗೆ ತಿಳಿದುಕೊಳ್ಳಬಹುದು. ಕಲೆಯ ಬಗ್ಗೆಯೂ ಮಾಹಿತಿ ಪಡೆಯಬಹುದು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಭೂಮಿಜಾದ ವ್ಯವಸ್ಥಾಪಕ ಟ್ರಸ್ಟಿ ಗಾಯತ್ರಿ ಕೃಷ್ಣ ಭಾಗವಹಿಸಲಿದ್ದಾರೆ ಎಂದು ಆರ್ಟ್ ಪಾರ್ಕ್ ಬೆಂಗಳೂರಿನ ಅಧ್ಯಕ್ಷ ಪ್ರೊ.ಜಿ. ಜಯಕುಮಾರ್ ತಿಳಿಸಿದ್ದಾರೆ.

ಕಲಾವಿದರಾದ ಭಾರತಿ ಸಾಗರ್, ಭಾಸ್ಕರ್ ರಾವ್, ಸಿ.ಎಸ್.ನಿರ್ಮಲಾ ಕುಮಾರಿ, ಚಂದ್ರನಾಥ ಆಚಾರ್ಯ, ಡಯಾನಾ ಅರಾನ್, ಹರಿರಾಮ್ ವಿ., ಹುಮೇರಾ ಅಲಿ, ಜಸು ರಾವಲ್, ಜ್ಯೋತಿ ಸಿ. ಸಿಂಗ್, ಮಂಜುನಾಥ್ ವಾಲಿ, ಮನ್ಪ್ರೀತ್ ಭಮ್ರಾ ಸಹೋತ, ಎನ್. ಮೂರ್ತಿ, ನಂದಬಸಪ್ಪ ವಾಡೆ, ಪ.ಸ. ಕುಮಾರ್, ಪ್ರಗತಿ ದಳವಿ ಜೈನ್, ಪುಣ್ಯ ಕೀರ್ತಿ, ರಘು ಕೊಂಡೂರು, ರಾಣಿ ರೇಖಾ, ರವಿಕುಮಾರ್ ಕಾಶಿ, ರುದ್ರಗೌಡ ಇಂಡಿ, ರುಣ ಬಿಸ್ವಾಸ್, ಶಶಿರೇಖಾ ರಾಜಶೇಖರ್, ಶೀಲವಂತ ಯಾದಗಿರಿ, ಶ್ರದ್ಧಾ ರಾತಿ, ಸ್ಮಿತಾ ವರ್ಮಾ, ಊರ್ಮಿಳಾ ವಿ.ಜಿ., ವೇಣುಗೋಪಾಲ ಎಚ್.ಎಸ್ ಹಾಗೂ ವೇಣುಗೋಪಾಲ್ ವಿ.ಜಿ. ಭಾಗವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಪಬ್, ಹುಕ್ಕಾಬಾರ್ ಒಳಗೆ ಮಕ್ಕಳು?

ಪ್ರಜಾವಾಣಿ ವಾರ್ತೆ



ಬೆಂಗಳೂರು: ಮಕ್ಕಳಿಗೆ ಪ್ರವೇಶ ನೀಡುತ್ತಿರುವ ಪಬ್, ಹುಕ್ಕಾ ಬಾರ್‌ಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಖಾಸಗಿ ಶಾಲಾ ಆಡಳಿತ ಮಂಡಳಿಯ ಪ್ರತಿನಿಧಿಗಳು ಒತ್ತಾಯಿಸಿದ್ದಾರೆ.

'ಕೆಲ ಶಾಲಾ ಮಕ್ಕಳು ಸಮವಸ್ತ್ರದಲ್ಲೇ ಬೆಂಗಳೂರಿನ ವಿವಿಧ ಪಬ್, ಹುಕ್ಕಾ ಬಾರ್‌ಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ ಎಂದು ಸಾರ್ವಜನಿಕರು, ನೆರೆಹೊರೆಯವರು ಕರೆ ಮಾಡಿ ತಿಳಿಸಿದ್ದರು. ಕೆಲವು ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲಿಸಿದಾಗ ಮಕ್ಕಳು ಇರುವುದು ದೃಢಪಟ್ಟಿದೆ. ಇಂತಹ ಘಟನೆಗಳು ಶಾಲಾ ಆಡಳಿತ ಮಂಡಳಿಗಳಿಗೆ ಆಘಾತ ತಂದಿವೆ' ಎಂದು ಗೃಹ ಇಲಾಖೆ ಮತ್ತು ಮಕ್ಕಳ ರಕ್ಷಣಾ ಆಯೋಗಕ್ಕೆ ಬರೆದ ಪತ್ರದಲ್ಲಿ ಕರ್ನಾಟಕ ಖಾಸಗಿ ಶಾಲೆಗಳ ಆಡಳಿತ ಮಂಡಳಿ, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಸಮನ್ವಯ ಸಮಿತಿ ಪ್ರಧಾನ ಕಾರ್ಯದರ್ಶಿ ಡಿ. ಶಶಿಕುಮಾರ್ ವಿವರಿಸಿದ್ದಾರೆ.

'ಪ್ರಕರಣಗಳು ಪತ್ತೆಯಾದ ನಂತರ ಪೋಷಕರು, ಶಿಕ್ಷಕರ ಸಭೆ ಕರೆದು ಚರ್ಚಿಸಲಾಗಿದೆ. ಶಾಲೆ ಬಿಟ್ಟ ನಂತರ ಮಕ್ಕಳು ಮನೆಗೆ ಬರುವ ಬಗ್ಗೆ ನಿಗಾ ವಹಿಸಬೇಕು. ತಡವಾದರೆ ಪ್ರಶ್ನಿಸಬೇಕು. ಅವರ ಚಲನವಲನ ಗಮನಿಸಬೇಕು ಎಂದು ಸೂಚಿಸಿದ್ದೇವೆ' ಎಂದಿದ್ದಾರೆ.

'ಕೆಲ ಪಬ್, ಹುಕ್ಕಾ ಬಾರ್‌ಗಳು ಮಧ್ಯಾಹ್ನದಿಂದಲೇ ತೆರೆಯುವ ಕಾರಣ ಶಾಲೆ ಬಿಟ್ಟ ನಂತರ ಕೆಲ ಮಕ್ಕಳು ಸಮೀಪದಲ್ಲೇ ಇರುವ ಅಂತಹ ತಾಣಗಳಿಗೆ ಹೋಗುತ್ತಾರೆ. ಕೆಲ ಬಾಲಕಿಯರು ಇಂತಹ ಹವ್ಯಾಸ ರೂಢಿಸಿಕೊಂಡಿರುವುದು ಕಳವಳಕಾರಿ. ಕೆಲವರು ಮಕ್ಕಳ ಫೋಟೊ ಸಾಮಾಜಿಕ ಜಾಲತಾಣಗಳಿಗೆ ಹರಿಯ ಬಿಡುತ್ತಾರೆ. ಇಂತಹ ನಡೆ ತಡೆಯಲು ಕಠಿಣ ನಿಯಮಗಳನ್ನು ರೂಪಿಸಬೇಕು ಎಂದು ಕೋರಿದ್ದಾರೆ.

'ದೂರುಗಳನ್ನು ಸ್ವೀಕರಿಸಿದ್ದೇವೆ. ಮಕ್ಕಳ ಸುರಕ್ಷತೆಯ ಕುರಿತು ಸರ್ಕಾರಕ್ಕೆ ಪತ್ರ ಬರೆಯಲು ನಿರ್ಧರಿಸಿದ್ದೇವೆ. ಇಂತಹ ತಾಣಗಳ ಮೇಲೆ ಪೊಲೀಸರು ದಿಢೀರ್ ದಾಳಿ ನಡೆಸಬೇಕು. ಮಕ್ಕಳು ಪತ್ತೆಯಾದರೆ ಪರವಾನಗಿ ರದ್ದು ಮಾಡಬೇಕು' ಎಂದು ಮಕ್ಕಳ ರಕ್ಷಣಾ ಆಯೋಗದ ಅಧ್ಯಕ್ಷ ಕೆ. ನಾಗಣ್ಣ ಗೌಡ ಪ್ರತಿಕ್ರಿಯಿಸಿದರು.

ನೆಫ್ರೊ ಯುರಾಲಜಿ ಸಂಸ್ಥೆಯಲ್ಲಿ ನಿರ್ಲಕ್ಷ್ಯ: ಮುಖ್ಯಮಂತ್ರಿಗೆ ಪತ್ರ

ಬೆಂಗಳೂರು: 'ವೈದ್ಯಕೀಯ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ನೆಫ್ರೊ ಯುರಾಲಜಿ ಸಂಸ್ಥೆಯಲ್ಲಿ ವೈದ್ಯರು ನಿರ್ಲಕ್ಷ್ಯ ವಹಿಸುತ್ತಿದ್ದಾರೆ. ಸಾರ್ವಜನಿಕರಿಗೆ ಸರಿಯಾದ ಚಿಕಿತ್ಸೆ ದೊರೆಯುತ್ತಿಲ್ಲ' ಎಂದು ವಿಧಾನಪರಿಷತ್ ಮಾಜಿ ಸದಸ್ಯ ಪಿ.ಆರ್. ರಮೇಶ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

'ಸಂಸ್ಥೆಯ ಪ್ರಭಾರ ನಿರ್ದೇಶಕರು ಮತ್ತು ಸಹೋದ್ಯೋಗಿಗಳು ನಿರ್ಲಕ್ಷ್ಯದಿಂದ ಸಂಸ್ಥೆಗೆ ಕಳಂಕ ಬರುತ್ತಿದೆ. ರಾಮನಗರದ ನಿವಾಸಿ ರಂಜಿತ್‌ರಾಜ್ ಎಂಬ ಯುವಕ ಇಲ್ಲಿ ಚಿಕಿತ್ಸೆ ಪಡೆಯಲು ಬಂದು ವೈದ್ಯರ ನಿರ್ಲಕ್ಷ್ಯದಿಂದಾಗಿ 11 ತಿಂಗಳಿನಿಂದ ಕೋಮಾದಲ್ಲಿದ್ದಾರೆ. ಹಲವರು ಜೀವ ಕಳೆದುಕೊಂಡಿದ್ದಾರೆ' ಎಂದು ದೂರಿದ್ದಾರೆ.

'ಸಂಸ್ಥೆಯಲ್ಲಿ 4 ವರ್ಷಗಳಿಂದ ಒಬ್ಬರು ಪ್ರಭಾರ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ನಿಯಮ ಪ್ರಕಾರ 6 ತಿಂಗಳಿಗಿಂತ ಹೆಚ್ಚು ಅವಧಿಗೆ ಯಾವುದೇ ಅಧಿಕಾರಿ ಪ್ರಭಾರ ಹುದ್ದೆಯಲ್ಲಿ ಮುಂದುವರಿಯುವಂತಿಲ್ಲ. ಭ್ರಷ್ಟಾಚಾರ ಮತ್ತು ಅಧಿಕಾರ ದುರುಪಯೋಗ ಆರೋಪದಲ್ಲಿ ಇದೇ ಪ್ರಭಾರ ನಿರ್ದೇಶಕರು ಮತ್ತು ಸಿಬ್ಬಂದಿ ಮೇಲೆ 2 ವರ್ಷಗಳಿಂದ ಲೋಕಾಯುಕ್ತ ವಿಚಾರಣೆ ನಡೆಯುತ್ತಿದೆ' ಎಂದು ದೂರಿದ್ದಾರೆ.



ಕಲಾ ಪ್ರದರ್ಶನ

ನಗರದ ಕರ್ನಾಟಕ ಚಿತ್ರಕಲಾ ಪರಿಷತ್‌ನಲ್ಲಿ ಆಯೋಜಿಸಿರುವ ಏಕವ್ಯಕ್ತಿ ಕಲಾ ಪ್ರದರ್ಶನದಲ್ಲಿ ಕಲಾವಿದ ಕೆ.ಆರ್.ಪ್ರವೀಣ್ ಅವರು ಪ್ರೇಕ್ಷಕರಿಗೆ ಕಲೆಯ ಬಗ್ಗೆ ವಿವರಿಸಿದರು – ಪ್ರಜಾವಾಣಿ ಚಿತ್ರ

'ನಾನು ಓದುವ ಪುಸ್ತಕ' ಅಭಿಯಾನ

ಬೆಂಗಳೂರು: 'ಗ್ರಾಮೀಣ ಪ್ರದೇಶ ಮಕ್ಕಳು ಗ್ರಂಥಾಲಯಗಳಿಗೆ ಭೇಟಿ ನೀಡಿ, ಓದುವ ಹವ್ಯಾಸ ಬೆಳೆಸಿಕೊಳ್ಳುವಂತೆ ಉತ್ತೇಜನ ನೀಡಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಸೆಪ್ಟೆಂಬರ್‌ನಲ್ಲಿ 'ನಾನು ಓದುವ ಪುಸ್ತಕ' ಅಭಿಯಾನ ಹಮ್ಮಿಕೊಂಡಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

'ಓದು, ಕಲಿಕೆಯಲ್ಲಿ ತೊಡಗಿಸಿಕೊಳ್ಳುವುದನ್ನು ಪ್ರೇರೇಪಿಸಲು ಗ್ರಾಮೀಣ ಪ್ರದೇಶಗಳಲ್ಲಿ 'ಓದುವ ಬೆಳಕು' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅದರ ಭಾಗವಾಗಿ ಸೆಪ್ಟೆಂಬರ್‌ನಲ್ಲಿ ಈ ಅಭಿಯಾನ ಹಮ್ಮಿಕೊಳ್ಳಲಾಗಿದೆ' ಎಂದರು.

ಶಿವಕುಮಾರ್ ನೆನಪಿನಲ್ಲಿ ಸಂಘದಿಂದ 2 ಆಂಬುಲೆನ್ಸ್

ಸಿಬ್ಬಂದಿಯಿಂದ ₹95 ಲಕ್ಷ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ಎಲ್ಲ ದರ್ಜೆಯ ನೌಕರರ ವತಿಯಿಂದ ಸುಮಾರು ₹95.5 ಲಕ್ಷವನ್ನು ಬೆಂಕಿ ಅವಘಡದಲ್ಲಿ ಮೃತಪಟ್ಟ ಶಿವಕುಮಾರ್ ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ನೀಡಲಾಗುವುದು ಎಂದು ಬಿಬಿಎಂಪಿ ಅಧಿಕಾರಿ ಹಾಗೂ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಅಮೃತ್‌ರಾಜ್ ತಿಳಿಸಿದರು.

ಗುಣಮಟ್ಟ ಖಾತರಿ ಪ್ರಯೋಗಾಲಯದಲ್ಲಿ ಸಂಭವಿಸಿದ್ದ ಬೆಂಕಿ ಅವಘಡದಲ್ಲಿ ಮೃತಪಟ್ಟ ಮುಖ್ಯ ಎಂಜಿನಿಯರ್ ಸಿ.ಎಂ. ಶಿವಕುಮಾರ್ ಸ್ಮರಣಾರ್ಥ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಅವರು ಮಾಹಿತಿ ನೀಡಿದರು.

ಶಿವಕುಮಾರ್ ಅವರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮುಖ್ಯ ಆಯುಕ್ತರ ಸಮ್ಮುಖದಲ್ಲಿ ಶೀಘ್ರದಲ್ಲೇ ಚೆಕ್ ಅನ್ನು ಹಸ್ತಾಂತರ ಮಾಡಲಾಗುವುದು. ಅಲ್ಲದೆ, ಶಿವಕುಮಾರ್ ನೆನಪಿಗಾಗಿ ಎಲ್ಲಾ ರೀತಿಯ ಸೌಲಭ್ಯವುಳ್ಳ ಎರಡು ಆಂಬುಲೆನ್ಸ್‌ಗಳನ್ನು ಬಿಬಿಎಂಪಿ ನೌಕರರ ಸಹಕಾರ ಸಂಘ ಹಾಗೂ ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಪಾಲಿಕೆಗೆ ವಿತರಿಸಲಾಗುವುದು ಎಂದು ಅಮೃತ್‌ರಾಜ್ ತಿಳಿಸಿದರು.

'ಪಾಲಿಕೆಯ ಇತಿಹಾಸದಲ್ಲಿ ಇಂತಹ ಘಟನೆ ನಡೆದಿಲ್ಲ. ಇದು ಅತ್ಯಂತ ನೋವು ತರುವಂತಹ ವಿಚಾರವಾಗಿದೆ. ಅವರನ್ನು ಉಳಿಸಿಕೊಳ್ಳಲು ಸಾಕಷ್ಟು ಪ್ರಯತ್ನ ಮಾಡಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ನಮ್ಮನ್ನೆಲ್ಲಾ ಅಗಲಿದ್ದಾರೆ. ಇಲ್ಲಿ ಕೆಲಸ ಮಾಡುವ ಅಧಿಕಾರಿ, ಸಿಬ್ಬಂದಿ ಪ್ರಾಣವನ್ನು ಲೆಕ್ಕಿಸದೆ ಕೆಲಸ ಮಾಡುತ್ತಿರುತ್ತಾರೆ. ಸಂದರ್ಭಕ್ಕನುಗುಣವಾಗಿ ಅಧಿಕಾರಿಗಳು ಹಗಲು-ರಾತ್ರಿ ಕೆಲಸ ಮಾಡುತ್ತಾರೆ' ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

'ಶಿವಕುಮಾರ್ ಅಗ್ನಿ ಅವಘಡದ ಸಂದರ್ಭದಲ್ಲಿ ತನ್ನ ಪ್ರಾಣವನ್ನು ಲೆಕ್ಕಿಸದೆ ಸ್ಥಳದಲ್ಲಿದ್ದ ಅಧಿಕಾರಿ ಮತ್ತು ಸಿಬ್ಬಂದಿಯನ್ನು ಕಾಪಾಡಲು ಮುಂದಾಗಿದ್ದರು. ಕೊನೆಯದಾಗಿ ಅವರು ಹೊರ ಬಂದಿದ್ದಾರೆ. ಅವರಿದ್ದ ಸ್ಥಾನದ ಜವಾಬ್ದಾರಿಯನ್ನು ಅರಿತು ನಾಯಕನ ರೀತಿಯಲ್ಲಿ ಕಾರ್ಯನಿರ್ವಹಿಸಿದ್ದಾರೆ' ಎಂದರು.

ಕುಳುವ ನುಲಿಯ ಚಂದಯ್ಯನವರ 616ನೇ ಜಯಂತ್ಯುತ್ಸವ

ಜಾತಿ ಹೆಸರಿನ ದ್ವೇಷ ಅಧರ್ಮ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಿಕ್ಷಣ ಹೆಚ್ಚಾದಷ್ಟೂ ಜಾತಿ ವ್ಯವಸ್ಥೆ ನಶಿಸಬೇಕಿತ್ತು. ಆದರೆ, ಅದು ಹಾಗೆಯೇ ಉಳಿದುಕೊಂಡಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕುಳುವ ನುಲಿಯ ಚಂದಯ್ಯನವರ 616ನೇ ಜಯಂತ್ಯುತ್ಸವದಲ್ಲಿ ಅವರು ಮಾತನಾಡಿದರು.

'ಧರ್ಮವನ್ನು ಅರ್ಥ ಮಾಡಿಕೊಳ್ಳಲು ದೊಡ್ಡ ದೊಡ್ಡ ಗ್ರಂಥಗಳನ್ನು ಓದಬೇಕಿಲ್ಲ. ದಯೆಯೇ ಧರ್ಮದ ಮೂಲ. ಮನುಷ್ಯ ಮನುಷ್ಯನನ್ನು ಪ್ರೀತಿಸುವುದೇ ಧರ್ಮ. ಜಾತಿ ಧರ್ಮದ ಹೆಸರಿನಲ್ಲಿ ಮನುಷ್ಯರನ್ನು ದ್ವೇಷಿಸುವುದೇ ಅಧರ್ಮ' ಎಂದು ಹೇಳಿದರು.

'ಬಸವಾದಿ ಶರಣರು 12ನೇ ಶತಮಾನದಲ್ಲೆ ಜಾತಿ ವ್ಯವಸ್ಥೆ ಮತ್ತು ತಾರತಮ್ಯದ ವಿರುದ್ಧ ಕ್ರಾಂತಿ ಮಾಡಿದ್ದರು. ಬಸವಣ್ಣನವರಿಗೆ ಚಂದಯ್ಯನರ ಬಗ್ಗೆ ಅಪಾರ ಪ್ರೀತಿ ಇತ್ತು. ಸಮಾಜದಲ್ಲಿ ಯಾವ್ಯಾವ ಕಸುಬನ್ನು ಯಾರು ಮಾಡುತ್ತಿದ್ದಾರೋ ಅದದೇ ಕಸುಬನ್ನೇ ಮಾಡಿಕೊಂಡಿರಲಿ. ಅವರ್ಯಾರು ಪ್ರಗತಿ ಕಾಣಬಾರದು' ಎನ್ನುವ ಸ್ವಾರ್ಥಿಗಳಿಂದ ಜಾತಿ ವ್ಯವಸ್ಥೆ ರೂಪುಗೊಂಡಿದೆ ಎಂದರು.

ಸಮುದಾಯದ ಬೇಡಿಕೆಗಳಿಗೆ ಸ್ಪಂದಿಸಿದ ಮುಖ್ಯಮಂತ್ರಿಯವರು, 'ಶ್ರೀ ಕುಳುವ ನೂಲಿಯ ಚಂದಯ್ಯ ಭವನ' ನಿರ್ಮಾಣಕ್ಕೆ ನಿವೇಶನ ಹಾಗೂ ಅನುದಾನ ನೀಡುವ ಘೋಷಣೆ ಮಾಡಿದರು. ಕುಳುವ ಸಮಾಜದ ಬಹುಕಾಲದ ಬೇಡಿಕೆಯಾದ 'ಕೊರಮ-ಕೊರಚ ಅಭಿವೃದ್ಧಿ ನಿಗಮ' ಸ್ಥಾಪನೆಯನ್ನು ಘೋಷಿಸಿದರು.

ಚಿತ್ರದುರ್ಗ ಜಿಲ್ಲೆಯ ತರಳಬಾಳು ಶಾಖಾ ಮಠ ಸಾಣೇಹಳ್ಳಿ ಡಾ.ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಕನ್ನಡ ಮತ್ತು ಸಂಸ್ಕೃತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ್ ಎಸ್. ತಂಗಡಗಿ, ಕುಳುವ ಮಹಾ ಸಂಘದ ಗೌರವಾಧ್ಯಕ್ಷ ಜಿ.ಚಂದ್ರಣ್ಣ, ಸಂಘದ ರಾಜ್ಯ ಘಟಕದ ಅಧ್ಯಕ್ಷ ಶಿವಾನಂದ ಎಂ ಭಜಂತ್ರಿ, ಜಿ. ಪಲ್ಲವಿ, ಇದ್ದರು.

ಬಾಗಲಕೋಟೆಯ ಬಸಪ್ಪ ಎಚ್. ಭಜಂತ್ರಿ ಅವರು ಶಹನಾಯಿ ಹಾಗೂ ಧಾರವಾಡದ ಮೃತ್ಯುಂಜಯ ಅಗಡಿ ಅವರು ವಚನ ಗಾಯನ, ಮುಖವೀಣೆ ಕಲಾವಿದ ಅಂಜನಪ್ಪ ಸಾತ್ಪಾಡಿ ಸಾಂಸ್ಕೃತಿಕ ಕಾರ್ಯಕ್ರಮ ನೀಡಿದರು.



ನುಲಿಯ ಚಂದಯ್ಯನವರ 616ನೇ ಜಯಂತ್ಯುತ್ಸವವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಸಾಣೇಹಳ್ಳಿ ಡಾ.ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಉದ್ಘಾಟಿಸಿದರು. ಸಚಿವ ಶಿವರಾಜ್ ತಂಗಡಗಿ, ಕುಳುವ ಮಹಾ ಸಂಘದ ಸದಸ್ಯರು ಇದ್ದರು

ನಮ್ಮ ಕ್ಲಿನಿಕ್ ಇನ್ನು 'ಸಂಜೆ ಕ್ಲಿನಿಕ್'

ಬೆಂಗಳೂರು: 'ಕೂಲಿ ಕಾರ್ಮಿಕರು, ಸಾಮಾನ್ಯ ಉದ್ಯೋಗಿಗಳ ಹಿತದೃಷ್ಟಿಯಿಂದ ರಾತ್ರಿ 8 ಗಂಟೆಯವರೆಗೆ 'ನಮ್ಮ ಕ್ಲಿನಿಕ್' ತೆರೆಯಲು ನಿರ್ಧರಿಸಲಾಗಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ನಗರದಲ್ಲಿ ಶನಿವಾರ ಮಾತನಾಡಿದ ಅವರು, 'ಬೆಂಗಳೂರು ಹೊರತುಪಡಿಸಿ ರಾಜ್ಯದ 30 ಕ್ಲಿನಿಕ್‌ಗಳು ಸಂಜೆ ನಂತರ ಕಾರ್ಯನಿರ್ವಹಿಸುವ ಕುರಿತು ಮಾತುಕತೆ ನಡೆಸಲಾಗಿದೆ. ಮಧ್ಯಾಹ್ನ 12ರಿಂದ ರಾತ್ರಿ 8ರವರೆಗೆ ಸಮಯ ನಿಗದಿ ಮಾಡಲಾಗಿದೆ. ಈ ಸಮಯದಲ್ಲಿ ವೈದ್ಯರು ಹಾಗೂ ಸಿಬ್ಬಂದಿ ಕಡ್ಡಾಯವಾಗಿ ಇರಬೇಕಿದೆ. ಬೆಂಗಳೂರಿನ ಕೇಂದ್ರಗಳಲ್ಲೂ ಸಂಜೆ ಸೇವೆ ಆರಂಭಿಸುವ ಕುರಿತು ಶೀಘ್ರ ಸಭೆ ನಡೆಸಲಾಗುವುದು' ಎಂದರು.

'108 ಆಂಬ್ಯುಲೆನ್ಸ್ ಸೇವೆಗೆ ಮರು ಟೆಂಡರ್ ಕರೆಯುವ ಕುರಿತು ನಿಯಮಗಳನ್ನು ರೂಪಿಸಲು ತಾಂತ್ರಿಕ ಸಮಿತಿ ರಚಿಸಲಾಗಿದೆ. ವರದಿ ನೀಡಿದ ತಕ್ಷಣ ಹೊಸದಾಗಿ ಟೆಂಡರ್ ಕರೆಯಲಾಗುವುದು' ಎಂದು ಹೇಳಿದರು.

'ಸರ್ಕಾರಿ, ಅನುದಾನಿತ ಕಾಲೇಜು ವಿದ್ಯಾರ್ಥಿನಿಯರಿಗೆ ಮುಟ್ಟಿನ ಕಪ್ (ಮೆನ್‌ಸ್ಟ್ರುವಲ್ ಕಪ್) ವಿತರಣೆ ಕಾರ್ಯಕ್ಕೆ ಇದೇ ತಿಂಗಳು ಚಾಲನೆ ನೀಡಲಾಗುವುದು. ದಕ್ಷಿಣ ಕನ್ನಡದಲ್ಲಿ 12 ಸಾವಿರ, ಚಾಮರಾಜನಗರದಲ್ಲಿ 3 ಸಾವಿರ ವಿತರಿಸಲಾಗುವುದು. ಹಂತ ಹಂತವಾಗಿ ರಾಜ್ಯದಾದ್ಯಂತ ವಿತರಣೆಗೆ ಕ್ರಮಕೈಗೊಳ್ಳಲಾಗುವುದು. ಮರುಬಳಕೆಯ ಈ ಕಪ್‌ಗಳನ್ನು 10 ವರ್ಷ ಉಪಯೋಗಿಸಬಹುದು' ಎಂದರು.

'ಸಿ.ಎಂ ಬಳಿ ಶಾಸಕರು ನೋವು ಹೇಳಿಕೊಳ್ಳುವುದರಲ್ಲಿ ತಪ್ಪೇನಿದೆ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಾಸಕರದ್ದು ಒಂದಷ್ಟು ಬೇಡಿಕೆಗಳು, ತೊಂದರೆಗಳು ಇರುತ್ತವೆ. ಅವುಗಳನ್ನು ಮುಖ್ಯಮಂತ್ರಿ ಬಳಿ ಹೇಳಿಕೊಳ್ಳಬಾರದೇ? ಶಾಸಕರು ತಮ್ಮ ನೋವು, ಸಮಸ್ಯೆ ಹೇಳಿಕೊಳ್ಳುವುದರಲ್ಲಿ ತಪ್ಪೇನಿದೆ?' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಶಾಸಕ ಬಸವರಾಜ ರಾಯರಡ್ಡಿ ಅವರು ಮುಖ್ಯಮಂತ್ರಿಗೆ ಬರೆದಿರುವ ಪತ್ರದ ಕುರಿತು ಪ್ರತಿಕ್ರಿಯಿಸಿದ ಶಿವಕುಮಾರ್, 'ಪಕ್ಷದ ಒಳಗೆ ಶಿಸ್ತು ಇದೆ. ಯಾವುದೇ ತೊಂದರೆ ಇಲ್ಲ. ಯಾವ ಶಾಸಕರೂ ಸರ್ಕಾರದ ವಿರುದ್ಧ ಅಸಮಾಧಾನ ಹೊಂದಿಲ್ಲ' ಎಂದರು.

ಶಕ್ತಿ ಯೋಜನೆಯಿಂದ ಖಾಸಗಿ ಸಾರಿಗೆಗಳಿಗೆ ತೊಂದರೆಯಾಗಿ ಬಂದ್‌ಗೆ ಕರೆ ನೀಡಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಖಾಸಗಿ ಬಸ್ ಮಾಲೀಕರಿಗೆ ತೊಂದರೆ ಆಗಿರುವುದು ನನ್ನ ಗಮನಕ್ಕೂ ಬಂದಿದೆ. ಮುಖ್ಯಮಂತ್ರಿ ಮತ್ತು ಸಾರಿಗೆ ಸಚಿವರನ್ನು ಭೇಟಿ ಮಾಡಿ ಇದಕ್ಕೆ ಪರಿಹಾರ ಕಂಡುಹಿಡಿಯಲಾಗುವುದು' ಎಂದರು.

'ಅನೇಕ ಊರುಗಳಲ್ಲಿ ಕೆಎಸ್‌ಆರ್‌ಟಿಸಿ ಬಸ್‌ಗಳ ಸಂಪರ್ಕವೇ ಇಲ್ಲ, ಅವರೆಲ್ಲಾ ಖಾಸಗಿ ಬಸ್‌ಗಳನ್ನೇ ಅವಲಂಬಿಸಿದ್ದಾರೆ. ಹೀಗಾಗಿ, ಪರಿಹಾರ ಸೂತ್ರ ಕಂಡುಹಿಡಿಯಬೇಕಿದೆ. ಖಾಸಗಿ ಬಸ್ ಮಾಲೀಕರು ನನ್ನನ್ನೂ ಭೇಟಿಯಾಗಿ ಅಹವಾಲು ಸಲ್ಲಿಸಿದ್ದಾರೆ' ಎಂದರು.

ಪ್ರಯೋಗಾಲಯದಲ್ಲಿ ಬೆಂಕಿ ಅವಘಡ: ಎಲ್ಲೆಡೆ ಸುರಕ್ಷತಾ ಕ್ರಮ ಅಳವಡಿಸಲು ಸಿದ್ಧತೆ

ಬಿಬಿಎಂಪಿ ಕಟ್ಟಡ ಸಾಮರ್ಥ್ಯ ಪರಿಶೀಲನೆ

• ಆರ್. ಮಂಜುನಾಥ್

ಬೆಂಗಳೂರು: ಬಿಬಿಎಂಪಿ ಸ್ವತ್ತುಗಳಲ್ಲಿ ನಿರ್ಮಿಸಿರುವ ಕಟ್ಟಡಗಳ ಸಾಮರ್ಥ್ಯ, ಸ್ಥಿರತೆಯ ಮಟ್ಟವನ್ನು ಪರಿಶೀಲಿಸಲು ನಿರ್ಧರಿಸಲಾಗಿದೆ. ಜೊತೆಗೆ ಎಲ್ಲ ಕಟ್ಟಡಗಳಲ್ಲಿ ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಳ್ಳಲು ಸೂಚಿಸಲಾಗಿದೆ.

ಬಿಬಿಎಂಪಿ ತನ್ನ ಸ್ವತ್ತುಗಳಲ್ಲಿ ಕಟ್ಟಡಗಳನ್ನು ನಿರ್ಮಿಸುವ ಸಂದರ್ಭದಲ್ಲಿ ಸಾಮಾನ್ಯ ನಾಗರಿಕರು ಅಥವಾ ವಾಣಿಜ್ಯ ಸಂಕೀರ್ಣಗಳು ಪಾಲಿಸುವ ನಿಯಮಗಳನ್ನು ಅನುಸರಿಸುತ್ತಿಲ್ಲ. ನಕ್ಷೆ ಅನುಮೋದನೆಯಿಂದ ಹಿಡಿದು, ಸೆಟ್‌ಬ್ಯಾಕ್, ಒಳಚರಂಡಿ ವ್ಯವಸ್ಥೆ, ಅಗ್ನಿ ಸುರಕ್ಷತಾ ಕ್ರಮಗಳನ್ನು ಬಹುತೇಕ ಅಳವಡಿಸಿಕೊಂಡಿಲ್ಲ.

ಯುಟಿಲಿಟಿ, ಯೂನಿಟಿ ಕಟ್ಟಡ, ಕೇಂದ್ರ ಕಚೇರಿಯಲ್ಲಿರುವ ಅನೆಕ್ಸ್ ಕಟ್ಟಡಗಳು, ಕೌನ್ಸಿಲ್ ಕಟ್ಟಡಗಳು, ಜಯನಗರದಲ್ಲಿರುವ ಶಾಪಿಂಗ್ ಕಾಂಪ್ಲೆಕ್ಸ್ ಸೇರಿದಂತೆ ಹಲವು ಬೃಹತ್ ಕಟ್ಟಡಗಳಿವೆ. ಇವುಗಳಲ್ಲಿ ಎಲ್ಲ ರೀತಿಯ ಸುರಕ್ಷತೆ ಕ್ರಮಗಳನ್ನು ಅಳವಡಿಸಲಾಗಿಲ್ಲ ಎಂಬುದು ಬಿಬಿಎಂಪಿ ಅಧಿಕಾರಿಗಳ ಅರಿವಿಗಿದೆ.

ಇತ್ತೀಚಿನ ದಿನಗಳಲ್ಲಿ ಕೆಲವೊಂದು ಅವಘಡಗಳು ಸಂಭವಿಸಿದ ಹಿನ್ನೆಲೆಯಲ್ಲಿ ಬಿಬಿಎಂಪಿ ಕಟ್ಟಡಗಳಲ್ಲೇ ನಿಯಮ ಅನುಸರಿಸದಿರುವ ಹಾಗೂ ಸುರಕ್ಷತಾ ಕ್ರಮಗಳಿಲ್ಲದ ಬಗ್ಗೆ ದೂರುಗಳು ಬಂದಿವೆ. ಎಂಟು ವಲಯಗಳ ವ್ಯಾಪ್ತಿಯಲ್ಲಿ ಸುಮಾರು 15 ಬೃಹತ್ ಕಟ್ಟಡಗಳನ್ನು ಬಿಬಿಎಂಪಿ ನಿರ್ಮಿಸಿದೆ. ಅಲ್ಲದೆ, ಹಳೆಯ ಕಟ್ಟಡಗಳೂ ಇವೆ. ಇವೆಲ್ಲ ಕಟ್ಟಡಗಳ ಬಗ್ಗೆ ಕೂಲಂಕಷವಾದ ವರದಿ ತಯಾರಿಸಲು ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

'ಹಲವು ದಶಕಗಳ ಹಿಂದೆ ಹಲವು ಕಟ್ಟಡಗಳನ್ನು ನಿರ್ಮಿಸಲಾಗಿದ್ದು, ಆಗ ಹೆಚ್ಚು ನಿಯಮಗಳನ್ನು ಪಾಲಿಸಲಾಗಿಲ್ಲ. ಆದರೆ ಇದೀಗ ಕಟ್ಟಡಗಳ ಸುರಕ್ಷತೆ ಅತ್ಯಂತ ಪ್ರಮುಖವಾಗಿದ್ದು, ಅವುಗಳ ಬಗ್ಗೆ ಪರಿಶೀಲಿಸಿ ವರದಿ ತಯಾರಾಗಬೇಕಿದೆ. ಹೀಗಾಗಿ ಎಲ್ಲ ಕಟ್ಟಡಗಳ ಸಂಪೂರ್ಣ ಪರಿಶೀಲನೆ ನಡೆಸಿ, 'ಸ್ಟ್ರಕ್ಚರಲ್ ಆಡಿಟ್ ರಿಪೋರ್ಟ್' ಜೊತೆಗೆ ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಂಡಿರುವ ಬಗೆಗಿನ ಮಾಹಿತಿಯನ್ನೂ 15 ದಿನಗಳಲ್ಲಿ ಒದಗಿಸುವಂತೆ ಎಂಟೂ ವಲಯಗಳ ಮುಖ್ಯ ಎಂಜಿನಿಯರ್‌ಗಳಿಗೆ ಸೂಚಿಸಲಾಗಿದೆ. ವಲಯವಾರು ಕಟ್ಟಡಗಳ ಮಾಹಿತಿ ಸದ್ಯವೇ ಸಿದ್ಧವಾಗಲಿದೆ' ಎಂದು ಪ್ರಹ್ಲಾದ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಬಿಬಿಎಂಪಿ ಕಟ್ಟಡಗಳಿಗೂ ನಕ್ಷೆ ಅನುಮೋದನೆ ಕಡ್ಡಾಯ. ನಮ್ಮ ಎಂಜಿನಿಯರ್‌ಗಳೇ ಅದನ್ನೆಲ್ಲ ರಚಿಸಿಕೊಂಡು, ನಗರ ಯೋಜನೆ ವಿಭಾಗದಿಂದ ಅನುಮತಿ ಪಡೆದುಕೊಳ್ಳಬೇಕು. ವಾಣಿಜ್ಯ ಕಟ್ಟಡಗಳಿಗೆ ಅನ್ವಯಿಸುವ ಎಲ್ಲ ರೀತಿಯ ನಿಯಮಗಳನ್ನು ಪಾಲಿಸಬೇಕು. ಎಲ್ಲ ಅನುಮತಿಗಳನ್ನೂ ಪಡೆದುಕೊಳ್ಳಬೇಕು' ಎಂದು ಮಾಹಿತಿ ನೀಡಿದರು.


ಬಿಬಿಎಂಪಿ ಕೇಂದ್ರ ಕಚೇರಿ ಕಟ್ಟಡ

ಮುಖ್ಯಾಂಶಗಳು

- ನಕ್ಷೆ ಅನುಮೋದನೆ, ಒಳಚರಂಡಿ ವ್ಯವಸ್ಥೆಯಲ್ಲಿ ಪಾಲನೆಯಾಗದ ನಿಯಮ
- ಅವಘಡದ ನಂತರ ಎಚ್ಚೆತ್ತ ಅಧಿಕಾರಿಗಳು

₹5 ಕೋಟಿ ವೆಚ್ಚದಲ್ಲಿ ಲಿಫ್ಟ್!

ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿರುವ ಗುಣಮಟ್ಟ ಖಾತರಿ ಪ್ರಯೋಗಾಲಯದಲ್ಲಿ ಸಂಭವಿಸಿದ ಬೆಂಕಿ ಅವಘಡದಿಂದ 9 ಮಂದಿ ಗಾಯಗೊಂಡು, ಮುಖ್ಯ ಎಂಜಿನಿಯರ್ ಮೃತಪಟ್ಟಿದ್ದರು. ಇದಾದ ಮೇಲೆ ಇದೇ ಆವರಣದಲ್ಲಿರುವ ಆರು ಅಂತಸ್ತಿನ 'ಅನೆಕ್ಸ್‌-3' ಕಟ್ಟಡದ ಸುರಕ್ಷತೆ ಬಗ್ಗೆ ಅನುಮಾನಗಳು ಮೂಡಿದ್ದವು.

10 ವರ್ಷಗಳ ಹಿಂದೆ ನಿರ್ಮಿಸಲಾಗಿರುವ 'ಅನೆಕ್ಸ್‌-3' ಆರು ಅಂತಸ್ತಿನ ಕಟ್ಟಡದಲ್ಲಿ ಬೆಂಕಿ ಸುರಕ್ಷತೆಯ ನಿಯಮಗಳನ್ನು ಪಾಲಿಸಲಾಗಿಲ್ಲ. ಅಗ್ನಿಶಾಮಕ ದಳ ಕಚೇರಿಯಿಂದ ಸಾಕಷ್ಟು ಬಾರಿ ಪತ್ರ ಬರೆದು, ಪರ್ಯಾಯ ಲಿಫ್ಟ್ ಅಥವಾ ಮೆಟ್ಟಿಲುಗಳನ್ನು ಅಳವಡಿಸಲು ಸೂಚಿಸಲಾಗಿತ್ತು. ಆದರೆ, ಈ ಬಗ್ಗೆ ಕ್ರಮ ಕೈಗೊಂಡಿರಲಿಲ್ಲ.

'ಪ್ರಯೋಗಾಲಯದಲ್ಲಿ ಬೆಂಕಿ ಅವಘಡದ ನಂತರ ಈ ಬಗ್ಗೆಯೂ ಗಮನ ಹರಿಸಲಾಗಿದ್ದು, ಅನೆಕ್ಸ್‌-3 ಕಟ್ಟಡದಲ್ಲಿ ₹5 ಕೋಟಿ ವೆಚ್ಚದಲ್ಲಿ ಹೊರಭಾಗದಲ್ಲಿ ಲಿಫ್ಟ್ ಅಳವಡಿಸುವ ಯೋಜನೆ ರೂಪಿಸಲಾಗಿದೆ. ಈ ಯೋಜನೆಯನ್ನು ಮೂಲಸೌಕರ್ಯ ವಿಭಾಗದಿಂದ ನಿರ್ವಹಿಸಲಾಗುತ್ತದೆ. ಕೂಡಲೇ ಕಾಮಗಾರಿ ಆರಂಭಿಸಲಾಗುತ್ತದೆ. ಎಲ್ಲ ರೀತಿಯ ಸುರಕ್ಷಾ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ' ಎಂದು ಮೂಲಸೌಕರ್ಯ ವಿಭಾಗದ ಮುಖ್ಯ ಎಂಜಿನಿಯರ್ ಹುದ್ದೆಯನ್ನೂ ಹೊಂದಿರುವ ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ತಿಳಿಸಿದರು.

ಎರಡು ದಿನಕ್ಕೊಮ್ಮೆ ನೀರು ಬಿಡಲು ಸೂಚನೆ

ಪ್ರಜಾವಾಣಿ ವಾರ್ತೆ

ಪೀಣ್ಯದಾಸರಹಳ್ಳಿ: ದಾಸರಹಳ್ಳಿ ಕ್ಷೇತ್ರ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರಗೊಂಡಿದೆ. ನಾಲ್ಕೈದು ದಿನವಾದರೂ ಕಾವೇರಿ ನೀರು ಬರುತ್ತಿಲ್ಲ.

ಎಂಇಐ ಬಡಾವಣೆಯ ಬಿಡಬ್ಲ್ಯುಎಸ್‌ಎಸ್‌ಬಿ ಕಚೇರಿಯಲ್ಲಿ ಶಾಸಕ ಎಸ್.ಮುನಿರಾಜು ಅವರು ಬೆಂಗಳೂರು ಕುಡಿಯುವ ನೀರು ಮತ್ತು ಒಳಚರಂಡಿ ಮಂಡಳಿ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಬಳಿಕ ಮುನಿರಾಜು ಮಾತನಾಡಿ, ದಾಸರಹಳ್ಳಿ ಕ್ಷೇತ್ರದಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣಿಸಿದ್ದು ವಾರಕ್ಕೆ ಕನಿಷ್ಠ 2 ದಿನ ನೀರು ಬಿಡುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಸಾರ್ವಜನಿಕರು ಮಿತವಾಗಿ ನೀರನ್ನು ಬಳಸುವಂತೆ ಮನವಿ ಮಾಡಿದರು.

ಕಾವೇರಿ 5ನೇ ಹಂತದ ನೀರು ಹರಿಸಿದರೆ ಸಮಸ್ಯೆ ಬಗೆಹರಿಯುವ ನಿರೀಕ್ಷೆ ಇದೆ. ಕಟ್ಟಡಗಳು, ಅಪಾರ್ಟ್‌ಮೆಂಟ್ ಹೆಚ್ಚುತ್ತಿರುವುದರಿಂದ ಸಮಸ್ಯೆ ಬಿಗಡಾಯಿಸಿದೆ. ಕಟ್ಟಡಕ್ಕೆ ಒಂದು ನೀರಿನ ಸಂಪರ್ಕ ತೆಗೆದುಕೊಂಡಿರುತ್ತಾರೆ. ಆ ಕಟ್ಟಡದಲ್ಲಿ ಏಳೆಂಟು ಮನೆಗಳಿರುತ್ತವೆ. ಅಂತಹ ಪ್ರಕರಣಗಳಿಂದ ಸಮಸ್ಯೆ ಹೆಚ್ಚಾಗಿದೆ ಎಂದರು.

ಮುಖ್ಯ ಎಂಜಿನಿಯರ್ ಪರಮೇಶ್ವರಪ್ಪ ಮಾತನಾಡಿ, 'ಹಿಂದಿನಂತೆಯೇ 730 ಎಂಎಲ್‌ಡಿ ನೀರು ಪೂರೈಕೆಯಾಗುತ್ತಿದೆ. ಜನಸಂಖ್ಯೆ, ಕಟ್ಟಡಗಳ ಸಂಖ್ಯೆ ಹೆಚ್ಚಾಗುತ್ತಿವೆ. ಅದರಿಂದ ಸಮಸ್ಯೆ ತಲೆದೋರಿದೆ. ಜೊತೆಗೆ ಕೊಳವೆ ಬಾವಿಗಳಲ್ಲೂ ನೀರಿನ ಮಟ್ಟ ಕುಸಿದಿದೆ' ಎಂದು ಹೇಳಿದರು.

ಯೋಗ ತರಗತಿ, ಕೋರ್ಸ್ ನಡೆಸಲು ಒಡಂಬಡಿಕೆ

ಬೆಂಗಳೂರು: ಯೋಗ ತರಗತಿಗಳು ಮತ್ತು ಯೋಗ ಬೋಧಕರ ಕೋರ್ಸ್‌ಗಳನ್ನು ನಡೆಸಲು ಎಸ್‌-ವ್ಯಾಸ ಮತ್ತು ಭಾರತೀಯ ವಿದ್ಯಾಭವನ ಒಡಂಬಡಿಕೆ ಮಾಡಿಕೊಂಡವು.

ಈ ಒಡಂಬಡಿಕೆಯ ಪ್ರಕಾರ, ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನ (ಎಸ್‌-ವ್ಯಾಸ) ವಿಶ್ವವಿದ್ಯಾಲಯವು ಯೋಗ ತರಗತಿಗಳು ಮತ್ತು ಯೋಗ ಬೋಧಕ ಕೋರ್ಸ್‌ಗಳನ್ನು ಭಾರತೀಯ ವಿದ್ಯಾಭವನ ಕ್ಯಾಂಪಸ್‌ನಲ್ಲಿ ನಡೆಸಲಾಗುತ್ತದೆ.


ಎಸ್‌-ವ್ಯಾಸದ ಸಂಸ್ಥಾಪಕ-ಕುಲಪತಿ ಎಚ್‌.ಆರ್‌. ನಾಗೇಂದ್ರ ಗುರೂಜಿ ಉಪಸ್ಥಿತಿಯಲ್ಲಿ ಭಾರತೀಯ ವಿದ್ಯಾಭವನದ ನಿರ್ದೇಶಕ ಎಚ್‌.ಎನ್‌. ಸುರೇಶ್ ಮತ್ತು ಎಸ್‌-ವ್ಯಾಸ ಕುಲಪತಿ ಶಿವಶಂಕರ ಸಾಯಿ ಒಡಂಬಡಿಕೆಗೆ ಸಹಿ ಹಾಕಿದರು.

ಸಾರ್ವಜನಿಕರಿಗೆ ನಿಯಮಿತ ಯೋಗ ತರಗತಿ, ಉನ್ನತ ಯೋಗ ಸಾಧಕರಿಗೆ ಯೋಗ ಶಿಕ್ಷಣ ತರಬೇತಿ ನೀಡಲಿದೆ. ಯೋಗ ಬೋಧಕರ ಕೋರ್ಸ್ (ವೈಐಸಿ), ಬಿ.ಎಸ್‌ಸಿ, ಎಂ.ಎಸ್‌ಸಿ, ಎಂಬಿಎ ಕೋರ್ಸ್‌ಗಳನ್ನು ನಡೆಸಲಿದೆ. ಯೋಗ ತರಗತಿಗಳು ಮತ್ತು ಯೋಗ ಬೋಧಕರ ಕೋರ್ಸ್‌ಗೆ ಸೇರಲು ಬಯಸುವವರು ಕಾರ್ಯಕಮ್ರ ಸಂಯೋಜನಾಧಿಕಾರಿ ಶರತ್ (080 22267421, 9900276701) ಮತ್ತು ಉಪ ನಿರ್ದೇಶಕ ಮೋಹನ್ ಕಿಶೋರ್ (080 26612669/26608645) ಅವರನ್ನು ಸಂಪರ್ಕಿಸಬಹುದು.

ಕಾರ್ಯಾಧ್ಯಕ್ಷರಾಗಿ ಬೋರಲಿಂಗಯ್ಯ ಆಯ್ಕೆ

ಬೆಂಗಳೂರು: ಕರ್ನಾಟಕ ಜಾನಪದ ಪರಿಷತ್ತಿನ ಕಾರ್ಯಾಧ್ಯಕ್ಷರಾಗಿ ಜಾನಪದ ವಿದ್ವಾಂಸ ಹಿ.ಚಿ. ಬೋರಲಿಂಗಯ್ಯ ಆಯ್ಕೆಯಾಗಿದ್ದಾರೆ.

ಕರ್ನಾಟಕ ಜಾನಪದ ಪರಿಷತ್ತಿನಲ್ಲಿ ಶನಿವಾರ ನಡೆದ 125ನೇ ಆಡಳಿತ ಮಂಡಳಿಯ ಸರ್ವ ಸದಸ್ಯರ ಸಭೆಯಲ್ಲಿ ಅವರನ್ನು ಪರಿಷತ್ತಿನ ಕಾರ್ಯಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ ಎಂದು ಪರಿಷತ್ತಿನ ಅಧ್ಯಕ್ಷ ಹಿ.ಶಿ. ರಾಮಚಂದ್ರೇಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹಿ.ಚಿ. ಬೋರಲಿಂಗಯ್ಯ

ಚಪ್ಪಾಳೆ ತಟ್ಟಿ ಸಂತಸ, ಮೊಳಗಿದ ಭಾರತ್ ಮಾತಾಕೀ ಜೈ ಘೋಷಣೆ

ತಾರಾಲಯದಲ್ಲಿ 'ಆದಿತ್ಯ' ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ತ 'ಆದಿತ್ಯ' ನಭಕ್ಕೆ ಜಿಗಿದು ಯಶಸ್ವಿಯಾಗಿ ನಿಗದಿತ ಕಕ್ಷೆ ಸೇರುತ್ತಿದ್ದಂತೆ ಇತ್ತ ಜವಾಹರಲಾಲ್ ನೆಹರೂ ತಾರಾಲಯದಲ್ಲಿ ಸಂಭ್ರಮವೋ ಸಂಭ್ರಮ...

ಭಾರತೀಯ ಬಾಹ್ಯಾಕಾಶ ಸಂಶೋಧನಾ (ಇಸ್ರೊ) ಸೂರ್ಯನ ಅಧ್ಯಯನಕ್ಕಾಗಿ 'ಆದಿತ್ಯ ಎಲ್ 1' ಅಂತರಿಕ್ಷ ವೀಕ್ಷಣಾಲಯವನ್ನು ಶನಿವಾರ 11.50ರ ಸುಮಾರಿಗೆ ಶ್ರೀಹರಿಕೋಟದಿಂದ ಪಿಎಸ್‌ಎಲ್‌ವಿ-ಸಿ 57 ರಾಕೆಟ್ ಮೂಲಕ ಉಡಾವಣೆ ಮಾಡಲಾಯಿತು. ಅದು ನಾಲ್ಕು ಹಂತದಲ್ಲಿ ಬೇರ್ಪಟ್ಟು ಕಕ್ಷೆ ಸೇರಿತು. ಆಗ ಸಂತಸದ ಹೂಮಳೆ ಮೇಳೈಸಿತ್ತು.

ಅಲ್ಲಿ ಸೇರಿದ್ದ ಯುವಕರು, ವಿಜ್ಞಾನಿಗಳು, ವಿದ್ಯಾರ್ಥಿಗಳು, ಬಾಹ್ಯಾಕಾಶ ಅಧ್ಯಯನದಲ್ಲಿ ಆಸಕ್ತಿಯುಳ್ಳವರು ಚಪ್ಪಾಳೆ ತಟ್ಟಿ 'ಭಾರತ್ ಮಾತಾಕೀ ಜೈ' ಎಂದು ಘೋಷಣೆ ಕೂಗಿ ಸಂಭ್ರಮಿಸಿದರು. ವಿಜ್ಞಾನಿಗಳ ಸಾಧನೆ ಕೊಂಡಾಡಿದರು.

ತಾರಾಲಯದಲ್ಲಿ ಸೌರವಿಜ್ಞಾನಿಗಳ ಜತೆಗೆ ಸಂವಾದ, ಉಡಾವಣೆಯ ನೇರ ಪ್ರಸಾರ, ಸೂರ್ಯನ ಕುರಿತು ಭಿತ್ತಿಚಿತ್ರ ಪ್ರದರ್ಶನ... ಹೀಗೆ ನಾನಾ ಚಟುವಟಿಕೆ ಆಯೋಜಿಸಲಾಗಿತ್ತು. ನೂರಾರು ಮಂದಿ ಉಡಾವಣೆಯ ನೇರ ಪ್ರಸಾರ ಕಣ್ತುಂಬಿ ಕೊಂಡರು. ವಿಜ್ಞಾನಿಗಳು ಉಡಾವಣೆಯ ಹಂತಗಳನ್ನು ವಿವರಿಸಿದರು.

ತಾರಾಲಯದ ನಿರ್ದೇಶಕ ಪ್ರಮೋದ್ ಜಿ. ಗಲಗಲಿ ಮಾತನಾಡಿ, 'ಚಂದ್ರಯಾನ-3 ಯಶಸ್ವಿಯಾದ ಬೆನ್ನಲ್ಲೇ ಸೂರ್ಯ ಅಧ್ಯಯನಕ್ಕೆ 'ಆದಿತ್ಯ ಎಲ್-1' ಉಡಾವಣೆಗೊಂಡಿದೆ. ಇದರ ಪ್ರಯಾಣ ಯಶಸ್ವಿಯಾಗಿ ಆರಂಭಿಸಿದೆ. 120 ದಿನಗಳ ಬಳಿಕ ವೈಜ್ಞಾನಿಕ ಅಧ್ಯಯನ ಆರಂಭಿಸಿ ಮಾಹಿತಿ ರವಾನಿಸಲಿದೆ. ಅದಕ್ಕೆ ಕಾತರದಿಂದ ಕಾಯುತ್ತಿದ್ದೇವೆ' ಎಂದು ಹೇಳಿದರು.

ಇಸ್ರೊ ಮಾಜಿ ಸಹಾಯಕ ನಿರ್ದೇಶಕ ಬಿ.ಆರ್.ಗುರುಪ್ರಸಾದ್ ಮಾತನಾಡಿ, 'ಪಿಎಸ್‌ಎಲ್‌ವಿ-ಸಿ 57 ಯಶಸ್ವಿಯಾಗಿ ಕ್ರಮಬದ್ಧವಾಗಿ ತನ್ನ ಕೆಲಸ ಪೂರೈಸಿದೆ. ಭೂಮಿಯಿಂದ ನಿಗದಿತ ಕಕ್ಷೆಗೆ ಸೇರಿಸುವುದು ಸರಳವಾದ ಕೆಲಸವಲ್ಲ. ಅದರಲ್ಲಿ ವಿಜ್ಞಾನಿಗಳು ಯಶಸ್ವಿಯಾಗಿದ್ದಾರೆ. ಇದು ಸ್ವದೇಶಿ ನಿರ್ಮಿತ ರಾಕೆಟ್ ಎಂಬುದು ಮತ್ತಷ್ಟು ಹೆಮ್ಮೆ. ದೇಶದ ಕಾರ್ಯಕ್ಕೆ, ನಂಬಿಕೆಗೆ ಅರ್ಹ ರಾಕೆಟ್ ಇದಾಗಿದೆ. 2017ರ ಫೆ.17ರಂದು ನಾಲ್ಕು ರಾಕೆಟ್‌ಗಳನ್ನು ಉಡಾವಣೆ ಮಾಡಿದ್ದು ಇದೇ ರಾಕೆಟ್. ಭಾರತೀಯ ತಂತ್ರಜ್ಞಾನ ತಾಕತ್ತನ್ನು ಜಗತ್ತಿನ ಎದುರು ಸಾಬೀತು ಪಡಿಸಿದ್ದೇವೆ' ಎಂದು ತಿಳಿಸಿದರು.

'ಆದಿತ್ಯ ಎಲ್ 1 ಬರೀ ಭಾರತಕ್ಕೆ ಅಲ್ಲ, ಇಡೀ ವಿಶ್ವದಲ್ಲಿ ಸೂರ್ಯನ ಅಧ್ಯಯನಕ್ಕೆ ಕಾತರದಿಂದ ಕಾಯುತ್ತಿರುವ ಖಗೋಳಾಸಕ್ತರಿಗೆ ನೆರವಾಗಲಿದೆ' ಎಂದು ಹೇಳಿದರು.

'ಆದಿತ್ಯ ಎಲ್ 1 ತನ್ನ ಸೌರ ಫಲಕಗಳನ್ನು ಚಾಚಿಕೊಂಡು ತನ್ನ ಶಕ್ತಿ ಹೆಚ್ಚಿಸಿಕೊಂಡು ಕಾರ್ಯ ನಿರ್ವಹಿಸಲಿದೆ. ಸೂರ್ಯನ ಒಳ, ಹೊರ ವಾತಾವರಣ ಅಧ್ಯಯನ ನಡೆಸಲಿದೆ. ಸೂರ್ಯನ ತಾಪ, ಕೋಪ ಗೊತ್ತಾಗಿದೆ. ಲಗ್ರಾಂಜಿಯನ್ ಬಿಂದುವಿನಲ್ಲಿ ನೌಕೆಯು 24 ಗಂಟೆಯೂ ನೇರವಾಗಿ ಸೂರ್ಯನನ್ನು ಅಧ್ಯಯನ ನಡೆಸಲು ಸಾಧ್ಯ. ಅದಕ್ಕೆ ಈ ಬಿಂದು ಮಹತ್ವದ್ದು ಎನಿಸಿದೆ' ಎಂದು ಹೇಳಿದರು.

ವಿಜ್ಞಾನಿಗಳಾದ ಪಿ.ವೆಂಕಟ ಕೃಷ್ಣ, ಜಗದೀಶ್ ಸಿಂಗ್, ಎಚ್.ಆರ್. ಮಧುಸೂದನ್ ಹಾಜರಿದ್ದರು.



ಬೆಂಗಳೂರಿನ ಜವಾಹರಲಾಲ್ ನೆಹರು ತಾರಾಲಯದಲ್ಲಿ ಪಿಎಸ್‌ಎಲ್‌ವಿ-ಸಿ 57 ರಾಕೆಟ್ ಉಡಾವಣೆಯ ನೇರ ಪ್ರಸಾರ ವೀಕ್ಷಿಸಲು ಸೇರಿದ್ದ ವಿದ್ಯಾರ್ಥಿಗಳು ಹಾಗೂ ಖಗೋಳಾಸಕ್ತರು

ಕೆಪಿಸಿಸಿ ಪ್ರಚಾರ ಸಮಿತಿ ಸಭೆ ಇಂದು

ಬೆಂಗಳೂರು: ಮುಂಬರುವ ಲೋಕಸಭಾ ಚುನಾವಣೆ ಮೇಲೆ ಕಣ್ಣಿಟ್ಟು, ಪಕ್ಷ ಸಂಘಟನೆ ಉದ್ದೇಶದಿಂದ ಕೆಪಿಸಿಸಿ ಕಚೇರಿಯಲ್ಲಿ ಪಕ್ಷದ ರಾಜ್ಯ ಮತ್ತು ಜಿಲ್ಲಾ ಪ್ರಚಾರ ಸಮಿತಿಯ ಪದಾಧಿಕಾರಿಗಳ ಸಭೆ ಭಾನುವಾರ (ಸೆ.3) ಕರೆಯಲಾಗಿದೆ.

ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷರೂ ಆಗಿರುವ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ನೇತೃತ್ವದಲ್ಲಿ ಹಲವು ನಾಯಕರು ಈ ಸಭೆಯಲ್ಲಿ ಭಾಗವಹಿಸಲಿದ್ದಾರೆ.

ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಯಶಸ್ಸಿಗೆ ದುಡಿದ ಪ್ರಚಾರ ಸಮಿತಿಯ ರಾಜ್ಯ, ಜಿಲ್ಲಾ ಹಾಗೂ ವಿಧಾನಸಭಾ ಕ್ಷೇತ್ರವಾರು ಸಮಿತಿಗಳ ಪದಾಧಿಕಾರಿಗಳಿಗೆ ಅಭಿನಂದನೆ ಸಲ್ಲಿಸುವುದು ಸಭೆಯ ಉದ್ದೇಶವಾಗಿದೆ. ಆ ಮೂಲಕ, ಲೋಕಸಭೆ ಚುನಾವಣೆಗೆ ಪದಾಧಿಕಾರಿಗಳನ್ನು ಹುರಿದುಂಬಿಸುವುದು ಪಕ್ಷದ ಚಿಂತನೆಯಾಗಿದೆ.

'ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಓಟಕ್ಕೆ ತಡೆ ಹಾಕಿರುವ ರಾಜ್ಯ ಕಾಂಗ್ರೆಸ್, ಈಗ ಲೋಕಸಭೆಗೆ ಸಜ್ಜಾಗುತ್ತಿದೆ. ರಾಜ್ಯ ಮಟ್ಟದಲ್ಲೂ ಇದೇ ರೀತಿಯ ಫಲಿತಾಂಶ ಪಡೆಯುವ ನಿಟ್ಟಿನಲ್ಲಿ ಪಕ್ಷ ಯೋಜಿಸಿಕೊಳ್ಳಲು ಬಯಸುತ್ತಿದೆ. ಇದಕ್ಕೆ ವೇದಿಕೆಯಾಗಿ, ಭಾನುವಾರದ ಸಭೆಯನ್ನು ಕರೆಯಲಾಗಿದೆ. ಬೆಳಿಗ್ಗೆ 11 ಗಂಟೆಗೆ ಆರಂಭವಾಗಲಿರುವ ಸಭೆ ಮಧ್ಯಾಹ್ನದವರೆಗೆ ನಡೆಯಲಿದೆ' ಎಂದು ಪ್ರಚಾರ ಸಮಿತಿಯ ಸಮನ್ವಯಕಾರ ಎ.ಪಿ. ಬಸವರಾಜ ತಿಳಿಸಿದ್ದಾರೆ.

'ಸೈಬರ್ ವಂಚನೆ ತಡೆಗೆ ಜಾಗೃತಿ ಮೂಡಿಸಿ'

20 ಸಾವಿರ ಸೈಬರ್ ವಂಚನೆ ಪ್ರಕರಣ ದಾಖಲು: ಕಮಿಷನರ್ ದಯಾನಂದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸೈಬರ್ ಅಪರಾಧ ಪ್ರಕರಣಗಳು ಹೆಚ್ಚುತ್ತಿರುವುದು ಆತಂಕ ಮೂಡಿಸಿದೆ. ಸೈಬರ್ ವಂಚನೆ ಪ್ರಕರಣಗಳ ವಿರುದ್ಧ ಅರಿವು ಮೂಡಿಸುವುದರಿಂದ ಸೈಬರ್ ಅಪರಾಧ ಪ್ರಕರಣ ತಡೆಗಟ್ಟಲು ಸಾಧ್ಯವಿದೆ' ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಸಲಹೆ ನೀಡಿದರು.

ಕೆಂಗೇರಿಯ ಕ್ರೈಸ್ಟ್ ವಿಶ್ವವಿದ್ಯಾಲಯದಲ್ಲಿ ಎರಡು ದಿನ ನಡೆದ ಸೈಬರ್ ಭದ್ರತೆ ಕುರಿತ ವಿಚಾರ ಸಂಕಿರಣದ ಸಮಾರೋಪದಲ್ಲಿ ಅವರು ಮಾತನಾಡಿದರು.

'ಜನಸಾಮಾನ್ಯರ ಬದುಕಿನಲ್ಲಿ ಇಂದು ಇಂಟರ್‌ನೆಟ್ ಹಾಸುಹೊಕ್ಕಾಗಿದೆ. ಎಲ್ಲ ಕ್ಷೇತ್ರದಲ್ಲೂ ತಂತ್ರಜ್ಞಾನದ ಪ್ರಭಾವವು ಹೆಚ್ಚಾಗಿದೆ. ಅದೇ ರೀತಿ ಅದರ ದುಷ್ಪರಿಣಾಮಗಳ ಕುರಿತು ಎಚ್ಚರಿಕೆ ವಹಿಸುವುದೂ ಅಗತ್ಯ' ಎಂದು ಹೇಳಿದರು.

ಐಸಿಟಿ ಸಿಇಒ ಹರಿ ಬಾಲಚಂದ್ರನ್ ಮಾತನಾಡಿ, 'ಐಟಿ ಕ್ಷೇತ್ರವು ನಿರೀಕ್ಷೆಗೂ ಮೀರಿ ಬೆಳೆಯುತ್ತಿದ್ದು, ತಕ್ಷಣವೇ 3 ಲಕ್ಷದಷ್ಟು ಸೈಬರ್ ಭದ್ರತಾ ವೃತ್ತಿಪರರ ಅಗತ್ಯವಿದೆ' ಎಂದು ಹೇಳಿದರು.



ಕೆಂಗೇರಿಯ ಕ್ರೈಸ್ಟ್ ವಿಶ್ವವಿದ್ಯಾಲಯದಲ್ಲಿ ನಡೆದ ಸೈಬರ್ ಭದ್ರತೆ ಕುರಿತು ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್, ಸಿ.ಸಿ. ಜೋಸೆಫ್, ಎಂ.ಡಿ. ಅಶ್ವಿನ್‌ಗೌಡ ಪಾಲ್ಗೊಂಡಿದ್ದರು.

ಕೌಶಲ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಎಂ.ಡಿ. ಅಶ್ವಿನ್‌ಗೌಡ ಮಾತನಾಡಿ, 'ಹಲವು ಕ್ಷೇತ್ರಗಳಿಗೆ ಕೌಶಲವುಳ್ಳ ಯುವಕರ ಅಗತ್ಯವಿದೆ. ನಿಗಮವು ಪ್ರತಿಭಾನ್ವಿತ ಯುವಕರಿಗೆ ಕೌಶಲ ಕಲಿಸುವ ಯೋಜನೆ ರೂಪಿಸಿದೆ' ಎಂದು ಹೇಳಿದರು.

ವಿ.ವಿ ಕುಲಪತಿ ಸಿ.ಸಿ. ಜೋಸೆಫ್ ಮಾತನಾಡಿ, ವೃತ್ತಿಪರರಿಗೆ ಅನುಕೂಲ ಆಗುವಂತೆ ಸೈಬರ್ ಶಿಕ್ಷಣವನ್ನು ಸಂಸ್ಥೆ ಕಲಿಸುತ್ತಿದೆ ಎಂದು ಹೇಳಿದರು.

ಅದಕ್ಕೂ ಮೊದಲು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ್ ವಿಚಾರ ಸಂಕಿರಣ ಉದ್ಘಾಟಿಸಿದ್ದರು.

'ವೈಜ್ಞಾನಿಕ ಹಾಗೂ ತಂತ್ರಜ್ಞಾನ ಆವಿಷ್ಕಾರವನ್ನು ಸಮಾಜವು ಸ್ವಾಗತಿಸಿದೆ. ಅಷ್ಟೇ ವೇಗದಲ್ಲಿ ಸೈಬರ್ ಅಪರಾಧಗಳು ನಡೆಯುತ್ತಿವೆ. ಬೆಂಗಳೂರು ನಗರದಲ್ಲೇ 20 ಸಾವಿರ ಸೈಬರ್ ವಂಚನೆ ಪ್ರಕರಣಗಳು ವರದಿಯಾಗಿವೆ' ಎಂದು ದಯಾನಂದ ಹೇಳಿದರು.

ತರಬೇತಿ ವಿಭಾಗದ ಡಿಜಿಪಿ ಪಿ.ರವೀಂದ್ರನಾಥ್ ಮಾತನಾಡಿ, 'ಮಕ್ಕಳನ್ನು ಸಾಮಾಜಿಕ ಜಾಲತಾಣಗಳ ಬಳಕೆಯಿಂದ ದೂರ ಇರಿಸಬೇಕು' ಎಂದು ಎಚ್ಚರಿಸಿದರು.

ಸಂಚಾರ ವಿಭಾಗದ ಜಂಟಿ ಕಮಿಷನರ್ ಎಂ.ಎನ್.ಅನುಚೇತ್ ಇದ್ದರು.

ಟಿಎಸ್‌ಪಿ ಕಲ್ಯಾಣ ಕಾರ್ಯಕ್ರಮ ಜಾರಿಗೆ ಸೂಚನೆ

ಬೆಂಗಳೂರು: ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಕಲ್ಯಾಣ ಕಾರ್ಯಕ್ರಮ ತಕ್ಷಣವೇ ಜಾರಿಗೊಳಿಸಲು ಆಡಳಿತಾಧಿಕಾರಿ ರಾಕೇಶ್ ಸಿಂಗ್ ಸೂಚಿಸಿದ್ದಾರೆ.

ಬಿಬಿಎಂಪಿ ಆಯವ್ಯಯದಲ್ಲಿ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಕಲ್ಯಾಣ ಕಾರ್ಯಕ್ರಮಗಳಿಗೆ ನಿಗದಿಪಡಿಸಿರುವ ಅನುದಾನ ಉಪಯೋಗಿಸಬೇಕು. ಪಾಲಿಕೆ ವ್ಯಾಪ್ತಿಯಲ್ಲಿ ಗುರುತಿಸಲಾದ ಕೊಳೆಗೇರಿ ಪ್ರದೇಶದಲ್ಲಿ ಮೂಲಸೌಲಭ್ಯಗಳಿಗೆ ಸಂಪೂರ್ಣ ಕ್ರಿಯಾಯೋಜನೆಯನ್ನು ಕೂಡಲೇ ರೂಪಿಸಲು ಹೇಳಿದರು.

ಕಲ್ಯಾಣ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆ ಉದ್ದೇಶಿಸಿ ಅವರು ಮಾತನಾಡಿದರು.

ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಕಲ್ಯಾಣ ಕಾರ್ಯಕ್ರಮಗಳಿಗೆ ನಿಗದಿಪಡಿಸಿರುವ ಅನುದಾನಕ್ಕೆ ಸಂಬಂಧಿಸಿದಂತೆ ಸಂಪೂರ್ಣ ಕ್ರಿಯಾಯೋಜನೆಯನ್ನು ಸಿದ್ದಪಡಿಸಿ ಕೊಳಗೇರಿ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲು ಸೂಚಿಸಿದರು.

ಕಲ್ಯಾಣ ವಿಭಾಗದ ವಿಶೇಷ ಆಯುಕ್ತ ರೆಡ್ಡಿ ಶಂಕರ್ ಬಾಬು, ಹಣಕಾಸು ವಿಭಾಗದ ವಿಶೇಷ ಆಯುಕ್ತ ಜಯರಾಂ ರಾಯಪುರ, ಡಾ. ತ್ರಿಲೋಕ್ ಚಂದ್ರ ಇದ್ದರು.

ನಗರದಲ್ಲಿ ಕೆಲವೆಡೆ ಮಳೆ

ಬೆಂಗಳೂರು: ನಗರದ ಕೆಲವೆಡೆ ಶನಿವಾರ ಉತ್ತಮ ಮಳೆ ಸುರಿಯಿತು.

ಮಧ್ಯಾಹ್ನದ ಬಳಿಕ ಮೋಡ ಕವಿದ ವಾತಾವರಣ ಇತ್ತು. ಸಂಜೆ ವೇಳೆಗೆ ಜೋರಾಗಿ ಸುರಿಯಿತು. ರಾಜರಾಜೇಶ್ವರಿ ನಗರದಲ್ಲಿ 25 ಮಿ.ಮೀ, ಕೋಣನಕುಂಟೆಯಲ್ಲಿ 19 ಮಿ.ಮೀ, ಕೆಂಗೇರಿ ಹಾಗೂ ಉತ್ತರಹಳ್ಳಿಯಲ್ಲಿ 11 ಮಿ.ಮೀ ಮಳೆಯಾಗಿದೆ. ಎಂ.ಜಿ. ರಸ್ತೆ, ಅಶೋಕನಗರ, ಹೊಸೂರು, ಇಂದಿರಾ ನಗರ, ಮಲ್ಲೇಶ್ವರ, ರಾಜಾಜಿನಗರ ಭಾಗದಲ್ಲೂ ಕೆಲವು ಕ್ಷಣ ತುಂತುರು ಮಳೆಯಾಗಿದೆ.



ವಚನಜ್ಯೋತಿ ಬಳಗ ಆಯೋಜನೆಯ ವಚನ ಶ್ರಾವಣದ ಕಾರ್ಯಕ್ರಮದಲ್ಲಿ ಸುಂಕದಕಟ್ಟೆಯ ಎಸ್‌.ಎಸ್‌. ಪಬ್ಲಿಕ್ ಶಾಲೆ ಮಕ್ಕಳು ವಚನ ನೃತ್ಯ ಪ್ರದರ್ಶಿಸಿದರು

ವಚನ ಶ್ರಾವಣ: ಮಕ್ಕಳ ಉತ್ಸಾಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಮಾಜದಲ್ಲಿ ಜಾತೀಯ ವಿಷಬೀಜಗಳು ಹೆಚ್ಚಾಗುತ್ತಿರುವಾಗ, ವಚನಗಳು ಸಂಜೀವಿನಿಯಾಗಿ ನಮ್ಮನ್ನು ಸನ್ಮಾರ್ಗದೆಡೆಗೆ ಕರೆದೊಯ್ಯುತ್ತಿವೆ' ಎಂದು ಶಿಕ್ಷಣ ತಜ್ಞ ಸೂಡಿ ಸುರೇಶ್ ಹೇಳಿದರು.

ವಚನಜ್ಯೋತಿ ಬಳಗ ಆಯೋಜನೆಯ ವಚನ ಶ್ರಾವಣದ 17ನೇ ದಿನ, ಮಾಗಡಿ ಮುಖ್ಯರಸ್ತೆಯ ಎಸ್.ಎಸ್. ಪಬ್ಲಿಕ್ ಶಾಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಮಹಾತ್ಮ ಗಾಂಧಿಯವರ ಅಹಿಂಸೆ - ಸತ್ಯಾಗ್ರಹಗಳು, ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಾಮಾಜಿಕ ಸಮಾನತೆ, ಸಮ ಸಮಾಜ ನಿರ್ಮಾಣ ತತ್ತ್ವಗಳನ್ನು ಒಂಬೈನೂರು ವರ್ಷಗಳ ಹಿಂದೆಯೇ ಪ್ರತಿಪಾದಿಸಿ ಆಚರಣೆಗೆ ತಂದ ನಿಜ ಮಹಾತ್ಮರು ಬಸವಣ್ಣ. ಪ್ರಜಾಪ್ರಭುತ್ವದ ಎಲ್ಲ ಆಶಯಗಳನ್ನು ವಚನ ಚಳವಳಿಯಲ್ಲಿ ಅನುಷ್ಠಾನಕ್ಕೆ ತಂದ ಕೀರ್ತಿ ವಚನಕಾರರದು' ಎಂದು ಬಣ್ಣಿಸಿದರು.

ಮಲ್ಲಿಕಾರ್ಜುನ ಗೌಡ ಮಾತನಾಡಿ, 'ಜ್ಞಾನವನ್ನು ಹಂಚಿದ ವಚನಕಾರರು ತಮ್ಮ ಅನುಭಾವಗಳಲ್ಲಿ ಹಂಚಿರುವ ಭಾಷೆ ಇಂದಿನ ಆಧುನಿಕ ಕನ್ನಡಕ್ಕೂ ಮಿಗಿಲಾದ ಸರಳತೆ ಮತ್ತು ವಿಶೇಷತೆ ಒಳಗೊಂಡಿದೆ' ಎಂದು ತಿಳಿಸಿದರು.

ವಚನಜ್ಯೋತಿ ಬಳಗದ ಅಧ್ಯಕ್ಷ ಎಸ್. ಪಿನಾಕಪಾಣಿ ಮಾತನಾಡಿ, ಒಂದು ಶಾಲೆಯಲ್ಲಿ ವಚನ ಶ್ರಾವಣವೆಂದರೆ, ಅದು ಸಂಸ್ಕೃತಿಯ ಹಬ್ಬ. ಮಕ್ಕಳು ವಚನಗಳನ್ನು ಕಲಿತು ಹಾಡುತ್ತಾರೆ, ಓದಿ ವ್ಯಾಖ್ಯಾನ ಮಾಡುತ್ತಾರೆ, ವೇಷಭೂಷಣ ಧರಿಸಿ ನಲಿಯುತ್ತಾರೆ ಎಂದು ಹರ್ಷಿಸಿದರು.

ಮೋಳಿಗೆ ಮಾರಯ್ಯ, ಮಡಿವಾಳ ಮಾಚಿದೇವ, ಆಯ್ದಕ್ಕಿ ಲಕ್ಕಮ್ಮ, ಮಹಾದೇವಿಯಕ್ಕ, ಸತ್ಯಕ್ಕ ಮೊದಲಾದ ವಚನಕಾರರ ವೇಷ ಧರಿಸಿದ ಎಸ್. ಎಸ್. ಪಬ್ಲಿಕ್ ಶಾಲೆಯ 25ಕ್ಕೂ ಹೆಚ್ಚು ಮಕ್ಕಳು ವಚನಗಳನ್ನು ಹಾಡಿ, ಅರ್ಥ ಹೇಳಿದರು. ವಚನಗಳಿಗೆ ನೃತ್ಯ ಮಾಡಿದರು.

ಶಾಲೆಯ ಮುಖ್ಯ ಶಿಕ್ಷಕಿ ಶ್ರೀಲತಾ ರಾಜ್ ಉಪಸ್ಥಿತರಿದ್ದರು. ಕನ್ನಡ ಶಿಕ್ಷಕಿ ನೇತ್ರಾವತಿ ಕಾರ್ಯಕ್ರಮ ನಿರೂಪಿಸಿದರು.

ಮೆಟ್ರೊ: ಕೊನೇ ಹಂತಕ್ಕೆ ನೇರಳೆ ಮಾರ್ಗದ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಟ್ರೊ ನೇರಳೆ ಮಾರ್ಗದಲ್ಲಿ ವಿಸ್ತರಿತ ನಿಲ್ದಾಣಗಳ ನಡುವೆ ನಡೆಯುತ್ತಿರುವ ವಿವಿಧ ಪರೀಕ್ಷೆಗಳು ಕೊನೇ ಹಂತ ತಲುಪಿವೆ. ಇನ್ನೆರಡು ವಾರಗಳಲ್ಲಿ ಮೆಟ್ರೊ ರೈಲು ಸುರಕ್ಷತಾ ಆಯುಕ್ತರು (ಸಿಎಂಆರ್‌ಎಸ್) ಪರಿಶೀಲಿಸಿದ ಬಳಿಕ ಉದ್ಘಾಟನೆಗೆ ಸಿದ್ಧವಾಗಲಿದೆ.

ನೇರಳೆ ಮಾರ್ಗದಲ್ಲಿನ ವಿಸ್ತರಿತ ಕಾಮಗಾರಿ ಇದಾಗಿದ್ದು, ಬೈಯಪ್ಪನಹಳ್ಳಿ-ಕೆ.ಆರ್. ಪುರ ನಡುವೆ 2.5 ಕಿಲೋಮೀಟರ್ ಹಾಗೂ ಕೆಂಗೇರಿ–ಚಲ್ಲಘಟ್ಟದ ನಡುವೆ 1.9 ಕಿ.ಮೀ ಕಾಮಗಾರಿಗಳು ಬಾಕಿ ಉಳಿದಿದ್ದವು. ಜುಲೈಯಲ್ಲಿ ಈ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿತ್ತು. ಜುಲೈ 27ಕ್ಕೆ ವಿವಿಧ ಪರೀಕ್ಷೆಗಳು ಆರಂಭವಾಗಿದ್ದವು. ತಾಂತ್ರಿಕ ತಂಡದೊಂದಿಗೆ ಮೆಟ್ರೊ ರೈಲು ಓಡಿಸಲಾಗಿತ್ತು. ಬಳಿಕ ಸಿಗ್ನಲಿಂಗ್ ಪರೀಕ್ಷೆ, ಓಪನ್ ವೆಬ್ ಗರ್ಡರ್‌ನ ಲೋಡ್ ಪರೀಕ್ಷೆ ಮಾಡಲಾಗಿತ್ತು. ತಾಂತ್ರಿಕ ತೊಂದರೆಗಳಿವೆಯೇ ಎಂದು ಪರಿಶೀಲಿಸಲಾಗಿತ್ತು.



ಮರಳಿನ ಚೀಲಗಳನ್ನು ಮೆಟ್ರೊ ರೈಲ್ಲಲ್ಲಿ ಒಯ್ದು ಮೆಟ್ರೊ ನೇರಳೆ ಮಾರ್ಗದ ವಿಸ್ತರಿತ ಕಾಮಗಾರಿಯ ಗುಣಮಟ್ಟ ಪರೀಕ್ಷಿಸಲಾಯಿತು

ಪ್ರಯಾಣಿಕರಿರುವ ರೈಲು ಬಂದಾಗ ತಡೆದುಕೊಳ್ಳುವ ಸಾಮರ್ಥ್ಯ ಇದೆಯೇ ಎಂಬುದನ್ನು ನೋಡಲು ಮರಳು ಚೀಲಗಳನ್ನು ರೈಲಲ್ಲಿ ಒಯ್ದು ಪರೀಕ್ಷೆ ಮಾಡಲಾಯಿತು. 30 ಕೆ.ಜಿ. ಭಾರದ 2,827 ಮರಳು ಚೀಲಗಳನ್ನು ಐದು ದಿನ ಒಯ್ದು ಸಾಮರ್ಥ್ಯ ಪರೀಕ್ಷಿಸಲಾಗಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಶೇ 99ರಷ್ಟು ಪರೀಕ್ಷೆಗಳು ಮುಗಿದಿವೆ. ಸುರಕ್ಷತಾ ಆಯುಕ್ತರು ಸೆ.15ರ ಒಳಗೆ ಪರಿಶೀಲಿಸಲಿದ್ದಾರೆ. ಈ ತಿಂಗಳ ಅಂತ್ಯದ ಒಳಗೆ ಉದ್ಘಾಟನೆಗೊಳ್ಳಲಿದೆ ಎಂದು ಅಧಿಕಾರಿಗಳು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ನೇರಳೆ ಮತ್ತು ಹಸಿರು ಮಾರ್ಗಗಳಲ್ಲಿ ನಿತ್ಯ 6.2 ಲಕ್ಷದಷ್ಟು ಪ್ರಯಾಣಿಕರು ಸಂಚರಿಸುತ್ತಿದ್ದಾರೆ. ನೇರಳೆ ಮಾರ್ಗದ ಎರಡು ತುದಿಗಳಲ್ಲಿ ಇರುವ ಈ ವಿಸ್ತರಿತ ಮಾರ್ಗ ಸಂಚಾರಕ್ಕೆ ತೆರೆದುಕೊಂಡರೆ ಮೆಟ್ರೊ ರೈಲಿನಲ್ಲಿ ನಿತ್ಯ ಸಂಚರಿಸುವವರ ಪ್ರಮಾಣ 7 ಲಕ್ಷ ದಾಟಬಹುದು ಎಂಬ ನಿರೀಕ್ಷೆಯನ್ನು ಬಿಎಂಆರ್‌ಸಿಎಲ್ ಅಧಿಕಾರಿಗಳು ಇಟ್ಟುಕೊಂಡಿದ್ದಾರೆ.

ಬಿಜೆಪಿ ಪ್ರಮುಖರ ಸಭೆ

ರಾಜರಾಜೇಶ್ವರಿನಗರ: ಯಶವಂತಪುರದ ಬಿಜೆಪಿ ಶಾಸಕ ಎಸ್‌.ಟಿ. ಸೋಮಶೇಖರ್ ಸ್ಥಳೀಯ ಬಿಜೆಪಿ ನಾಯಕರ ವಿರುದ್ಧ ಅಪಸ್ವರ ಹೊರಹಾಕಿರುವ ಬೆನ್ನಲ್ಲೇ ಬಿಜೆಪಿ ರಾಜ್ಯ ಘಟಕದ ಸಂಘಟನಾ ಪ್ರಧಾನ ಕಾರ್ಯದರ್ಶಿ ರಾಜೇಶ್ ನೇತೃತ್ವದಲ್ಲಿ ಸ್ಥಳೀಯ ಬಿಜೆಪಿ ನಾಯಕರ ಸಭೆ ನಡೆದಿದೆ.

ಉಲ್ಲಾಳು ವಾರ್ಡ್‌ನ ಬಿಜೆಪಿ ಅಧ್ಯಕ್ಷ ಜಯರಾಮು ಅವರ ನಿವಾಸದಲ್ಲಿ ಮಂಡಲ ವ್ಯಾಪ್ತಿಯ ಬಿಜೆಪಿ ಪ್ರಮುಖರ ಸಭೆಯನ್ನು ಗೋಪ್ಯವಾಗಿ ನಡೆಸಲಾಗಿದೆ.

ಸೋಮಶೇಖರ್ ಅವರ ಹೇಳಿಕೆ ಬಗ್ಗೆಯಾಗಲಿ, ಅವರು ಕಾಂಗ್ರೆಸ್ ಸೇರಲಿದ್ದಾರೆ ಎಂಬ ವದಂತಿ ಬಗ್ಗೆಯಾಗಲಿ ಯಾರೂ ತಲೆಕೆಡಿಸಿಕೊಳ್ಳಬಾರದು. ಪಕ್ಷವನ್ನು ಸಂಘಟಿಸಬೇಕು. ಬಿಜೆಪಿಯ ಯಾರೂ ಪಕ್ಷ ತ್ಯಜಿಸುವುದಿಲ್ಲ. ರಾಜ್ಯ ನಾಯಕರು ನಮ್ಮ ಕಾರ್ಯಕರ್ತರ ಜೊತೆಗೆ ಇರುತ್ತಾರೆ ಎಂದು ಸಂಘಟನಾ ಪ್ರಧಾನ ಕಾರ್ಯದರ್ಶಿ ಸಭೆಯಲ್ಲಿ ಭರವಸೆ ನೀಡಿದ್ದಾರೆ. 'ಈ ಕ್ಷೇತ್ರ ಬಿಜೆಪಿಯ ಭದ್ರಕೋಟೆ, ಕೇಂದ್ರ ಸರ್ಕಾರ ಮಾಡಿರುವ ಅಭಿವೃದ್ಧಿ ವಿಚಾರಗಳನ್ನು ಜನರಿಗೆ ತಿಳಿಸುವ ಮೂಲಕ ಸಂಘಟನೆ ಮಾಡೋಣ' ಎಂದು ಸಂಸದ ಡಿ.ವಿ. ಸದಾನಂದ ಗೌಡ ಸಲಹೆ ನೀಡಿದ್ದಾರೆ ಎಂದು ಬಿಜೆಪಿ ಮುಖಂಡರೊಬ್ಬರು ಮಾಹಿತಿ ನೀಡಿದ್ದಾರೆ.

ಒಂದು ರಾಷ್ಟ್ರ, ಒಂದು ಚುನಾವಣೆ: ಎಂಟು ಮಂದಿಯ ಸಮಿತಿ ರಚನೆ

ಸಮಿತಿ ಸೇರಲು ನಿರಾಕರಿಸಿದ ಕಾಂಗ್ರೆಸ್‌ನ ಅಧೀರ್ ರಂಜನ್

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: 'ಒಂದು ರಾಷ್ಟ್ರ, ಒಂದು ಚುನಾವಣೆ' ಕಾರ್ಯಸಾಧ್ಯತೆ ಬಗ್ಗೆ ಪರಿಶೀಲಿಸಲು ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ನೇತೃತ್ವದಲ್ಲಿ ಎಂಟು ಸದಸ್ಯರ ಉನ್ನತ ಮಟ್ಟದ ಸಮಿತಿ ರಚಿಸಿ ಕೇಂದ್ರ ಸರ್ಕಾರ ಶನಿವಾರ ಅಧಿಸೂಚನೆ ಹೊರಡಿಸಿದೆ. ಆದರೆ, ಈ ಸಮಿತಿಯ ಸದಸ್ಯರಾಗಲು ಕಾಂಗ್ರೆಸ್ ಮುಖಂಡ ಅಧೀರ್ ರಂಜನ್ ಚೌಧರಿ ನಿರಾಕರಿಸಿದ್ದಾರೆ.

ಈ ಸಂಬಂಧ ಕೇಂದ್ರ ಗೃಹ ಸಚಿವ ಶಾ ಅವರಿಗೆ ಪತ್ರ ಬರೆದಿರುವ ಚೌಧರಿ, 'ಕೋವಿಂದ್ ನೇತೃತ್ವದ ಉನ್ನತ ಮಟ್ಟದ ಸಮಿತಿ ರಚನೆಯ ಉದ್ದೇಶ ದೇಶದ ಸಂಸದೀಯ ಪ್ರಜಾಪ್ರಭುತ್ವ ಹಾಳು ಮಾಡುವ ವ್ಯವಸ್ಥಿತ ಪ್ರಯತ್ನವಲ್ಲದೆ ಬೇರೇನೂ ಅಲ್ಲ. ಸಮಿತಿಯಲ್ಲಿ ಸೇವೆ ಸಲ್ಲಿಸಲು ನಿರಾಕರಿಸುವುದಕ್ಕೆ ಯಾವುದೇ ಹಿಂಜರಿಕೆ ಇಲ್ಲ. ಅದರ ತೀರ್ಮಾನಗಳನ್ನು ಖಾತರಿಪಡಿಸುವ ರೀತಿಯಲ್ಲಿ ನಿಯಮಾವಳಿಗಳನ್ನು ಸಿದ್ಧಪಡಿಸಲಾಗಿದೆ. ಇದು ಸಂಪೂರ್ಣವಾಗಿ ಕಣ್ಣೊರೆಸುವ ಕೆಲಸ' ಎಂದು ಹೇಳಿದ್ದಾರೆ. 'ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರನ್ನು ಸಮಿತಿಯಿಂದ ಹೊರಗಿಡಲಾಗಿದೆ. ಇದು ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾಡಿದ ಅವಮಾನವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ನಿಮ್ಮ ಆಹ್ವಾನ ತಿರಸ್ಕರಿಸದೆ ನನಗೆ ಬೇರೆ ದಾರಿಯಿಲ್ಲ' ಎಂದು ಪತ್ರದಲ್ಲಿ ತಿಳಿಸಿದ್ದಾರೆ.

'ಸಮಿತಿಯಲ್ಲಿ ಗುಲಾಂ ನಬಿ ಆಜಾದ್ ಅವರಿಗೆ ಅವಕಾಶ ನೀಡಿ, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಹೊರಗಿಡಲು ಕಾರಣವೇನು? ಖರ್ಗೆ ಅವರನ್ನು ಹೊರಗಿಟ್ಟಿರುವುದು ಸಂಸತ್ತಿಗೆ ಮಾಡಿದ ಅವಮಾನ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ 'ಎಕ್ಸ್' ವೇದಿಕೆಯಲ್ಲಿ ತಿಳಿಸಿದ್ದಾರೆ.

ಮುಖ್ಯಾಂಶಗಳು

- ರಾಮನಾಥ ಕೋವಿಂದ್ ನೇತೃತ್ವದ ಉನ್ನತ ಮಟ್ಟದ ಸಮಿತಿ ರಚಿಸಿದ ಕೇಂದ್ರ
- ಅಮಿತ್ ಶಾಗೆ ಪತ್ರ ಬರೆದ ಅಧೀರ್ ರಂಜನ್ ಚೌಧರಿ
- ಖರ್ಗೆ ಹೊರಗಿಟ್ಟದ್ದಕ್ಕೆ ಕಾಂಗ್ರೆಸ್ ಆಕ್ಷೇಪ



ಮಲ್ಲಿಕಾರ್ಜುನ ಖರ್ಗೆ ಅವರನ್ನು ಸಮಿತಿಯಿಂದ ಹೊರಗಿಟ್ಟಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾಡಿದ ಅವಮಾನವಾಗಿದೆ.

ಅಧೀರ್ ರಂಜನ್ ಚೌಧರಿ
ಲೋಕಸಭೆ ಕಾಂಗ್ರೆಸ್ ನಾಯಕ

ಸಮಿತಿಯಲ್ಲಿ ಯಾರಿದ್ದಾರೆ?

ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ನೇತೃತ್ವದ ಸಮಿತಿಯಲ್ಲಿ ಗೃಹ ಸಚಿವ ಅಮಿತ್ ಶಾ, ಕಾಂಗ್ರೆಸ್ ಸಂಸದೀಯ ಪಕ್ಷದ ನಾಯಕ ಅಧೀರ್ ರಂಜನ್ ಚೌಧರಿ, ರಾಜ್ಯಸಭೆಯ ವಿರೋಧ ಪಕ್ಷದ ಮಾಜಿ ನಾಯಕ ಗುಲಾಂ ನಬಿ ಆಜಾದ್, ಹಣಕಾಸು ಆಯೋಗದ ಮಾಜಿ ಅಧ್ಯಕ್ಷ ಎನ್‌.ಕೆ.ಸಿಂಗ್ ಸದಸ್ಯರಾಗಿದ್ದಾರೆ.

ಲೋಕಸಭೆಯ ಮಾಜಿ ಪ್ರಧಾನ ಕಾರ್ಯದರ್ಶಿ ಸುಭಾಷ್ ಸಿ.ಕಶ್ಯಪ್, ಹಿರಿಯ ವಕೀಲ ಹರೀಶ್ ಸಾಳ್ವೆ, ಜಾಗೃತದಳದ ಮಾಜಿ ಮುಖ್ಯ ಆಯುಕ್ತ ಸಂಜಯ್ ಕೊಠಾರಿ ಸಮಿತಿಯ ಇತರ ಸದಸ್ಯರು. ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ವಿಶೇಷ ಆಹ್ವಾನಿತರಾಗಿ ಸಭೆಯಲ್ಲಿ ಪಾಲ್ಗೊಳ್ಳುವರು. ಕಾನೂನು ಕಾರ್ಯದರ್ಶಿ ನಿತೇನ್ ಚಂದ್ರಾ ಅವರು ಸಮಿತಿಯ ಕಾರ್ಯದರ್ಶಿಗಳಾಗಿದ್ದಾರೆ.

ಸಮಿತಿಯು ತಕ್ಷಣದಿಂದಲೇ ಕಾರ್ಯಪ್ರವೃತ್ತವಾಗಲಿದೆ. ಆದಷ್ಟು ಶೀಘ್ರ ಶಿಫಾರಸು ಮಾಡಲಿದೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಆದರೆ, ವರದಿ ಸಲ್ಲಿಸಲು ಗಡುವು ನೀಡಿರುವ ಬಗ್ಗೆ ಉಲ್ಲೇಖವಿಲ್ಲ.

ಬಸ್‌ಗಳಲ್ಲಿ ಡ್ರಗ್ಸ್ ಸಾಗಣೆ: ಸಿಸಿಬಿ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊರ ರಾಜ್ಯದಿಂದ ಬರುವ ಬಸ್‌ಗಳಲ್ಲಿ ಡ್ರಗ್ಸ್ ಸಾಗಣೆ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದ್ದರಿಂದ ಸಿಸಿಬಿ ಪೊಲೀಸರು ಶನಿವಾರ ಶೋಧ ನಡೆಸಿದರು.



ಮೆಜೆಸ್ಟಿಕ್ ಬಸ್ ನಿಲ್ದಾಣ, ಯಶವಂತಪುರ, ಗಾಂಧಿನಗರ, ಕೆ.ಆರ್. ಮಾರುಕಟ್ಟೆ ಹಾಗೂ ಹಲವು ಪ್ರದೇಶಗಳಲ್ಲಿ ಬಸ್ ಏರಿದ್ದ ಪೊಲೀಸರು, ಪಾರ್ಸೆಲ್‌ಗಳನ್ನು ತಪಾಸಣೆಗೆ ಒಳಪಡಿಸಿದರು.

ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು, ತೆಲಂಗಾಣ ಹಾಗೂ ಇತರೆ ರಾಜ್ಯಗಳಿಂದ ನಿತ್ಯವೂ ಬಸ್‌ಗಳು ನಗರಕ್ಕೆ ಬರುತ್ತವೆ. ಇಂಥ ಬಸ್‌ಗಳಲ್ಲಿ ಡ್ರಗ್ಸ್ ಸಾಗಿಸುತ್ತಿದ್ದ ಮಾಹಿತಿ ಸಿಸಿಬಿಗೆ ಲಭ್ಯವಾಗಿತ್ತು.

ಶ್ವಾನದಳದ ಸಿಬ್ಬಂದಿ, ಬಸ್‌ಗಳ ಪ್ರತಿಯೊಂದು ಭಾಗಗಳಲ್ಲಿ ಶೋಧ ನಡೆಸಿದರು. ಬಸ್‌ಗಳ ಲಗೇಜ್ ಜಾಗದಲ್ಲೂ ಪರಿಶೀಲನೆ ನಡೆಸಲಾಯಿತು.

'ಡ್ರಗ್ಸ್ ಸಾಗಣೆ ಹಾಗೂ ಮಾರಾಟದ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸಲಾಗುತ್ತಿದೆ.

ಹೊರ ರಾಜ್ಯಗಳಿಂದ ಬರುವ ಖಾಸಗಿ ಬಸ್‌ಗಳಲ್ಲಿ ಡ್ರಗ್ಸ್ ಸಾಗಿಸುತ್ತಿದ್ದ ಮಾಹಿತಿ ಇತ್ತು. ಹೀಗಾಗಿ, ಎಲ್ಲ ಬಸ್‌ಗಳಲ್ಲಿ ತಪಾಸಣೆ ನಡೆಸಲಾಯಿತು' ಎಂದು ಸಿಸಿಬಿ ಜಂಟಿ ಕಮಿಷನರ್ ಎಸ್‌. ಡಿ. ಶರಣಪ್ಪ ತಿಳಿಸಿದರು.

ಬ್ಲೀಚಿಂಗ್ ಪೌಡರ್ ತಿಂದ ಮೂವರು ಮಕ್ಕಳು ಅಸ್ವಸ್ಥ

ದೇವನಹಳ್ಳಿ: ಪಟ್ಟಣದ ಹೊರವಲಯದ ವಾರ್ಡ್ ನಂಬರ್ 23ರ ವಿನಾಯಕ ನಗರದಲ್ಲಿ ಶನಿವಾರ ಶೌಚಾಲಯ ಸ್ವಚ್ಛಗೊಳಿಸಲು ಬಳಸುವ ಬ್ಲೀಚಿಂಗ್ ಪೌಡರ್ ತಿಂದು ಮೂವರು ಮಕ್ಕಳು ಅಸ್ವಸ್ಥಗೊಂಡಿದ್ದಾರೆ.

ಮನೆಯ ಮುಂದೆ ಆಟವಾಡುತ್ತಿದ್ದ ಮಕ್ಕಳು ಅಂಗಳದಲ್ಲಿದ್ದ ಬ್ಲೀಚಿಂಗ್ ಪೌಡರ್ ಅನ್ನು ಸಿಹಿ ಪದಾರ್ಥವೆಂದು ಭಾವಿಸಿ ಹಂಚಿಕೊಂಡು ತಿಂದಿದ್ದಾರೆ. ಸ್ವಲ್ಪ ಸಮಯದ ಬಳಿಕ ರಕ್ತ ಕಾರಿಕೊಂಡು ಅಸ್ವಸ್ಥರಾಗಿ ಬಿದ್ದ ಮಕ್ಕಳನ್ನು ಕಂಡ ಸ್ಥಳೀಯರು ದ್ವಿಚಕ್ರ ವಾಹನದಲ್ಲಿ ಕರೆದೊಯ್ದು ಆಸ್ಪತ್ರೆಗೆ ಸೇರಿಸಿದ್ದಾರೆ.

ಈ ಮೂರು ಮಕ್ಕಳ ಪೋಷಕರು ಕೂಲಿ ಕಾರ್ಮಿಕರಾಗಿದ್ದು, ಎಂದಿನಂತೆ ಬೆಳಗ್ಗೆಯೇ ಕೂಲಿ ಕೆಲಸಕ್ಕೆ ತೆರಳಿದ್ದರು. ಮನೆಯ ಪಕ್ಕದ ಖಾಲಿ ಸ್ಥಳದಲ್ಲಿ ಬ್ಲೀಚಿಂಗ್ ಪೌಡರ್ ಪಾಕೆಟ್ ಎಸೆಯಲಾಗಿತ್ತು. ತಾಲ್ಲೂಕು ಸರ್ಕಾರಿ ಆಸ್ಪತ್ರೆ ಆವರಣದಲ್ಲಿರುವ ತಾಯಿ, ಮಗು ಸಾರ್ವಜನಿಕ ಆಸ್ಪತ್ರೆಗೆ ಮೊದಲು ಮಕ್ಕಳನ್ನು ಕರ ದೊಯ್ಯಲಾಗಿತ್ತು. ಆದರೆ, ಮಕ್ಕಳಿಗೆ ಚಿಕಿತ್ಸೆ ನೀಡುವ ಸೂಕ್ತ ವ್ಯವಸ್ಥೆ ಇಲ್ಲ ಎಂದು ಹೇಳಿದ ವೈದ್ಯರು, ಖಾಸಗಿ ಆಸ್ಪತ್ರೆಗೆ ಕರೆದೊಯ್ಯುವಂತೆ ಶಿಫಾರಸು ಮಾಡಿದರು. ಮೂರರಿಂದ ಐದು ವರ್ಷದ ಇಬ್ಬರು ಬಾಲಕಿಯರು ಮತ್ತು ಬಾಲಕನಿಗೆ ದೇವನಹಳ್ಳಿಯ ಖಾಸಗಿ ಆಸ್ಪತ್ರೆಯ ತೀವ್ರಾ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಮಕ್ಕಳನ್ನು ಆಸ್ಪತ್ರೆಗೆ ದಾಖಲಿಸಲು ಹಣಕ್ಕೆ ಬೇಡಿಕೆ ಇಟ್ಟ ಆರೋಪದ ಬಗ್ಗೆ ವಿಚಾರಣೆ ನಡೆಸಿ, ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಡಾ.ಸಂಜಯ್, ತಾಲ್ಲೂಕು ವೈದ್ಯಾಧಿಕಾರಿ

ಖಾಸಗಿಯಲ್ಲಿ ಹಣದ ಹಪಾಹಪಿ: ಚಿಕಿತ್ಸೆಗಾಗಿ ಮಕ್ಕಳನ್ನು ದೇವನಹಳ್ಳಿಯ ಖಾಸಗಿ ಆಸ್ಪತ್ರೆಗೆ ಕರೆತಂದಾಗ ವೈದ್ಯರು ₹5 ಸಾವಿರ ಹಣ ಪಾವತಿಸುವಂತೆ ಹೇಳಿದರು. ಪೋಷಕರು ಬಂದು ಹಣ ಕಟ್ಟುತ್ತಾರೆ ಎಂದರೂ ಕೇಳಲಿಲ್ಲ. ನಮ್ಮಲ್ಲಿದ್ದ ₹2 ಸಾವಿರ ಪಾವತಿಸಿದ ನಂತರ ಚಿಕಿತ್ಸೆ ಆರಂಭಿಸಿದರು. ಸರ್ಕಾರಿ ಆಸ್ಪತ್ರೆಯಲ್ಲೂ ಬಡವರ ಮಕ್ಕಳೆಂದರೇ ಅಸಡ್ಡೆ ಎಂದು ವಿನಾಯಕ ನಗರದ ನಿವಾಸಿ ಸುಜಾತ ಹೇಳಿದರು.

ಇಂದು ನಗರದ ಹಲವೆಡೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ಎಲೆಕ್ಟ್ರಾನಿಕ್ ಸಿಟಿ ಪಿಎಚ್–2 ವೇಲಂಕಿನಿ ಮತ್ತು ಎಲೆಕ್ಟ್ರಾನಿಕ್ ಸಿಟಿಯ ಕಿಯೋನಿಕ್ಸ್ ವಿದ್ಯುತ್ ನಿರ್ವಹಣಾ ಕೇಂದ್ರಗಳಲ್ಲಿ ನಿರ್ವಹಣೆ ಕಾಮಗಾರಿ ಕೈಗೊಂಡಿರುವುದರಿಂದ ಇದೇ 3ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 3ಗಂಟೆವರೆಗೆ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

3ರಂದು ವ್ಯತ್ಯಯವಾಗುವ ಸ್ಥಳಗಳು: ಸಲಾರ್‌ಪುರಿ, ಟಿಮ್ಕಿನ್, ಕೊನಾರ್, ಜೆ.ಬಿ. ಪಾಳ್ಯ, ಲಕ್ಷ್ಮಿ ಲೇಔಟ್, ರಾಘವೇಂದ್ರ ಲೇಔಟ್, ನ್ಯೂ ಮೈಕೊ ಲೇಔಟ್, ವಾಜಪೇಯಿ ನಗರ, ಹೊಸೂರು ಮುಖ್ಯರಸ್ತೆ, ಶ್ರೀರಾಮನಗರ, ಬಾಲಾಜಿ ಲೇಔಟ್, ವೇಲಂಕಿನಿ, ಬಿಎಚ್‌ಇಎಲ್, ಎಚ್‌.ಪಿ. ಸೂರ್ಯ, ಅರವಿಂದ್ ಮಿಲ್ಸ್, ದೊಡ್ಡ ತೋಗೂರು, ವಿನಾಯಕ್ ಲೇಔಟ್, ಸೆಲೆಬ್ರಿಟಿ ಹೌಸಿಂಗ್ ಲೇಔಟ್, ಕೋನಪ್ಪನ ಅಗ್ರಹಾರ, ಎನ್‌.ಜಿ.ಆರ್. ಲೇಔಟ್, ಗುಲ್ಬರ್ಗ ಕಾಲೊನಿ, ಸಿಲ್ಕ್ ಬೋರ್ಡ್ ಜಂಕ್ಷನ್, ಬೊಮ್ಮನಹಳ್ಳಿ ಒಂದು ಭಾಗ, ಎ.ಎಂ.ಆರ್. ಟೆಕ್ ಪಾರ್ಕ್, ಆಕ್ಸ್‌ಫರ್ಡ್ ಡೆಂಟಲ್ ಕಾಲೇಜು, ಫ್ಯೂಷನ್ ಸಾಫ್ಟ್‌ವೇರ್, ಎಂ.ಆರ್.ಓ ಟೆಕ್, ಲಾರ್ಡ್ಸ್ ಪ್ಲಾಜಾ, ಫ್ಲೆಕ್ಸೊಟ್ರೋನಿಕ್ಸ್, ಟೆಲಿಫೋನ್ ಎಕ್ಸ್‌ಚೇಂಜ್. ನಶಾ ಸ್ಕ್ವೇರ್, ಟೆಕ್ನಿಕ್, ಒಪ್ಪೊ, ಕೆಎಸ್‌ಎಸ್‌ಐಡಿಸಿ ಕಾಂಪ್ಲೆಕ್ಸ್, ಸೈಬರ್ ಪಾರ್ಕ್, ಎಲ್ಸಿಯಾ ಆಫೀಸ್, ಎಲೆಕ್ಟ್ರಾನಿಕ್ ಸಿಟಿ ಫೇಸ್–1, ಐಎಫ್‌ಐಎಂ ಕಾಲೇಜು, ಯೋಕೊಗವಾ, ಇನ್ಫೊಸಿಸ್ ಕಾರ್ ಪಾರ್ಕಿಂಗ್, ರಾಮಕೃಷ್ಣ ಆಸ್ಪತ್ರೆ, ವಿಪ್ರೊ ಇ–ಸಿಟಿ ಫೇಸ್–2, ಆರ್.ಎಸ್. ಎಲೆಕ್ಟ್ರಾನಿಕ್ಸ್, ಸಿಲ್ಕೀ, ಭಾರತ್ ಪೆಟ್ರೋಲ್ ಬಂಕ್, ಎನ್‌ಟಿಟಿಎಫ್, ನೀಲಾದ್ರಿ ರಸ್ತೆ, ಪಂಜಾಬ್ ಬ್ಯಾಂಕ್, ಸೆಲೆಬ್ರೆಟಿ ಕ್ಲಾಸಿಕ್, ಸಿಲೆಬ್ರೆಟಿ ಸಿಗ್ನೇಚರ್, ಸೈಬರ್ ಪಾರ್ಕ್, ಇನ್ಫೊಟೆಕ್, ಎಚ್‌ಸಿಎಲ್ ಇ–ಸಿಟಿ ಫೇಸ್–1, ಸೈಮೆನ್ಸ್ ಇ–ಸಿಟಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಒಡವೆ ಕದ್ದಿದ್ದ ಚಾಲಕನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದುವೆಗೆಂದು ನಗರಕ್ಕೆ ಬಂದಿದ್ದ ಉದ್ಯಮಿಯೊಬ್ಬರ ಕುಟುಂಬಕ್ಕೆ ಸೇರಿದ್ದ ವಜ್ರ ಹಾಗೂ ಚಿನ್ನಾಭರಣ ಕಳ್ಳತನ ಮಾಡಿದ್ದ ಆರೋಪದಡಿ ನಂದೀಶ್‌ನನ್ನು (36) ಯಲಹಂಕ ನ್ಯೂ ಟೌನ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ರಾಜಾನುಕುಂಟೆ ನಿವಾಸಿ ನಂದೀಶ್, ಕ್ಯಾಬ್ ಚಾಲಕ. ವಜ್ರ, ಚಿನ್ನಾಭರಣಗಳಿದ್ದ ಸೂಟ್‌ಕೇಸ್ ಕದ್ದುಕೊಂಡು ಪರಾರಿಯಾಗಿದ್ದ. ಉದ್ಯಮಿ ದೂರು ನೀಡುತ್ತಿದ್ದಂತೆ ತನಿಖೆ ನಡೆಸಿ ಆರೋಪಿಯನ್ನು ಸೆರೆ ಹಿಡಿಯಲಾಗಿದೆ. ₹ 30 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ವಜ್ರದ ಆಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ನಂದೀಶ್, ಅಪರಾಧ ಹಿನ್ನೆಲೆಯುಳ್ಳವ. ಈ ಹಿಂದೆಯೂ ಕಳ್ಳತನ ಸಂಬಂಧ ರಾಜಾನುಕುಂಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು' ಎಂದರು.

ಮದುವೆಯಲ್ಲಿ ಆಭರಣ ಧರಿಸಿದ್ದ ಕುಟುಂಬ: 'ನಗರದಲ್ಲಿ ನಡೆದಿದ್ದ ಸಂಬಂಧಿಕರ ಮದುವೆಯಲ್ಲಿ ಪಾಲ್ಗೊಳ್ಳಲು ಚೆನ್ನೈನ ಉದ್ಯಮಿ ಕುಟುಂಬ ಇತ್ತೀಚೆಗೆ ಬಂದಿತ್ತು. ಮೂವರು ಮಹಿಳೆಯರು ಹಾಗೂ ಉದ್ಯಮಿ, ಯಲಹಂಕ ಬಳಿಯ ಹೋಟೆಲೊಂದರಲ್ಲಿ ಉಳಿದುಕೊಂಡಿದ್ದರು. ಅವರಿಗೆ ಆರೋಪಿ ನಂದೀಶ್, ಕ್ಯಾಬ್ ಸೇವೆ ಒದಗಿಸಿದ್ದ' ಎಂದು ಪೊಲೀಸರು ಹೇಳಿದರು.

'ಮೂವರು ಮಹಿಳೆಯರು ಹಾಗೂ ಉದ್ಯಮಿ ಚಿನ್ನಾಭರಣ ಹಾಗೂ ವಜ್ರದ ಆಭರಣ ಧರಿಸಿದ್ದರು. ಆರೋಪಿ ನಂದೀಶ್ ತನ್ನ ಕ್ಯಾಬ್‌ನಲ್ಲಿ ಎಲ್ಲರನ್ನೂ ಮದುವೆಗೆ ಕರೆದೊಯ್ದಿದ್ದ. ಅದೇ ವೇಳೆಯೇ ಚಿನ್ನಾಭರಣ ಗಮನಿಸಿದ್ದ' ಎಂದು ತಿಳಿಸಿದರು.

'ಮದುವೆ ಮುಗಿಸಿದ್ದ ಉದ್ಯಮಿ ಕುಟುಂಬ, ವಾಪಸು ಹೋಟೆಲ್‌ಗೆ ಬಂದಿದ್ದರು. ನಂತರ, ಚೆನ್ನೈಗೆ ಹೋಗಲು ಸಿದ್ಧರಾಗಿದ್ದರು. ಬ್ಯಾಗ್‌ಗಳು ಹಾಗೂ ಸೂಟ್‌ಕೇಸ್‌ಗಳನ್ನು ಕ್ಯಾಬ್‌ನಲ್ಲಿ ಇರಿಸಲಾಗುತ್ತಿತ್ತು. ಇದೇ ಸಂದರ್ಭದಲ್ಲಿಯೇ ಆರೋಪಿ, ಚಿನ್ನಾಭರಣ–ವಜ್ರವಿದ್ದ ಸೂಟ್‌ಕೇಸ್ ಕದ್ದುಕೊಂಡು ಪರಾರಿಯಾಗಿದ್ದ' ಎಂದು ಹೇಳಿದರು.

ಚಿನ್ನಾಭರಣ ಮಾರಾಟ: 'ಮನೆಗೆ ಹೋಗಿದ್ದ ಆರೋಪಿ, ಚಿನ್ನಾಭರಣ ಹಾಗೂ ವಜ್ರದ ಆಭರಣ ಮುಚ್ಚಿಟ್ಟಿದ್ದ. ಸ್ವಲ್ಪ ಚಿನ್ನಾಭರಣವನ್ನು ಬೇರೆಡೆ ಮಾರಾಟ ಮಾಡಿ ಹಣ ಪಡೆದುಕೊಂಡಿದ್ದ. ಆರೋಪಿಯನ್ನು ಬಂಧಿಸುತ್ತಿದ್ದಂತೆ ಎಲ್ಲ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದರು.

₹10 ಲಕ್ಷ ಕಮಿಷನ್: ಗನ್‌ಮ್ಯಾನ್ ವಿರುದ್ಧ ಎಫ್‌ಐಆರ್ ದಾಖಲು

ಬೆಂಗಳೂರು: ಸರ್ಕಾರಿ ಕೆಲಸದ ಟೆಂಡರ್ ಕೊಡಿಸಲು ಕಮಿಷನ್‌ಗೆ ಬೇಡಿಕೆ ಇರಿಸಿ ಮುಂಗಡವಾಗಿ ₹ 10 ಲಕ್ಷ ಪಡೆದು ವಂಚಿಸಿರುವ ಆರೋಪಿ ರಾಘವೇಂದ್ರ ವಿರುದ್ಧ ವಿಧಾನಸೌಧ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಆರೋಪಿ ರಾಘವೇಂದ್ರ, ಮಾಜಿ ಸಚಿವ ಹಾಲಪ್ಪ ಆಚಾರ್ ಅವರ ಗನ್‌ಮ್ಯಾನ್ ಆಗಿ ಕೆಲಸ ಮಾಡಿದ್ದ. ಅದೇ ಅವಧಿಯಲ್ಲಿ ಕಮಿಷನ್ ಹೆಸರಿನಲ್ಲಿ ಹಣ ಪಡೆದು ವಂಚಿಸಿರುವ ಆರೋಪದಡಿ ರಾಜು ನಾಯಕ್ ಅವರು ದೂರು ನೀಡಿದ್ದಾರೆ. ರಾಘವೇಂದ್ರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ನೋಟಿಸ್ ನೀಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮಾಯಕೊಂಡ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ₹ 30 ಕೋಟಿ ವೆಚ್ಚದಲ್ಲಿ ಸರ್ಕಾರಿ ಕಾಮಗಾರಿ ಕೈಗೊಳ್ಳುತ್ತಿರುವುದಾಗಿ ರಾಘವೇಂದ್ರ ಹೇಳಿದ್ದ. ಶೇ 12ರಷ್ಟು ಕಮಿಷನ್ ನೀಡಿದರೆ, ಟೆಂಡರ್ ಕೊಡಿಸುವುದಾಗಿ ರಾಜು ಅವರಿಗೆ ಆಮಿಷವೊಡ್ಡಿದ್ದ.'

'ಆರೋಪಿ ಮಾತು ನಂಬಿದ್ದ ದೂರುದಾರ, ಮುಂಗಡವಾಗಿ ₹10 ಲಕ್ಷ ನೀಡಿದ್ದರು. ಆದರೆ, ಯಾವುದೇ ಟೆಂಡರ್ ಕೊಡಿಸಿರಲಿಲ್ಲ. ಹಣ ವಾಪಸು ನೀಡುವಂತೆ ರಾಜು ಒತ್ತಾಯಿಸಿದ್ದರು. ₹ 4 ಲಕ್ಷ ಮಾತ್ರ ವಾಪಸು ನೀಡಿದ್ದ ರಾಘವೇಂದ್ರ, ₹6 ಲಕ್ಷ ನೀಡಲು ಹಿಂದೇಟು ಹಾಕುತ್ತಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ. 'ಬಾಕಿ ಹಣ ವಾಪಸು ಕೇಳಿದ್ದಕ್ಕೆ ದೂರುದಾರರಿಗೆ ಆರೋಪಿ ಬೆದರಿಕೆಯೊಡ್ಡಿದ್ದ. ಇದರಿಂದ ನೊಂದ ದೂರುದಾರ, ಠಾಣೆಗೆ ಬಂದು ದೂರು ನೀಡಿದ್ದಾರೆ. ಆರೋಪಿಯನ್ನು ವಿಚಾರಣೆ ನಡೆಸಿ, ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಹೇಳಿವೆ.

'ಅನುತ್ತೀರ್ಣಕ್ಕೆ ಶಿಕ್ಷಕರ ವೈಫಲ್ಯವೇ ಕಾರಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿ ಅನುತ್ತೀರ್ಣಗೊಂಡಿದ್ದರೆ ಅದು ವಿದ್ಯಾರ್ಥಿ ದಡ್ಡ ಎಂದರ್ಥವಲ್ಲ. ಶಿಕ್ಷಕರು ಪಾಠವನ್ನು ಅರ್ಥ ಮಾಡಿಸುವಲ್ಲಿ ವಿಫಲರಾಗಿದ್ದಾರೆ ಎಂದರ್ಥ ಎಂದು ಅಂಕಣಕಾರ ಕೆ.ಪಿ. ಪುತ್ತೂರಾಯ ಹೇಳಿದರು.

ಶಿಕ್ಷಕರ ದಿನಾಚರಣೆಯ ಅಂಗವಾಗಿ ಕರ್ನಾಟಕ ಪ್ರತಿಭಾ ಅಕಾಡೆಮಿ ಶನಿವಾರ ಹಮ್ಮಿಕೊಂಡಿದ್ದ ಎಸ್‌. ರಾಧಾಕೃಷ್ಣನ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಶಿಕ್ಷಕ ಮತ್ತು ಪೋಷಕ ಒಂದಾದರೆ ಎಂಥ ವಿದ್ಯಾರ್ಥಿಯನ್ನೂ ಸಾಧಕನನ್ನಾಗಿ ಪರಿವರ್ತನೆ ಮಾಡಬಹುದು.



ಕರ್ನಾಟಕ ಪ್ರತಿಭಾ ಅಕಾಡೆಮಿ ಆಯೋಜಿಸಿದ ಶಿಕ್ಷಕರ ದಿನಾಚರಣೆಯಲ್ಲಿ ಸಾಧಕ ಶಿಕ್ಷಕರಿಗೆ 'ಎಸ್‌. ರಾಧಾಕೃಷ್ಣನ್ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಪ್ರಜಾವಾಣಿ ಚಿತ್ರ

ಶಿಕ್ಷಕರು ತಮ್ಮ ವೃತ್ತಿಯನ್ನು, ವಿದ್ಯಾರ್ಥಿಯನ್ನು, ವಿಷಯವನ್ನು ಪ್ರೀತಿಸಬೇಕು. ಯಾವುದೇ ಕ್ಷೇತ್ರಗಳು ಭ್ರಷ್ಟಗೊಳ್ಳಬಾರದು. ಅದರಲ್ಲಿಯೂ ವೈದ್ಯಕೀಯ, ನ್ಯಾಯಾಂಗ ಮತ್ತು ಶಿಕ್ಷಣ ಕ್ಷೇತ್ರಗಳು ಹಾಳಾಗಲೇಬಾರದು. ವೈದ್ಯರನ್ನು ನಂಬಿದ ರೋಗಿ, ನ್ಯಾಯವನ್ನು ನಂಬಿದ ಕಕ್ಷಿದಾರ, ವಿದ್ಯೆಗಾಗಿ ಬಂದ ವಿದ್ಯಾರ್ಥಿ ಮೋಸ ಹೋಗಬಾರದು ಎಂದರು.

ರಾಜ್ಯದ 8 ಉತ್ತಮ ಪ್ರಾಂಶುಪಾಲರನ್ನು, 30 ಉತ್ತಮ ಶಿಕ್ಷಕರನ್ನು ಗುರುತಿಸಿ ಎಸ್‌. ರಾಧಾಕೃಷ್ಣನ್ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಅಕಾಡೆಮಿ ಅಧ್ಯಕ್ಷ ಶಂಕರ್ ಪಾಟೀಲ್, ನವಲಗುಂದ ಶಾಸಕ ಎನ್‌. ಎಚ್‌. ಕೋನರಡ್ಡಿ, ರೋಣ ಶಾಸಕ ಜಿ.ಎಸ್‌. ಪಾಟೀಲ್, ಡಿಎಸ್ ಮ್ಯಾಕ್ಸ್ ಕಾರ್ಯನಿರ್ವಾಹಕ ನಿರ್ದೇಶಕ ಎಸ್‌.ಪಿ. ದಯಾನಂದ, ಬಸವರಾಜ, ರಮೇಶ್ ಸುರ್ವೆ, ಜವಳಿ, ಮಲ್ಲಪ್ಪ ಪಾಟೀಲ್, ಕೆಎಸ್‌ಡಿಎಲ್ ವ್ಯವಸ್ಥಾಪಕ ನಿರ್ದೇಶಕ ಪ್ರಶಾಂತ್ ಪಿ.ಕೆ.ಎಂ ಮಾತನಾಡಿದರು.

ನಗರದಲ್ಲಿ ಇಂದು

ಶ್ರೀಮದ್ಭಾಗವತ ಸಪ್ತಾಹ: ಸ್ಕಂದ 8, 9 ಅಧ್ಯಾಯ-3(ಸ್ಕಂದ-10) ಶ್ರೀಕೃಷ್ಣ ಆವಿರ್ಭಾವ, ಆಯೋಜನೆ ಮತ್ತು ಸ್ಥಳ: ರಾಧಾಕೃಷ್ಣ ದೇವಸ್ಥಾನ ಭಕ್ತ ಮಂಡಳಿ, ಸಂಜಯನಗರ, ಬೆಳಿಗ್ಗೆ 6.30ರಿಂದ

'ಭಗವಾನ್ ಜಿಹ್ವೇಶ್ವರರ ಜಯಂತ್ಯುತ್ಸವ ಮತ್ತು ದಿಂಡಿ ಪಲ್ಲಕ್ಕಿ ಉತ್ಸವ: ಜಿಹ್ವೇಶ್ವರ ಪೂಜೆ ಮತ್ತು ತೊಟ್ಟಿಲೋತ್ಸವ ಬೆಳಿಗ್ಗೆ 8ಕ್ಕೆ, ದಿಂಡಿ ಪಲ್ಲಕ್ಕಿ ಉತ್ಸವ ಬೆಳಿಗ್ಗೆ 8.30ರಿಂದ, ಅತಿಥಿಗಳು: ಪಿ.ಸಿ. ಮೋಹನ್, ದಿನೇಶ್ ಗುಂಡೂರಾವ್, ಲೀಲಾ ಶಿವಕುಮಾರ್, ನವೀನ್ ಕುಮಾರ್ ರಾಥೋಡ್, ಆಯೋಜನೆ: ಸ್ವಕುಳಸಾಲಿ ಸಂಘ, ಸ್ಥಳ: ಸದ್ಗುರು ಅನಂತಸ್ವಾಮಿ ಆಶ್ರಮ ಮತ್ತು ಚಂದ್ರಮೌಳೇಶ್ವರ ಭವನ, ಗಾಂಧಿನಗರ

'ಭಕ್ತಿ ಭಾವಾನಂದ' ಅಖಂಡ ಭಜನೆ: ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಸಾಯಿ ರಮೇಶ್ ಹಾಲ್, ಬೃಂದಾವನ, ಕಾಡುಗೋಡಿ, ಬೆಳಿಗ್ಗೆ 9

ಚಂದ್ರಕಾಂತ ವಡ್ಡು ಅವರ 'ಸಮಕಾಲೀನ' ಅಂಕಣ ಬರಹಗಳ ಸಂಕಲನ ಬಿಡುಗಡೆ: ಎಸ್‌.ಆರ್. ಹಿರೇಮಠ, ಅಧ್ಯಕ್ಷತೆ: ಯತಿರಾಜ್ ಬ್ಯಾಲಹಳ್ಳಿ, ಪುಸ್ತಕದ ಕುರಿತು: ಗೀತಾ ವಸಂತ, ಪ್ರಾಸ್ತಾವಿಕ ನುಡಿ: ರವೀಂದ್ರ ಭಟ್ಟ, 'ಸಮಕಾಲೀನ ರಾಜಕಾರಣ': ಎ. ನಾರಾಯಣ, 'ಸಮಕಾಲೀನ ಮಾಧ್ಯಮ': ಬಿ.ಎಂ. ಹನೀಫ್, ಆಯೋಜನೆ: ಸಮಾಜಮುಖಿ ಪ್ರಕಾಶನ, ಸ್ಥಳ: ಡಾ.ಎಚ್‌.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 10

ಉಚಿತ ಶೈಕ್ಷಣಿಕ ಕಾರ್ಯಕ್ರಮಗಳು 2023-24, ಉದ್ಘಾಟನೆ ಮತ್ತು ಪುಸ್ತಕ ವಿತರಣೆ: ಉದ್ಘಾಟನೆ: ಮೋಹನ್ ದೇವ್ ಆಳ್ವ, ಆಶಯ ನುಡಿ: ಬಿ.ಆರ್. ಶ್ರೀಧರ್, ಪುಸ್ತಕ ವಿತರಣೆ: ಎಂ.ಆರ್. ಲೋಕನಾಥ್, ಎ.ಬಿ. ಗಂಗಾಧರಪ್ಪ, ಅಧ್ಯಕ್ಷತೆ: ಶ್ರೀರಾಮೇಗೌಡ, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಬೆಳಿಗ್ಗೆ 10

ಪಂಡಿತ್ ಮಲ್ಲಿಕಾರ್ಜುನ ಮನ್ಸೂರ್ ಸಂಸ್ಮರಣ ಸಂಗೀತೋತ್ಸವ: ಗಾಯನ: ಜಯತೀರ್ಥ ಮೇವುಂಡಿ, ತಬಲಾ: ರೂಪಕ್ ಕಲ್ಲೂರಕರ್,



ಜಯತೀರ್ಥ ಮೇವುಂಡಿ

ಹಾರ್ಮೋನಿಯಂ: ಸತೀಶ್ ಕೊಳ್ಳಿ. ಬೆಳಿಗ್ಗೆ 10.15ಕ್ಕೆ, ಗಾಯನ: ದಿವ್ಯಾ ಶೆಣೈ, ತಬಲಾ: ಶ್ರೀದತ್ತ, ಹಾರ್ಮೋನಿಯಂ: ಸಮೀರ್ ಹವಾಲ್ದಾರ್, ಮಂಜೀರಾ: ರಾಜೇಶ್ ಕುಲಕರ್ಣಿ ಸಂಜೆ 5.30ಕ್ಕೆ, ಸಾರಂಗಿ ವಾದನ: ಸರ್ಫರಾಜ್ ಖಾನ್, ತಬಲಾ: ಸುಮಿತ್ ಎಸ್‌. ನಾಯಕ್, 6.30ಕ್ಕೆ, ಗಾಯನ: ಅಲ್ಕಾ ಡಿಯೋ ಮರುಲ್ಕರ್, ತಬಲಾ: ಉದಯ್ ಕುಲಕರ್ಣಿ, ಹಾರ್ಮೋನಿಯಂ: ರವೀಂದ್ರ ಕಟೋಟಿ, ಆಯೋಜನೆ: ಬೆಂಗಳೂರು ಕಿಡ್ನಿ ಫೌಂಡೇಷನ್, ಸ್ಥಳ: ಜೆ.ಎಸ್‌.ಎಸ್‌. ಸಭಾಂಗಣ, ಜಯನಗರ

ಶಿಕ್ಷಕರ ದಿನಾಚರಣೆ: ಅತಿಥಿಗಳು: ಪ್ರಭಾಶಂಕರ ಪ್ರೇಮಿ, ಭಾರ್ಗವಿ ಪಿ., ಸುಮಾ, ಆಯೋಜನೆ: ರವಿಕಿರಣ ಸಾಹಿತ್ಯ ಪ್ರತಿಷ್ಠಾನ, ಸ್ಥಳ: ಕೆನ್ ಕಲಾಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ಎಂಜಿನಿಯರಿಂಗ್ ಆ್ಯಂಡ್ ಜನರಲ್ ವರ್ಕರ್ಸ್ ಯೂನಿಯನ್‌ನ ಸುವರ್ಣ ಮಹೋತ್ಸವದ ಅಂಗವಾಗಿ 'ಎಂ.ಡಿ. ಹರಿಗೋವಿಂದ' ಸ್ಮಾರಕ ಉಪನ್ಯಾಸ: ಉದ್ಘಾಟನೆ: ಸಿದ್ಧನಗೌಡ ಪಾಟೀಲ, ಅಧ್ಯಕ್ಷತೆ: ಎಂ. ದೀಪಕ್, 'ಕನಿಷ್ಠ ವೇತನ ವಿವಿಧ ದೃಷ್ಟಿಕೋನಗಳು' ಕುರಿತು ಉಪನ್ಯಾಸ: ಬಾಬು ಮ್ಯಾಥ್ಯೂ, ಅತಿಥಿಗಳು: ಎಸ್‌.ಎನ್. ಮೂರ್ತಿ, ಮುರಳೀಧರ, ವಿಜಯ ಭಾಸ್ಕರ್ ಡಿ.ಎ., ಆಯೋಜನೆ: ಎಐಟಿಯುಸಿ, ಸ್ಥಳ: ಮಹಾದೇವ ದೇಸಾಯಿ ಸಭಾಂಗಣ, ಗಾಂಧಿ ಭವನ, ಕುಮಾರ ಕೃಪಾ ರಸ್ತೆ, ಬೆಳಿಗ್ಗೆ 10.30ರಿಂದ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಸಹಕಾರ ಸಂಘದ ಉದ್ಘಾಟನೆ: ಸಾನ್ನಿಧ್ಯ: ಆನಂದ ಭಂತೇಜಿ, ಉದ್ಘಾಟನೆ: ಕೆ.ಎನ್. ರಾಜಣ್ಣ, ಅಧ್ಯಕ್ಷತೆ: ಮಾವಳ್ಳಿ ಶಂಕರ್, ಅತಿಥಿಗಳು: ಸತೀಶ್ ಜಾರಕಿಹೊಳಿ, ಪ್ರಿಯಾಂಕ್ ಖರ್ಗೆ, ಶಿವಣ್ಣ ಬಿ., ಶ್ರೀನಿವಾಸ, ಬಿ.ಎನ್. ಉಮೇಶ್, ವೈ. ರಮೇಶ್, ಆಯೋಜನೆ: ಸಾಕ್ಯ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಸ್ಥಳ: ಸರ್ಕಾರಿ ಕಲಾ ಕಾಲೇಜು, ಅರಮನೆ ರಸ್ತೆ, ಬೆಳಿಗ್ಗೆ 10.30

'ಟ್ರು ಆಲ್ಟ್ ಬಯೋ ಎನರ್ಜಿ ಡಿಎಚ್ ಕಪ್': ಕಮ್ ಆ್ಯಂಡ್ ಮೀಟ್ ದಿ ಟೀಮ್ಸ್, ಆಯೋಜನೆ: ಡೆಕ್ಕನ್ ಹೆರಾಲ್ಡ್, ಸ್ಥಳ: ಬಿವೈಜಿ ಬ್ರೂಸ್ಕಿ, ಹೆಣ್ಣೂರು, ಬೆಳಿಗ್ಗೆ 11

'ಕವಿಪವಿ' ಕುಟುಂಬಗಳ ಸಮ್ಮಿಲನ: ಉದ್ಘಾಟನೆ: ವಸಂತ ನಾಡಿಗೇರ, ಅತಿಥಿಗಳು: ರವೀಂದ್ರ ಭಟ್ಟ, ರಾಜು ವಿಜಯಪುರ, ಸನ್ಮಾನ: ಕೆ.ಜಿ. ಹಾಲಸ್ವಾಮಿ, ಅಧ್ಯಕ್ಷತೆ: ಚಂದ್ರಕಾಂತ ಸೊನ್ನದ, ಆಯೋಜನೆ: ಕವಿಪವಿ, ಸ್ಥಳ: ಪ್ರೆಸ್‌ಕ್ಲಬ್, ಕಬ್ಬನ್ ಉದ್ಯಾನ, ಬೆಳಿಗ್ಗೆ 11ರಿಂದ



ಜ್ಞಾನಪ್ರಕಾಶ್ ಸ್ವಾಮೀಜಿ

'ನೆಲಮೂಲದ ಧ್ವನಿ ಗದ್ದರ್'ಗೆ ಲಾಲ್ ಸಲಾಂ: ಅತಿಥಿಗಳು: ಜ್ಞಾನಪ್ರಕಾಶ್ ಸ್ವಾಮೀಜಿ, ನಾಗೀದೇವ ಶರಣರು, ಎಚ್‌.ಸಿ. ಮಹದೇವಪ್ಪ, ಬಿ.ಟಿ. ಲಲಿತಾ ನಾಯಕ್, ಟಿ.ಎನ್. ಸೀತಾರಾಮ್, ಜೈಭೀಮ್ ರಾಜು, ಎನ್. ಮಂಜುನಾಥ್ ಪ್ರಸಾದ್, ಎಂ. ವೆಂಕಟಸ್ವಾಮಿ, ಅಧ್ಯಕ್ಷತೆ: ಕೋಟಗಾನಹಳ್ಳಿ ರಾಮಯ್ಯ, ಆಯೋಜನೆ: ರಂಗೋತ್ರಿ, ಸ್ಥಳ: ಸಂಸ ಬಯಲು ರಂಗಮಂದಿರ, ರವೀಂದ್ರ ಕಲಾಕ್ಷೇತ್ರದ ಹಿಂಭಾಗ, ಜೆ.ಸಿ. ರಸ್ತೆ, ಸಂಜೆ 5

'ಸಾಧಕಶ್ರೀ' ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಸ್ವಾಮೀಜಿ, 'ಸಾಧಕಶ್ರೀ' ಪ್ರಶಸ್ತಿ ಪುರಸ್ಕೃತರು: ಬಿ.ಎನ್. ಸುರೇಶ್, ರವೀಂದ್ರ ಭಟ್ಟ, ಕೆ.ಎನ್. ಸೂರ್ಯನಾರಾಯಣ, ಉಪಸ್ಥಿತಿ: ಕೆ. ಗೋಪಾಲಯ್ಯ, ಡಿ. ಸುಧಾಕರ್, ಹರಿ ಅರವಿಂದ ಘೋಳಸಂಗಿ, ಬಿ.ಎಸ್. ರವಿಶಂಕರ್, ರಾಜೇಗೌಡ, ಎಚ್‌.ಎಸ್. ಸಚ್ಚಿದಾನಂದ ಮೂರ್ತಿ, ಬಿ.ಎಸ್. ರಾಘವೇಂದ್ರ ಭಟ್, ಆಯೋಜನೆ: ಆದಿಶಂಕರಾಚಾರ್ಯ ಶಾರದಾ ಲಕ್ಷ್ಮೀನರಸಿಂಹ ಪೀಠ, ಹರಿಹರಪುರ, ಚಾತುರ್ಮಾಸ್ಯ ಮಹೋತ್ಸವ ಸೇವಾ ಸಮಿತಿ, ಸ್ಥಳ: ಹಿಂದೂ ಸಾದರ ಕ್ಷೇಮಾಭಿವೃದ್ಧಿ ಸಂಘ, ಮಹಾಲಕ್ಷ್ಮಿ ಲೇಔಟ್, ಬೆಳಿಗ್ಗೆ 11.30

'ಶಿವದೂತ ಗುಳಿಗ' ನಾಟಕ ಪ್ರದರ್ಶನ: ನಿರ್ದೇಶನ: ವಿಜಯ್ ಕುಮಾರ್ ಕೊಡಿಯಲ್‌ಬೈಲ್, ಸಂಗೀತ: ಎ.ಕೆ. ವಿಜಯ್, ಮುಖ್ಯ ಪಾತ್ರದಲ್ಲಿ: ಸ್ವರಾಜ್ ಶೆಟ್ಟಿ, ಆಯೋಜನೆ: ಸಂಪಾಜೆ ರಂಗ ಸಂಗಮ ಬೆಂಗಳೂರು, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 2.47ಕ್ಕೆ

'ಸಂಗೀತ ಶ್ರಾವಣ' ಸಂಗೀತೋತ್ಸವ, 'ಸುಗಮ ಸಮ್ಮಾನ್' ಪ್ರಶಸ್ತಿ ಪ್ರದಾನ: ಉದ್ಘಾಟನೆ: ವಾಗೀಶ್ ಭಟ್, ಪ್ರಶಸ್ತಿ ಪ್ರದಾನ: ಶ್ರೀನಿವಾಸ ಪ್ರಭು, ಅಧ್ಯಕ್ಷತೆ: ಉಮಾಮಹೇಶ್ವರ ಗುರೂಜಿ, ಪ್ರಶಸ್ತಿ ಪುರಸ್ಕೃತರು: ಮೃತ್ಯುಂಜಯ ದೊಡ್ಡವಾಡ, ಹಿಂದೂಸ್ತಾನಿ ದ್ವಂದ್ವ ಗಾಯನ: ಗಾಯತ್ರಿ ಥಿಟೆ, ವೀಣಾ ಥಿಟೆ, ಹಿಂದೂಸ್ತಾನಿ ಗಾಯನ: ಉಮಾ ಕುಲಕರ್ಣಿ, ಆಯೋಜನೆ: ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಷನ್ ಟ್ರಸ್ಟ್, ಸ್ಥಳ: ನಾದಶ್ರೀ ಸಭಾಂಗಣ, ರಘುವನಹಳ್ಳಿ, ಸಂಜೆ 4ರಿಂದ

ಪಾರ್ವತಮ್ಮ ಮತ್ತು ಚನ್ನಪ್ಪ ಎರೇಸೀಮೆ ಸಂಸ್ಮರಣಾರ್ಥ ಸಂಗೀತ ಕಾರ್ಯಕ್ರಮ: ಸಾನ್ನಿಧ್ಯ: ಶಿವರುದ್ರ ಸ್ವಾಮೀಜಿ, ಶಹನಾಯಿ ವಾದನ: ಪುಟ್ಟರಾಜ ಬಸವಂತ ಭಜಂತ್ರಿ ಮತ್ತು ತಂಡ, ಸ್ಥಳ: ಡಾ.ಎಚ್‌.ಎನ್. ಮಲ್ಟಿಮೀಡಿಯಾ ಹಾಲ್, ನ್ಯಾಷನಲ್ ಕಾಲೇಜು, ಬಸವನಗುಡಿ, ಸಂಜೆ 6

'ನಾಟ್ಯಕಲಾ ವೈಭವ' ಶಾಸ್ತ್ರೀಯ ನೃತ್ಯೋತ್ಸವ: ಉದ್ಘಾಟನೆ: ಕೌಶಲ್ಯಾ ನಿವಾಸ್, ಅಧ್ಯಕ್ಷತೆ: ಶಶಿಕಾಂತ ಯಡಹಳ್ಳಿ, ಅತಿಥಿಗಳು: ಬಲವಂತರಾವ್ ಪಾಟೀಲ್, ಎಂ.ಎನ್. ಸುರೇಶ್, ಸ್ಮಿತಾ ಪ್ರಕಾಶ್, ಆಯೋಜನೆ: ನಾಟ್ಯಕಲಾ ಸಾಂಸ್ಕೃತಿಕ ಕೇಂದ್ರ ಟ್ರಸ್ಟ್, ಸ್ಥಳ: ನಯನ ರಂಗಮಂದಿರ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 6

ಪ್ರವಚನ ವಾಹಿನಿ: ಸಾಮೂಹಿಕ ಸಂಕಷ್ಟಹರ ಗಣಪತಿ ಪೂಜೆ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಸಂಜೆ 6.30ರಿಂದ

'ಅಶ್ವತ್ಥಾಮನ್' ನಾಟಕ ಪ್ರದರ್ಶನ: ನಿರ್ದೇಶನ: ಮಧು ಮಳವಳ್ಳಿ, ರಂಗ ವಿನ್ಯಾಸ: ಶಶಿಧರ ಅಡಪ, ಸಂಗೀತ: ಧನಂಜಯ ಆರ್‌.ಸಿ., ಆಯೋಜನೆ: ರಂಗಚಕ್ರ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7.30

ರಾಘವೇಂದ್ರಸ್ವಾಮಿ ಆರಾಧನಾ ಮಹೋತ್ಸವ: ಸುಜ್ಞಾನೇಂದ್ರ ತೀರ್ಥರ ಆರಾಧನೆ ಬೆಳಿಗ್ಗೆ 8.30ಕ್ಕೆ, ಸಾಮೂಹಿಕ ಸತ್ಯನಾರಾಯಣ ಪೂಜೆ ಬೆಳಿಗ್ಗೆ 9.30ಕ್ಕೆ, ವೆಂಕಟ ನರಸಿಂಹಾಚಾರ್ಯ ಜೋಶಿ ಅವರಿಂದ ಪ್ರವಚನ, ದಾಸವಾಣಿ: ಅಭಿಜ್ಞಾ ರಘುನಂದನ್, ಅನನ್ಯ ರವಿಕಿರಣ, ಹಾರ್ಮೋನಿಯಂ: ಸೂರ್ಯ ಉಪಾಧ್ಯಾಯ, ತಬಲಾ: ಕೌಶಿಕ್ ಭಟ್, ಬೆಳಿಗ್ಗೆ 11ಕ್ಕೆ ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸೇವಾ ಸಮಿತಿ, ಸಂಜಯನಗರ

ರಾಘವೇಂದ್ರತೀರ್ಥ ಗುರುಸಾರ್ವಭೌಮರ ಆರಾಧನಾ ಸಪ್ತರಾತ್ರೋತ್ಸವ: ಸುಜ್ಞಾನೇಂದ್ರತೀರ್ಥರ ಆರಾಧನೆ, ದಾಸ ಝೇಂಕಾರ: ಶೇಷಗಿರಿದಾಸ್ ರಾಯಚೂರು ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಜಯನಗರ, 5ನೇ ಬಡಾವಣೆ, ಸಂಜೆ 6.30ರಿಂದ

ರಾಘವೇಂದ್ರತೀರ್ಥ ಗುರುಸಾರ್ವಭೌಮರ ಆರಾಧನಾ ಮಹೋತ್ಸವ: ಭರತನಾಟ್ಯ ಪ್ರದರ್ಶನ: ರಂಜನಿ, ಸೃಷ್ಟಿ ಕಲಾ ತಂಡದಿಂದ, ಆಯೋಜನೆ ಮತ್ತು ಸ್ಥಳ: ಬನಶಂಕರಿ ಸರ್ವಜ್ಞ ಸೇವಾ ಬಳಗ, ಹೊಸಕೆರೆಹಳ್ಳಿ, ಸಂಜೆ 7ರಿಂದ

ಮಾಜಿ ಶಾಸಕನ ಕಂಪನಿಯಿಂದ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದುಪ್ಪಟ್ಟು ಲಾಭದ ಆಮಿಷವೊಡ್ಡಿ ಜನರನ್ನು ವಂಚಿಸಿದ್ದ ಆರೋಪದಡಿ 'ಗರೀಮಾ ಹೋಮ್ಸ್ ಆ್ಯಂಡ್ ಫಾರ್ಮ್ ಹೌಸ್ ಕಂಪನಿ' ವಿರುದ್ಧ ದಾಖಲಾಗಿರುವ ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ ಅಧಿಕಾರಿಗಳು, ಕಂಪನಿಯ ಆಸ್ತಿಗಳ ಪತ್ತೆಗೆ ಶೋಧ ಆರಂಭಿಸಿದ್ದಾರೆ.

ಹುಬ್ಬಳ್ಳಿಯ ದೇಶಪಾಂಡೆ ನಗರದಲ್ಲಿರುವ ಕಲಬುರ್ಗಿ ಪ್ಲಾಜಾ ಕಟ್ಟಡದಲ್ಲಿ ಶಾಖಾ ಕಚೇರಿ ತೆರೆದಿದ್ದ ಕಂಪನಿ, ಲಾಭದ ಆಮಿಷವೊಡ್ಡಿ ಜನರಿಂದ ಹಣ ಸಂಗ್ರಹಿಸಿತ್ತು. ಯಾವುದೇ ಲಾಭ ಹಾಗೂ ಅಸಲು ಹಣ ನೀಡದೆ ಕಂಪನಿ ಕಚೇರಿಗೆ ಬೀಗ ಹಾಕಲಾಗಿತ್ತು.



ಬನ್ವಾರಿ ಲಾಲ್ ಖುಷ್ವಾ

'ಹೂಡಿಕೆ ಹೆಸರಿನಲ್ಲಿ ಹಣ ಸಂಗ್ರಹಿಸಿ ವಂಚನೆ ಮಾಡಿದ್ದಾರೆ' ಎಂದು ಆರೋಪಿಸಿ ಹೂಡಿಕೆದಾರ ಚನ್ನಬಸಯ್ಯ ಹಿರೇಮಠ ಅವರು ಹುಬ್ಬಳ್ಳಿ ಉಪನಗರ ಠಾಣೆಗೆ ಕಂಪನಿ ವಿರುದ್ಧ 2018ರಲ್ಲಿ ದೂರು ನೀಡಿದ್ದರು. ಪ್ರಕರಣದ ತನಿಖೆಯನ್ನು ಸಿಐಡಿಗೆ ವರ್ಗಾಯಿಸಲಾಗಿದೆ. ಸಿಐಡಿ ಇನ್‌ಸ್ಪೆಕ್ಟರ್ ಹರಿವರ್ಧನ್ ನೇತೃತ್ವದ ತಂಡ ತನಿಖೆ ನಡೆಸುತ್ತಿದೆ.

ಪಂಜಾಬ್‌ನಲ್ಲಿ ಮುಖ್ಯ ಕಚೇರಿ: 'ಗರೀಮಾ ಹೋಮ್ಸ್ ಆ್ಯಂಡ್ ಫಾರ್ಮ್ ಹೌಸ್ ಕಂಪನಿ ಸ್ಥಾಪಿಸಿದ್ದ ರಾಜಸ್ಥಾನದ ಮಾಜಿ ಶಾಸಕ ಬನ್ವಾರಿಲಾಲ್ ಖುಷ್ವಾ (41) ಪ್ರಮುಖ ಆರೋಪಿ. ಪಂಜಾಬ್ ಮೊಹಾಲಿಯ ದೇರಾ ಬಸ್ಸಿಯಲ್ಲಿ ಕೇಂದ್ರ ಕಚೇರಿ ತೆರೆದಿದ್ದ. ಸಂಬಂಧಿಕರೇ ಆಗಿದ್ದ ಶಿವರಾಮ್ ಖುಷ್ವಾ, ಬನ್ವಾರಿ, ಜಿತೇಂದ್ರ ಹಾಗೂ ವಿಜೇಂದ್ರಪಾಲ್ ಅವರನ್ನು ನಿರ್ದೇಶಕರನ್ನಾಗಿ ನೇಮಕ ಮಾಡಿಕೊಂಡಿದ್ದ' ಎಂದು ಸಿಐಡಿ ಮೂಲಗಳು ಹೇಳಿವೆ.

'ಬನ್ವಾರಿ ಲಾಲ್, ಇತರೆ ನಿರ್ದೇಶಕರು ಸೇರಿ, ಹೂಡಿಕೆ ಹೆಸರಿನಲ್ಲಿ ಜನರನ್ನು ವಂಚಿಸುತ್ತಿದ್ದರು' ಎಂದು ತಿಳಿಸಿದರು.

ಹುಬ್ಬಳ್ಳಿಯಲ್ಲಿ ಕಚೇರಿ: 'ಕರ್ನಾಟಕದಲ್ಲಿ ಶಾಖಾ ಕಚೇರಿ ತೆರೆಯಲು ಯೋಚಿಸಿದ್ದ ಬನ್ವಾರಿ ಲಾಲ್, ಹುಬ್ಬಳ್ಳಿಯನ್ನು ಆಯ್ಕೆ ಮಾಡಿಕೊಂಡಿದ್ದ. ಬಸವನ ಬಾಗೇವಾಡಿಯ ಸಾತಿಹಾಳದ ಆರ್‌.ಜಿ. ಹಿರೇಮಠ, ಹುಬ್ಬಳ್ಳಿ ಮನಕವಾಡದ ವಿ.ಆರ್. ಚಾಕಲಬ್ಬಿ, ವಿ.ಬಿ. ಪರಿಮಳ ಹಾಗೂ ಇತರರನ್ನು ಸಂಪರ್ಕಿಸಿದ್ದ. ಅವರನ್ನೇ ಕಂಪನಿಯ ಏಜೆಂಟರ್‌ನ್ನಾಗಿ ಮಾಡಿಕೊಂಡಿದ್ದ' ಎಂದು ಸಿಐಡಿ ಮೂಲಗಳು ಹೇಳಿವೆ.

ಕರಪತ್ರ ಹಂಚಿಕೆ, ಪಾಲಿಸಿ ಮಾರಾಟ: 'ಹುಬ್ಬಳ್ಳಿ–ಧಾರವಾಡ ಹಾಗೂ ಸುತ್ತಮುತ್ತಲಿನ ಊರುಗಳಲ್ಲಿ ಕಂಪನಿಯ ಏಜೆಂಟರು ಕರಪತ್ರಗಳನ್ನು ಹಂಚಿದ್ದರು. ಕಂಪನಿಯಲ್ಲಿ ಹಣ ಹೂಡಿಕೆ ಮಾಡಿದರೆ ದುಪ್ಪಟ್ಟು ಲಾಭ ಬರುತ್ತದೆ' ಎಂಬುದಾಗಿ ಪ್ರಚಾರ ಮಾಡಿದ್ದರು ಎಂದು ಸಿಐಡಿ ಮೂಲಗಳು ತಿಳಿಸಿವೆ.

'ಏಜೆಂಟರ ಮಾತು ನಂಬಿದ್ದ 478 ಮಂದಿ ಹೂಡಿಕೆ ಮಾಡಲು ಮುಂದಾಗಿದ್ದರು. ಅವರಿಂದ ₹ 70 ಲಕ್ಷ ಕಟ್ಟಿಸಿಕೊಂಡಿದ್ದ ಕಂಪನಿಯವರು, ₹ 7 ಕೋಟಿ ಮೌಲ್ಯದ ಬಾಂಡ್‌ಗಳನ್ನು ವಿತರಿಸಿದ್ದರು. ₹ 70 ಲಕ್ಷ ಹಣ ಪಾವತಿಗೆ ದಾಖಲೆಗಳು ಸಿಕ್ಕಿವೆ. ನಿಗದಿತ ಸಮಯಕ್ಕೆ ಪಾಲಿಸಿ ಮೆಚ್ಯೂರಿಟಿ ಆಗಿದ್ದರೆ, ಕಂಪನಿಯವರು ಹೂಡಿಕೆದಾರರಿಗೆ ₹ 7 ಕೋಟಿ ನೀಡಬೇಕಿತ್ತು. ಹಣ ಸಂಗ್ರಹಿಸಿದ್ದ ಕೆಲವೇ ತಿಂಗಳಿನಲ್ಲಿ ಕಂಪನಿ ಕಚೇರಿಗೆ ಬೀಗ ಹಾಕಲಾಗಿತ್ತು' ಎಂದು ಮೂಲಗಳು ಹೇಳಿವೆ.

ಆಸ್ತಿಗಳ ಪಟ್ಟಿ ಸಿದ್ಧ

'ಆರೋಪಿ ಬನ್ವಾರಿ ಲಾಲ್, ಜನರನ್ನು ವಂಚಿಸಿ ಸಂಗ್ರಹಿಸಿದ್ದ ಹಣದಲ್ಲಿ ಹೊರ ರಾಜ್ಯಗಳಲ್ಲಿ ಆಸ್ತಿ ಖರೀದಿಸಿದ್ದಾನೆ. ರಾಜಸ್ಥಾನ, ಪಂಜಾಬ್ ಹಾಗೂ ದೆಹಲಿಯಲ್ಲಿ ಆಸ್ತಿಗಳಿರುವುದು ಗೊತ್ತಾಗಿದೆ. ದೆಹಲಿಯ ಆಕ್ಸಿಸ್ ಬ್ಯಾಂಕ್ ಶಾಖೆಯಲ್ಲಿರುವ ಆರೋಪಿ ಖಾತೆಗೂ ಹಣ ಜಮೆ ಆಗಿದೆ. ಆರೋಪಿಗಳಿಗೆ ಸಂಬಂಧಪಟ್ಟ ಆಸ್ತಿಗಳ ಪಟ್ಟಿ ಸಿದ್ಧಪಡಿಸಲಾಗುತ್ತಿದೆ' ಎಂದು ಸಿಐಡಿ ಮೂಲಗಳು ತಿಳಿಸಿವೆ.

'ಬನ್ವಾರಿ ಲಾಲ್ ಹಾಗೂ ಇತರರ ವಿರುದ್ಧ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಪ್ರಕರಣ ದಾಖಲಿಸಿಕೊಂಡಿದೆ. ಆರೋಪಿಗಳು ಹಾಗೂ ಕಂಪನಿಯ ಕೆಲ ಆಸ್ತಿಗಳನ್ನು ಜಪ್ತಿ ಮಾಡಿದೆ. ಈ ಬಗ್ಗೆಯೂ ಮಾಹಿತಿ ಪಡೆಯಲಾಗುತ್ತಿದೆ' ಎಂದು ಮೂಲಗಳು ಹೇಳಿವೆ.

ಅಪಾಯಕಾರಿ ರಾಸಾಯನಿಕ ಧಾತುಗಳು: ಬೆಂಗಳೂರಿನ ಕೊಳಚೆ ನೀರಿನಲ್ಲಿ ಕೈಗಾರಿಕಾ ಮತ್ತು ಆಸ್ಪತ್ರೆಯ ಅಪಾಯಕಾರಿ ತ್ಯಾಜ್ಯಗಳೂ ಇವೆ. ಕ್ಯಾಡ್ಮಿಯಂ,ಕ್ರೋಮಿಯಂ, ತಾಮ್ರ, ನಿಕ್ಕೆಲ್, ಸೀಸ, ಸತುವಿನಂಥ ಭಾರಿ ಪ್ರಮಾಣದ ಲೋಹಧಾತು, ರಾಸಾಯನಿಕ ಅಂಶಗಳು ಕಂಡುಬಂದಿವೆ. ಇವು ಪೂರ್ಣವಾಗಿ ಸಂಸ್ಕರಣೆಯಾಗದೆ ಕೆರೆಗಳನ್ನು ಸೇರುತ್ತಿವೆ





ಅಂತರ್ಜಲ ಕಲುಷಿತ: ಕೆರೆಗಳಿಗೆ ಹರಿಯುವ ಅರೆ ಸಂಸ್ಕರಿತ ನೀರು ಅಂತರ್ಜಲ ಸೇರುತ್ತಿದೆ. ಇದರಿಂದ ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ನಗರ ಜಿಲ್ಲೆಯ ಅಂತರ್ಜಲ ದಿನದಿಂದ ದಿನಕ್ಕೆ ವಿಷವಾಗುತ್ತಿದೆ



ಕುಡಿಯುವ ನೀರಿಗೆ ಬೆರಕೆ: ನಗರ ಮತ್ತು ಗ್ರಾಮೀಣ ಭಾಗಗಳಲ್ಲಿ ಸ್ಥಳೀಯ ಸಂಸ್ಥೆಗಳು ಜನರಿಗೆ ಕುಡಿಯುವ ನೀರು ಪೂರೈಸುವ ಉದ್ದೇಶದಿಂದ ಕೆರೆ ಅಂಗಳಗಳಲ್ಲಿ ಕೊಳವೆ ಬಾವಿ ಕೊರೆಸಿವೆ. ಈಗ ಅದೇ ಕೆರೆಗಳ ಒಡಲಿನಲ್ಲಿ ಕೆ.ಸಿ.ವ್ಯಾಲಿ, ಎಚ್‌.ಎನ್‌.ವ್ಯಾಲಿ ನೀರಿದೆ



ಇತರ ಕೆರೆಗಳಿಗೆ ಕೊಳಚೆ ನೀರು: 'ವ್ಯಾಲಿ' ಯೋಜನೆಗೆ ಒಳಪಟ್ಟ ಕೆರೆಗಳು ಮಳೆ ನೀರಿನಿಂದ ತುಂಬಿ ಕೋಡಿ ಬಿದ್ದರೆ ಆ ಕೊಳಚೆ ಮಿಶ್ರಿತ ಮಳೆ ನೀರು ಇತರೆ ಕೆರೆಗಳಿಗೆ ಹರಿಯುತ್ತದೆ

ವಿಷವಾಗುತ್ತಿದೆ ಜಾನುವಾರು ಹಾಲು: ಜಾನುವಾರುಗಳಿಗೂ ಈ ನೀರು ವಿಷ ಉಣಿಸುತ್ತಿದೆ ಎನ್ನುವ ಆರೋಪವಿದೆ



ಚಿತ್ರಗಳು: ಭಾವು ಪತ್ತಾರ್



ದೇಹ ಸೇರುತ್ತಿರುವ ವಿಷ: ಈ ಯೋಜನೆಯ ವ್ಯಾಪ್ತಿಗೆ ಒಳಪಟ್ಟ ಕೆರೆಗಳು ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ದೊಡ್ಡ ಪ್ರಮಾಣದಲ್ಲಿಯೇ ಕೃಷಿ ಚಟುವಟಿಕೆಗಳು ನಡೆಯುತ್ತಿವೆ. ಇಲ್ಲಿ ಬೆಳೆಯುವ ಹಣ್ಣು, ತರಕಾರಿ, ಸೊಪ್ಪುಗಳ ಮೂಲಕ ವಿಷಕಾರಿ ಧಾತುಗಳು ಮನುಷ್ಯನ ದೇಹ ಸೇರುತ್ತಿವೆ ಎನ್ನುವ ಅನುಮಾನವನ್ನು ತಜ್ಞರು ವ್ಯಕ್ತಪಡಿಸುತ್ತಾರೆ.

ಅವಳಿ 'ವ್ಯಾಲಿ'ಯಲ್ಲಿ ಅಪಾಯ

ಒಂದನೇ ಪುಟದಿಂದ

ಅದರಲ್ಲಿ ಕೆಲವರಿಗೆ ಮೂತ್ರಪಿಂಡ, ಯಕೃತ್‌ ಸಮಸ್ಯೆ ಕಾಡುತ್ತಿದೆ' ಎನ್ನುತ್ತಾರೆ ಚಿಕ್ಕಬಳ್ಳಾಪುರದ 'ಯುವ ಧ್ವನಿ' ಅಧ್ಯಯನ ತಂಡದ ಸಂಚಾಲಕ ಎನ್. ಗಂಗಾಧರ ರೆಡ್ಡಿ.

ಇದಕ್ಕೆಲ್ಲ ಕಾರಣ ಹುಡುಕಲು ಹೊರಟಾಗ ಸಿಕ್ಕಿದ್ದು ಕೆ.ಸಿ. ವ್ಯಾಲಿ ಮತ್ತು ಎಚ್‌.ಎನ್‌. ವ್ಯಾಲಿ ಎಂಬ ಸರ್ಕಾರದ ಜೋಡಿ ನೀರಾವರಿ ಯೋಜನೆಗಳಲ್ಲಿ ಹರಿಯುವ ಅರೆ ಸಂಸ್ಕರಿತ ಕೊಳಚೆ ನೀರು!

ಈ ಯೋಜನೆ ಅಡಿ ಬೆಂಗಳೂರಿನ ಕೊಳಚೆ ನೀರನ್ನು ಅರೆಬರೆಯಾಗಿ ಸಂಸ್ಕರಿಸಿ ಸುತ್ತಮುತ್ತಲಿನ ಕೆರೆಗಳನ್ನು ತುಂಬಿಸಲಾಗುತ್ತಿದೆ. ಇದು ಸ್ಥಳೀಯ ಜನ, ಜಾನುವಾರುಗಳ ಜೀವಕ್ಕೆ ಮಾರಕವಾಗುತ್ತಿದೆ ಎನ್ನುವುದು ರೈತರು, ಹೋರಾಟಗಾರರು, ವೈದ್ಯರು ಮತ್ತು ವರ್ತಕರ ವಾದ.

ಈ ವಾದವನ್ನು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಪರಿಸರ ವಿಜ್ಞಾನಿ ಡಾ.ಟಿ.ವಿ.ರಾಮಚಂದ್ರ ಕೂಡ ಪುರಸ್ಕರಿಸುತ್ತಾರೆ. 'ಕೆ.ಸಿ. ವ್ಯಾಲಿ ಮತ್ತು ಎಚ್‌.ಎನ್‌. ವ್ಯಾಲಿ ನೀರನ್ನು ಮೂರು ಹಂತದಲ್ಲಿ ಶುದ್ಧೀಕರಿಸಿ ಹರಿಸದಿದ್ದರೆ ಮುಂದಿನ ದಿನಗಳಲ್ಲಿ ಕೋಲಾರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜನರನ್ನು ದೊಡ್ಡಮಟ್ಟದಲ್ಲಿ ಆರೋಗ್ಯ ಸಮಸ್ಯೆ ಕಾಡಲಿದೆ. ಕೃಷಿ, ತೋಟಗಾರಿಕೆ ಮೇಲೂ ದುಷ್ಪರಿಣಾಮ ಬೀರುತ್ತದೆ' ಎಂದು ಅವರು ಎಚ್ಚರಿಸುತ್ತಾರೆ.

ಈ ಎಚ್ಚರಿಕೆಯನ್ನು ಅವರು ಸುಮ್ಮನೆ ನೀಡಿದ್ದಲ್ಲ. ಕೆ.ಸಿ. ವ್ಯಾಲಿ ಮತ್ತು ಎಚ್‌.ಎನ್‌. ವ್ಯಾಲಿಯಲ್ಲಿ ಅರೆ ಸಂಸ್ಕರಿಸಿದ ನೀರು ಹರಿದಿರುವ ವರ್ತೂರು ಕೆರೆ ಸುತ್ತಮುತ್ತ ಡಾ.ರಾಮಚಂದ್ರ ಹಾಗೂ ಐಐಎಸ್‌ಸಿ ತಂಡ ಸುದೀರ್ಘವಾಗಿ ಅಧ್ಯಯನ ನಡೆಸಿದೆ. ಆ ವೇಳೆ ಅಲ್ಲಿನ ಪುಟ್ಟ ಮಕ್ಕಳನ್ನು ಚರ್ಮರೋಗ, ಮೂತ್ರಪಿಂಡ ಸೇರಿದಂತೆ ಗಂಭೀರ ಆರೋಗ್ಯ ಸಮಸ್ಯೆಗಳು ಬಾಧಿಸುತ್ತಿರುವುದು ಪತ್ತೆಯಾಗಿದೆ.

ಶಾಪವಾದ ಅವಳಿ ಯೋಜನೆ

ಬೆಂಗಳೂರಿನ ಇಡೀ ಕೊಳಚೆ ನೀರನ್ನು ಎರಡು ಹಂತದಲ್ಲಿ ಶುದ್ಧೀಕರಿಸಿ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ನಗರ ಜಿಲ್ಲೆಯ ಕೆರೆಗಳಿಗೆ ಹರಿಸುವ ಉದ್ದೇಶದಿಂದ ಹುಟ್ಟಿಕೊಂಡಿದ್ದೇ ಈ ಕೆ.ಸಿ.ವ್ಯಾಲಿ ಮತ್ತು ಎಚ್‌.ಎನ್‌.ವ್ಯಾಲಿ ಎಂಬ ನೀರಾವರಿ ಯೋಜನೆಗಳು.

ಕೋರಮಂಗಲ–ಚಲ್ಲಘಟ್ಟ ಕಣಿವೆ (ಕೆ.ಸಿ.ವ್ಯಾಲಿ) ನೀರಾವರಿ ಯೋಜನೆ ಅಡಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ 134 ಕೆರೆ ಹಾಗೂ ಹೆಬ್ಬಾಳ–ನಾಗವಾರ ಕಣಿವೆ (ಎಚ್‌.ಎನ್‌.ವ್ಯಾಲಿ) ಯೋಜನೆ ಅಡಿ ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ನಗರ ಜಿಲ್ಲೆಯ 65 ಕೆರೆಗಳಿಗೆ ಅರೆ ಸಂಸ್ಕರಿಸಲಾದ ಬೆಂಗಳೂರಿನ ಚರಂಡಿ ನೀರು ಹರಿಸಲಾಗುತ್ತಿದೆ.

ಸಿದ್ದರಾಮಯ್ಯ ಮೊದಲ ಬಾರಿ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಈ ಎರಡೂ ಯೋಜನೆ ಜಾರಿಗೊಳಿಸಲಾಯಿತು. 2018ರಲ್ಲಿ ಕೋಲಾರಕ್ಕೆ ಮತ್ತು 2020ರಲ್ಲಿ ಚಿಕ್ಕಬಳ್ಳಾಪುರಕ್ಕೆ ಅರೆ ಸಂಸ್ಕರಿತ ನೀರು ಹರಿಸಲಾಯಿತು. ಈ ಎರಡೂ ಯೋಜನೆಗಳು ಇಂದಿಗೂ ಪೂರ್ಣಗೊಂಡಿಲ್ಲ. ಅಷ್ಟರಲ್ಲಿ ಎರಡನೇ ಹಂತದ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ.



ಚಿಕ್ಕಬಳ್ಳಾಪುರದ ಕಂದವಾರ ಕೆರೆ ಬಳಿ ಬಳಕೆಗೆ ಯೋಗ್ಯವಲ್ಲ ಎಂದು ಅಳವಡಿಸಿರುವ ನಾಮಫಲಕ

'ವ್ಯಾಲಿ'ಯಲ್ಲಿ ಕೇಂದ್ರ ನಿಯಮಾವಳಿ ಗಾಳಿಗೆ: ಅಂತರ್ಜಲ ಮರುಪೂರಣಕ್ಕಾಗಿ ಮಹಾನಗರಗಳ ಕೊಳಚೆ ನೀರು ಬಳಸಿಕೊಳ್ಳುವ ಬಗ್ಗೆ 2013ರಲ್ಲಿಯೇ ಕೇಂದ್ರ ಸರ್ಕಾರ ದೇಶಕ್ಕೆ ಅನ್ವಯವಾಗುವ ನಿಯಮ ರೂಪಿಸಿದೆ.

ಆ ಮಾನದಂಡದ ಪ್ರಕಾರ ಚರಂಡಿಯ ಕೊಳಚೆ ನೀರನ್ನು ಮೂರು ಹಂತದಲ್ಲಿ ಶುದ್ಧೀಕರಿಸಿಯೇ ಕೆರೆಗಳಿಗೆ ಹರಿಸಬೇಕು. ಹಾಗಾದರೆ ಮಾತ್ರ ಪ್ರಾಣಿ, ಪಕ್ಷಿಗಳು, ಮನುಷ್ಯನಿಗೆ ಯಾವುದೇ ತೊಂದರೆ ಆಗುವುದಿಲ್ಲ. ಇಲ್ಲದಿದ್ದರೆ ಅರೆ ಸಂಸ್ಕರಿತ ನೀರು ಅಂತರ್ಜಲಕ್ಕೆ ಆಪತ್ತು ತರಲಿದೆ ಎಂದು ಎಚ್ಚರಿಸಲಾಗಿದೆ. ವಿಪರ್ಯಾಸ ಎಂದರೆ ಸಂಸ್ಕರಿಸಿದ ನೀರು ಹರಿಸಲು ಕೇಂದ್ರ ಸರ್ಕಾರ ರೂಪಿಸಿದ ಯಾವ ನಿಯಮಾವಳಿಗಳೂ ಅವಳಿ ವ್ಯಾಲಿಗಳಲ್ಲಿ ಲೆಕ್ಕಕ್ಕಿಲ್ಲ!

ಇದನ್ನು ಮನಗಂಡ ಶಾಶ್ವತ ನೀರಾವರಿ ಹೋರಾಟಗಾರರು, ವಿಜ್ಞಾನಿಗಳು, ವೈದ್ಯರು, ಪರಿಸರವಾದಿಗಳು ಈ ಯೋಜನೆಯ ಆರಂಭಕ್ಕೂ ಮುನ್ನವೇ ಧ್ವನಿ ಎತ್ತಿದ್ದಾರೆ. ಸರ್ಕಾರಕ್ಕೆ ವಿವಿಧ ಸಂಸ್ಥೆಗಳು ವೈಜ್ಞಾನಿಕ ವರದಿ ಸಹ ಸಲ್ಲಿಸಿವೆ. ಶಾಶ್ವತ ನೀರಾವರಿ ಹೋರಾಟ ಸಮಿತಿ ಅಧ್ಯಕ್ಷ ಆರ್‌.ಆಂಜನೇಯ ರೆಡ್ಡಿ ವೈಜ್ಞಾನಿಕವಾಗಿ ಮೂರು ಹಂತದವರೆಗೆ ಸಂಸ್ಕರಿಸಿ ಎಂದು ನ್ಯಾಯಾಲಯದ ಮೊರೆ ಕೂಡ ಹೋಗಿದ್ದಾರೆ. ಈ ಭಾಗದ ರೈತರು ವಿವಿಧ ರೀತಿಯಲ್ಲಿ ಹೋರಾಟ, ಪ್ರತಿಭಟನೆ, ಪಾದಯಾತ್ರೆ ನಡೆಸಿದ್ದಾರೆ. ಆದರೆ, ಇವರ ಕೂಗು ಇಂದಿಗೂ ಸರ್ಕಾರಕ್ಕೆ ಕೇಳಿಸಿಲ್ಲ.

ಬೆಂಗಳೂರಿನ ಒಳಚರಂಡಿ ತ್ಯಾಜ್ಯ ನೀರಿನ ಜೊತೆಗೆ ಕೈಗಾರಿಕಾ ತ್ಯಾಜ್ಯ, ಆಸ್ಪತ್ರೆ ತ್ಯಾಜ್ಯವನ್ನು ಕೇವಲ ಎರಡು ಹಂತದಲ್ಲಿ ಶುದ್ಧೀಕರಿಸಿ ಜಿಲ್ಲೆಗಳ ಕೆರೆಗೆ ಹರಿಸಲಾಗುತ್ತಿದೆ. ಕೆ.ಸಿ.ವ್ಯಾಲಿ ನೀರು ಹರಿದ ಮೇಲಿನ ನರಸಾಪುರ ಕೆರೆಯ ಸ್ಥಿತಿಗತಿಯನ್ನೇ ಉದಾಹರಣೆಯಾಗಿ ನೋಡಿದರೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ನೀಡಿರುವ ತಪಾಸಣಾ ವರದಿಯಲ್ಲಿ ಈ ಕೆರೆಯಲ್ಲಿ ಅಪಾಯಕಾರಿ ಅಂಶ ಇರುವುದು ಪತ್ತೆಯಾಗಿದೆ. ಹಾಗೆಯೇ ಲಕ್ಷ್ಮಿಸಾಗರ ಕೆರೆಯ ನೀರನ್ನು ಐಐಎಸ್‌ಸಿ ವಿಜ್ಞಾನಿಗಳು ಪರೀಕ್ಷಿಸಿದಾಗ ಭಾರಿ ಪ್ರಮಾಣದ ಲೋಹಧಾತುಗಳು ಕಂಡುಬಂದಿವೆ.

ಹಸಿರು ಬಣ್ಣಕ್ಕೆ ತಿರುಗಿದ ಕೆರೆ

ಕೋಲಾರದ ನರಸಾಪುರ ಕೆರೆಗೆ ಹರಿದು ಬಂದ ನೀರು ಹಸಿರು ಬಣ್ಣಕ್ಕೆ ತಿರುಗಿ ಆತಂಕ ಮೂಡಿಸಿತ್ತು, ಕೆಲವೆಡೆ ನೊರೆ ಕಂಡುಬಂದಿತ್ತು. 'ಈ ನೀರು ಕುಡಿಯಲು ಅಥವಾ ಬಳಕೆಗೆ ಯೋಗ್ಯವಲ್ಲ' ಎಂದು ವ್ಯಾಲಿ ಯೋಜನೆ ವ್ಯಾಪ್ತಿಯ ಕೆರೆಗಳ ಬಳಿ ನಾಮಫಲಕ ಹಾಕಲಾಗಿದೆ. ಆದರೆ, ಇದನ್ನು ಅಣಕಿಸುವಂತೆ ಈ ಕೆರೆಗಳ ಅಂಗಳದಲ್ಲಿರುವ ಕೊಳವೆ ಬಾವಿಗಳಿಂದಲೇ ನಗರದ ಮನೆಗಳಿಗೆ ನೀರು ಪೂರೈಸಲಾಗುತ್ತಿದೆ.

ಕೋಲಾರ ನಗರಕ್ಕೆ ನೀರುಣಿಸುವ ಅಮ್ಮೇರಹಳ್ಳಿ ಕೆರೆ, ಕೋಲಾರಮ್ಮ ಕೆರೆ ಹಾಗೂ ಮಡೇರಹಳ್ಳಿ ಕೆರೆಗಳಿಗೂ ಕೆ.ಸಿ. ವ್ಯಾಲಿಯ ಕಲುಷಿತ ನೀರು ತುಂಬಿಸಲಾಗಿದೆ. ಈ ಕೆರೆಗಳಲ್ಲಿರುವ ಕೊಳವೆಬಾವಿಗಳು ನೀರಿನಲ್ಲಿ ಮುಳುಗಿವೆ. ಅರೆ ಸಂಸ್ಕರಿತ ಕೊಳಚೆನೀರು ಭೂಮಿಯ ಗರ್ಭವನ್ನು ಸೇರಿ ಕೊಳವೆ ಬಾವಿಗಳ ಮೂಲಕ ಅಡುಗೆ ಮನೆ ಸೇರುತ್ತಿದೆ.

ಚಿಕ್ಕಬಳ್ಳಾಪುರದ ಕಂದವಾರ ಕೆರೆಯದ್ದೂ ಇದೇ ಕತೆ. ಸಿಹಿ ನೀರು ಎಂದು ಜಕ್ಕಲಮಡುಗು ಜಲಾಶಯದ ನೀರನ್ನು ಮತ್ತು ಕಂದವಾರ ಕೆರೆ ಅಂಗಳದಲ್ಲಿರುವ ಕೊಳವೆಬಾವಿಗಳ ನೀರನ್ನು ನಗರಸಭೆಯವರು ಮನೆಗಳಿಗೆ ಪೂರೈಸುತ್ತಿದ್ದಾರೆ. ಪಶು, ಪಕ್ಷಿಗಳು ಈ ನೀರನ್ನು ಕುಡಿಯುತ್ತಿವೆ. ಅವುಗಳ ಆರೋಗ್ಯದ ಮೇಲೂ ದುಷ್ಪರಿಣಾಮವಾಗುತ್ತಿದೆ. ಕೆರೆಗಳ ಮೀನು, ಇತರ ಜಲಚರಗಳು ಸಾಯುತ್ತಿವೆ. ಮಳೆ ಹೇರಳವಾಗಿ ಕೆರೆ ಕೋಡಿ ಬಿದ್ದಾಗ ಜನರು ಈ ಮೀನು ಹಿಡಿಯುತ್ತಾರೆ. ಅಲ್ಲಿಗೆ ವ್ಯಾಲಿಯ ಕೊಳಚೆನೀರು ಮತ್ತು ಅದರಲ್ಲಿರುವ ವಿಷವು ಅಂತರ್ಜಲ, ತರಕಾರಿ, ಮೀನು, ಹಾಲಿನ ರೂಪದಲ್ಲಿ ಜನರನ್ನು, ಹಸಿರು ಮೇವು ಮತ್ತು ನೀರಿನ ಮೂಲಕ ಜಾನುವಾರುಗಳ ಹೊಟ್ಟೆ ಸೇರುತ್ತಿದೆ!

ಅನ್ನದ ಬಟ್ಟಲಲ್ಲಿ ವಿಷ

ನೀರಿನ ದಾಹದಿಂದ ಬರಗೆಟ್ಟ ಬಯಲುನಾಡಿಗೆ ಸಂಜೀವಿನಿ ಆಗಬೇಕಿದ್ದು ಕೆ.ಸಿ.ವ್ಯಾಲಿ ಮತ್ತು ಎಚ್‌.ಎನ್‌.ವ್ಯಾಲಿ ಯೋಜನೆಗಳು ಈಗ ನಿಧಾನವಾಗಿ ವಿಷ ಉಣಿಸುತ್ತಿವೆ. ನಿಧಾನಗತಿಯ ವಿಷದ (ಸ್ಲೋ ಪಾಯಿಸನ್) ರೀತಿ ಕೆರೆ ನೀರು ಮತ್ತು ಅಂತರ್ಜಲದ ಮೂಲಕ ಅರೆ ಸಂಸ್ಕರಿತ ನೀರು, ತರಕಾರಿಯ ಒಡಲು ಸೇರಿ ಅಡುಗೆ ಮನೆ ಸೇರುತ್ತಿದೆ. ದೇಹ ಹೊಕ್ಕುತ್ತಿದೆ.

ಹಣ್ಣು, ತರಕಾರಿ, ಸೊಪ್ಪು ಸೇರಿದಂತೆ ತೋಟಗಾರಿಕೆ ಬೆಳೆಗಳೇ ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ರೈತರ ಆರ್ಥಿಕ ಬದುಕಿಗೆ ಆಧಾರ. ಈ ಉತ್ಪನ್ನಗಳಿಗೆ ಸಮೀಪದ ಪ್ರಮುಖ ಮಾರುಕಟ್ಟೆ ಎಂದರೆ ಬೆಂಗಳೂರು. ಈ ಮೂರು ಜಿಲ್ಲೆಗಳ ಹಣ್ಣು, ತರಕಾರಿ ಕೊಳಚೆ ನೀರಿನಲ್ಲಿ ಬೆಳೆದಿರುವುದು ಎನ್ನುವ ಭಾವನೆ ಮೂಡುತ್ತಿದೆ. ಪರಿಣಾಮ ಈ ಜಿಲ್ಲೆಗಳ ಹಣ್ಣು, ತರಕಾರಿಗೆ ಬೇಡಿಕೆ ಕುಸಿಯುತ್ತಿದೆ. ಕೋಲಾರದ ತರಕಾರಿ ಎಂಬ ಕಾರಣಕ್ಕೆ ಉಳಿದ ತರಕಾರಿಗಿಂತ ಕಡಿಮೆ ಹಣ ನೀಡುತ್ತಿದ್ದಾರೆ ಎಂಬುದು ಈ ಭಾಗದ ರೈತರ ದೂರು.

'ಕೋಲಾರದ ತರಕಾರಿ ಎಂಬುದು ಗೊತ್ತಾದರೆ ಗ್ರಾಹಕರು ಖರೀದಿಗೆ ಹಿಂಜರಿಯುತ್ತಾರೆ. ಇಲ್ಲವೇ ಕಡಿಮೆ ಹಣ ನೀಡುತ್ತಾರೆ. ಟೊಮೆಟೊ, ಸೊಪ್ಪು 2–3 ದಿನಕ್ಕೆ ವಾಸನೆ ಬಂದು ಕೆಟ್ಟು ಹೋಗುತ್ತಿದೆ. ಕೆ.ಸಿ.ವ್ಯಾಲಿ ಭಾಗದಲ್ಲಿ ಬೆಳೆದ ಬೆಳೆಗಳಿಗೆ ಊಜಿ ರೋಗ ಬರುತ್ತಿದೆ' ಎನ್ನುವುದು ರೈತ ಮುಖಂಡ ಕಲ್ವಮಂಜಲಿ ರಾಮು ಶಿವಣ್ಣ ಸ್ವಾನುಭವ.

'ಕೆ.ಸಿ.ವ್ಯಾಲಿ ನೀರು ಬಳಸಿ ಬೆಳೆದ ಹುಲ್ಲು, ಮೇವನ್ನು ಜಾನುವಾರುಗಳಿಗೆ ಹಾಕಲಾಗುತ್ತಿದೆ. ಅದೇ ನೀರನ್ನೂ ಹಾಲು ಕೊಡುವ ಹಸು, ಎಮ್ಮೆಗಳಿಗೆ ಕುಡಿಸುತ್ತಿದ್ದಾರೆ. ಇದೇ ಕಾರಣಕ್ಕಾಗಿ ಕೆ.ಸಿ.ವ್ಯಾಲಿ ಪ್ರದೇಶದ ಹಾಲು ಮತ್ತು ಇತರ ಪ್ರದೇಶದ ಹಾಲಿನ ವಾಸನೆಯಲ್ಲಿ ವ್ಯತ್ಯಾಸ ಕಂಡುಬರುತ್ತಿದೆ. ಈ ಹಾಲು ಕುಡಿಯುವ ಮಕ್ಕಳಲ್ಲಿ ಪದೇ ಪದೇ ಅನಾರೋಗ್ಯ ಕಾಣಿಸಿಕೊಳ್ಳುತ್ತಿದೆ. ರೈತರಲ್ಲಿ ಮೈ, ಕೈ ಕೆರೆತ ಹೆಚ್ಚಿದೆ. ಕೈಗಳು ಬಿಳಿಚಿಕೊಳ್ಳುತ್ತಿವೆ. ಕಾಲುಗಳಲ್ಲಿ ಕೆಸರುಣ್ಣು ಕಾಣಿಸಿಕೊಳ್ಳುತ್ತಿದೆ' ಎಂದು ಆರೋಪಿಸುತ್ತಾರೆ ಶಿವಣ್ಣ.

ಕೆರೆಗಳು ಕೋಡಿ ಹರಿದಾಗ ಮತ್ತೊಂದು ಕೆರೆ ಸೇರುತ್ತವೆ. ಎರಡು ವರ್ಷಗಳಿಂದ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಮಳೆ ಉತ್ತಮವಾಗಿದೆ. ಎಚ್‌.ಎನ್‌.ವ್ಯಾಲಿ ಕೊಳಚೆ ನೀರಿನಿಂದ ತುಂಬಿರುವ ಕೆರೆಗಳು ಕೋಡಿ ಬಿದ್ದವು. ಕೋಡಿ ಹರಿದ ನೀರು ಬಾಗೇಪಲ್ಲಿ ಪಟ್ಟಣದ ಜನರಿಗೆ ಕುಡಿಯುವ ನೀರಿನ ಆಧಾರವಾಗಿರುವ ಚಿತ್ರಾವತಿ ಜಲಾಶಯಕ್ಕೆ ಸೇರಿತು. ಕಳೆದ ಮಳೆಗಾಲದಲ್ಲಿ ಕೋಲಾರದ ಯರಗೋಳ್ ಜಲಾಶಯಕ್ಕೂ ಕೆ.ಸಿ.ವ್ಯಾಲಿ ನೀರು ಬೆರೆತಿತ್ತು.

ಬೆಂಗಳೂರು ಕಸದಿಂದ ಕೆರೆಯ ನೀರು ಮಲಿನ

ದೊಡ್ಡಬಳ್ಳಾಪುರ ತಾಲ್ಲೂಕಿನ ಚಿಗರೇನಹಳ್ಳಿ ಸಮೀಪ ನೂರು ಎಕರೆ ವಿಸ್ತೀರ್ಣದಲ್ಲಿ ಸ್ಥಾಪನೆಯಾಗಿರುವ ಕಸ ವಿಲೇವಾರಿ ಘಟಕಕ್ಕೆ ನಿತ್ಯ ನೂರಾರು ಲಾರಿಗಳಲ್ಲಿ ಬಿಬಿಎಂಪಿ ಕಸ ಬಂದು ಬೀಳುತ್ತಿದೆ. ಮಳೆ ನೀರಿನೊಂದಿಗೆ ಕಸ ಮತ್ತು ಅದರಲ್ಲಿರುವ ಅಪಾಯಕಾರಿ ರಾಸಾಯನಿಕ ಅಂಶಗಳು ಸರಾಗವಾಗಿ ಹರಿದು ಸುತ್ತಮುತ್ತಲಿನ ಕೆರೆಗಳ ಒಡಲು ಸೇರುತ್ತದೆ. ಇದರಿಂದ ಅಂತರ್ಜಲ ಸಹ ಕಲುಷಿತವಾಗುತ್ತಿದೆ. ಶುದ್ಧಕುಡಿಯುವ ನೀರಿನ ಘಟಕದಿಂದ ಬರುವ ನೀರು ಸಹ ಕುಡಿಯಲು ಯೋಗ್ಯವಾಗಿಲ್ಲ!

ಬೆಂಗಳೂರಿನ ಕೊಳಚೆ ನೀರನ್ನು ಮೂರು ಹಂತದಲ್ಲಿ ಶುದ್ಧೀಕರಿಸಿ ಕೆರೆಗಳಿಗೆ ಹರಿಸುವುದಾಗಿ ಕಳೆದ ಬಜೆಟ್‌ನಲ್ಲಿ ಹಿಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದ್ದರು. ಅದು ಕಾರ್ಯಗತವಾಗಲಿಲ್ಲ. ಇನ್ನೂ ಅರೆ ಸಂಸ್ಕರಿತ ಕೊಳಚೆ ನೀರು ಕೆರೆಗಳನ್ನು ಸೇರುತ್ತಿದೆ.

ಈ ಎರಡು ಯೋಜನೆಗಳ ಜಾರಿಗೆ ತಂದಿದ್ದ ಸಿದ್ದರಾಮಯ್ಯ ನೇತೃತ್ವದ ಸರ್ಕಾರವೇ ಈಗ ಮತ್ತೆ ಅಧಿಕಾರಕ್ಕೆ ಬಂದಿದೆ. ಈ ಹಿಂದೆ ಮೂರು ಹಂತದ ಶುದ್ಧೀಕರಣಕ್ಕಾಗಿ ಹೋರಾಟ ನಡೆಸಿದ್ದ ಸಚಿವ ಕೆ.ಎಚ್‌.ಮುನಿಯಪ್ಪ, ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್‌ ಈಶ್ವರ್ ಅಧಿಕಾರ ಹಿಡಿದ ಪಕ್ಷದಲ್ಲಿದ್ದಾರೆ. ಮೂರು ಹಂತದ ಶುದ್ಧೀಕರಣಕ್ಕಾಗಿ ನಡೆದಿರುವ ಹೋರಾಟದ ಕೂಗನ್ನು ಸರ್ಕಾರ ಕೇಳಿಸಿಕೊಳ್ಳದಿದ್ದರೆ ವಿಜ್ಞಾನಿಗಳು ಎಚ್ಚರಿಸಿದಂತೆ ಈ ಭಾಗದ ಜನರು ಕೆಲವೇ ವರ್ಷಗಳಲ್ಲಿ ರೋಗಗಳಿಗೆ ತುತ್ತಾಗಲಿದ್ದಾರೆ. ಇಲ್ಲಿಯ ತರಕಾರಿ, ಸೊಪ್ಪು, ಹಣ್ಣು ಬೆಲೆ ಕಳೆದುಕೊಳ್ಳಲಿವೆ!

ಮೂರನೇ ಹಂತದ ಶುದ್ಧೀಕರಣಕ್ಕೆ ವಿಳಂಬ ಏಕೆ?

- ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಬಳಿ ಮೂರನೇ ಹಂತದ ಶುದ್ಧೀಕರಣ ತಂತ್ರಜ್ಞಾನ, ಯಂತ್ರೋಪಕರಣ ಇಲ್ಲ. ವಿದೇಶದಿಂದ ಆಮದು ಮಾಡಿಕೊಳ್ಳಬೇಕು ಎನ್ನಲಾಗಿದೆ.
- ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ನೀಡಿದ ವರದಿ ತಿರಸ್ಕರಿಸಿ, ಕೇಂದ್ರ ಸರ್ಕಾರದ ಮಾನದಂಡ ಉಲ್ಲಂಘಿಸಿ ಖಾಸಗಿ ಸಂಸ್ಥೆ ವರದಿಗೆ ಮಣೆ.
- ಶುದ್ಧೀಕರಣ ಘಟಕ ಸ್ಥಾಪನೆ, ಆಧುನೀಕರಣ ಹಾಗೂ ನಿರ್ವಹಣೆ ಬಿಡಬ್ಲ್ಯುಎಸ್‌ಎಸ್‌ಬಿ ವ್ಯಾಪ್ತಿಗೆ ಬರುತ್ತದೆ.
- ಶುದ್ಧೀಕರಣ, ತಂತ್ರಜ್ಞಾನ, ಗುಣಮಟ್ಟ ನಿರ್ವಹಣೆ, ಅಭಿವೃದ್ಧಿಯಲ್ಲಿ ಸಣ್ಣ ನೀರಾವರಿ ಇಲಾಖೆ ಯಾವುದೇ ಜವಾಬ್ದಾರಿ ಇಲ್ಲ. ಎರಡನೇ ಹಂತದ ಸಂಸ್ಕರಣೆ ಮಾಡಿದ ನೀರನ್ನು ಪೈಪ್ ಮೂಲಕ ಸರಬರಾಜು ಮಾಡುವುದಷ್ಟೇ ಆ ಇಲಾಖೆಯ ಜವಾಬ್ದಾರಿ.

ಕೆ.ಸಿ.ವ್ಯಾಲಿಯಿಂದ ಹೊಸ ಸಮಸ್ಯೆ ಉದ್ಭವ

- 2018ರ ಜೂನ್‌ನಲ್ಲಿ ಕೋಲಾರದ ಲಕ್ಷ್ಮಿಸಾಗರ ಕೆರೆಗೆ ಕೆ.ಸಿ.ವ್ಯಾಲಿ ನೀರು ಪಂಪ್ ಮಾಡಲಾಯಿತು. ಅದರಲ್ಲಿ ನೊರೆ, ಕಲ್ಮಶ ಇತ್ತು
- ಕಲುಷಿತ ನೀರಿನಲ್ಲಿ ವೇಗವಾಗಿ ಬೆಳೆಯುವ ಅಪಾಯಕಾರಿ ಕಳೆಯಾದ ಕತ್ತೆಕಿವಿ (ವಾಟರ್ ಹಯಸಿಂಥ್) ಕೆರೆಯನ್ನು ಸಂಪೂರ್ಣವಾಗಿ ಆವರಿಸಿಕೊಂಡಿದೆ. ಲಕ್ಷ್ಮಿಸಾಗರ, ಕೋಲಾರಮ್ಮ ಕೆರೆಯಲ್ಲಿ ಈ ಕಳೆ ಬೆಳೆದಿದೆ.
- ನೀರಿನ ಬಣ್ಣದಲ್ಲಿ ಬದಲಾವಣೆ, ಗಬ್ಬು ವಾಸನೆ. ವಾಸನೆ ಹೋಗಲಾಡಿಸಲು ಕ್ಲೋರಿನ್ ಅಂಶ ಹೆಚ್ಚು ಬಳಸದಿದ್ದರಿಂದ ಕೊಳವೆ ಬಾವಿ ಪೈಪ್ ತುಕ್ಕು ಹಿಡಿಯುತ್ತಿವೆ.
- ಕೆ.ಸಿ.ವ್ಯಾಲಿ ವ್ಯಾಪ್ತಿಯ ಕೆರೆಗಳ ಸುತ್ತ ಬೆಳೆದ ತರಕಾರಿಯಲ್ಲಿ ರಾಸಾಯನಿಕ ಹಾಗೂ ಲೋಹಧಾತು ಅಂಶ ಸೇರಿಕೊಂಡು ಗುಣಮಟ್ಟ ತಗ್ಗಿದೆ. ಬೇಡಿಕೆ ಕಡಿಮೆಯಾಗಿದೆ.
- ತರಕಾರಿ, ಸೊಪ್ಪು ಬೇಗ ಬಾಡುತ್ತಿದ್ದು, ಗುಣಮಟ್ಟ ಕುಸಿದಿದೆ. ರುಚಿ, ಬಣ್ಣ ಬದಲಾಗಿದೆ.
- ಜನ, ಜಾನುವಾರುಗಳಲ್ಲಿ ಚರ್ಮರೋಗ ಹಾಗೂ ಆರೋಗ್ಯ ಸಮಸ್ಯೆ ಕಾಣಿಸಿಕೊಂಡಿದೆ.



ಅನ್ನದ ಬಟ್ಟಲು ಸೇರುತ್ತಿದೆ ವಿಷ!

ಕೆ.ಸಿ.ವ್ಯಾಲಿ ಮೊದಲ ಹಂತದಿಂದ ಉಂಟಾಗಬಹುದಾದ ಅನಾಹುತಗಳ ಬಗ್ಗೆ ತಜ್ಞರ ಎಚ್ಚರಿಕೆ ಕಡೆಗಣಿಸಿ ಸರ್ಕಾರ ಮತ್ತೆ 272 ಕೆರೆಗಳಿಗೆ ನೀರು ಹರಿಸಲು ಪೈಪ್‌ಲೈನ್ ಹಾಗೂ ಪಂಪ್‌ಹೌಸ್ ಕಾಮಗಾರಿ ಆರಂಭಿಸಿದೆ. ಭರವಸೆ ನೀಡಿದಂತೆ ಮೊದಲ ಹಂತದಲ್ಲಿ 134 ಕೆರೆ ತುಂಬಿಲ್ಲ. ಮೂರನೇ ಹಂತದ ಶುದ್ಧೀಕರಣ ಘಟಕ ತೆರೆದಿಲ್ಲ. ಅರೆ ಸಂಸ್ಕರಿತ ನೀರನ್ನಾದರೂ ಹರಿಸಿರುವುದೇ ಪುಣ್ಯ ಎನ್ನುವಂತೆ ರಾಜಕಾರಣಿಗಳು ಮಾತನಾಡುತ್ತಿದ್ದಾರೆ. ಮೂರು ಹಂತದಲ್ಲಿ ಶುದ್ಧೀಕರಿಸಿದ ನಂತರವೇ ನೀರು ಹರಿಸುವಂತೆ ಯೋಜನೆ ಜಾರಿಗೂ ಮುಂಚೆಯೇ ಹೋರಾಟ ನಡೆಸುತ್ತಿದ್ದೇವೆ. ಭವಿಷ್ಯದಲ್ಲಿ ಎದುರಾಗಬಹುದಾದ ಅನಾಹುತಗಳ ಬಗ್ಗೆ ಜನಪ್ರತಿನಿಧಿಗಳಿಗೆ ಮನವರಿಕೆ ಮಾಡಿಕೊಟ್ಟಿದ್ದೇವೆ. ವಿಜ್ಞಾನಿಗಳು ಈ ಬಗ್ಗೆ ವರದಿ ನೀಡಿದ್ದಾರೆ. ಆದರೂ ಸರ್ಕಾರ ಎಚ್ಚೆತ್ತುಕೊಂಡಿಲ್ಲ.

ಆರ್‌.ಆಂಜನೇಯ ರೆಡ್ಡಿ, ಅಧ್ಯಕ್ಷ, ಶಾಶ್ವತ ನೀರಾವರಿ ಹೋರಾಟ ಸಮಿತಿ, ಚಿಕ್ಕಬಳ್ಳಾಪುರ



ಕೆರೆ ಒಡಲಿಗೆ ಕಲುಷಿತ ನೀರು

ಕೋಲಾರ ನಗರದ ಸುತ್ತಮುತ್ತಲಿನ ಕೋಲಾರಮ್ಮ, ಅಮ್ಮೇರಹಳ್ಳಿ, ಮಡೇರಹಳ್ಳಿ ಹಾಗೂ ಕೋಡಿಕಣ್ಣೂರು ಕೆರೆಗಳಿಗೆ ಕೆ.ಸಿ.ವ್ಯಾಲಿ ನೀರು ಹರಿಸಲಾಗುತ್ತಿದೆ. ಇದಕ್ಕೂ ಮುನ್ನ ಈ ಕೆರೆಗಳ ನೀರನ್ನು ಕೋಲಾರ ನಗರದ ಜನರಿಗೆ ಕುಡಿಯಲು ಪೂರೈಸಲಾಗುತಿತ್ತು. ಬರಗಾಲ ಬಂದಾಗ ಈ ಕೆರೆಯೊಳಗೆ ಕೊಳವೆಬಾವಿ ಕೊರೆಸಿ ನೀರು ಸರಬರಾಜು ಮಾಡುತಿತ್ತು. ಕೆ.ಸಿ.ವ್ಯಾಲಿ ನೀರು ಹರಿಸಿ ಜಲಮೂಲದ ಜೊತೆಗೆ ಕೊಳವೆಬಾವಿ ನೀರನ್ನೂ ಕಲುಷಿತಗೊಳಿಸಲಾಗಿದೆ. ಕುಡಿಯುವ ನೀರಿನ ಉದ್ದೇಶದ ಯರಗೋಳ್ ಜಲಾಶಯದ ಒಡಲನ್ನೂ ಕೆ.ಸಿ.ವ್ಯಾಲಿ ನೀರು ಸೇರುತ್ತಿದೆ.

ಗಾಂಧಿನಗರ ನಾರಾಯಣಸ್ವಾಮಿ, ಜನಪರ ವೇದಿಕೆ, ಕೋಲಾರ

ಒಂದನೇ ಪುಟದಿಂದ...

ವರ್ತೂರು ಸುತ್ತಮುತ್ತ ನಾವು ನಡೆಸಿದ ಅಧ್ಯಯನದಲ್ಲಿ ಚಿಕ್ಕ ಮಕ್ಕಳಲ್ಲಿ ಆರೋಗ್ಯ ಮತ್ತು ಕಿಡ್ನಿ ಸಮಸ್ಯೆ ಕಂಡುಬಂದಿದೆ. ಈ ಬಗ್ಗೆ ವರದಿ ನೀಡಿದರೂ ಅಧಿಕಾರಿಗಳು ಕಾರ್ಯಗತಗೊಳಿಸಿಲ್ಲ.

ಕೊಳಚೆ ನೀರನ್ನು ನೈಸರ್ಗಿಕವಾಗಿ ಶುದ್ಧಗೊಳಿಸಿ ಅಪಾಯಕಾರಿ ರಾಸಾಯನಿಕ ಅಂಶಗಳನ್ನು ಸೋಸಿ ತೆಗೆಯಬಹುದು. ಜಕ್ಕೂರು ಕೆರೆಯಲ್ಲಿ ಈಗಾಗಲೇ ಈ ಪ್ರಯೋಗ ಮಾಡಲಾಗಿದೆ. ಆದರೆ, ಸರ್ಕಾರದ ವಿವಿಧ ಇಲಾಖೆಯಲ್ಲಿರುವ ವಿಜ್ಞಾನಿಗಳು ಸರ್ಕಾರಕ್ಕೆ ಬೇಕಾದಂತೆ ವರದಿ ನೀಡಿದ್ದಾರೆ. ಇದು ಹೆಚ್ಚು ದಿನ ನಡೆಯಲ್ಲ.

ಡಾ.ಟಿ.ವಿ.ರಾಮಚಂದ್ರ, ಪರಿಸರ ವಿಜ್ಞಾನಿ, ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ), ಬೆಂಗಳೂರು

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 3-9-1998

ಭಾರತಕ್ಕೆ ಮುಜುಗರ ತಂದ ಕಾಶ್ಮೀರ ಪ್ರಶ್ನೆ ಪ್ರಸ್ತಾಪ

ದರ್ಬಾನ್, ಸೆ. 2 (ಎಎಫ್‌ಪಿ)– 'ಎಲ್ಲರ ಚಿಂತೆಗೆ ಕಾರಣವಾಗಿರುವ ಕಾಶ್ಮೀರ ಸಮಸ್ಯೆಯನ್ನು ಶಾಂತಿಯುತ ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಬೇಕು' ಎಂದು ಅಲಿಪ್ತ ಚಳವಳಿಯ ನೂತನ ಅಧ್ಯಕ್ಷ ನೆಲ್ಸನ್ ಮಂಡೇಲಾ ಅವರು ಇಂದು ಇಲ್ಲಿ ಕರೆ ನೀಡಿದರು. ಶೃಂಗ ಸಮ್ಮೇಳನದಲ್ಲಿ ಭಾಗವಹಿಸಿರುವ ಪ್ರಧಾನಿ ಅಟಲ್ ಬಿಹಾರಿ ನೇತೃತ್ವದ ಭಾರತ ನಿಯೋಗಕ್ಕೆ ಇದರಿಂದಾಗಿ ಮುಜುಗರ ಉಂಟಾಯಿತು.

ಅಲಿಪ್ತ ಚಳವಳಿಯ ನೂತನ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ನಂತರ ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಮಂಡೇಲಾ ಅವರು ಈ ಕರೆ ನೀಡಿದರು.

50 ವರ್ಷಗಳ ಹಿಂದೆ

ಸೋಮವಾರ, 3-9-1973

ಪರಸ್ಪರ ಘರ್ಷಣೆ ಇಲ್ಲ: ಶರ್ಮರಿಗೆ ಅರಸು, ರಂಗನಾಥ್ ಸ್ಪಷ್ಟನೆ

ಬೆಂಗಳೂರು, ಸೆ. 2– ತಮ್ಮ ನಡುವೆ ಘರ್ಷಣೆ ಏನೂ ಇಲ್ಲವೆಂದು ಮುಖ್ಯಮಂತ್ರಿ ದೇವರಾಜ ಅರಸು ಹಾಗೂ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಕೆ.ಎಚ್. ರಂಗನಾಥ್ ಅವರು ತಮಗೆ ತಿಳಿಸಿದರೆಂದು ಕಾಂಗ್ರೆಸ್ ಅಧ್ಯಕ್ಷ ಡಾ. ಶಂಕರ ದಯಾಳ ಶರ್ಮ ಅವರು ಇಂದು ಇಲ್ಲಿ ವರದಿಗಾರರಿಗೆ ತಿಳಿಸಿದರು.

ತಿರುಪತಿಯಿಂದ ದೆಹಲಿಗೆ ಹೋಗುವ ಮಾರ್ಗದಲ್ಲಿ ಸುಮಾರು 2 ಗಂಟೆ ಕಾಲ ನಗರದಲ್ಲಿ ತಂಗಿದ್ದ ಕಾಂಗ್ರೆಸ್ ಅಧ್ಯಕ್ಷರೊಡನೆ ಅರಸು, ರಂಗನಾಥ್ ಅವರು ಪ್ರತ್ಯೇಕ ಮಾತುಕತೆ ನಡೆಸಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಭಾನುವಾರ ಸೆಪ್ಟೆಂಬರ್ 3, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ಚತುರ್ಥಿ ಗಂ. 18-25 ನಕ್ಷತ್ರ: ರೇವತಿ ಗಂ. 10-39 ಯೋಗ: ಗಂಡ ಗಂ. 06-01 ನಂತರ ವೃದ್ಧಿ ಗಂ. 27-12 ಕರಣ: ಬವ ಗಂ. 07-32, ಸಿಂಹ ಮಾಸದ 17 ನೇ ದಿನ, ಮಳೆನಕ್ಷತ್ರ: ಪೂರ್ವ ಫಲ್ಗುಣಿ 1, ರಾಹುಕಾಲ: ಸಾಯಂಕಾಲ 04-30 – 06-00, ಸೂರ್ಯೋದಯ: 06-23 ಸೂರ್ಯಾಸ್ತ: 06-37, ಮುಸ್ಲಿಂ ದಿನಾಂಕ : 17 ಸಫರ್, ದಿನ ವಿಶೇಷ: ಸಂಕಷ್ಟಹರ ಚತುರ್ಥಿ, ಕೈಲ್ ಮುಹೂರ್ತ(ಕೊಡಗು)
ಅದೃಷ್ಟ ಸಂಖ್ಯೆ : 6, 12

ಮೇಷ: ಪುಣ್ಯಸಂಪಾದನೆಗಾಗಿ ತಾಯಿಯೊಂದಿಗೆ ತೀರ್ಥಯಾತ್ರೆ ಕೈಗೊಳ್ಳುವ ನಿಮ್ಮ ಆಸೆ ಈಡೇರುವ ಲಕ್ಷಣಗಳು ಕಂಡುಬರುವುದು. ಸಮಸ್ಯೆ ಬಗೆಹರಿಸಲು ಜಾಣತನ ತೋರುವಿರಿ. ಕೆಲವರಿಗೆ ಹಿರಿಯರ ಮಾರ್ಗದರ್ಶನ ಬೇಕೆನಿಸಲಿದೆ.

ವೃಷಭ: ನಿಮ್ಮ ಫಲಕಾರಿ ಯೋಚನಾಲಹರಿ ಕಂಡ ವ್ಯವಹಾರದ ಪಾಲುದಾರರು ನಿಮ್ಮ ಮಾತಿನಂತೆಯೇ ನಡೆಯುವರು. ಸಮಸ್ಯೆಗಳಿಗೆ ಸಿಲುಕದಂತೆ ಜಾಗ್ರತೆ ವಹಿಸುವಿರಿ. ಬಂಧುಗಳ ನೆರವಿನಿಂದ ಹಳೆಯ ಬಾಕಿ ಹಣ ನಿಮ್ಮ ಕೈ ಸೇರಲಿದೆ.

ಮಿಥುನ: ಹಣದ ವಿಚಾರದಲ್ಲಿ ಖರ್ಚು-ವೆಚ್ಚಗಳ ಬಾಬ್ತು ಜಾಗ್ರತೆ ಇರಲಿ ಮತ್ತು ಆರ್ಥಿಕ ಸ್ಥಿತಿಯು ಕೊಂಚ ಸುಧಾರಿಸಲಿದೆ. ಶ್ರೀನಿವಾಸನ ಸೇವೆಯಿಂದ ವ್ಯಾಪಾರದಲ್ಲಿ ಉತ್ತಮ ಲಾಭವಿರುವುದು. ಹೊಸ ಗೆಳೆತನ ಬೆಳೆಸಿಕೊಳ್ಳುವಿರಿ.

ಕರ್ಕಾಟಕ: ಅನಾಥ ಹುಡುಗನೊಬ್ಬನ ವಿದ್ಯಾಭ್ಯಾಸಕ್ಕೆ ಸಹಾಯ ಮಾಡುವ ಯೋಚನೆಮಾಡಿ. ಈ ದಿನ ಮನಸ್ಸನ್ನು ಸ್ಥಿಮಿತದಲ್ಲಿಡುವ ಅಗತ್ಯವಿದೆ. ನಿಮ್ಮ ಮನೆಯಲ್ಲಿ ಮಂಗಳ ಕಾರ್ಯದ ಸೂಚನೆ ಕಂಡು ಬರಬಹುದು.

ಸಿಂಹ: ನ್ಯಾಯಾಲಯದ ಮೆಟ್ಟಿಲೇರಿದ ನಿಮ್ಮ ಸಮಸ್ಯೆಗಳನ್ನು ರಾಜಿ ಒಪ್ಪಂದದ ಮೂಲಕ ಬಗೆಹರಿಸಿಕೊಳ್ಳಲು ಉತ್ತಮವಾದ ದಿನ. ಗೃಹ ಬಳಕೆಯ ಸಾಮಗ್ರಿ ಖರೀದಿಯಿಂದ ಸಂತಸ. ವಿನಾಯಕನ ದರ್ಶನದಿಂದ ಅನುಕೂಲ.

ಕನ್ಯಾ: ಪತ್ರಿಕೆ, ಕೆಲವು ಖಾಸಗಿ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುವವರಿಗೆ ಕೆಲಸದ ಅಸ್ಥಿರತೆ ಅನುಭವಕ್ಕೆ ಬರಲಿದೆ. ಮಾನಸಿಕ ಸ್ಥೈರ್ಯ ಹೆಚ್ಚಿಸಿಕೊಂಡು ಸಂಸಾರದ ಜವಾಬ್ದಾರಿಯನ್ನು ಉತ್ತಮವಾಗಿ ನೋಡಿಕೊಳ್ಳಿ.

ತುಲಾ: ಅನಾಯಾಸದಿಂದ ಧನಾದಾಯವಿದ್ದರೂ ನಾನಾ ರೀತಿಯ ಅನಾವಶ್ಯಕ ಖರ್ಚು-ವೆಚ್ಚಗಳು ಆರ್ಥಿಕ ಬಿಕ್ಕಟ್ಟಿನ ಕಡೆಗೆ ಕೊಂಡೊಯ್ಯಲಿದೆ. ಇದೇ ವಿಷಯವಾಗಿ ದಂಪತಿಗಳಲ್ಲಿ ಭವಿಷ್ಯದ ಕುರಿತು ಗಂಭೀರ ಚರ್ಚೆ ನಡೆಯಲಿದೆ.

ವೃಶ್ಚಿಕ: ನಿಮ್ಮ ಮುಂದಿನ ವೃತ್ತಿ ಜೀವನದ ಬಗ್ಗೆ ಗಂಭೀರ ಆಲೋಚನೆ ಮಾಡುವುದು ಬಹಳ ಮುಖ್ಯ. ಇನ್ನಷ್ಟು ಪ್ರತಿಭೆ ಹೆಚ್ಚಿಸಿಕೊಳ್ಳುವ ಕಾಲ ಇದಾಗುವುದು. ಕಚೇರಿ ಕೆಲಸಕ್ಕಾಗಿ ವಿದೇಶಯಾನ ಮಾಡಬೇಕಾಗಬಹುದು.

ಧನು: ಕೊಟ್ಟ ಮಾತನ್ನು ಕಳೆದುಕೊಳ್ಳಬೇಕಾದ ಪರಿಸ್ಥಿತಿ ಎದುರಾಗಬಹುದು. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮನಸ್ಸಾಗುವುದು. ವೃತ್ತಿ ಕ್ಷೇತ್ರದಲ್ಲಿ ಹೆಚ್ಚಿನ ಜವಾಬ್ದಾರಿ ನಿಭಾಯಿಸಬೇಕಾಗುತ್ತದೆ.

ಮಕರ: ಸಾಂಬಾರು ಪದಾರ್ಥದ ಅಥವಾ ಪರಿಮಳ ದ್ರವ್ಯಗಳ ರಫ್ತು ವ್ಯಾಪಾರಗಳು ಲಾಭ ತರಲಿದೆ. ಪ್ರಾಪಂಚಿಕ ವಿಷಯಗಳಲ್ಲಿ ಮಹತ್ವಾಕಾಂಕ್ಷೆ ಇರುವವರಿಗೆ ಶುಭ ದಿನ. ನಿಮ್ಮ ಕೀರ್ತಿಯು ಎಲ್ಲ ಕಡೆಗೆ ಹರಡಲಿದೆ.

ಕುಂಭ: ವಸ್ತ್ರ ವಿನ್ಯಾಸಗಾರರಿಗೆ, ಚಿತ್ರಕಲೆ, ಕಥೆ-ಕವನಗಳ ಬರಹಗಾರರಿಗೆ ತಮ್ಮ ಕ್ಷೇತ್ರದಲ್ಲಿ ಹೆಚ್ಚಿನ ಆಸಕ್ತಿ ಮೂಡಲಿದೆ. ಸುತ್ತಲಿನ ವಾತಾವರಣ ಸಂತಸದಾಯಕವಾಗಿ ಇರುತ್ತದೆ. ಆಹಾರದಲ್ಲಿ ಪಥ್ಯವಿದ್ದಲ್ಲಿ ಉತ್ತಮ.


ಮೀನ: ನಿಮ್ಮ ಕೆಲಸದಲ್ಲಿ ತೊಡಕು ಉಂಟು ಮಾಡುವ ಶತ್ರುಗಳ ಪ್ರಯತ್ನ ವಿಫಲವಾಗುವುದು. ಪೊಲೀಸರಿಗೆ ಈ ದಿನ ಹೆಚ್ಚಿನ ಜವಬ್ದಾರಿ ಇರುವುದು. ಬಂಧು ಮಿತ್ರರು ನಿಮ್ಮನ್ನು ಆದರದಿಂದ ಕಾಣುತ್ತಾರೆ.

ಪದಬಂಧ 5430

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಹೊಸ ಬಗೆಯಲ್ಲಿ ಸಂತೋಷ ಬಂದಿದೆಯಲ್ಲಾ! (3)
4.ಸತ್ತವರನ್ನು ಹೂಳುವ ಜಾಗ (3)
5.ಒಪ್ಪಂದ ಪತ್ರ (4)
6.ಬಯಕೆಯೂ ಆಗುವ ದಿಗ್ಭ್ರಮೆ (4)
8.ತಿರುಗಿ ನಿಂತು ಹೇಳಿದ ಸುಳ್ಳು (2)
10.ಹಿಸ್ಸೆಯಿಲ್ಲಿ ಉಲ್ಟಾ ಪಲ್ಟಾ ಅಗಿದೆ (2)
13.ರಸಭರಿತವಾದುದು (4)
14.ಈ ಪರಿ ಮಾಡಿದ ಗೇಲಿ! (4)
15.ಹಳ್ಳಿಯವನ ಬಾಯಲ್ಲಿ ಗ್ರಹಚಾರ (3)
16.ವಠಾರದವರ ಕೊಡಲಿ (3)

ಮೇಲಿಂದ ಕೆಳಕ್ಕೆ
1.ಹಳ್ಳಿಗಳಲ್ಲಿ ಕೈಗೊಳ್ಳುವ ಉದ್ಯಮ (6)
2.ಕೆಲಸಕ್ಕೆ ಬಾರದ ಮಾತು (5)
3.ಇನಾಂದಾರ ನೀಡಿರುವ ಬಹುಮಾನ (3)
5.ಗುಡಿಸಲ ಹತ್ತಿರವಿರುವ ಜಲಪಾತ (4)
7.ಹೊಟ್ಟೆ ಹೊರೆಯುವಿಕೆ (6)
9.ಸರಸ, ವಿರಸವೆರಡೂ ಸಮನಾಗಿರುವಿಕೆ (4)
11.ಸಣ್ಣ ಪ್ರಾಂತ್ಯದ ಮುಖಂಡ (5)
12.ತಿಳುವಳಿಕೆ ಹೀಗೆ ಬಂದಿದೆ (3)



5429ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪರಂಧಾಮ 3.ಹುಸಿನಗು
5.ನೆನಪು 6.ನಿಕ್ಷೇಪ
8.ಕುಶಲ 9.ಅಹಿತ
10.ರಥಿಕ 12.ವರ್ಜನ
14.ನಿಯಂತ್ರಣ 15.ದುರಾಚಾರ

ಮೇಲಿಂದ ಕೆಳಕ್ಕೆ:
1.ಪಯಸ್ವಿನಿ 2.ಮದ್ದಾನೆ
3.ಹುರುಪು 4.ಗುರುಕುಲ
7.ಪರ್ವತ 8.ಕುಬೇರ
9.ಅವಧಾನಿ 11.ಕಳೇವರ
12.ವರುಣ 13.ನಗದು

ಸುಡೊಕು 5816

1				2			8	4
	6	7			9		5	2
	8			4				
2							6	
		4		3				1
5								3
		5		9			7	6
7			2		6	8		
9	4			7				5

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5815 ಸುಡೊಕು

9	4	1	5	6	7	2	3	8
6	7	8	2	3	9	1	4	5
5	3	2	4	1	8	9	6	7
2	8	5	1	9	6	4	7	3
1	6	4	7	5	3	8	2	9
3	9	7	8	2	4	6	5	1
4	1	3	9	7	2	5	8	6
8	5	6	3	4	1	7	9	2
7	2	9	6	8	5	3	1	4

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.





‘ಆದಿತ್ಯ ಎಲ್1’ ಅಂತರಿಕ್ಷ ವೀಕ್ಷಣಾಲಯವಿದ್ದ ಪಿಎಸ್‌ಎಲ್‌ವಿ ಉಡ್ಡಯನ ಕಾರ್ಯಕ್ಕೆ ಸಾಕ್ಷಿಯಾಗಲು ಶ್ರೀಹರಿಕೋಟದ ಸತೀಶ್ ಧವನ್ ಕೇಂದ್ರದ ಬಳಿ ಸೇರಿದ್ದ ಜನ ಸಮೂಹ (ಎಡಚಿತ್ರ) ನಭದತ್ತ ಚಿಮ್ಮಿದ ಪಿಎಸ್‌ಎಲ್‌ವಿ ಸಿ57 ವಾಹಕವು ಶನಿವಾರ ರಾಷ್ಟ್ರಧ್ವಜದ ಹಿನ್ನೆಲೆಯಲ್ಲಿ ಕಂಡುಬಂದಿದ್ದು ಹೀಗೆ –ಪಿಟಿಐ ಚಿತ್ರಗಳು

‘ಆದಿತ್ಯ’ನಿಗೆ ತೆಂಕಾಸಿ ಸಂಬಂಧ

ಶ್ರೀಹರಿಕೋಟ (ಪಿಟಿಐ): ಸೂರ್ಯನತ್ತ ಮುಖ ಮಾಡಿ ನಭಕ್ಕೆ ಹಾರಿದ ಆದಿತ್ಯ ಎಲ್–1, ಇಸ್ರೊದ ಯೋಜನಾ ನಿರ್ದೇಶಕಿ ನಿಗಾರ್ ಶಾಜಿ ಮತ್ತು ಹಲವಾರ ಪರಿಶ್ರಮದ ಪ್ರತಿರೂಪ.

ಇಸ್ರೊದಲ್ಲಿ 35 ವರ್ಷ ಸೇವೆ ಸಲ್ಲಿಸಿರುವ ಶಾಜಿ, ಭಾರತೀಯ ಸೂಕ್ಷ್ಮ ಸಂವೇದಿ ಸಂವಹನ ಮತ್ತು ಅಂತರಗ್ರಹ ಬಾಹ್ಯಾಕಾಶ ಕಾರ್ಯಕ್ರಮಗಳಲ್ಲಿ ಮಹತ್ವದ ಸೇವೆ ಸಲ್ಲಿಸಿದ್ದಾರೆ ಎಂದು ಇಸ್ರೊದ ಮೂಲಗಳು ತಿಳಿಸಿವೆ.

ಶಾಜಿ ಅವರು ತಮಿಳುನಾಡಿನ ತೆಂಕಾಸಿಯವರು. ಇದರೊಂದಿಗೆ, ಚಂದ್ರಯಾನದ ಮೂರು ಯೋಜನೆಗಳಲ್ಲಿ ಕಾರ್ಯ ನಿರ್ವಹಿಸಿದ ತಮಿಳುನಾಡಿನ ವಿಜ್ಞಾನಿಗಳಾದ ಮೈಲಸ್ವಾಮಿ ಅಣ್ಣಾದೊರೈ, ಎಂ. ವನಿತಾ, ಪಿ. ವೀರಮುತ್ತುವೇಲ್ ಸಾಲಿಗೆ ಶಾಜಿ ಅವರು ಸೇರ್ಪಡೆಯಾಗಿದ್ದಾರೆ.


ಶಾಜಿ 1987ರಲ್ಲಿ ಇಸ್ರೊ ಸೇರಿದರು. ರಾಷ್ಟ್ರೀಯ ಸಂಪನ್ಮೂಲ ಉಸ್ತುವಾರಿ ಮತ್ತು ನಿರ್ವಹಣೆಯ ‘ರಿಸೋರ್ಸ್ ಸ್ಯಾಟ್-2ಎ’ನ ಸಹಾಯಕ ಯೋಜನಾ ನಿರ್ದೇಶಕಿಯೂ ಆಗಿದ್ದರು.



ಆದಿತ್ಯ ಎಲ್1 ಉಪಗ್ರಹವನ್ನು ಹೊತ್ತ ರಾಕೆಟ್ ಯಶಸ್ವಿ ಉಡಾವಣೆಯ ನಂತರ ಮಾತನಾಡುತ್ತಿರುವ ನಿಗಾರ್ ಶಾಜಿ (ಪಿಟಿಐ ಚಿತ್ರ)

ಅಂತರಿಕ್ಷದಲ್ಲಿ ಹೊರಹೊಮ್ಮುವ ಶಕ್ತಿಶಾಲಿ ಎಕ್ಸ್–ರೇ ಮೂಲಗಳ ಅಧ್ಯಯನ

ಖಗೋಳ ಅಧ್ಯಯನ: ‘ಎಕ್ಸ್‌ಪೊಸ್ಯಾಟ್’ ಸಜ್ಜು



ಚಂದ್ರಯಾನ–3ರ ರೋವರ್ ‘ಪ್ರಜ್ಞಾನ್’ ಚಂದಿರನ ಅಂಗಳದಲ್ಲಿ 100 ಮೀಟರ್‌ವರೆಗೂ ಕ್ರಮಿಸಿರುವ ಚಿತ್ರವನ್ನು ಇಸ್ರೊ ಬಿಡುಗಡೆ ಮಾಡಿದೆ –ಪಿಟಿಐ ಚಿತ್ರ

ಆದಿತ್ಯ ಎಲ್–1 ಆಗಸದತ್ತ ನೆಗೆತ

ಒಂದನೇ ಪುಟದಿಂದ...

ಪ್ರಯಾಣಕ್ಕೆ ಒಟ್ಟು 125 ದಿನ ಬೇಕಾಗಲಿದೆ ಎಂದು ಇಸ್ರೊ ತಿಳಿಸಿದೆ.

ಆದಿತ್ಯ ಎಲ್1, ಸೂರ್ಯನ ಚಿತ್ರಗಳನ್ನು ತೆಗೆದು ವೈಜ್ಞಾನಿಕ ಪ್ರಯೋಗಗಳಿಗಾಗಿ ಕಳುಹಿಸಿಕೊಡಲಿದೆ.

ಸೂರ್ಯ ಮತ್ತು ಭೂಮಿಯ ನಡುವೆ ಐದು ಲಗ್ರಾಂಜಿಯನ್ ಬಿಂದುಗಳು ಇವೆ ಎಂದು ವಿಜ್ಞಾನಿಗಳು ಹೇಳುತ್ತಾರೆ. ಈ ಬಿಂದುಗಳನ್ನು ನಿಲುಗಡೆ ತಾಣಗಳು ಎಂದೂ ಕರೆಯಬಹುದು. ಇಲ್ಲಿ ಸಣ್ಣ ಉಪಕರಣವೊಂದನ್ನು ಇರಿಸಿದರೆ ಅದು ಅಲ್ಲಿಯೇ ನೆಲೆಯಾಗಿ ಬಿಡುತ್ತದೆ. ಇಟಲಿ–ಫ್ರಾನ್ಸ್‌ನ ವಿಜ್ಞಾನಿ ಜೋಸೆಫ್ ಲೂಯಿಸ್ ಲಗ್ರಾಂಜ್ ಎಂಬ ಗಣಿತಶಾಸ್ತ್ರಜ್ಞನ ಸ್ಮರಣೆಗಾಗಿ ಈ ಬಿಂದುಗಳಿಗೆ ಅವರ ಹೆಸರು ಇರಿಸಲಾಗಿದೆ. ಲಗ್ರಾಂಜಿಯನ್ ಬಿಂದುವಿನಲ್ಲಿ ವೀಕ್ಷಣಾಲಯವು ಅತ್ಯಂತ ಕಡಿಮೆ ಇಂಧನದಲ್ಲಿ ಕಾರ್ಯಾಚರಣೆ ನಡೆಸಬಲ್ಲುದು.

ಭೂಮಿಯ ವಾತಾವರಣ ಮತ್ತು ಅದರ ಅಯಸ್ಕಾಂತೀಯ ಕ್ಷೇತ್ರವು ಸೂರ್ಯನ ಹಾನಿಕಾರಕ ವಿಕಿರಣಗಳನ್ನು ತಡೆದು ರಕ್ಷಾ ಕವಚದಂತೆ ಕೆಲಸ ಮಾಡುತ್ತದೆ. ಇಂತಹ ವಿಕಿರಣಗಳ ಪತ್ತೆಗಾಗಿ ಬಾಹ್ಯಾಕಾಶದಿಂದ ಸೂರ್ಯನ ಅಧ್ಯಯನ ನಡೆಸಲಾಗುತ್ತಿದೆ. ಸೂರ್ಯನ ಕಿರೀಟ ಭಾಗದ ತಾಪ, ಸೌರ ಮಾರುತದ ವೇಗವರ್ಧನೆ, ಸೌರ ಜ್ವಾಲೆ, ಬಾಹ್ಯಾಕಾಶದಲ್ಲಿ ಭೂಮಿಯ ಅತಿ ಸಮೀಪದ ವಾತಾವರಣ ಇತ್ಯಾದಿ ಅಧ್ಯಯನವು ಈ ಯೋಜನೆಯ ಗುರಿಯಾಗಿದೆ.

> ‘ಆದಿತ್ಯ ಎಲ್1’ ಯಶಸ್ವಿ ಉಡ್ಡಯನಕ್ಕಾಗಿ ವಿಜ್ಞಾನಿಗಳಿಗೆ ಅಭಿನಂದನೆಗಳು. ಖಗೋಳವನ್ನು ಇನ್ನಷ್ಟು ವಿಸ್ತೃತವಾಗಿ ಅರ್ಥಮಾಡಿಕೊಳ್ಳಲು ಹಾಗೂ ಇಡೀ ಮನುಕುಲದ ಅಭಿವೃದ್ಧಿಗಾಗಿ ವಿಜ್ಞಾನ ಕ್ಷೇತ್ರದಲ್ಲಿ ನಮ್ಮ ಅವಿರತ ಪ್ರಯತ್ನ ಮುಂದುವರಿಯಲಿದೆ
> **ನರೇಂದ್ರ ಮೋದಿ,** ಪ್ರಧಾನಿ

ಬೆಂಗಳೂರು (ಪಿಟಿಐ): ಚಂದ್ರಯಾನ–3 ಮತ್ತು ‘ಆದಿತ್ಯ ಎಲ್1’ ಯಶಸ್ಸಿನ ಬಳಿಕ ಭಾರತೀಯ ಬಾಹ್ಯಾಕಾಶ ಸಂಶೋಧನಾ ಕೇಂದ್ರ (ಇಸ್ರೊ) ಈಗ ಖಗೋಳದ ಕೌತುಕಗಳ ಅಧ್ಯಯನದ ಕಾರ್ಯಯೋಜನೆಗೆ ಸಜ್ಜಾಗಿದೆ.


ಪ್ರತಿಕೂಲ ಸಂದರ್ಭದಲ್ಲೂ ಖಗೋಳದಲ್ಲಿ ಹೊರಹೊಮ್ಮುವ ಶಕ್ತಿಶಾಲಿ ಎಕ್ಸ್–ರೇ ಮೂಲಗಳ ವಿವಿಧ ಆಯಾಮಗಳ ಅಧ್ಯಯನದ ಎಕ್ಸ್‌ಪೊಸ್ಯಾಟ್ (ಎಕ್ಸ್–ರೇ ಪೊಲಾರಿಮೀಟರ್ ಸ್ಯಾಟಲೈಟ್) ಉಡಾವಣೆಗೆ ಇಸ್ರೊ ಸಿದ್ಧತೆ ನಡೆಸಿದೆ.

ಭೂಮಿಯ ಕೆಳಮಟ್ಟದ ಕಕ್ಷೆಯಲ್ಲಿ ಪರಿಭ್ರಮಿಸಲಿರುವ ಈ ಉಪಗ್ರಹವು ಎರಡು ವೈಜ್ಞಾನಿಕ ಉಪಕರಣಗಳನ್ನು ಒಳಗೊಂಡಿರಲಿದೆ. ಪಾಲಿಕ್ಸ್ (ಪೊಲ್ಯಾರಿಮೀಟರ್ ಇನ್‌ಸ್ಟ್ರುಮೆಂಟ್ ಇನ್ ಎಕ್ಸ್ ರೇ) ಧ್ರುವಗಳ ಕೋನದ ಮಾನದಂಡಗಳ ಅಧ್ಯಯನ ಮಾಡಿದರೆ, ಎಕ್ಸ್‌ಪೆಕ್ಟ್ (ಎಕ್ಸ್ ರೇ ಸ್ಪೆಕ್ಟ್ರೊಸ್ಕೋಪಿ) ಉಪಕರಣ ಶಕ್ತಿಯ ವ್ಯಾಪ್ತಿಯನ್ನು ಅಂದಾಜಿಸಿ ಮಾಹಿತಿಯನ್ನು ರವಾನಿಸಲಿದೆ ಎಂದು ಇಸ್ರೊ ತಿಳಿಸಿದೆ.

‘ಎಕ್ಸ್‌ಪೊಸ್ಯಾಟ್ ಉಡಾವಣೆಗೆ ಸಿದ್ಧವಾಗಿದೆ’ ಎಂದು ಇಸ್ರೊ ಅಧಿಕಾರಿಯೊಬ್ಬರು ಶನಿವಾರ ತಿಳಿಸಿದರು. ಆದರೆ, ಉಡಾವಣೆ ಸಮಯ ಸೇರಿದಂತೆ ಹೆಚ್ಚಿನ ಮಾಹಿತಿಯನ್ನು ಬಹಿರಂಗಪಡಿಸಿಲ್ಲ.

> ಆದಿತ್ಯ ಎಲ್1 ಯಶಸ್ವಿ ಉಡ್ಡಯನವು ಭಾರತ ಮತ್ತು ಇಸ್ರೊದ ದೃಷ್ಟಿಯಿಂದ ಮತ್ತೊಂದು ಅದ್ವಿತೀಯ ಸಾಧನೆ. ಇಸ್ರೊಗೆ ಅಭಿನಂದಿಸುವ ಜೊತೆಗೆ ಅದರ ಯಶಸ್ಸಿನ ಪಯಣವನ್ನೂ ಮೆಲುಕು ಹಾಕುವುದು ಸ್ತುತ್ಯರ್ಹ
> **ಜೈರಾಮ್ ರಮೇಶ್,** ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

‘ಆದಿತ್ಯ ಎಲ್1: ಯು.ಆರ್.ರಾವ್ ಅಡಿಪಾಯ’



ಯು.ಆರ್. ರಾವ್

ಬೆಂಗಳೂರು (ಪಿಟಿಐ): ಸೂರ್ಯನ ಅಧ್ಯಯನದ ‘ಆದಿತ್ಯ ಎಲ್1’ ಯೋಜನೆಯ ಆರಂಭಿಕ ಹಂತಗಳು ಯಶಸ್ವಿಯಾಗಿ ಕಾರ್ಯಗತಗೊಳ್ಳುವಲ್ಲಿ ಇಸ್ರೊ ಮಾಜಿ ಅಧ್ಯಕ್ಷ ಯು.ಆರ್.ರಾವ್ ಅವರ ಪಾತ್ರ ಮಹತ್ವವಾದುದು. ‘ಆದಿತ್ಯ ಎಲ್1’ ಅವರ ಕನಸಿನ ಯೋಜನೆಯೂ ಹೌದು.

ಇಸ್ರೊ ಮೂಲಗಳ ಪ್ರಕಾರ, ಪ್ರೊ. ರಾವ್ ಅವರು ‘ಆದಿತ್ಯ’ ಯೋಜನೆಯ ಸಮಕಾಲೀನ ಮತ್ತು ಅರ್ಥಪೂರ್ಣ ಕಾರ್ಯಕ್ರಮವಾಗಿಸಲು ಒತ್ತು ನೀಡಿದ್ದರು. ಕಕ್ಷೆಗೆ ಸೇರಿಸುವುದು ಸೇರಿ ಒಟ್ಟು ಗುರಿ ಸಾಧನೆಯ ಯೋಜನೆ ರೂಪಿಸಿದ್ದರು.

ಇಸ್ರೊ ತನ್ನ ವೆಬ್‌ಸೈಟ್‌ನಲ್ಲಿಯೂ ರಾವ್ ಅವರಿಗೆ ಕೃತಜ್ಞತಾ ಸಂದೇಶ ಪೋಸ್ಟ್ ಮಾಡಿದ್ದು, ‘ಭಾರತದಿಂದ ಲಗ್ರಾಂಜಿಯನ್ ಪಾಯಿಂಟ್‌ಗೆ ಸೇರಿಸುವ ಮೊದಲ ಯೋಜನೆ ಆದಿತ್ಯ ಎಲ್1 ಆಗಿರಲಿದೆ. ಪ್ರೊ. ಯು. ಆರ್. ರಾವ್ ಅವರಿಗೆ ಕೃತಜ್ಞತೆಗಳು’ ಎಂದು ಹೇಳಿದೆ.

ಆದಿತ್ಯ ಎಲ್1 ಯೋಜನೆಯ ಯಶಸ್ವಿ ಉಡ್ಡಯನದ ನಂತರ ಮಾತನಾಡಿದ ಯೋಜನೆಯ ನಿರ್ದೇಶಕಿ ನಿಗಾರ್ ಶಾಜಿ ಅವರು, ಯು.ಆರ್.ರಾವ್ ಅವರ ಕೊಡುಗೆಯನ್ನು ಪ್ರಮುಖವಾಗಿ ಉಲ್ಲೇಖಿಸಿದರು. ‘ಈ ಯೋಜನೆಯ ಬೀಜ ಬಿತ್ತಿದ್ದ ಅವರನ್ನು ಸ್ಮರಿಸುವೆ’ ಎಂದರು.

ಭಾರತೀಯ ಖಗೋಳಭೌತವಿಜ್ಞಾನ ಸಂಸ್ಥೆಯ (ಐಐಎ) ಪ್ರೊ. ಜಗ್‌ದೇವ್ ಸಿಂಗ್ ಅವರು, ಯೋಜನೆಯ ಆರಂಭಿಕ ದಿನಗಳಲ್ಲಿ ರಾವ್ ಅವರ ಸೇವೆಯನ್ನು ಸ್ಮರಿಸಿದರು. ಆದಿತ್ಯ ಎಲ್1ನಲ್ಲಿ ಅಳವಡಿಸಿರುವ ವಿಇಎಲ್‌ಸಿ ಪರಿಕರವನ್ನು ಐಐಎ ಅಭಿವೃದ್ಧಿಪಡಿಸಿದೆ.

‘ಇಸ್ರೊ ಮೊದಲು ನಮಗೆ 50 ಸೆಂ.ಮೀ. ಸಣ್ಣ ವೇದಿಕೆ ಒದಗಿಸಿತು. ನಾವು ಪರಿಕರ ರೂಪಿಸಲು ಆರಂಭಿಸಿದೆವು. ಆಗ, ಸೂರ್ಯನನ್ನು ವರ್ಷದ 365 ದಿನ ನಿರಂತರ ಅಧ್ಯಯನ ಮಾಡಲು ಭೂಮಿಯ ಕೆಳಗಿನ ಕಕ್ಷೆಯಲ್ಲಿ ಉಪಗ್ರಹ ಇರಿಸುವುದು ಸೂಕ್ತ ಎಂಬ ಚಿಂತನೆ ಬಂದಿತು. ಆದರೆ, ಗ್ರಹಣವಿದ್ದಾಗ ಸೂರ್ಯನ ಅಧ್ಯಯನ ಅಸಾಧ್ಯ ಎಂಬ ಅಭಿಪ್ರಾಯ ವ್ಯಕ್ತವಾಯಿತು. ಈ ಹಂತದಲ್ಲಿ ಧ್ರುವಕಕ್ಷೆಗೆ ಬದಲಾಗಿ ಎಲ್1ನಲ್ಲಿ ಉಪಗ್ರಹ ಇರಿಸುವುದು ಸೂಕ್ತ ಎಂದು ಯು.ಆರ್.ರಾವ್ ಸಲಹೆ ನೀಡಿದ್ದರು’ ಎಂದು ಜಗದೇವ್ ಸಿಂಗ್ ಅವರು ಸ್ಮರಿಸಿದರು.

ಆ ನಂತರವು ವಿಇಎಲ್‌ಸಿ ಪರಿಕರದ ಜೊತೆಗೆ ಇನ್ನೂ ಆರು ಪರಿಕರಗಳನ್ನು ಎಲ್1 ಸೇರಲಿರುವ ‘ಆದಿತ್ಯ‘ ಉಪಗ್ರಹದಲ್ಲಿ ಅಳವಡಿಸಲು ತೀರ್ಮಾನಿಸಲಾಯಿತು. ಹೀಗಾಗಿ, ಉಪಗ್ರಹ ಮತ್ತು ಯೋಜನೆಯ ಗಾತ್ರಗಳು ವಿಸ್ತಾರಗೊಂಡವು ಎಂದು ಹೇಳಿದರು.

‘ಸೂರ್ಯನ ವರ್ಣಗೋಳ, ಪರಿಭ್ರಮಣ ವಲಯ, ಸೂರ್ಯಮಂಡಲ, ಸೇರಿದಂತೆ ಹಲವು ಅಂಶಗಳನ್ನು ಅಧ್ಯಯನ ಮಾಡುವ ರಾವ್ ಅವರ ಆಸಕ್ತಿಯೂ ಸೇರಿದಂತೆ ಹಲವು ವೈಜ್ಞಾನಿಕ ಅಂಶಗಳು ಇದರಲ್ಲಿವೆ. ಇಂದು ಅವರ ಕನಸು ನನಸಾಗಿದೆ. ಆದರೆ, ಈ ಯೋಜನೆಗೆ ಸಾಕ್ಷಿಯಾಗಲು ಅವರು ಇಲ್ಲದಿರುವುದು ದುರದೃಷ್ಟ’ ಎಂದು ಇಸ್ರೊ ಸ್ಮರಿಸಿದೆ.

ರಾವ್ ಅವರು 1984ರಿಂದ 1994ರವರೆಗೂ ಇಸ್ರೊ ಅಧ್ಯಕ್ಷರಾಗಿದ್ದರು. 2017ರಲ್ಲಿ ಅವರು ಮೃತಪಟ್ಟಿದ್ದು, ಆಗ ಅವರ ವಯಸ್ಸು 87 ಆಗಿತ್ತು. ಅದೇ ವರ್ಷ ಕೇಂದ್ರ ಸರ್ಕಾರ ಅವರಿಗೆ ಪದ್ಮವಿಭೂಷಣ ಪ್ರಶಸ್ತಿ ನೀಡಿ ಗೌರವಿಸಿತ್ತು.

ಹವಾಮಾನ ಬದಲಾವಣೆಗೆ ಸಂಬಂಧಿಸಿದ ಯೋಜನೆ ರೂಪಿಸಲು ‘ಆದಿತ್ಯ’ ಸಹಾಯ

ತಿರುವನಂತಪುರಂ(ಪಿಟಿಐ): ಹವಾಮಾನ ಬದಲಾವಣೆಗೆ ಸಂಬಂಧಿಸಿದ ಮುನ್ಸೂಚನಾ ಮಾದರಿಗಳನ್ನು ಮತ್ತು ಯೋಜನೆಗಳನ್ನು ರೂಪಿಸಲು ಆದಿತ್ಯ ಎಲ್–1 ನೆರವಾಗಲಿದೆ ಎಂದು ಇಸ್ರೊ ಮಾಜಿ ಅಧ್ಯಕ್ಷ ಜಿ.ಮಾಧವನ್ ನಾಯರ್ ಶನಿವಾರ ಹೇಳಿದರು.

ಸೂರ್ಯನ ಅಧ್ಯಯನಕ್ಕೆ ಸಂಬಂಧಿಸಿದ ಉಪಗ್ರಹವನ್ನು ಹೊತ್ತ ರಾಕೆಟ್ ಪಿಎಸ್‌ಎಲ್‌ವಿ-ಸಿ 57 ಯಶಸ್ವಿ ಉಡಾವಣೆಯ ನಂತರ ಮಾಧ್ಯಮಗಳ ಜತೆ ಮಾತನಾಡಿದ ನಾಯರ್, ‘ನಮ್ಮ ಸ್ಥಳೀಯ ಹವಾಮಾನ ಪರಿಸ್ಥಿತಿಗಳ ಮೇಲೆ ಪರಿಣಾಮ ಬೀರುವ ವಿವಿಧ ವಿದ್ಯಮಾನಗಳನ್ನು ಅರ್ಥಮಾಡಿಕೊಳ್ಳಲು ಸೌರ ಮೇಲ್ಮೈಯನ್ನು ಅಧ್ಯಯನ ಮಾಡುವುದು ಬಹಳ ಮುಖ್ಯ’ ಎಂದು ಹೇಳಿದರು.

’ಹವಾಮಾನ ಬದಲಾವಣೆಯ ಅಧ್ಯಯನದಲ್ಲಿ ಸೌರ ವಿಕಿರಣದ ದೀರ್ಘಕಾಲೀನ ವ್ಯತ್ಯಾಸದ ಮೇಲಿನ ಸಂಶೋಧನೆಯೂ ಮುಖ್ಯವಾಗುತ್ತದೆ. ಆದಿತ್ಯ–ಎಲ್1 ಮೂಲಕ ಈ ಎಲ್ಲ ಅಂಶಗಳ ಕುರಿತು ಮೂಲ ಭೂತ ಜ್ಞಾನ ಪಡೆದುಕೊಳ್ಳಲಾಗುವುದು. ಉಪಗ್ರಹವು ಸೂರ್ಯನ ವಿದ್ಯಮಾನಗಳ ಬಗ್ಗೆ ನಿಖರ ಮಾಹಿತಿ ಸಂಗ್ರಹಿಸಲಿದೆ’ ಎಂದು ನಾಯರ್ ಪಿಟಿಐಗೆ ತಿಳಿಸಿದರು.

‘ಹವಾಮಾನಕ್ಕೆ ಸಂಬಂಧಿಸಿದಂತೆ ನಾವು ಕೆಲವು (ಮುನ್ಸೂಚನೆ) ಮಾದರಿಗಳನ್ನು ಸಿದ್ಧಪಡಿಸಲು ಮಾತ್ರ ಪ್ರಯತ್ನಿಸಬಹುದು. ಈ ಪ್ರಯೋಗದ ಮೂಲಕ ಮಾದರಿಗಳನ್ನು ಮೌಲ್ಯೀಕರಿಸಬಹುದಾಗಿದೆ. ಅದರ ಆಧಾರದ ಮೇಲೆ ನಾವು ಭೂಮಿಗೆ ಸಂಬಂಧಿಸಿ ಯೋಜನೆಗಳನ್ನು ರೂಪಿಸಬಹುದು’ ಎಂದು ಅವರು ತಿಳಿಸಿದರು.

2003–09ರ ಅವಧಿಯಲ್ಲಿ ನಾಯರ್ ಇಸ್ರೋ ಅಧ್ಯಕ್ಷರಾಗಿದ್ದರು.

ನೈಜೀರಿಯಾ ಮಹಿಳೆ ಬಂಧನ

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರದಲ್ಲಿ ಮೀಥೈಲ್ ಡಯಾಕ್ಸಿ ಮೆಥಾಂಫೆಟಮೈನ್ (ಎಂಡಿಎಂಎ) ಮಾರಾಟ ದಂಧೆಯಲ್ಲಿ ತೊಡಗಿದ್ದ ಆರೋಪಿಗಳಿಗೆ ಈ ನಿಷೇಧಿತ ಕೃತಕ ಮಾದಕ ಪದಾರ್ಥವನ್ನು ಪೂರೈಸುತ್ತಿದ್ದ ಆರೋಪದ ಮೇಲೆ ನೈಜೀರಿಯಾದ ಮಹಿಳೆಯನ್ನು ಇಲ್ಲಿನ ಸಿಸಿಬಿ ಪೊಲೀಸರು ಬೆಂಗಳೂರಿನಲ್ಲಿ ಬಂಧಿಸಿದ್ದಾರೆ.

‘ಅಡೆವೊಲೆ ಅಡೆಟುಟು ಅನು ಅಲಿಯಾಸ್ ರೆಜಿನಾ ಜರಾ ಅಲಿಯಾಸ್ ಆಯಿಶಾ (33) ಬಂಧಿತ ಮಹಿಳೆ. ಆರೋಪಿ ಮಹಿಳೆಯಿಂದ 400 ಗ್ರಾಂ ತೂಕದ ಎಂಡಿಎಂ ವಶಪಡಿಸಿಕೊಂಡಿದ್ದೇವೆ. ಇದರ ಬೆಲೆ ₹ 20 ಲಕ್ಷ ಎಂದು ಅಂದಾಜಿಸಲಾಗಿದೆ. ಕೃತ್ಯಕ್ಕೆ ಬಳಸಿದ್ದ ಮೊಬೈಲ್ ಫೋನ್ ಹಾಗೂ ₹ 2910 ನಗದು ಸೇರಿ ಆರೋಪಿಯಿಂದ ಒಟ್ಟು ₹ 20.52 ಲಕ್ಷ ಮೌಲ್ಯದ ಸೊತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಆರೋಪಿಗೆ ನ್ಯಾಯಾಂಗ ಬಂಧನ ವಿಧಿಸಲಾಗಿದೆ’ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

‘ಆರೋಪಿ ಮಹಿಳೆಯು ವ್ಯಾಸಂಗ ವೀಸಾದಡಿ ಬೆಂಗಳೂರಿಗೆ ಬಂದಿದ್ದಳು. ವಿದ್ಯಾಭ್ಯಾಸದ ನಂತರ ಕೆಲ ಸಮಯ ಶುಶ್ರೂಷಕಿಯಾಗಿ ಕೆಲಸ ಮಾಡಿಕೊಂಡಿದ್ದಳು. ಆ ಕೆಲಸ ಬಿಟ್ಟ ನಂತರ ನಿಷೇಧಿತ ಮಾದಕ ಪದಾರ್ಥಗಳ ಮಾರಾಟದಲ್ಲಿ ತೊಡಗಿದ್ದಳು. ವಿವಿಧ ಠಾಣೆಗಳಲ್ಲಿ ದಾಖಲಾಗಿದ್ದ ಒಟ್ಟು 7 ಪ್ರಕರಣಗಳ ಆರೋಪಿಗಳು ಈಕೆಯಿಂದಲೇ ಮಾದಕ ವಸ್ತುವನ್ನು ಖರೀದಿಸಿದ್ದರು ಎಂದು ಗೊತ್ತಾಗಿದೆ’ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಎರಡು ದರ್ಗಾ ಧ್ವಂಸ

ಡೆಹ್ರಾಡೂನ್ (ಉತ್ತರಾಖಂಡ): ರಿಷಿಕೇಶದ ಅಮಿತ್ ಗ್ರಾಮ ಎಂಬಲ್ಲಿ ಬಲಪಂಥೀಯ ಸಂಘಟನೆಗಳ ಕಾರ್ಯಕರ್ತರು ಸುತ್ತಿಗೆ, ಜೆಸಿಬಿಗಳನ್ನು ಬಳಸಿ ದರ್ಗಾಗಳನ್ನು ಧ್ವಂಸಗೊಳಿಸುತ್ತಿರುವ ವಿಡಿಯೊವೊಂದು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

ದೇವಭೂಮಿ ರಕ್ಷಣಾ ಅಭಿಯಾನದ ಇಬ್ಬರು ಕಾರ್ಯಕರ್ತರು ‘ಜೈ ಶ್ರೀರಾಮ್’ ಘೋಷಣೆ ಕೂಗುತ್ತ ಸುತ್ತಿಗೆಯಿಂದ ದರ್ಗಾಗಳನ್ನು ಒಡೆಯುತ್ತಿದ್ದರೆ, ಅವಶೇಷಗಳನ್ನು ಜೆಸಿಬಿ ತೆರವುಗೊಳಿಸುತ್ತಿರುವುದು ಹಾಗೂ ‘ಇದು ದೇವಭೂಮಿ, ದರ್ಗಾ ಭೂಮಿಯಲ್ಲ. ರಾಜ್ಯದಲ್ಲಿರುವ ಅಕ್ರಮ ದರ್ಗಾಗಳನ್ನು ಇದೇ ರೀತಿ ಧ್ವಂಸಗೊಳಿಸಲಾಗುವುದು’ ಎಂದು ಕಾರ್ಯಕರ್ತರು ಹೇಳುತ್ತಿರುವುದೂ ದೃಶ್ಯದಲ್ಲಿ ದಾಖಲಾಗಿದೆ.

ಜ್ಞಾನವಾಪಿ: ವರದಿ ಸಲ್ಲಿಕೆಗೆ ಕಾಲಾವಕಾಶ ಕೋರಿದ ಎಎಸ್‌ಐ

ಪ್ರಜಾವಾಣಿ ವಾರ್ತೆ



ಲಖನೌ: ವಿವಾದಿತ ಜ್ಞಾನವಾಪಿ ಮಸೀದಿ ಸಂಕೀರ್ಣದ ವೈಜ್ಞಾನಿಕ ಸಮೀಕ್ಷೆ ವರದಿ ಸಲ್ಲಿಕೆಗೆ ಮತ್ತಷ್ಟು ಕಾಲಾವಕಾಶ ನೀಡಬೇಕೆಂದು ಕೋರಿ ವಾರಾಣಸಿಯ ಜಿಲ್ಲಾ ನ್ಯಾಯಾಲಯಕ್ಕೆ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯು (ಎಎಸ್‌ಐ) ಶನಿವಾರ ಮನವಿ ಸಲ್ಲಿಸಿದೆ.

ವೈಜ್ಞಾನಿಕ ಸಮೀಕ್ಷೆಯ ವರದಿ ಸಲ್ಲಿಸಲು 8 ವಾರಗಳ ಕಾಲಾವಕಾಶ ನೀಡಬೇಕೆಂದು ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶ (1) ಸಂಜೀವ್ ಸಿನ್ಹಾ ಅವರನ್ನು ಎಎಸ್‌ಐ ಕೋರಿದೆ ಎಂದು ದಾವೆದಾರರ ಪರ ವಕೀಲರು ತಿಳಿಸಿದ್ದಾರೆ.

ನ್ಯಾಯಾಲಯದಲ್ಲಿ ಸೋಮವಾರ ಪ್ರಕರಣವು ವಿಚಾರಣೆಗೆ ಬರುವ ಸಾಧ್ಯತೆ ಇತ್ತು. ವಾರಾಣಸಿಯ ಜಿಲ್ಲಾ ನ್ಯಾಯಾಲಯವು ಸಮೀಕ್ಷಾ ವರದಿಯನ್ನು ಶನಿವಾರ ಸಲ್ಲಿಸುವಂತೆ ಎಎಸ್‌ಐಗೆ ನಿರ್ದೇಶನ ನೀಡಿತ್ತು.

ಕೇಂದ್ರಕ್ಕೆ ಸರ್ವಪಕ್ಷ ನಿಯೋಗ ಶೀಘ್ರ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ವಿಜಯಪುರ: 'ರಾಜ್ಯದ ಪ್ರಮುಖ ನೀರಾವರಿ ಯೋಜನೆಗಳಾದ ಕೃಷ್ಣಾ ಮೇಲ್ದಂಡೆ (ಯುಕೆಪಿ) ಮೂರನೇ ಹಂತ, ಮೇಕೆದಾಟು, ಮಹಾದಾಯಿ ಅನುಷ್ಠಾನಕ್ಕೆ ಇರುವ ಅಡತಡೆಗಳ ನಿವಾರಣೆಗೆ ಒತ್ತಾಯಿಸಿ ಸರ್ವಪಕ್ಷ ನಿಯೋಗವನ್ನು ಪ್ರಧಾನಿ ಹಾಗೂ ಕೇಂದ್ರ ಜಲ ಸಂಪನ್ಮೂಲ ಸಚಿವರ ಬಳಿ ಶೀಘ್ರವೇ ಕರೆದೊಯ್ಯಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

ಆಲಮಟ್ಟಿ ಜಲಾಶಯದಲ್ಲಿ ಶನಿವಾರ ಬಾಗಿನ ಅರ್ಪಿಸಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ನಿಯೋಗ ಕರೆದೊಯ್ಯುವಿಕೆಗೆ ಸಂಬಂಧಿಸಿದಂತೆ ಈಗಾಗಲೇ ಪ್ರಧಾನಿಗೆ ಪತ್ರ ಬರೆಯಲಾಗಿದೆ. ಸಮಯ ನೀಡಿದ ತಕ್ಷಣ ಭೇಟಿ ನೀಡಲಾಗುವುದು' ಎಂದರು.

'ಯುಕೆಪಿ ಮೂರನೇ ಹಂತಕ್ಕೆ ಸಂಬಂಧಿಸಿದಂತೆ ಭೂಸ್ವಾಧೀನ, ಪುನರ್ವಸತಿ ವಿಳಂಬವಾಗಿದೆ. 2010ರಲ್ಲಿ ಬಂದ ಕೃಷ್ಣಾ ನ್ಯಾಯಾಧೀಕರಣ ಅಂತಿಮ ತೀರ್ಪು ಪ್ರಶ್ನಿಸಿ ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ನಮ್ಮ ರಾಜ್ಯದಿಂದ ಸುಪ್ರೀಂಕೋರ್ಟ್‌ನಲ್ಲಿ ಮರು ಪರಿಶೀಲನಾ ಅರ್ಜಿ (ಎಸ್‌ಎಲ್‌ಪಿ) ಸಲ್ಲಿಸಿದ್ದು ಅಧಿಸೂಚನೆ ಹೊರಡಿಸಲು ಅಡ್ಡಿಯಾಗಿದೆ. ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಿ, ಶೀಘ್ರಅಧಿಸೂಚನೆ ಹೊರಡಿಸಲು ಕೋರಲಾಗುವುದು' ಎಂದರು.

'ಯುಕೆಪಿಗೆ ಸಂಬಂಧಿಸಿದಂತೆ ಅಗತ್ಯ ಇರುವ ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಹಾಗೂ ರೈತರ ಜಮೀನಿಗೆ ನೀರು ಹರಿಸುವ ಕೆಲಸ ತುರ್ತಾಗಿ ಆಗಬೇಕಿದೆ. 5 ವರ್ಷದಲ್ಲಿ ಪೂರ್ಣಗೊಳಿಸಲು ಪ್ರಯತ್ನಿಸುತ್ತೇವೆ' ಎಂದರು.



ವಿಜಯಪುರ ಜಿಲ್ಲೆಯ ಆಲಮಟ್ಟಿ ಜಲಾಶಯ ತುಂಬಿದ್ದರಿಂದ ಶನಿವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಗಂಗಾಪೂಜೆ ನೆರವೇರಿಸಿ, ಬಾಗಿನ ಅರ್ಪಿಸಿದರು. ಶಾಸಕ ಸಿ.ಎಸ್‌ನಾಡಗೌಡ, ವಿಜಯಾನಂದ ಕಾಶಪ್ಪನವರ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಚಿವ ಎಂ.ಬಿ.ಪಾಟೀಲ, ಶಾಸಕ ಜೆ.ಟಿ.ಪಾಟೀಲ ಇದ್ದಾರೆ —ಪ್ರಜಾವಾಣಿ ಚಿತ್ರ

> **ಯುಕೆಪಿ ಮೂರನೇ ಹಂತದ ಪೂರ್ಣ ಅನುಷ್ಠಾನಕ್ಕೆ ₹ 1 ಲಕ್ಷ ಕೋಟಿ ಅನುದಾನ ಬೇಕು. ಅದಕ್ಕೆ ಯುಕೆಪಿಯನ್ನು ರಾಷ್ಟ್ರೀಯ ಯೋಜನೆಯಾಗಿ ಘೋಷಿಸಲು ಒತ್ತಾಯಿಸಲಾಗುವುದು**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಇದಕ್ಕೂ ಮುನ್ನ ಬಳ್ಳಾರಿ ಜಿಲ್ಲೆಯ ತೋರಣಗಲ್ಲಿನಲ್ಲಿ ಮಾತನಾಡಿದ ಸಿದ್ದರಾಮಯ್ಯ, 'ಕಾವೇರಿ ಸಂಕಷ್ಟ ಪರಿಹಾರಕ್ಕೆ ಕೇಂದ್ರ ಸರ್ಕಾರ ತಕ್ಷಣ ಮಧ್ಯಪ್ರವೇಶಿಸಬೇಕು. ತಮಿಳುನಾಡಿಗೆ ಕೊಡಲು ನಮ್ಮ ಬಳಿ ನೀರಿಲ್ಲ. ಕೊಡಬಾರದು ಎಂಬ ಉದ್ದೇಶವಿಲ್ಲ. ಇರುವ ನೀರಿನಲ್ಲಿ ಬೆಳೆ ರಕ್ಷಣೆ ಜೊತೆಗೆ ಕುಡಿಯುವ ಉದ್ದೇಶಕ್ಕೂ ಕಾಯ್ದುಕೊಳ್ಳಬೇಕು' ಎಂದರು.

'ಬರಗಾಲ ಘೋಷಣೆ ನಾಳೆ'

ವಿಜಯಪುರ: 'ರಾಜ್ಯದಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಿದೆ. ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಉಪ ಸಮಿತಿಯಿಂದ ಜಂಟಿ ಸಮೀಕ್ಷೆ ನಡೆದಿದ್ದು, ಸೆಪ್ಟೆಂಬರ್ 4ರಂದು ನಡೆಯುವ ಸಭೆಯಲ್ಲಿ ಬರಗಾಲ ಘೋಷಿಸುವ ಕುರಿತು ತೀರ್ಮಾನಿಸಲಾಗುವುದು' ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಹೇಳಿದರು.

'ರಾಜ್ಯದಲ್ಲಿ ಜೂನ್ ತಿಂಗಳಲ್ಲಿ ಶೇ 56 ರಷ್ಟು ಮಳೆಯಾಗಿದೆ. ರಾಜ್ಯದ ಬರ ಪೀಡಿತ 113 ತಾಲ್ಲೂಕುಗಳ ಕುರಿತು ಸಮಿತಿ ಸಮೀಕ್ಷೆ ನಡೆದಿದೆ. ಇನ್ನುಳಿದ 73 ತಾಲ್ಲೂಕುಗಳ ಜಂಟಿ ಸಮೀಕ್ಷೆ ವರದಿ ಆಧರಿಸಿ ಯಾವ ತಾಲ್ಲೂಕುಗಳನ್ನು ಬರ ಪೀಡಿತ ಎಂದು ಘೋಷಿಸಬೇಕು ಎಂಬುದನ್ನು ನಿರ್ಧರಿಸಲಾಗುವುದು' ಎಂದರು.

ಒಂದು ದೇಶ ಒಂದು ಚುನಾವಣೆ ಕಷ್ಟ (ಬಳ್ಳಾರಿ ವರದಿ): 'ಲೋಕಸಭೆ ಮತ್ತು ವಿಧಾನಸಭೆಗಳ ಚುನಾವಣೆಗಳನ್ನು ಏಕಕಾಲಕ್ಕೆ ನಡೆಸುವುದು ವಾಸ್ತವದಲ್ಲಿ ಅತ್ಯಂತ ಕಷ್ಟದ ಕೆಲಸ. ಬೇರೆ ರಾಜ್ಯಗಳ ಚುನಾವಣೆಗಳು ಬೇರೆ ಸಮಯದಲ್ಲಿ ನಡೆಯಲಿವೆ. ಅವುಗಳನ್ನು ಮಧ್ಯಂತರದಲ್ಲಿ ವಿಸರ್ಜಿಸಿ ಚುನಾವಣೆ ನಡೆಸಲು ಆಗದು. ಹೀಗಾಗಿ, ಲೋಕಸಭೆ ಚುನಾವಣೆ ಜತೆ ವಿಧಾನಸಭೆಗಳ ಚುನಾವಣೆ ನಡೆಸುವುದು ಅಸಾಧ್ಯ' ಎಂದು ಸಿದ್ದರಾಮಯ್ಯ ತಿಳಿಸಿದರು.

'ಜೈಲಿಗೆ ಹೋದರೂ ಸರಿ, ನೀರು ನಿಲ್ಲಿಸಿ'

ಪ್ರಜಾವಾಣಿ ವಾರ್ತೆ

ಮಂಡ್ಯ: 'ಸುಗ್ರೀವಾಜ್ಞೆ ತಂದಾದರೂ ಸರಿ, ಜೈಲಿಗೆ ಹೋದರೂ ಸರಿ ತಮಿಳುನಾಡಿಗೆ ಹರಿಯುತ್ತಿರುವ ಕಾವೇರಿ ನೀರು ನಿಲ್ಲಿಸಬೇಕು' ಎಂದು ಒತ್ತಾಯಿಸಿ ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರು ಇಲ್ಲಿನ ಸಿಲ್ವರ್ ಜ್ಯೂಬಿಲಿ ಉದ್ಯಾನದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಶನಿವಾರ ಮೆರವಣಿಗೆ ನಡೆಸಿದರು.

'ನೀರು ಹರಿಸುವುದು ನಿಲ್ಲಿಸುವಂತೆ ಸರ್ಕಾರಕ್ಕೆ ಸೂಚಿಸಬೇಕು' ಎಂದು ಆಗ್ರಹಿಸಿ ಜಿಲ್ಲಾಧಿಕಾರಿ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು.

'ಕಾವೇರಿಗಾಗಿ ಎಚ್‌.ಡಿ. ದೇವೇಗೌಡರು ಹಾಸನದಲ್ಲಿ ಪೂಜೆ ಸಲ್ಲಿಸಿದ್ದಾರೆ, ಹೋರಾಟ ಮಾಡಲು ನಮಗೆ ಸೂಚಿಸಿದ್ದಾರೆ. ಆದರೆ, ನೀರು ಹರಿದು ಹೋಗುತ್ತಿದ್ದರೂ ರಾಜ್ಯ ಸರ್ಕಾರ ನಿದ್ರಿಸುತ್ತಿದೆ. ಬರದ ಮುನ್ಸೂಚನೆ ಇದ್ದರೂ ನೀವೇಕೆ ಪ್ರಾಧಿಕಾರಕ್ಕೆ ಮೊದಲೇ ಅರ್ಜಿ ಹಾಕಲಿಲ್ಲ, ನೀರು ನಿಲ್ಲಿಸೋಕೆ ನಿಮಗೆ ಧೈರ್ಯವಿಲ್ಲವೇ? ಜೈಲಿಗೆ ಹೋದರೂ ಪರವಾಗಿಲ್ಲ ನೀರು ನಿಲ್ಲಿಸಿ ರೈತರ ಪರವಾಗಿ ನಿಲ್ಲಿ' ಎಂದು ಶಾಸಕ ಜಿ.ಟಿ.ದೇವೇಗೌಡ ಹೇಳಿದರು.



ಎಎಪಿ ರಾಜ್ಯ ಘಟಕದ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು, ಶಾಸಕ ದರ್ಶನ್ ಪುಟ್ಟಣ್ಣಯ್ಯ ಕಾವೇರಿ ನದಿಗೆ ಇಳಿದು ಪ್ರತಿಭಟನೆ ನಡೆಸಿದರು

ಎಎಪಿ ಬೆಂಬಲ: ನಗರದ ಸರ್‌.ಎಂ.ವಿ. ಪ್ರತಿಮೆ ಎದುರು ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ನಡೆಸುತ್ತಿರುವ ಹೋರಾಟಕ್ಕೆ ಎಎಪಿ ರಾಜ್ಯ ಘಟಕದ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು ಹಾಗೂ ಪಕ್ಷದ ಕಾರ್ಯಕರ್ತರು ಬೆಂಬಲ ನೀಡಿದರು.

ಚಪ್ಪಡಿ ಹೊತ್ತು ಮೆರವಣಿಗೆ: ಭೂಮಿತಾಯಿ ಹೋರಾಟ ಸಮಿತಿ ಕಾರ್ಯಕರ್ತರು ಶ್ರೀರಂಗಪಟ್ಟಣದಲ್ಲಿ ಕುವೆಂಪು ವೃತ್ತದಿಂದ ಮಿನಿ ವಿಧಾನಸೌಧದವರೆಗೆ ತಲೆ ಮೇಲೆ ಚಪ್ಪಡಿ ಹೊತ್ತು ಮೆರವಣಿಗೆ ನಡೆಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರದ ವಿರುದ್ಧ ಘೋಷಣೆ ಕೂಗಿದರು. 'ರೈತರ ತಲೆ ಮೇಲೆ ಸರ್ಕಾರ ಚಪ್ಪಡಿ ಎತ್ತಿ ಹಾಕಿತಲ್ಲೋ' ಎಂದು ಬಾಯಿ ಬಡಿದುಕೊಂಡು ಆಕ್ರೋಶ ವ್ಯಕ್ತಪಡಿಸಿದರು.

ಮದ್ದೂರು, ಮಳವಳ್ಳಿ, ಪಾಂಡವಪುರದಲ್ಲೂ ಹೋರಾಟಗಳು ನಡೆದವು.

'ನಟ–ನಟಿಯರು ಹೋರಾಟಕ್ಕೆ ಬರಲಿ'

'ಕನ್ನಡ ಚಿತ್ರರಂಗದವರೂ ಕಾವೇರಿ ಹೋರಾಟದಲ್ಲಿ ಪಾಲ್ಗೊಳ್ಳಬೇಕು. ನಟ–ನಟಿಯರು ಕೂಡ ರೈತರ ಸಮಸ್ಯೆಗಳಿಗೆ ಸ್ಪಂದಿಸಬೇಕು. ಈ ವಿಚಾರದಲ್ಲಿ ಸಿನಿಮಾ ರಂಗ ಧ್ವನಿ ಎತ್ತದೆ ಇದ್ದರೆ ತಪ್ಪಾಗುತ್ತದೆ. ನೆಲ–ಜಲ–ಭಾಷೆಗೆ ಧಕ್ಕೆಯಾದಾಗ ಅವರು ಹೋರಾಟ ನಡೆಸಲೇಬೇಕು' ಎಂದು 'ಮುಖ್ಯಮಂತ್ರಿ' ಚಂದ್ರು ಹೇಳಿದರು.

'ಸಿನಿಮಾ ರಂಗದಿಂದ ಬಂದ ಸುಮಲತಾ ಅವರೇ ಮಂಡ್ಯದ ಸಂಸದೆ ಆಗಿದ್ದಾರೆ. ಅವರು ಹೋರಾಟಕ್ಕೆ ಸ್ಪಂದಿಸುತ್ತಿಲ್ಲ ಎಂದು ರೈತ ಮುಖಂಡರು ಆರೋಪಿಸಿದ್ದಾರೆ. ಅವರು ಅಧಿಕಾರಕ್ಕಾಗಿ ಹಲವು ಪಕ್ಷಗಳ ಜೊತೆ ಗುರುತಿಸಿಕೊಂಡು ಊಸರವಳ್ಳಿಯಂತೆ ನಾಟಕವಾಡುತ್ತಿದ್ದಾರೆ. ಕಾವೇರಿಗಾಗಿ ಅಂಬರೀಷ್ ರಾಜೀನಾಮೆ ನೀಡಿದ್ದರು, ಇವರಿಗೆ ಏನಾಗಿದೆ? ಅವರು ಮಂಡ್ಯಕ್ಕೆ ಬಂದು ಕಾವೇರಿ ಹೋರಾಟದಲ್ಲಿ ಪಾಲ್ಗೊಳ್ಳಬೇಕು' ಎಂದು ಅವರು ಆಗ್ರಹಿಸಿದರು.

'ವಿಧಾನಸೌಧಕ್ಕೆ ಬೆಂಕಿ ಚೆಂಡು ಎಸೆಯುತ್ತೇವೆ'

'ರಾತ್ರಿ 9ರ ನಂತರ ಕದ್ದು ನೀರು ಬಿಡುತ್ತಿರುವ ನಿಮ್ಮದು ಕಳ್ಳರ ಸರ್ಕಾರ. ಮಂಡ್ಯ ಜಿಲ್ಲೆ ಬೆಂಕಿಯ ಚೆಂಡು. ಅದನ್ನು ವಿಧಾನಸೌಧಕ್ಕೆ ತಂದು ಎಸೆಯುತ್ತೇವೆ. ನೀವೆಲ್ಲರೂ ಉರಿದು ಹೋಗುತ್ತೀರಿ' ಎಂದು ಜೆಡಿಎಸ್ ಮುಖಂಡ ಕೆ.ಅನ್ನದಾನಿ ಆಕ್ರೋಶ ವ್ಯಕ್ತಪಡಿಸಿದರು.

31 ಶಿಕ್ಷಕರಿಗೆ ರಾಜ್ಯಮಟ್ಟದ ಪ್ರಶಸ್ತಿ

ಬೆಂಗಳೂರು: ಪ್ರಾಥಮಿಕ ಶಾಲೆಯ 20, ಪ್ರೌಢಶಾಲೆಯ 11 ಶಿಕ್ಷಕರನ್ನು 2023–24ನೇ ಸಾಲಿನ ರಾಜ್ಯಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಯು ತಲಾ ₹25 ಸಾವಿರ ನಗದು ಪುರಸ್ಕಾರ ಒಳಗೊಂಡಿದೆ. ಆಯ್ಕೆಯಾದ ಶಿಕ್ಷಕಿಯರಿಗೆ 'ಸಾವಿತ್ರಿಬಾಯಿ ಫುಲೆ' ಹೆಸರಲ್ಲಿ ಶಿಕ್ಷಕರಿಗೆ 'ಅತ್ಯುತ್ತಮ ಶಿಕ್ಷಕ' ಎಂದು ಸೆ.5ರಂದು ನಡೆಯುವ ರಾಜ್ಯಮಟ್ಟದ ಶಿಕ್ಷಕರ ದಿನಾಚರಣೆಯಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.

ಪ್ರಾಥಮಿಕ ಶಾಲಾ ವಿಭಾಗ	
ಹೆಸರು	ಶಾಲೆ
ಫೌಜಿಯಾ ಸರವತ್	ಮಾದಾಪುರ, ಹೊಸನಗರ, ಶಿವಮೊಗ್ಗ
ಮಂಜುನಾಥ	ಮಾರಪಲ್ಲಿ, ಚಿಂತಾಮಣಿ, ಚಿಕ್ಕಬಳ್ಳಾಪುರ
ಬಿ.ಕೆ.ಸತೀಶ್	ಬಸವನಕೋಟೆ, ಜಗಳೂರು, ದಾವಣಗೆರೆ
ಎಂ.ಜಿ.ಸುಜಾತಾ	ಶಿವಗಂಗೆ, ನೆಲಮಂಗಲ, ಬೆಂಗಳೂರು ಗ್ರಾ
ಮಹಮ್ಮದ ಹಾಶೀಮಸಾಬ ಹುಸೇನಸಾಬ ಲಷ್ಕರಿ	ನಿಡಗುಂಡಿ ಎಲ್‌.ಟಿ., ಬಸವನಬಾಗೇವಾಡಿ, ವಿಜಯಪುರ
ಪ್ರತಾಪ ಶಂಕರ ಜೋಡಟ್ಟ	ಕಪ್ಪಲಗುಡ್ಡಿ, ಟಿಒಟ ರಾಯಭಾಗ, ಚಿಕ್ಕೋಡಿ
ಮೊಹಮದ್ ಹುಸೇನ ಅಬ್ದುಲ್ ಖಾದರ ಸೌದಾಗರ	ನವನಗರ, ಬಾಗಲಕೋಟೆ
ಮಾರ್ತಾಂಡಪ್ಪ ತೆಳಗೇರಿ	ಕಪ್ಪರಗಾಂವ, ಹುಮ್ನಾಬಾದ್, ಬೀದರ್
ಅಕ್ಷತಾ ಅನಿಲ ಬಸಗೋಡ	ಅಣಸಿ, ಜೋಯಿಡಾ, ಶಿರಸಿ
ಶೇಕಪ್ಪ ಭೀಮಪ್ಪ ಕೇಸರಿ	ಮುರಕಟ್ಟಿ, ಧಾರವಾಡ
ಭಾಸ್ಕರ	ಅಡಗನಹಳ್ಳಿ, ಕೃಷ್ಣರಾಜನಗರ, ಮೈಸೂರು
ಎ.ಬಿ.ಮೂರ್ತಿ	ರುದ್ರಪಟ್ಟಣ, ಅರಕಲಗೂಡು, ಹಾಸನ
ಎಂ.ಆರ್.ವನಜಾಕ್ಷಮ್ಮ	ಹರಗಿನಡೋಣಿ, ಬಳ್ಳಾರಿ ಪಶ್ಚಿಮ
ಸೈಯದಾ ಸಾಜೀದಾ ಫಾತೀಮಾ	ಯರಮರಸ್ ಕ್ಯಾಂಪ್, ರಾಯಚೂರು
ಜಿ.ಪ್ರಶಾಂತ್	ಎಂ.ಹೊಸೂರು, ನಾಗಮಂಗಲ, ಮಂಡ್ಯ
ವಿ.ವೀರಪ್ಪ	ಗೋಪಿನಾಥಂ, ಹನೂರು, ಚಾಮರಾಜನಗರ
ಎಂ.ಜಿ.ಗಂಗಾಧರ	ಗುಬ್ಬಿ ಹೊಸಳ್ಳಿ, ಗುಬ್ಬಿ, ತುಮಕೂರು
ಬಿ.ಟಿ.ಪೂರ್ಣೇಶ್	ಬೋಯಿಕೇರಿ, ಮಡಿಕೇರಿ, ಕೊಡಗು
ಮಂಜುನಾಥ ಹರಿಕಂತ್ರ	ಬೀರಂಕಿ, ಹೊನ್ನಾವರ, ಉತ್ತರ ಕನ್ನಡ
ಸೋಮಪ್ಪ ಫಕೀರಪ್ಪ ಕಠಾರಿ	ದ್ಯಾಮನಕೊಪ್ಪ, ಹಾನಗಲ್, ಹಾವೇರಿ
ಪ್ರೌಢಶಾಲಾ ವಿಭಾಗ	
ಪ್ರಕಾಶ ನಾಯ್ಕ	ಚಿತ್ತಾರ-ಮಂಕಿ, ಹೊನ್ನಾವರ, ಉತ್ತರ ಕನ್ನಡ
ಸುರೇಶ ಬಿ.ಮುಗಳಿ	ವೀರಾಪುರ, ಧಾರವಾಡ
ಕೆ.ಟಿ.ನಾಗಭೂಷಣ	ರೇಖಲಗೆರೆ ಲಂಬಾಣಿಹಟ್ಟಿ, ಚಳ್ಳಕೆರೆ, ಚಿತ್ರದುರ್ಗ
ಜಿ.ಎಚ್.ರೇಣುಕಾರಾಜ್	ಅರಸೀಕೆರೆ, ಪಾವಗಡ, ಮಧುಗಿರಿ
ಜಿ.ಸಿ.ರಜನಿ	ವಿ.ಸಿಫಾರಂ, ಮಂಡ್ಯ
ಬಸಪ್ಪ ವಾಲಿಕಾರ	ಕ್ಯಾದಿಗುಪ್ಪ, ಕುಷ್ಟಗಿ, ಕೊಪ್ಪಳ
ಪಿ.ಜಿ.ಇಂದಿರಾ	ಕೆಪಿಎಸ್ ಹೆಬ್ಬಾಳ, ಬೆಂಗಳೂರು ಉತ್ತರ
ವಿಜಯ ಆನಂದರಾವ್	ತ್ಯಾಗರ್ತಿ, ಸಾಗರ, ಶಿವಮೊಗ್ಗ
ಎಸ್.ಹರ್ಷ	ಹೆಡತಲೆ, ನಂಜನಗೂಡು, ಮೈಸೂರು
ನರೇಂದ್ರ	ಕೋಟ, ಬ್ರಹ್ಮಾವರ, ಉಡುಪಿ
ಶ್ರೀಶೈಲ ಸ.ಗಸ್ತಿ	ಜಾಧವ ಆನಂದ, ಅಥಣಿ, ಚಿಕ್ಕೋಡಿ

75 ಶಿಕ್ಷಕರಿಗೆ ರಾಷ್ಟ್ರ ಪ್ರಶಸ್ತಿ

ನವದೆಹಲಿ (ಪಿಟಿಐ): ದೇಶದ ವಿವಿಧ ಭಾಗಗಳಿಂದ ಆಯ್ಕೆಯಾಗಿರುವ ಒಟ್ಟು 75 ಶಿಕ್ಷಕರಿಗೆ ಸೆ. 5ರಂದು ಶಿಕ್ಷಕರ ದಿನ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು 'ಶಿಕ್ಷಕರ ರಾಷ್ಟ್ರಪ್ರಶಸ್ತಿ' ಪ್ರದಾನ ಮಾಡಲಿದ್ದಾರೆ ಎಂದು ಶಿಕ್ಷಣ ಸಚಿವಾಲಯ ತಿಳಿಸಿದೆ.

ಪ್ರಶಸ್ತಿ ಪುರಸ್ಕೃತರಲ್ಲಿ 50 ಶಾಲಾ ಶಿಕ್ಷಕರು, ಉನ್ನತ ಶಿಕ್ಷಣ ಸಂಸ್ಥೆಯ 13 ಶಿಕ್ಷಕರು ಹಾಗೂ ಕೌಶಲ ಅಭಿವೃದ್ಧಿ ಮತ್ತು ಉದ್ಯಮಶೀಲತಾ ಸಚಿವಾಲಯದ 12 ಶಿಕ್ಷಕರು ಇದ್ದಾರೆ.

'ಪ್ರತಿ ಪ್ರಶಸ್ತಿಯು ತಲಾ ₹ 50 ಸಾವಿರ ನಗದು, ಪ್ರಮಾಣಪತ್ರ ಹಾಗೂ ಬೆಳ್ಳಿ ಪದಕವನ್ನು ಒಳಗೊಂಡಿದೆ. ಪ್ರಶಸ್ತಿ ಪುರಸ್ಕೃತ ಶಿಕ್ಷಕರಿಗೆ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಸಂವಾದ ನಡೆಸುವ ಅವಕಾಶವೂ ದೊರೆಯಲಿದೆ' ಎಂದು ಸಚಿವಾಲಯವು ಮಾಹಿತಿ ನೀಡಿದೆ.

ಕಠಿಣ ಹಾಗೂ ಪಾರದರ್ಶಕ ಆಯ್ಕೆ ಪ್ರಕ್ರಿಯೆಯ ಮೂಲಕ ದೇಶದ ಅತ್ಯುತ್ತಮ ಶಿಕ್ಷಕರಿಗೆ ರಾಷ್ಟ್ರೀಯ ಪ್ರಶಸ್ತಿಗಳನ್ನು ನೀಡಲಾಗುತ್ತದೆ. ಈ ವರ್ಷದಿಂದ, ಉನ್ನತ ಶಿಕ್ಷಣ ಇಲಾಖೆ ಮತ್ತು ಕೌಶಲ ಅಭಿವೃದ್ಧಿ ಹಾಗೂ ಉದ್ಯಮಶೀಲತಾ ಸಚಿವಾಲಯದ ಶಿಕ್ಷಕರನ್ನು ಸೇರಿಸಿ ರಾಷ್ಟ್ರೀಯ ಶಿಕ್ಷಕರ ಪ್ರಶಸ್ತಿಯ ವ್ಯಾಪ್ತಿಯನ್ನು ವಿಸ್ತರಿಸಲಾಗಿದೆ.

ಪ್ರಶಸ್ತಿಗೆ ಆಯ್ಕೆಯಾದ ಶಿಕ್ಷಕರಲ್ಲಿ ಐವರು ಗುಜರಾತ್‌ನವರು, ನಾಲ್ವರು ಮಹಾರಾಷ್ಟ್ರದವರು ಇದ್ದಾರೆ.

ಕರ್ನಾಟಕದ ನಾಲ್ವರು ಶಿಕ್ಷಕರಿಗೆ ರಾಷ್ಟ್ರಪ್ರಶಸ್ತಿ: ರಾಜ್ಯದ ನಾರಾಯಣ ಪರಮೇಶ್ವರ ಭಾಗವತ್, ಸಪ್ನಾ ಶ್ರೀಶೈಲ ಅನಿಗೋಳ, ಎಸ್.ಆರ್. ಮಹಾದೇವ ಪ್ರಸನ್ನ, ದಿನೇಶ್ ಬಾಬು ಜೆ. ಅವರು ಈ ಬಾರಿ ಶಿಕ್ಷಕರ ರಾಷ್ಟ್ರಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಉತ್ತರಾರಾಧನೆ: ಮಹಾ ರಥೋತ್ಸವ

ಪ್ರಜಾವಾಣಿ ವಾರ್ತೆ

ರಾಯಚೂರು: ಮಂತ್ರಾಲಯದ ರಾಯರ ಮಠದಲ್ಲಿ ಗುರು ಸಾರ್ವಭೌಮ ರಾಘವೇಂದ್ರ ಸ್ವಾಮಿಗಳ 352ನೇ ಆರಾಧಾನಾ ಮಹೋತ್ಸವದ ಪ್ರಯುಕ್ತ ಉತ್ತರಾರಾಧನೆ ಸಂಭ್ರಮದಿಂದ ಶನಿವಾರ ನಡೆಯಿತು.

ಗುರುರಾಯರ ಉತ್ಸವ ಮೂರ್ತಿಯನ್ನು ಮಠದ ಆವರಣದಿಂದ ಕಲಾ ತಂಡಗಳ ಮೆರವಣಿಗೆ ಮೂಲಕ ಗುರು ಸಾರ್ವಭೌಮ ವಿದ್ಯಾಪೀಠದ ಆವರಣಕ್ಕೆ ತರಲಾಯಿತು. ವಿದ್ಯಾಪೀಠದ ವಿದ್ಯಾರ್ಥಿಗಳು ರಾಘವೇಂದ್ರ ಅಷ್ಟೋತ್ತರ ಪಠಣ ಮಾಡಿದ ಬಳಿಕ ಮಠಕ್ಕೆ ತಂದು ಮೂಲ ಬೃಂದಾವನ ಪೂಜೆ ಸಲ್ಲಿಸಲಾಯಿತು. ವಸಂತೋತ್ಸವದ ನಂತರ ಮಹಾರಥೋತ್ಸವ ನಡೆಯಿತು.



ಮಂತ್ರಾಲಯದ ರಾಜಬೀದಿಯಲ್ಲಿ ನಡೆದ ಮಹಾರಥೋತ್ಸವದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು

ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥರು ಮಾತನಾಡಿ, 'ಆರಾಧನಾ ಮಹೋತ್ಸವದ ಉತ್ತರಾರಾಧನೆ ಸಮಯದಲ್ಲಿ ಭಕ್ತರ ಸೇವೆ ಮೆಚ್ಚಿ ಗುರುರಾಯರು ಆನಂದದಿಂದ ಮಹಾರಥದಲ್ಲಿ ವಿರಾಜಮಾನರಾಗಿ ಹರಸಿದ್ದಾರೆ' ಎಂದರು.

'ಇಂದು ದೇಶ ಜಗದ್ಗುರು ಆಗುವ ನಿಟ್ಟಿನಲ್ಲಿ ಮುನ್ನಡೆಯುತ್ತಿದೆ. ಚಂದ್ರಯಾನ ಯಶಸ್ವಿಯಾದ ಬಳಿಕ ಇಂದು ಸೂರ್ಯಯಾನ ಆರಂಭಿಸಿದೆ. ಇದರಲ್ಲೂ ಯಶಸ್ವಿ ದೊರೆಯಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇವೆ' ಎಂದು ಹೇಳಿದರು.

ನಂತರ ಹೆಲಿಕಾಪ್ಟರ್ ಮೂಲಕ ರಥಕ್ಕೆ ಶ್ರೀಗಳು ಪುಷ್ಪವೃಷ್ಟಿ ಮಾಡಿದರು.


ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ: ದೇವೇಗೌಡ

ಪ್ರಜಾವಾಣಿ ವಾರ್ತೆ

ಹಾಸನ: 'ಸಂಸದ ಪ್ರಜ್ವಲ್ ರೇವಣ್ಣ ಅವರ ಸದಸ್ಯತ್ವ ಅನರ್ಹಗೊಳಿಸಿರುವ ನ್ಯಾಯಾಲಯದ ತೀರ್ಪಿನ ಪ್ರತಿ ಓದಿದ ಬಳಿಕವಷ್ಟೇ ಆ ಬಗ್ಗೆ ಪ್ರತಿಕ್ರಿಯೆ ನೀಡುತ್ತೇನೆ' ಎಂದು ಜೆಡಿಎಸ್ ವರಿಷ್ಠರೂ ಆಗಿರುವ ರಾಜ್ಯಸಭಾ ಸದಸ್ಯ ಎಚ್‌.ಡಿ. ದೇವೇಗೌಡ ಹೇಳಿದರು.

ಹೊಳೆನರಸೀಪುರದ ಮಾವಿನಕೆರೆ ಬೆಟ್ಟದ ರಂಗನಾಥ ಸ್ವಾಮಿ ದೇವಾಲಯದಲ್ಲಿ ಶನಿವಾರ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ತೀರ್ಪಿನ ಪ್ರತಿ ನನಗೆ ಇನ್ನೂ ಸಿಕ್ಕಿಲ್ಲ. ಅದರ ಬಗ್ಗೆ ಪ್ರತಿಕ್ರಿಯಿಸಲು ಹೋಗುವುದಿಲ್ಲ. ಸದಸ್ಯತ್ವ ಅಸಿಂಧು ಎಂದು ತೀರ್ಪು ನೀಡಿದ್ದಾರೆ. ಮಾಜಿ ಪ್ರಧಾನಿಯಾಗಿ ಆದೇಶದ ಪ್ರತಿಯನ್ನು ಸಂಪೂರ್ಣವಾಗಿ ಓದದೇ ಪ್ರತಿಕ್ರಿಯಿಸುವುದು ಯೋಗ್ಯವೂ ಅಲ್ಲ, ಸಮಂಜಸವೂ ಅಲ್ಲ' ಎಂದರು.

'ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುವುದು ಸ್ವಾಭಾವಿಕವಾಗಿ ನಡೆಯುತ್ತದೆ. ನಾನು ಇಲ್ಲಿ ಪೂಜೆ ಮಾಡಲೆಂದು ಬಂದಿದ್ದೇನೆ. ವಿಶೇಷ ಪೂಜೆಯಲ್ಲಿ ಪ್ರಜ್ವಲ್ ಭಾಗವಹಿಸಿ ನಂತರ ಬೆಂಗಳೂರಿಗೆ ತೆರಳಿದ್ದಾರೆ' ಎಂದರು.



ಎಚ್‌.ಡಿ.ದೇವೇಗೌಡ ಅವರು ಪತ್ನಿ ಚೆನ್ನಮ್ಮ ಅವರೊಂದಿಗೆ ವಿಷ್ಣು ಸಹಸ್ರನಾಮ ಪಠಿಸಿದರು

ಶಿವಕುಮಾರ್ ವಿರುದ್ಧ ಅಸಮಾಧಾನ: ಕಾವೇರಿ ನೀರಿನ ವಿಚಾರದಲ್ಲಿ ಜಲಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ ದೇವೇಗೌಡರು, 'ನೀರಾವರಿಗೆ ಸಂಬಂಧಪಟ್ಟ ಮಂತ್ರಿಗಳು ಒಂದೊಂದು ಸಾರಿ ಒಂದೊಂದು ಹೇಳಿಕೆ ಕೊಡುತ್ತಿದ್ದಾರೆ. ಇದು ಬಹಳ ಕಷ್ಟದ ಸನ್ನಿವೇಶವಾಗಿದ್ದು, ಮಂತ್ರಿಗಳೇ ಹೀಗೆ ಹೇಳಿದರೆ ಏನು ಹೇಳುವುದು?' ಎಂದು ಕೇಳಿದರು.

> **ಬಿಜೆಪಿ- ಕಾಂಗ್ರೆಸ್ ಪಕ್ಷಗಳು ರಾಜ್ಯದ ಹಿತವನ್ನು ಕಾಪಾಡಬೇಕು. ಪ್ರಾದೇಶಿಕ ಪಕ್ಷಗಳು ತಮಿಳುನಾಡಿನಲ್ಲಿ ಒಗ್ಗಟ್ಟಾಗಿ ಕೆಲಸ ಮಾಡುತ್ತಿದ್ದು, ಅವರಿಂದ ನಾವು ಸಾಕಷ್ಟು ಕಲಿಯಬೇಕಿದೆ**
> **ಎಚ್‌.ಡಿ. ದೇವೇಗೌಡ,** ಜೆಡಿಎಸ್ ವರಿಷ್ಠ

'ನೀರಾವರಿ ಸಚಿವರು ಯಾವ ಸಂದರ್ಭದಲ್ಲಿ ಏನೇನು ಮಾತನಾಡಿದ್ದಾರೆ? ಅದರ ದುಷ್ಪರಿಣಾಮ, ಸತ್ಪರಿಣಾಮ ಏನು ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ' ಎಂದರು. 'ನನ್ನ ಬಳಿ ಇಬ್ಬರು ಅಧಿಕಾರಿಗಳನ್ನು ಕಳಿಸಿದ್ದರು. ನನ್ನ ಆರೋಗ್ಯ ಸರಿಯಿಲ್ಲ. ಸಹಕಾರ ಕೊಡುತ್ತೇನೆ. ಈ ರೀತಿಯಾಗಿ ಮುಂದೆ ಹೋಗೋಣ ಎಂದು ಹೇಳಿ ಕಳುಹಿಸಿದ್ದೇನೆ' ಎಂದರು.

'ಅನರ್ಹತೆ ವಿಚಾರವಾಗಿ ಕಾನೂನು ಹೋರಾಟ ಮಾಡಲಿದ್ದೇವೆ. ಸುಪ್ರೀಂ ಕೋರ್ಟ್‌ನಲ್ಲಿ ಪ್ರಜ್ವಲ್ ಪರವಾಗಿ ತೀರ್ಪು ಬರಲಿದೆ. ಅವರು ಸಂಸದರಾಗಿಯೇ ಉಳಿದುಕೊಳ್ಳಲಿದ್ದಾರೆ' ಎಂದು ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ ತಿಳಿಸಿದರು.

ಆದೇಶ ಮರುಪರಿಶೀಲನೆಗೆ ಪ್ರಾಧಿಕಾರಕ್ಕೆ ರಾಜ್ಯದ ಪತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ತಮಿಳುನಾಡಿಗೆ ಪ್ರತಿನಿತ್ಯ 5 ಸಾವಿರ ಕ್ಯುಸೆಕ್ ಕಾವೇರಿ ನೀರನ್ನು ಬಿಡುಗಡೆ ಮಾಡಬೇಕು ಎಂಬುದಾಗಿ ಹೊರಡಿಸಿರುವ ಆದೇಶವನ್ನು ಮರು ಪರಿಶೀಲಿಸಬೇಕೆಂದು ಒತ್ತಾಯಿಸಿ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ (ಸಿಡಬ್ಲ್ಯುಎಂಎ) ಕರ್ನಾಟಕ ಸರ್ಕಾರ ಶನಿವಾರ ಪತ್ರ ಬರೆದಿದೆ.

ಆಗಸ್ಟ್ 29ರಿಂದ ಸೆಪ್ಟೆಂಬರ್ 12ರ ವರೆಗೆ ಪ್ರತಿದಿನ 5 ಸಾವಿರ ಕ್ಯುಸೆಕ್ ನೀರನ್ನು ತಮಿಳುನಾಡಿಗೆ ಹರಿಸಬೇಕು ಎಂದು ಪ್ರಾಧಿಕಾರವು ಆಗಸ್ಟ್ 29ರಂದು ಆದೇಶ ಹೊರಡಿಸಿತ್ತು. ಪ್ರಾಧಿಕಾರದ ಅಧ್ಯಕ್ಷ ಸೌಮಿತ್ರ ಕುಮಾರ್ ಹಲ್ದಾರ್ ಅವರಿಗೆ ಪತ್ರ ಬರೆದಿರುವ ಜಲಸಂಪನ್ಮೂಲ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್, 'ಕರ್ನಾಟಕದ ಸಂಕಷ್ಟ ಪರಿಸ್ಥಿತಿಯನ್ನು ಪರಿಗಣನೆಗೆ ತೆಗೆದುಕೊಳ್ಳದೆ ಪ್ರಾಧಿಕಾರ ಆದೇಶ ಹೊರಡಿಸಿದೆ. ಹೀಗಾಗಿ, ನಿರ್ಧಾರವನ್ನು ಮರು ಪರಿಶೀಲಿಸಬೇಕು. ಹರಿಸಬೇಕಾದ ನೀರಿನ ಪ್ರಮಾಣವನ್ನು 5 ಸಾವಿರ ಕ್ಯುಸೆಕ್‌ನಿಂದ 3 ಸಾವಿರ ಕ್ಯುಸೆಕ್ಗೆ ಇಳಿಸಬೇಕು' ಎಂದು ಮನವಿ ಮಾಡಿದ್ದಾರೆ.

ಮುಂಗಾರು ಮಳೆ ಹಾಗೂ ಅಂತರ್ಜಲ ಹೆಚ್ಚಳದಿಂದಾಗಿ ಮೆಟ್ಟೂರು ಜಲಾಶಯದಲ್ಲಿ ಹೊರ ಹರಿವು ಪ್ರಮಾಣ ಆಗಸ್ಟ್ 29ರಿಂದ 10 ಸಾವಿರ ಕ್ಯುಸೆಕ್‌ನಿಂದ 8 ಸಾವಿರ ಕ್ಯುಸೆಕ್‌ಗೆ ಇಳಿದಿದೆ. ಇದನ್ನು ಪರಿಗಣಿಸಿ ನೀರು ಹರಿಸಬೇಕಾದ ಪ್ರಮಾಣವನ್ನು ಕಡಿಮೆ ಮಾಡಬೇಕು ಎಂದು ಅವರು ಒತ್ತಾಯಿಸಿದ್ದಾರೆ.

3 ದಿನದಲ್ಲಿ ನಾಲ್ವರು ರೈತರು ಆತ್ಮಹತ್ಯೆ

ಹುಬ್ಬಳ್ಳಿ: ಸಾಲ ಬಾಧೆ ಮತ್ತು ಬೆಳೆ ನಷ್ಟದಿಂದ ಬೇಸತ್ತು ಗುರುವಾರದಿಂದ ಶನಿವಾರದ ಅವಧಿಯಲ್ಲಿ ಹಾವೇರಿ ಮತ್ತು ಗದಗ ಜಿಲ್ಲೆಯಲ್ಲಿ ತಲಾ ಇಬ್ಬರು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಹಾವೇರಿ ಜಿಲ್ಲೆಯ ಹೊಸೂರು ಸಮೀಪದ ಯತ್ತಿನಹಳ್ಳಿ ಗ್ರಾಮದಲ್ಲಿ ಹೆಗ್ಗಪ್ಪ ಲಮಾಣಿ (60) ಮತ್ತು ಸವಣೂರು ತಾಲ್ಲೂಕಿನ ಚವಡಾಳ ಗ್ರಾಮದಲ್ಲಿ ಗದಿಗೆಪ್ಪ ಚನ್ನಬಸಪ್ಪ ಗೊಲ್ಲರ (43) ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ಡಂಬಳ ಹೋಬಳಿಯ ಮೇವುಂಡಿ ಗ್ರಾಮದ ರೈತ ಕಾಶಿಂಸಾಬ ಪೀರಸಾಬ ನದಾಫ್ (ಪಿಂಜಾರ) (37) ಕಾಲುವೆಗೆ ಹಾರಿದರೆ, ಮುಂಡರಗಿ ತಾಲ್ಲೂಕಿನ ಬರದೂರು ಗ್ರಾಮದ ಮಂಜಪ್ಪ ಈಶ್ವರಪ್ಪ ಹೆಬಸೂರು (47) ನೇಣು ಹಾಕಿಕೊಂಡು ಗುರುವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಹತ್ತು ಐಪಿಎಸ್ ಅಧಿಕಾರಿಗಳ ವರ್ಗ

ಬೆಂಗಳೂರು: 2018, 2019 ಮತ್ತು 2020ರ ಬ್ಯಾಚ್‌ನ ಹತ್ತು ಐಪಿಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಶನಿವಾರ ಆದೇಶ ಹೊರಡಿಸಿದೆ.

ವರ್ಗಾವಣೆ ವಿವರ: ಪೃಥ್ವಿಕ್ ಶಂಕರ್– ಎಸ್‌ಪಿ, ಸಿಐಡಿ; ಕನಿಕಾ ಸಿಕ್ರಿವಾಲ್– ಎಸ್‌ಪಿ, ಸಿಐಡಿ; ಗುಂಜನ್ ಆರ್ಯ– ಎಸ್‌ಪಿ, ಸಿಐಡಿ; ಕುಶಾಲ್ ಚೌಕ್ಸೆ– ಎಸ್‌ಪಿ, ಗುಪ್ತದಳ; ಸಿದ್ದಾರ್ಥ್ ಗೋಯಲ್– ಡಿಸಿಪಿ, ಕಾನೂನು ಸುವ್ಯವಸ್ಥೆ, ಮಂಗಳೂರು ನಗರ; ರೋಹನ್ ಜಗದೀಶ್– ಡಿಸಿಪಿ, ಕಾನೂನು ಸುವ್ಯವಸ್ಥೆ, ಬೆಳಗಾವಿ ನಗರ; ಶಿವಾಂಶು ರಜಪೂತ್– ಎಸ್‌ಪಿ, ಭಯೋತ್ಪಾದನಾ ನಿಗ್ರಹ ದಳ; ಜಿತೇಂದ್ರ ಕುಮಾರ್ ದಯಾಮ– ಎಸ್‌ಪಿ, ನಕ್ಸಲ್ ನಿಗ್ರಹ ದಳ, ಉಡುಪಿ; ದೀಪನ್ ಎಂ.ಎನ್.– ಕಮಾಂಡೆಂಟ್, ಒಂದನೇ ಬೆಟಾಲಿಯನ್, ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆ, ಬೆಂಗಳೂರು ಮತ್ತು ಮಿಥುನ್ ಎಚ್‌.ಎನ್.– ಎಸ್‌ಪಿ, ನಿಸ್ತಂತು ಘಟಕ, ಬೆಂಗಳೂರು.

ಸಂಕ್ಷಿಪ್ತ ಸುದ್ದಿ

ಯತ್ನಾಳ ವಿರುದ್ಧ ಸಂಗಣ್ಣ ಗರಂ

ಕೊಪ್ಪಳ: 'ಲೋಕಸಭಾ ಚುನಾವಣೆಗೆ ಸಾಕಷ್ಟು ಸಮಯವಿದ್ದರೂ ಶಾಸಕ ಬಸನಗೌಡ ಪಾಟೀಲ ಯತ್ನಾಳ ಎಂಟು ಜನ ಸಂಸದರಿಗೆ ಟಿಕೆಟ್ ಇಲ್ಲವೆಂದು ಹೇಳುತ್ತಿದ್ದಾರೆ. ಈ ರೀತಿಯ ಹೇಳಿಕೆ ನೀಡುವುದು ಸರಿಯಲ್ಲ. ಪಕ್ಷ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಸಂಸದ ಸಂಗಣ್ಣ ಕರಡಿ ಆಗ್ರಹಿಸಿದರು.

'ಯತ್ನಾಳ ಅಥವಾ ಇನ್ಯಾರಾದರೂ ಆಗಲಿ, ಪಕ್ಷದ ವಿರುದ್ಧ ಮಾತನಾಡಬಾರದು. ಟಿಕೆಟ್ ವಿಷಯವಾಗಿ ಯಾವುದೇ ಚರ್ಚೆ ನಡೆದಿಲ್ಲ. ಆದರೂ ಊಹಾಪೋಹ ಹರಿದಾಡುತ್ತಿದೆ. ಪಕ್ಷ ವಿರೋಧಿಯಾಗಿ ಮಾತನಾಡುವವರ ಬಗ್ಗೆ ಹೈಕಮಾಂಡ್ ನಿಗಾ ವಹಿಸಬೇಕು' ಎಂದು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದರು.

ಮತ್ತೆ ಆಪರೇಷನ್ ಕಮಲ: ಈಶ್ವರಪ್ಪ

ಶಿವಮೊಗ್ಗ: 'ಕಾಂಗ್ರೆಸ್ ಸರ್ಕಾರವನ್ನು ಉರುಳಿಸುವ ನಿಟ್ಟಿನಲ್ಲಿ ರಾಜ್ಯದಲ್ಲಿ ಮತ್ತೆ ಆಪರೇಷನ್ ಕಮಲ ಆರಂಭವಾಗಲಿದೆ. ಬೇಕಿದ್ದರೆ ಸಚಿವ ಪ್ರಿಯಾಂಕ್ ಖರ್ಗೆ ಕಾದು ನೋಡಲಿ' ಎಂದು ಬಿಜೆಪಿ ಮುಖಂಡ ಕೆ.ಎಸ್.ಈಶ್ವರಪ್ಪ ಹೇಳಿದರು.

'ರಾಜ್ಯದಲ್ಲಿ ಕಾಂಗ್ರೆಸ್ ಹೆಚ್ಚುದಿನ ಅಧಿಕಾರದಲ್ಲಿ ಇರೊಲ್ಲ' ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಕಾಂಗ್ರೆಸ್‌ನವರ ಯೋಗ್ಯತೆಗೆ ಇಲ್ಲಿಯವರೆಗೂ ಬಿಜೆಪಿಯ ಒಬ್ಬ ಶಾಸಕನನ್ನೂ ಕರೆದೊಯ್ಯಲು ಆಗಿಲ್ಲ. ಬಿಜೆಪಿಯಿಂದ ಅಷ್ಟು ಜನ ಬರುತ್ತಾರೆ, ಇಷ್ಟು ಜನ ಬರುತ್ತಾರೆ ಎಂದು ಅಪಪ್ರಚಾರ ಮಾಡುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಕಾಂಗ್ರೆಸ್‌ನವರಿಗೆ ಒಂದು ತಿಂಗಳು ಸಮಯ ಕೊಡುತ್ತೇವೆ. ಬಿಜೆಪಿಯಿಂದ ಒಬ್ಬ ಶಾಸಕನನ್ನು ಕರೆದೊಯ್ಯಲಿ ನೋಡೋಣ' ಎಂದು ಸವಾಲು ಹಾಕಿದರು.

ಕೋತಿಗೆ ಶ್ರದ್ಧಾಂಜಲಿ

ಭರಮಸಾಗರ (ಚಿತ್ರದುರ್ಗ): ಇಲ್ಲಿನ ನಿವಾಸಿಗಳು ಕೋತಿಯೊಂದರ ಶ್ರದ್ಧಾಂಜಲಿ ಕಾರ್ಯಕ್ರಮದ ಪ್ರಯುಕ್ತ ಶನಿವಾರ ಅಂದಾಜು 500 ಮಂದಿಗೆ ಅನ್ನ ಸಂತರ್ಪಣೆ ನಡೆಸಿದ್ದಾರೆ.

ಶ್ವಾನಗಳ ದಾಳಿಯಿಂದ ಗಾಯಗೊಂಡಿದ್ದ ಹೆಣ್ಣು ಕೋತಿ ಗುರುವಾರ ಮೃತಪಟ್ಟಿತ್ತು. ಅದರ ಅಂತ್ಯಕ್ರಿಯೆ ನೆರವೇರಿಸಿದ್ದ ಸ್ಥಳೀಯರು, ಶನಿವಾರ ಮೂರನೇ ದಿನದ ಧಾರ್ಮಿಕ ವಿಧಿ ವಿಧಾನ ಪೂರೈಸಿ ಶ್ರದ್ಧಾಂಜಲಿ ಏರ್ಪಡಿಸಿದ್ದರು.

₹28 ಲಕ್ಷ ಮೌಲ್ಯದ ಮದ್ಯ ವಶ

ಬೆಳಗಾವಿ: ರಾಷ್ಟ್ರೀಯ ಹೆದ್ದಾರಿ ಬಳಿ ಶನಿವಾರ ನಸುಕಿನಲ್ಲಿ ಕಾರ್ಯಾಚರಣೆ ನಡೆಸಿದ ಅಬಕಾರಿ ಅಧಿಕಾರಿಗಳು ಗೋವಾದಿಂದ ಲಾರಿಯಲ್ಲಿ ಅಕ್ರಮವಾಗಿ ಸಾಗಿಸಲಾಗುತ್ತಿದ್ದ ₹ 28 ಲಕ್ಷ ಮೌಲ್ಯದ ಮದ್ಯವನ್ನು ವಶಪಡಿಸಿಕೊಂಡರು.

'ಮದ್ಯ ಸಾಗಿಸುತ್ತಿದ್ದ ₹ 25 ಲಕ್ಷ ಮೌಲ್ಯದ ಲಾರಿಯನ್ನೂ ವಶಪಡಿಸಿಕೊಂಡು, ಲಾರಿಯ ಚಾಲಕ ಉತ್ತರ ಪ್ರದೇಶದ ವಾರಣಾಸಿಯ ವೀರೇಂದ್ರ ಮಿಶ್ರಾ (34) ಅವರನ್ನು ಬಂಧಿಸಲಾಗಿದೆ' ಎಂದು ಬೆಳಗಾವಿ ವಿಭಾಗದ ಅಬಕಾರಿ ಹೆಚ್ಚುವರಿ ಆಯುಕ್ತ ವೈ. ಮಂಜುನಾಥ ತಿಳಿಸಿದರು.

'ಲಾರಿಯಲ್ಲಿ ಮೊದಲ ಎರಡು ಸಾಲುಗಳಲ್ಲಿ ಪ್ಲೈವುಡ್ ಹಲಗೆಗಳು ಸಿಕ್ಕವು. ನಂತರ ಪ್ಲೈವುಡ್ ಹಲಗೆಗಳನ್ನು ತೆಗೆದಾಗ ಮದ್ಯದ ಬಾಟಲಿ ಸಿಕ್ಕವು' ಎಂದರು.



ಬೆಳಗಾವಿಯ ಕೆಎಲ್‌ಇ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರಿಸರ್ಚ್ ಡೀಮ್ಡ್ ಟು ಬಿ ವಿಶ್ವವಿದ್ಯಾಲಯ (ಕೆಎಚ್‌ಇಆರ್) ಹಾಗೂ ಪುಣೆಯ ಬಯೊ ಎರಾ ಲೈಫ್ ಸೈನ್ಸ್‌ಸ್ ಪ್ರೈ. ಲಿಮಿಟೆಡ್ ಬಯೊಮೆಡಿಕಲ್ ವಿಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಶನಿವಾರ ಒಪ್ಪಂದವೊಂದಕ್ಕೆ ಸಹಿ ಹಾಕಿದವು. ಈ ಸಂದರ್ಭದಲ್ಲಿ ಕೆಎಚ್‌ಇಆರ್ ಕುಲಪತಿ ಡಾ.ನಿತಿನ್ ಎಂ. ಗಂಗನೆ, ಕುಲಸಚಿವ ಡಾ.ಎಂ.ಎಸ್‌ ಗಣಾಚಾರಿ, ಸಹಾಯಕ ಕುಲಸಚಿವ ಡಾ. ಪ್ರಮೋದ್ ಜೆ. ಹುರಕಡಲೆ, ಬಯೊ ಎರಾ ಲೈಫ್ ಸೈನ್ಸ್‌ಸ್ ಪ್ರೈ.ಲಿ. ನ ಕಾರ್ಪೊರೇಟ್ ಡೈರೆಕ್ಟರ್ ಡಾ. ಸಿದ್ಧಾಂತ್ ಸಾಳುಂಕೆ, ಬ್ಯುಸಿನೆಸ್ ಡೈರೆಕ್ಟರ್ ಫಿಲಿಪ್ ಜಾಕೊಬ್, ಕೆಎಚ್‌ಇಆರ್ ಪ್ರಾಂಶುಪಾಲರು, ಡೀನ್‌ಗಳು, ನಿರ್ದೇಶಕರು ಮತ್ತು ಅಧಿಕಾರಿಗಳು ಉಪಸ್ಥಿತರಿದ್ದರು

ಕೆಎಲ್‌ಇ ವಿ.ವಿ– ಬಯೊ ಎರಾ ಲೈಫ್ ಸೈನ್ಸಸ್ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಯೊಮೆಡಿಕಲ್ ವಿಜ್ಞಾನ ಕ್ಷೇತ್ರದಲ್ಲಿ ತರಬೇತಿ, ಸಂಶೋಧನೆ ಹಾಗೂ ನಾವೀನ್ಯತೆಗೆ ಸಂಬಂಧಿಸಿದಂತೆ ಬೆಳಗಾವಿಯ ಕೆಎಲ್‌ಇ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರಿಸರ್ಚ್ ಡೀಮ್ಡ್ ಟು ಬಿ ವಿಶ್ವವಿದ್ಯಾಲಯ (ಕೆಎಚ್‌ಇಆರ್) ಹಾಗೂ ಪುಣೆಯ ಬಯೊ ಎರಾ ಲೈಫ್ ಸೈನ್ಸ್‌ಸ್ ಪ್ರೈ. ಲಿಮಿಟೆಡ್ ಬೆಳಗಾವಿಯಲ್ಲಿ ಶನಿವಾರ ಒಪ್ಪಂದವೊಂದಕ್ಕೆ ಸಹಿ ಹಾಕಿವೆ.

ತಂತ್ರಜ್ಞಾನದ ಪಾಲುದಾರಿಕೆ, ಶೈಕ್ಷಣಿಕವಾಗಿ ಸಂಶೋಧನಾ ಸಾಮರ್ಥ್ಯವನ್ನು ನಿರ್ಮಿಸುವುದು ಈ ಒಪ್ಪಂದದ ಉದ್ದೇಶವಾಗಿದೆ. ಪರಸ್ಪರ ಒಪ್ಪಂದದ ಆಧಾರದ ಮೇಲೆ ಸಂಶೋಧನಾ ಸಾಮರ್ಥ್ಯ ಮತ್ತು ತರಬೇತಿ ಕಾರ್ಯಕ್ರಮಗಳಿಂದ ಅಧ್ಯಾಪಕರು, ಸಂಶೋಧಕರು, ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪ್ರಯೋಜವಾಗಲಿದೆ ಎಂದು ಡೀಮ್ಡ್ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ.ಎಂ.ಎಸ್. ಗಣಾಚಾರಿ ತಿಳಿಸಿದ್ದಾರೆ.

ನವೆಂಬರ್‌ನಿಂದ ಜಾರಿ • ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿಕೆ

ಇಕೊ ಟೂರಿಸಂ: ಹೊಸ ನೀತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಪರಿಸರ ಪ್ರವಾಸೋದ್ಯಮದ (ಇಕೊ ಟೂರಿಸಂ) ಹೊಸ ನೀತಿ ನವೆಂಬರ್‌ನಿಂದ ಜಾರಿಯಾಗಲಿದೆ' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ವಿಕಾಸಸೌಧದಲ್ಲಿ ಶನಿವಾರ ನಡೆದ ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿ ಸಭೆಯ ನಂತರ ಅವರು ಮಾತನಾಡಿದರು.

'ಪರಿಸರ ಪ್ರವಾಸೋದ್ಯಮ ರೂಪುರೇಷೆ ಕುರಿತು ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲು ಪರಿಸರ ಅಭಿವೃದ್ಧಿ ಮಂಡಳಿ ಸಿಇಒ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ. ವರದಿ ನೀಡಲು 60 ದಿನಗಳ ಅವಧಿ ನಿಗದಿ ಮಾಡಲಾಗಿದೆ. ವರದಿ ಬಂದ ತಕ್ಷಣ ನೂತನ ನೀತಿ ಘೋಷಣೆ ಮಾಡಲಾಗುವುದು' ಎಂದು ಅವರು ತಿಳಿಸಿದರು.

'ರಾಜ್ಯದಲ್ಲಿ ಪರಿಸರ ಪ್ರವಾಸೋದ್ಯಮಕ್ಕೆ ವಿಪುಲ ಅವಕಾಶವಿದ್ದರೂ, ಸಮರ್ಪಕ ಬಳಕೆಯಾಗಿಲ್ಲ. ಪ್ರಕೃತಿ, ಪರಿಸರ ಮತ್ತು ಅರಣ್ಯ ನಾಶ ಆಗದಂತೆ ಪ್ರವಾಸೋದ್ಯಮ ಅಭಿವೃದ್ಧಿ ಪಡಿಸಲು ಹೊಸ ನೀತಿ ತರುವ ಅಗತ್ಯವಿದೆ. ಕ್ರೀಡಾ ಹಾಗೂ ಪ್ರವಾಸೋದ್ಯಮ ಇಲಾಖೆಯ ಸಹಯೋಗದಲ್ಲಿ ರಿವರ್ ರಾಫ್ಟಿಂಗ್, ಚಾರಣಗಳಿಗೆ ಆದ್ಯತೆ ನೀಡಲಾಗುವುದು. ಅದಕ್ಕಾಗಿ ಅರಣ್ಯ ಪ್ರದೇಶದ ಒಳಗೆ ಅವಕಾಶ ಮಾಡಿಕೊಡಲಾಗುವುದು. ಹೊಸ ನೀತಿ ಜಾರಿಯ ನಂತರ ಕರಾವಳಿ ಹಾಗೂ ಮಲೆನಾಡು, ಬೆಟ್ಟ, ಕಣಿವೆ ಪ್ರದೇಶಗಳಲ್ಲಿ ಪ್ರವಾಸೋದ್ಯಮ ಚಟುವಟಿಕೆ ಹೆಚ್ಚಲಿವೆ' ಎಂದು ಅವರು ಹೇಳಿದರು.

ಕಸ್ತೂರಿ ರಂಗನ್ ವರದಿ, ನಿರ್ಧಾರ ಇನ್ನಷ್ಟು ತಡ

ಸಂಜಯ್‌ಕುಮಾರ್ ನೇತೃತ್ವದ ಕೇಂದ್ರ ಸಮಿತಿ ಪರಿಶೀಲನೆ, ಸಂಪುಟ ಉಪ ಸಮಿತಿಯಲ್ಲಿ ಚರ್ಚಿಸಿದ ನಂತರ ಕಸ್ತೂರಿ ರಂಗನ್ ವರದಿ ಕುರಿತು ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಸಚಿವ ಈಶ್ವರ ಖಂಡ್ರೆ ಹೇಳಿದರು.

ಪಶ್ಚಿಮಘಟ್ಟ ಹಲವು ನದಿಗಳ ಉಗಮಸ್ಥಾನ. ವೈವಿಧ್ಯ ಜೀವಿಗಳ ಬೀಡು. ಅಲ್ಲಿನ ಜೀವ ಸಂಕುಲದ ಜತೆಗೆ ಜನರ ಬದುಕನ್ನು ಸಮತೋಲನಗೊಳಿಸುವುದೇ ಸುಸ್ಥಿರ ಅಭಿವೃದ್ಧಿ. ಇದೆಲ್ಲವನ್ನೂ ಗಮನದಲ್ಲಿ ಇಟ್ಟುಕೊಂಡು ಕಸ್ತೂರಿ ರಂಗನ್ ವರದಿ ಕುರಿತು ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದರು.

ಆನೆ ದಾಳಿ ತಡೆಗೆ ₹ 150 ಕೋಟಿ ವೆಚ್ಚದಲ್ಲಿ, ಅನುಪಯುಕ್ತ ರೈಲ್ವೆ ಹಳಿಯ ಬ್ಯಾರಿಕೇಡ್ ನಿರ್ಮಾಣಕ್ಕೆ ಎರಡು ದಿನಗಳಲ್ಲಿ ಅನುಮೋದನೆ ನೀಡಲಾಗುವುದು ಎಂದು ಹೇಳಿದರು.

ಆನೆ ದಾಳಿಯಿಂದ ಮೃತಪಟ್ಟ ವೆಂಕಟೇಶ್ ಅವರ ಕುಟುಂಬಕ್ಕೆ ಹೆಚ್ಚಿನ ನೆರವು ನೀಡುವ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪ್ರಸ್ತಾವ ಸಲ್ಲಿಸಲಾಗಿದೆ ಎಂದು ಮಾಹಿತಿ ನೀಡಿದರು.

ಮೃಗಾಲಯಗಳ ಅಭಿವೃದ್ಧಿಗೆ ಮಹಾ ಯೋಜನೆ

ಮೈಸೂರು, ಬನ್ನೇರುಘಟ್ಟ ಸೇರಿದಂತೆ ರಾಜ್ಯದ ಒಂಬತ್ತು ಮೃಗಾಲಯಗಳ ಸಮಗ್ರ ಅಭಿವೃದ್ಧಿಗೆ ಮಹಾ ಯೋಜನೆ ರೂಪಿಸಲಾಗುತ್ತಿದೆ ಎಂದು ಸಚಿವ ಈಶ್ವರ ಖಂಡ್ರೆ ಹೇಳಿದರು.

ಕರ್ನಾಟಕ ಮೃಗಾಲಯ ಪ್ರಾಧಿಕಾರದ ಆಡಳಿತ ಮಂಡಳಿ ಸಭೆಯ ನಂತರ ಅವರು ಮಾತನಾಡಿದರು.

ಮೃಗಾಲಯದಲ್ಲಿರುವ ಪ್ರಾಣಿಗಳ ಸಂತಾನೋತ್ಪತ್ತಿಯ ಪ್ರಮಾಣ ಉತ್ತಮವಾಗಿದೆ. ಮೈಸೂರು, ಬನ್ನೇರುಘಟ್ಟ ಬಿಟ್ಟರೆ ಉಳಿದ ಮೃಗಾಲಯಗಳು ನಷ್ಟದಲ್ಲಿವೆ. ಗದಗ, ಕಲಬುರಗಿ ಮೃಗಾಲಯಗಳನ್ನು ಮೇಲ್ದರ್ಜೆಗೇರಿಸಲಾಗುವುದು. ಬೀದರ್‌ನಲ್ಲಿ ಕೃಷ್ಣ ಮೃಗಗಳ ಸಂರಕ್ಷಿತ ಪ್ರದೇಶ ನಿರ್ಮಿಸಲಾಗುವುದು. ಮೈಸೂರಿನಿಂದ ಗದಗಕ್ಕೆ ಒಂದು ಜಿರಾಫೆ ನೀಡಲಾಗುವುದು ಎಂದರು.

ನಿಧನ ವಾರ್ತೆ

ಎಂ. ಕರಿಮುದ್ದೀನ್



ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ಸಾಹಿತಿ, ಬ ಹು ಭಾ ಷಾ ಪಂಡಿತ ಪ್ರೊ.ಎಂ. ಕ ರಿ ಮು ದ್ದೀ ನ್ (95) ಶನಿವಾರ ಸಮೀಪದ ಗಂಜಾಂನ ತಮ್ಮ ನಿವಾಸದಲ್ಲಿ ನಿಧನರಾದರು.

'ಅನಾಥ ಮುಸ್ಲಿಮರು', 'ಸಂಚಿತ ಚಿಂತನ', 'ಬಾಳು ಬದುಕು' ಕೃತಿಗಳನ್ನು ಅವರು ಬರೆದಿದ್ದರು. ಕುವೆಂಪು ಅವರ ವಿದ್ಯಾರ್ಥಿಯಾಗಿದ್ದ ಪ್ರೊ.ಕರಿಮುದ್ದೀನ್ ಕನ್ನಡ, ಇಂಗ್ಲಿಷ್, ಉರ್ದು, ಪರ್ಷಿಯನ್, ಅರೇಬಿಕ್ ಮತ್ತು ಸಂಸ್ಕೃತ ಭಾಷೆಗಳನ್ನು ಬಲ್ಲವರಾಗಿದ್ದರು. ಆಕಾಶವಾಣಿಯಲ್ಲಿ ಇವರ ಸಾಕಷ್ಟು ಚಿಂತನ ಭಾಷಣಗಳು ಪ್ರಸಾರವಾಗಿದ್ದವು.

ಮೈಸೂರಿನ ಮಹಾರಾಜ ಕಾಲೇಜು, ಮಡಿಕೇರಿ, ಮಂಡ್ಯ ಇತರೆಡೆ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದರು. 9ನೇ ತರಗತಿಯ ಉರ್ದು ಮಾಧ್ಯಮದಲ್ಲಿ ಕನ್ನಡವನ್ನು ದ್ವಿತೀಯ ಭಾಷೆಯಾಗಿ ಕಲಿಯುತ್ತಿದ್ದ ವಿದ್ಯಾರ್ಥಿಗಳಿಗೆ 'ಪ್ರೊ.ಕರಿಮುದ್ದೀನ್ ಅವರ ಜೀವನ ಮತ್ತು ಸಾಹಿತ್ಯ' ಪಠ್ಯವಾಗಿತ್ತು. ಅವರು ಅವಿವಾಹಿತರಾಗಿದ್ದರು. ಅವರ ತೋಟದಲ್ಲಿ ಶನಿವಾರ ಅಂತ್ಯಕ್ರಿಯೆ ನೆರವೇರಿತು. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಸೇರಿ ಹಲವು ಪ್ರಶಸ್ತಿ ತಿರಸ್ಕರಿಸಿದ್ದರು.

'ಮೌಂಟ್ ಮೇರು' ಏರಿ ಚಾರಿತ್ರಿಕ ಸಾಧನೆ

ಪ್ರಜಾವಾಣಿ ವಾರ್ತೆ

ಮುಂಬೈ: ಉತ್ತರ ಕಾಶಿಯ ನೆಹರೂ ಪರ್ವತಾರೋಹಣ ಸಂಸ್ಥೆ (ಎನ್‌ಐಎಂ) ಹಾಗೂ ಪುಣೆ ಮೂಲದ 'ಗಿರಿಪ್ರೇಮಿ' ಸಾಹಸ ಕ್ಲಬ್ ಸದಸ್ಯರ ಜಂಟಿ ತಂಡವು, 6,660 ಮೀಟರ್ ಎತ್ತರದ 'ಮೌಂಟ್ ಮೇರು' ಶಿಖರ ಏರುವ ಮೂಲಕ ಐತಿಹಾಸಿಕ ಸಾಧನೆ ಮಾಡಿದೆ.

ಗರ್ವಾಲ್ ಹಿಮಾಲಯ ಪ್ರದೇಶದಲ್ಲಿ ಈ ಶಿಖರವಿದೆ. ಇದರ ಆರೋಹಣವು ತುಂಬಾ ಕ್ಲಿಷ್ಟಕರ ಎಂದೇ ಪರಿಗಣಿಸಿದ್ದು, ಇದನ್ನು ಏರಿದ ಮೊದಲ ಭಾರತೀಯ ತಂಡ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಅನುಭವಿ ಪರ್ವತಾರೋಹಿ ಉಮೇಶ ಜಿರ್ಪೆ ಯಾತ್ರೆಯ ನೇತೃತ್ವವಹಿಸಿದ್ದರು.


ಗಿರಿಪ್ರೇಮಿ ತಂಡದ ಗಣೇಶ್ ಮೋರೆ, ವಿವೇಕ್ ಶಿವದೇ, ವರುಣ್ ಭಾಗವತ್, ಮಿಂಗ್ಮಾ ಶೆರ್ಪಾ, ಎನ್‌ಐಎಂನ ಹಿರಿಯ ಬೋಧಕ ವಿನೋದ್ ಗುಸೇನ್ ಸೇರಿದಂತೆ ಅವರ ಸಹೋದ್ಯೋಗಿಗಳಾದ ಬಿಹಾರಿ ರಾಣಾ, ಅಜಿತ್ ರಾವತ್ ಅವರು ಶುಕ್ರವಾರ ಈ ಶಿಖರದ ಮೇಲೆ ಭಾರತದ ತ್ರಿವರ್ಣ ಧ್ವಜ ಹಾರಿಸಿದ್ದಾರೆ.

ಭಾರತದಲ್ಲಿ ಮೌಂಟ್ ಮೇರು (ದಕ್ಷಿಣ) ಏರಿದ ಮೊದಲ ತಂಡ ಇದಾಗಿದೆ. ಅಲ್ಲದೇ, ಪಶ್ಚಿಮ ಭಾಗದಿಂದ ಈ ಶಿಖರ ಏರಿದ ವಿಶ್ವದ ಪ್ರಥಮ ತಂಡ ಎಂಬ ಶ್ರೇಯಕ್ಕೆ ಭಾಜನವಾಗಿದೆ. ದಾವಾ ಶೆರ್ಪಾ, ಫರ್ಟನ್ಸಿಂಗ್ ಶೆರ್ಪಾ ಕೂಡ ಈ ತಂಡದೊಟ್ಟಿಗೆ ಶಿಖರವೇರಿದ್ದಾರೆ.

'ಕ್ಯಾಂಪ್ 1ರ ವರೆಗೆ ತಲುಪಲು ಲಕ್ಪಾ ಶೇರ್ಪಾ ಸಹಾಯ ನೀಡಿದರು. ಚಾರಿತ್ರಿಕ ಸಾಧನೆ ಮಾಡುವಲ್ಲಿ ತಂಡ ಯಶಸ್ವಿಯಾಗಿದೆ' ಎಂದು ಉಮೇಶ ಜಿರ್ಪೆ 'ಪ್ರಜಾವಾಣಿ'ಗೆ ತಿಳಿಸಿದರು.



2080ರ ವೇಳೆಗೆ ಅಂತರ್ಜಲ ಮಟ್ಟ ಮೂರು ಪಟ್ಟು ಕುಸಿತ?



ನವದೆಹಲಿ (ಪಿಟಿಐ): ಅಂತರ್ಜಲ ಬಳಕೆಗೆ ಸಂಬಂಧಿಸಿದಂತೆ ಭಾರತದ ರೈತರ ಧೋರಣೆಯು ಇದೇ ರೀತಿ ಮುಂದುವರಿದರೆ 2080ರ ವೇಳೆಗೆ ದೇಶದಲ್ಲಿ ಸದ್ಯದ ಸ್ಥಿತಿಗಿಂತಲೂ ಅಂತರ್ಜಲ ಮಟ್ಟವು ಮೂರು ಪಟ್ಟು ಕುಸಿಯಲಿದೆ. ಇದು ಆಹಾರ ಹಾಗೂ ನೀರಿನ ಅಭಾವ ಸೃಷ್ಟಿಗೂ ಕಾರಣವಾಗಲಿದೆ ಎಂದು ಹೊಸ ಅಧ್ಯಯನವೊಂದು ಹೇಳಿದೆ.

ತಾಪಮಾನ ಹೆಚ್ಚಳದಿಂದ ನೀರಾವರಿ ಉದ್ದೇಶಕ್ಕಾಗಿ ರೈತರು ಅತಿಯಾಗಿ ಅಂತರ್ಜಲವನ್ನು ಬಳಕೆ ಮಾಡುತ್ತಿದ್ದಾರೆ ಎಂದು 'ಸೈನ್ಸ್ ಅಡ್ವಾನ್ಸ್' ಜರ್ನಲ್‌ನಲ್ಲಿ ಪ್ರಕಟವಾಗಿರುವ ಅಮೆರಿಕದ ಮಿಚಿಗನ್ ವಿಶ್ವವಿದ್ಯಾಲಯದ ವರದಿಯಲ್ಲಿ ಹೇಳಲಾಗಿದೆ.

ನೀರಿನ ಕೊರತೆಯು ಜನರ ಜೀವನೋಪಾಯದ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಭವಿಷ್ಯದಲ್ಲಿ ದೇಶದ ಒಟ್ಟು ಜನಸಂಖ್ಯೆಯ ಮೂರನೇ ಒಂದರಷ್ಟು ನಿವಾಸಿಗಳು ತೊಂದರೆಗೆ ಸಿಲುಕಲಿದ್ದಾರೆ. ಅಲ್ಲದೇ, ಇದರ ಪರಿಣಾಮವು ಜಾಗತಿಕವಾಗಿಯೂ ತಟ್ಟಲಿದೆ ಎಂದು ವಿವರಿಸಿದೆ.

'ಭಾರತವು ವಿಶ್ವದಲ್ಲಿಯೇ ಅತಿದೊಡ್ಡ ಅಂತರ್ಜಲ ಬಳಕೆದಾರ ದೇಶವಾಗಿದೆ. ಪ್ರಾದೇಶಿಕ ಹಾಗೂ ಜಾಗತಿಕ ಆಹಾರ ಪೂರೈಕೆಗೆ ಅಂತರ್ಜಲವು ಬಹುಮುಖ್ಯ ಸಂಪನ್ಮೂಲವಾಗಿದೆ' ಎಂದು ಹಿರಿಯ ಲೇಖಕ ಮೇಹಾ ಜೈನ್ ಹೇಳಿದ್ದಾರೆ.

ನೀರಿನ ಬಳಕೆಯಲ್ಲಿನ ಬದಲಾವಣೆ, ಅಂತರ್ಜಲ ಮಟ್ಟ, ಹವಾಮಾನ ಸೇರಿದಂತೆ ಭವಿಷ್ಯದಲ್ಲಿ ಕೃಷಿ ಕ್ಷೇತ್ರದಲ್ಲಿ ಫಸಲು ಬೆಳೆಯಲು ಅಗತ್ಯವಿರುವ ನೀರಿನ ಲಭ್ಯತೆ ಕುರಿತು ವರದಿಯಲ್ಲಿ ವಿಶ್ಲೇಷಿಸಲಾಗಿದೆ.

'ನಾವು ಸಂಶೋಧನೆಯ ಅಂದಾಜಿಗೆ ಬಳಸಿರುವ ಮಾದರಿಗಳ ಅನ್ವಯ ತಾಪಮಾನ ಹೆಚ್ಚಳದಿಂದ ಭವಿಷ್ಯದಲ್ಲಿ ಅಂತರ್ಜಲ ಮಟ್ಟ ಕುಸಿತವಾಗಲಿದೆ. ಅದರಲ್ಲೂ ದಕ್ಷಿಣ ಮತ್ತು ಮಧ್ಯ ಭಾರತದಲ್ಲಿ ಹೆಚ್ಚಿನ ಸಮಸ್ಯೆ ಸೃಷ್ಟಿಯಾಗಲಿದೆ' ಎಂದು ಮುಖ್ಯ ಲೇಖಕ ನಿಶಾನ್ ಭಟ್ಟರೈ ಹೇಳಿದ್ದಾರೆ.

ಭಾರತದಲ್ಲಿ ಮುಂದಿನ ದಶಕಗಳಲ್ಲಿ ಹವಾಮಾನ ವೈಪರೀತ್ಯವೂ ಹೆಚ್ಚಲಿದೆ. ಉಷ್ಣಾಂಶ ಹೆಚ್ಚಳವಾಗಲಿದೆ. ಜೂನ್‌ನಿಂದ ಸೆಪ್ಟೆಂಬರ್ ನಡುವೆ ಮುಂಗಾರು ಮಳೆ ಹೆಚ್ಚು ಸುರಿಸಿದರೆ, ಹಿಂಗಾರು ಅವಧಿಯಲ್ಲಿ ಮಳೆ ಕಡಿಮೆಯಾಗಲಿದೆ ಎಂದು ಸಂಶೋಧಕರು ಹೇಳಿದ್ದಾರೆ.

ಆಕಸ್ಮಿಕ ಲಾಭ ತೆರಿಗೆ ಕಡಿತ



ನವದೆಹಲಿ (ಪಿಟಿಐ): ದೇಶದಲ್ಲಿ ಉತ್ಪಾದನೆ ಆಗುವ ಕಚ್ಚಾ ತೈಲದ ಮೇಲಿನ ಆಕಸ್ಮಿಕ ಲಾಭ ತೆರಿಗೆಯನ್ನು ಕೇಂದ್ರ ಸರ್ಕಾರ ಶನಿವಾರದಿಂದ ಜಾರಿಗೆ ಬರುವಂತೆ ತಗ್ಗಿಸಿದೆ. ಆದರೆ ಡೀಸೆಲ್ ಹಾಗೂ ವಿಮಾನ ಇಂಧನ (ಎಟಿಎಫ್) ರಫ್ತು ಮೇಲಿನ ತೆರಿಗೆಯನ್ನು ಹೆಚ್ಚಿಸಿದೆ.

ದೇಶದಲ್ಲಿ ತಯಾರಾಗುವ ಕಚ್ಚಾ ತೈಲದ ಮೇಲಿನ ಆಕಸ್ಮಿಕ ಲಾಭ ತೆರಿಗೆಯನ್ನು ಪ್ರತಿ ಟನ್‌ಗೆ ₹7,100 ರಿಂದ ₹6,700ಕ್ಕೆ ಇಳಿಕೆ ಮಾಡಲಾಗಿದೆ.

ಡೀಸೆಲ್ ರಫ್ತು ಮೇಲಿನ ತೆರಿಗೆಯನ್ನು ಪ್ರತಿ ಲೀಟರಿಗೆ ₹5.50 ರಿಂದ ₹6ಕ್ಕೆ ಹೆಚ್ಚಿಸಲಾಗಿದೆ. ಅದೇ ರೀತಿ ವಿಮಾನ ಇಂಧನದ (ಎಟಿಎಫ್) ಮೇಲಿನ ತೆರಿಗೆಯನ್ನು ಪ್ರತಿ ಲೀಟರಿಗೆ ₹2ರಿಂದ ₹4ಕ್ಕೆ ಏರಿಕೆ ಮಾಡಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯದ ಪ್ರಕಟಣೆ ತಿಳಿಸಿದೆ. ಪೆಟ್ರೋಲ್ ರಫ್ತು ಮೇಲೆ ಶೂನ್ಯ ತೆರಿಗೆಯನ್ನು ಮುಂದುವರಿಸಲಾಗಿದೆ.

ಹಿಂದಿನ ಎರಡು ವಾರಗಳಲ್ಲಿ ಇಂಧನದ ಸರಾಸರಿ ದರದ ಆಧಾರದ ಮೇಲೆ ಪ್ರತಿ 15 ದಿನಗಳಿಗೆ ಒಮ್ಮೆ ತೆರಿಗೆ ದರಗಳನ್ನು ಪರಿಷ್ಕರಣೆ ಮಾಡಲಾಗುತ್ತಿದೆ. 2022ರ ಜುಲೈ 1ರಂದು ಮೊದಲಿಗೆ ಆಕಸ್ಮಿಕ ಲಾಭ ತೆರಿಗೆಯನ್ನು ಜಾರಿಗೊಳಿಸಲಾಯಿತು.

ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ನಯಾರಾ ಎನರ್ಜಿ, ದೇಶದಿಂದ ಇಂಧನ ರಫ್ತು ಮಾಡುತ್ತಿರುವ ಪ್ರಮುಖ ಕಂಪನಿಗಳಾಗಿವೆ.

ಸರಕು ಸಾಗಣೆ ನೀತಿ ರೂಪಿಸಲು ರಾಜ್ಯಗಳಿಗೆ ಸೂಚನೆ

ನವದೆಹಲಿ (ಪಿಟಿಐ): ಸುಲಲಿತ ವಹಿವಾಟಿಗೆ ಉತ್ತೇಜನ ನೀಡಲು ಅನುಕೂಲ ಆಗುವಂತೆ ಸರಕು–ಸಾಗಣೆ ನೀತಿಯನ್ನು ರೂಪಿಸಿ ಎಂದು ಕೇಂದ್ರ ಸರ್ಕಾರವು ರಾಜ್ಯಗಳಿಗೆ ಸೂಚನೆ ನೀಡಿರುವುದಾಗಿ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯವು ಶನಿವಾರ ಹೇಳಿದೆ.

ಸರಕು ಸಾಗಣೆ ವ್ಯವಸ್ಥೆಯಲ್ಲಿ ಸಮಗ್ರ ಬದಲಾವಣೆ ತರಲು ರಾಷ್ಟ್ರೀಯ ಸರಕು ಸಾಗಣೆ ನೀತಿಗೆ ಅನುಗುಣವಾಗಿ 'ರಾಜ್ಯ ಸರಕು ಸಾಗಣೆ ನೀತಿ' ರೂಪಿಸಲು ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ಉತ್ತೇಜನ ನೀಡಲಾಗುವುದು ಎಂದು ಸಚಿವಾಲಯವು ತಿಳಿಸಿದೆ.

ಈವರೆಗೆ 22 ರಾಜ್ಯಗಳು ತಮ್ಮ ಸರಕು ಸಾಗಣೆ ನೀತಿಯ ಕುರಿತು ಪ್ರಕಟಣೆ ನೀಡಿವೆ.

ಚಿನ್ನ, ಬೆಳ್ಳಿ ಧಾರಣೆ

ಬೆಂಗಳೂರು

ಸ್ಟ್ಯಾಂಡರ್ಡ್ ಚಿನ್ನ 10ಗ್ರಾಂ	₹61,280
ಒಡವೆ ಚಿನ್ನ 1ಗ್ರಾಂ	₹5,668
ಬೆಳ್ಳಿ ಕೆ.ಜಿಗೆ	₹75,800

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹440
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹440

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹144
ಆರ್‌ಎಸ್‌ಎಸ್-5	₹137
ಗುಡ್ ಲಾಟ್	₹123

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1740(1740)
ಸೋಯಾ (ರಿಫೈನ್ಡ್)	₹925(925)
ಸೂರ್ಯಕಾಂತಿ (ರಿಫೈನ್ಡ್)	₹925(925)
ಪಾಮೋಲಿನ್	₹854(854)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹2000-2500
ಮಧ್ಯಮ	₹1500-2000
ಸಣ್ಣ	₹1000-1500

ಆಗಸ್ಟ್ ತಿಂಗಳಿನಲ್ಲಿ ಮಾರುಕಟ್ಟೆಯಲ್ಲಿ ₹20,620 ಕೋಟಿ ಮೌಲ್ಯದ ಷೇರುಗಳ ಮಾರಾಟ

ಬಂಡವಾಳ ಹಿಂತೆಗೆತಕ್ಕೆ ಎಫ್‌ಪಿಐ ಗಮನ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಷೇರುಪೇಟೆಗಳ ಮಾರುಕಟ್ಟೆ ಮೌಲ್ಯವು ಗರಿಷ್ಠ ಮಟ್ಟದಲ್ಲಿ ಇರುವುದರಿಂದ ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಸದ್ಯ ಲಾಭ ಮಾಡಿಕೊಳ್ಳುವುದರತ್ತ ಹೆಚ್ಚು ಗಮನ ನೀಡಿದ್ದಾರೆ.

ವಿದೇಶಿ ಬಂಡವಾಳ ಹೂಡಿಕೆದಾರರು ಆಗಸ್ಟ್ ತಿಂಗಳಿನಲ್ಲಿ ಭಾರತವನ್ನೂ ಒಳಗೊಂಡು ಪ್ರವರ್ಧಮಾನಕ್ಕೆ ಬರುತ್ತಿರುವ ಮಾರುಕಟ್ಟೆಗಳಿಂದ ಬಂಡವಾಳ ಹಿಂತೆಗೆತ ಮಾಡಿದ್ದಾರೆ. ಅಮೆರಿಕದ ಬಾಂಡ್ ಗಳಿಕೆ ಹೆಚ್ಚಾಗಿರುವುದು ಮತ್ತು ಅಮೆರಿಕದ ಡಾಲರ್ ಮೌಲ್ಯ ವೃದ್ಧಿಯಾಗುತ್ತಿರುವುದು ಬಂಡವಾಳ ಹಿಂತೆಗೆತಕ್ಕೆ ಪ್ರಮುಖ ಕಾರಣಗಳಾಗಿವೆ. ಹಣಕಾಸು ವಲಯದ ಕಂಪನಿಗಳ ಷೇರುಗಳು ಲಾಭ ಗಳಿಕೆಯ ವಹಿವಾಟಿಗೆ ಒಳಗಾಗಿದ್ದು ಸಹ ಎಫ್‌ಪಿಐ ಹೊರಹರಿವಿಗೆ ಕೊಡುಗೆ ನೀಡಿದೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಅವರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಆಗಸ್ಟ್ ತಿಂಗಳಿನಲ್ಲಿ ಭಾರತದ ಬಂಡವಾಳ ಮಾರುಕಟ್ಟೆಯಲ್ಲಿ ₹20,620 ಕೋಟಿ ಮೌಲ್ಯದ ಷೇರುಗಳನ್ನು ವಿದೇಶಿ ಹೂಡಿಕೆದಾರರು ಮಾರಾಟ ಮಾಡಿದ್ದಾರೆ ಎಂದು ಅವರು ಮಾಹಿತಿ ನೀಡಿದ್ದಾರೆ.

ವಿದೇಶಿ ಸಾಂಸ್ಥಿಕ ಬಂಡವಾಳ ಹೂಡಿಕೆ (ಕೋಟಿಗಳಲ್ಲಿ)



ಅಮೆರಿಕದ ಆರ್ಥಿಕತೆಯು ಮಂದಗತಿಯಲ್ಲಿ ಸಾಗುತ್ತಿದೆ ಎನ್ನುವುದನ್ನು ಆಗಸ್ಟ್ ತಿಂಗಳ ಉದ್ಯೋಗ ಸೃಷ್ಟಿಯ ಅಂಕಿ–ಅಂಶಗಳು ಸೂಚಿಸುತ್ತಿವೆ. ಹೀಗಾಗಿ ಅಮೆರಿಕದ ಕೇಂದ್ರೀಯ ಬ್ಯಾಂಕ್ ಆಗಿರುವ ಫೆಡರಲ್ ರಿಸರ್ವ್ ಮತ್ತೊಮ್ಮೆ ಬಡ್ಡಿದರ ಹೆಚ್ಚಿಸುವ ಸಾಧ್ಯತೆ ತಗ್ಗಿದೆ. ಇದು ಅಮೆರಿಕದ ಬಾಂಡ್ ಗಳಿಕೆ ಮತ್ತು ಡಾಲರ್ ಮೌಲ್ಯ ಹೆಚ್ಚಾಗುವುದಕ್ಕೆ ತಡೆ ಒಡ್ಡಬಹುದು. ಹೀಗಾದಲ್ಲಿ ಭಾರತಕ್ಕೆ ಮತ್ತೆ ಎಫ್‌ಪಿಐ ಒಳಹರಿವು ಹೆಚ್ಚಾಗಲಿದೆ ಎಂದು ವಿಜಯಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ವಿದೇಶಿ ಹೂಡಿಕೆದಾರರು ಬಂಡವಾಳ ಸರಕುಗಳಿಗೆ ಸಂಬಂಧಿಸಿದ ಕಂಪನಿಗಳ ಷೇರುಗಳನ್ನು ನಿರಂತರವಾಗಿ ಖರೀದಿಸುತ್ತಿದ್ದಾರೆ. ಕೆಲವು ದಿನಗಳಿಂದ ಆರೋಗ್ಯ ಸೇವೆಗಳಿಗೆ ಸಂಬಂಧಿಸಿದ ಷೇರುಗಳ ಖರೀದಿಯನ್ನೂ ಮಾಡುತ್ತಿದ್ದಾರೆ ಎಂದು ಅವರು ಮಾಹಿತಿ ನೀಡಿದ್ದಾರೆ.

ದೇಶಿ ಸಾಂಸ್ಥಿಕ ಹೂಡಿಕೆದಾರರು (ಡಿಐಐ) ಆಗಸ್ಟ್‌ನಲ್ಲಿ ಷೇರುಗಳನ್ನು ನಿರಂತರವಾಗಿ ಖರೀದಿ ಮಾಡುತ್ತಿದ್ದಾರೆ. ಇದರಿಂದಾಗಿ ಷೇರುಪೇಟೆಯು ಹೆಚ್ಚಿನ ಇಳಿಕೆ ಕಾಣುತ್ತಿಲ್ಲ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಕೆ.ಆರ್.ಪೇಟೆ	₹7900-7900
ತಿಪಟೂರು	₹7100-8532
ತುರುವೇಕೆರೆ	₹8500-8500

ಮುಂಬೈ ಧಾರಣೆ

ಶೇಂಗಾ

2–9–2023

ಜಾವಾ 70/80(ಹೊಸ)	12500-12600
ಜಾವಾ 80/90(ಹೊಸ)	12400-12500
ದಪ್ಪ ಮಧ್ಯಪ್ರದೇಶ(ಹೊಸ)	13100-13200
ದಪ್ಪ ಗುಜರಾತ್(ಹೊಸ)	14200-14300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1750(1750)
ಒಂದು ವಾರದ ಡೆಲಿವರಿ	1745(1745)
ಸೋಯಾ ಕಚ್ಚಾ	875(876)
ಪಾಮ್ ವಾರದ ಡೆಲಿವರಿ	852(852)
ಸೂರ್ಯಕಾಂತಿ ಎಣ್ಣೆ ಕಚ್ಚಾ	850(850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
59,150 (59,300)
ಬೆಳ್ಳಿ ಕೆ.ಜಿ
73,600 (74,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಗದಗ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ರೈತರಿಗೆ ಬಂಪರ್ ಬೆಲೆ

ಕ್ವಿಂಟಲ್ ಹೆಸರುಕಾಳಿಗೆ ₹15,001

ಪ್ರಜಾವಾಣಿ ವಾರ್ತೆ

ಗದಗ: ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಶನಿವಾರ ಕ್ವಿಂಟಲ್ ಹೆಸರುಕಾಳು ₹ 15,001ಕ್ಕೆ ಮಾರಾಟವಾಗಿದ್ದು, ರೈತರಿಗೆ ಬಂಪರ್ ಬೆಲೆ ಸಿಕ್ಕಿದೆ. ಗದಗ, ಕೊಪ್ಪಳ, ಧಾರವಾಡ ಸೇರಿ ವಿವಿಧ ಜಿಲ್ಲೆಗಳಿಂದ ಇಲ್ಲಿನ ಎಪಿಎಂಸಿಗೆ ಒಟ್ಟು 4,200 ಕ್ವಿಂಟಲ್ ಹೆಸರುಕಾಳು ಆವಕವಾಗಿತ್ತು.

ಗದಗ ಜಿಲ್ಲೆಯ ರೋಣ ತಾಲ್ಲೂಕಿನ ರೈತ ಅಮರೇಶ ಬಾವಿ ಹೊನ್ನಿಗನೂರ ಅವರಿಂದ ಇಲ್ಲಿನ ಅನ್ನದಾನೇಶ್ವರ ಬ್ರದರ್ಸ್ ಖರೀದಿದಾರರು ಎರಡು ಚೀಲ ಹೆಸರನ್ನು ಕ್ವಿಂಟಲ್‌ಗೆ ₹ 15,001ರಂತೆ ಖರೀದಿಸಿದ್ದಾರೆ. ಇದು ಎಪಿಎಂಸಿಯಲ್ಲಿ ಸಿಕ್ಕ ಗರಿಷ್ಠ ಬೆಲೆ.

ಆಗಸ್ಟ್ ಮೊದಲ ವಾರದಲ್ಲಿ ಕ್ವಿಂಟಲ್‌ಗೆ ₹8 ಸಾವಿರ ಬೆಲೆ ಇತ್ತು. 4ನೇ ವಾರದಲ್ಲಿ ಗರಿಷ್ಠ ₹13 ಸಾವಿರದವರೆಗೆ ಮಾರಾಟವಾಗಿತ್ತು. 2ನೇ ವಾರದಿಂದ ನಾಲ್ಕನೇ ವಾರದವರೆಗೆ ಕ್ವಿಂಟಲ್‌ಗೆ ಸರಾಸರಿ ₹10 ಸಾವಿರದಿಂದ ₹13 ಸಾವಿರದವರೆಗೆ ಮಾರಾಟವಾಗಿತ್ತು.

ಮುಂಗಾರು ಕೈಕೊಟ್ಟ ಕಾರಣ ಹೆಸರು ಬಿತ್ತನೆ ಅವಧಿ ಮುಗಿಯುವ ಹಂತದಲ್ಲಿ ಜಿಲ್ಲೆಯ ಕೆಲ ರೈತರು ಧೈರ್ಯ ಮಾಡಿ ಬಿತ್ತನೆ ಮಾಡಿದ್ದರು. ಆದರೆ, ಮಳೆ ಕೊರತೆಯಿಂದ ಹೇಳಿಕೊಳ್ಳುವಂತಹ ಇಳುವರಿ ಬಂದಿರಲಿಲ್ಲ. ಈಗಿರುವ ಅಲ್ಪಸ್ವಲ್ಪ ಬೆಳೆಗೆ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆ ಕುದುರಿದೆ.



ಗದಗ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಹೆಸರುಕಾಳಿಗೆ ಬಂಪರ್ ಬೆಲೆ ಸಿಕ್ಕಿದ್ದು, ರೈತರು ಖುಷಿಪಟ್ಟರು

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	750-800
ನಡುಗೋಲು	900-950
ರಾಶಿ	1000-1100
ರಾಶಿ ಉತ್ತಮ	1150-1200
ಹೆರಕಿದ್ದು	1600-1700
ಹಸಿರು ಸಾಧಾರಣ	1200-1250
ಹಸಿರು ಉತ್ತಮ	1600-1700
ಹಸಿರು ಅತಿ ಉತ್ತಮ	1900-2000
ಕಾಳುಮೆಣಸು	620
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-48500
ಕಾರ್ಕಳ	
ಹೊಸತು	30000-45000
ಕುಂದಾಪುರ	
ಹಳೆಚಾಲಿ	43500-47000
ಹೊಸಚಾಲಿ	37000-41500
ಶಿರಸಿ	
ಬೆಟ್ಟೆ	39819-45899
ಬಿಳಿಗೋಟು	30189-36599
ಚಾಲಿ	37113-42611
ರಾಶಿ	46209-49299
ಸೊರಬ	
ಚಾಲಿ	32499-37199
ಗೊರಬಲು	33199-34399
ರಾಶಿ	42199-47099
ಸಿಪ್ಪೆಗೋಟು	20313-20313

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	12900	13250	13200	151.90ಸೆಂಟ್ಸ್
ಎಸಿ	6860	6700	6700	
ಆರ್‌ಪಿ	10100	10100	10150	ಲಂಡನ್
ಆರ್‌ಸಿ	5960	5800	5900	2482ಡಾಲರ್ಸ್

8ರಂದು ನರೇಂದ್ರ ಮೋದಿ– ಬೈಡನ್ ದ್ವಿಪಕ್ಷೀಯ ಮಾತುಕತೆ

ವಾಷಿಂಗ್ಟನ್ (ಪಿಟಿಐ): ಮುಂದಿನ ವಾರ ನಡೆಯಲಿರುವ ಜಿ20 ಶೃಂಗಸಭೆಯಲ್ಲಿ ಭಾಗವಹಿಸಲು ಭಾರತ ಭೇಟಿ ಕೈಗೊಳ್ಳಲಿರುವ ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಇದೇ 8 ರಂದು ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ ಎಂದು ಶ್ವೇತಭವನ ಶನಿವಾರ ತಿಳಿಸಿದೆ.

ಭಾರತದ ಅಧ್ಯಕ್ಷತೆಯಲ್ಲಿ ಜಿ20 ಶೃಂಗಸಭೆಯು ಇದೇ 9 ಮತ್ತು 10 ರಂದು ನವದೆಹಲಿಯಲ್ಲಿ ನಡೆಯಲಿದೆ. ಭಾರತವು ಜಿ20 ನಾಯಕತ್ವ ವಹಿಸಿರುವುದಕ್ಕಾಗಿ ಬೈಡನ್ ಅವರು ಮೋದಿಯವರನ್ನು ಅಭಿನಂದಿಸಲಿದ್ದಾರೆ ಎಂದು ಶ್ವೇತಭವನವು ತಿಳಿಸಿದೆ.

ಶೃಂಗಸಭೆಗೂ ಎರಡು ದಿನ ಮುಂಚಿತವಾಗಿ ಸೆ.7ರಂದು ಬೈಡನ್ ಅವರು ನವದೆಹಲಿಗೆ ಪ್ರಯಾಣಿಸಲಿದ್ದಾರೆ. 8ರಂದು ಮೋದಿ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ ಎಂದು ಅದು ಹೇಳಿದೆ.

ಶೃಂಗಸಭೆಯಲ್ಲಿ ಬೈಡನ್ ಅವರು ಶುದ್ಧ ಇಂಧನ ಪರಿವರ್ತನೆ ಮತ್ತು ಹವಾಮಾನ ಬದಲಾವಣೆಗೆ ಸಂಬಂಧಿಸಿದ ಜಾಗತಿಕ ಸಮಸ್ಯೆಗಳನ್ನು ನಿಭಾಯಿಸುವ ಜಂಟಿ ಪ್ರಯತ್ನಗಳ ಕುರಿತು ಜಿ20 ಪಾಲುದಾರರೊಂದಿಗೆ ಚರ್ಚಿಸಲಿದ್ದಾರೆ ಎಂದು ಶ್ವೇತಭವನ ಹೇಳಿದೆ.

ಈಜಿಪ್ಟ್ ಉದ್ಯಮಿ ಮೊಹಮದ್ ಅಲ್ ಫಯೆದ್ ನಿಧನ

ಲಂಡನ್ (ರಾಯಿಟರ್ಸ್): ಬ್ರಿಟನ್ ರಾಜಕುಮಾರಿ ಡಯಾನಾ ಅವರ ಜತೆ ಕಾರು ಅಪಘಾತದಲ್ಲಿ ಮೃತಪಟ್ಟಿದ್ದ ಅವರ ಗೆಳೆಯ ಡೋಡಿ ಅಲ್ ಫಯೆದ್ ಅವರ ತಂದೆ, ಉದ್ಯಮಿ ಮೊಹಮದ್ ಅಲ್ ಫಯೆದ್ (94) ಅವರು ಬುಧವಾರ ಮೃತಪಟ್ಟಿದ್ದು, ಅಂತ್ಯಕ್ರಿಯೆ ಶನಿವಾರ ನಡೆಯಿತು.

ಈಜಿಪ್ಟ್‌ನ ಕೋಟ್ಯಧಿಪತಿ ಮೊಹಮದ್ ಅಲ್ ಫಯೆದ್ ಅವರು ಹ್ಯಾರೋಡ್ಸ್ ಡಿಪಾರ್ಟ್‌ಮೆಂಟ್ ಸ್ಟೋರ್ ಮಾಲೀಕ ಕೂಡ ಹೌದು. ಮೊಹಮದ್ ಅವರು ವಯೋಸಹಜವಾಗಿ ಮೃತಪಟ್ಟಿರುವುದಾಗಿ ಅವರ ಕುಟುಂಬ ತಿಳಿಸಿದೆ. ಅವರಿಗೆ ಪತ್ನಿ, ಮಕ್ಕಳು, ಮೊಮ್ಮಕ್ಕಳು ಇದ್ದಾರೆ.

ಡೋಡಿ ಮತ್ತು ಡಯಾನಾ ಅವರು ಪ್ಯಾರಿಸ್‌ನಲ್ಲಿ ಕಾರು ಅಪಘಾತದಲ್ಲಿ ಮೃತಪಟ್ಟು 26 ವರ್ಷ ತುಂಬುವ ಒಂದು ದಿನ ಮೊದಲು ಮೊಹಮದ್ ಅಲ್ ಫಯೆದ್ ನಿಧನರಾದರು.

ತನ್ನ ಮಗ ಡೋಡಿ ಅಲ್ ಫಯೆದ್ ಮತ್ತು ರಾಜಕುಮಾರಿ ಡಯಾನಾ ಸಾವಿನ ಹಿಂದೆ ಬ್ರಿಟನ್ ರಾಜಮನೆತನದ ಕೈವಾಡವಿರುವುದಾಗಿ ಮೊಹಮ್ಮದ್ ಅಲ್ ಫಯೆದ್, ಬ್ರಿಟನ್ ರಾಜಮನೆತದ ವಿರುದ್ಧ ಕೊಲೆ ಸಂಚಿನ ಆರೋಪವನ್ನು ನಿರಂತರ ಮಾಡಿದ್ದರು.



ಅಲ್ ಫಯೆದ್

ಈಜಿಪ್ಟ್‌ನ ಲೆಕ್ಸಾಂಡ್ರೀಯ ನಗರದಲ್ಲಿ ಜನಿಸಿದ ಫಯೆದ್ ಅವರು ತಂಪು ಪಾನೀಯ ಮಾರಾಟ ಮತ್ತು ಹೊಲಿಗೆ ಯಂತ್ರ ಮಾರಾಟದಿಂದ ವೃತ್ತಿ ಜೀವನ ಆರಂಭಿಸಿದವರು. ನಂತರ ಮಧ್ಯಪ್ರಾಚ್ಯ ಮತ್ತು ಯುರೋಪ್‌ನಲ್ಲಿ ರಿಯಲ್ ಎಸ್ಟೇಟ್ ಮತ್ತು ಹಡಗು ಹಾಗೂ ನಿರ್ಮಾಣ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಉದ್ಯಮಿಯಾಗಿ ರೂಪುಗೊಂಡರು. ಪ್ರತಿಷ್ಠಿತ ಬ್ರ್ಯಾಂಡ್‌ಗಳಾದ ಹ್ಯಾರೋಡ್ಸ್, ಫುಲ್‌ಹಾಮ್ ಮತ್ತು ಪ್ಯಾರಿಸ್‌ನಲ್ಲಿರುವ ರಿಟ್ಜ್ ಹೋಟೆಲ್ ಮಾಲೀಕತ್ವ ಕೂಡ ಅಲ್ ಫಯೆದ್ ಅವರದ್ದೇ ಆಗಿದೆ.

'ಸತಾನ್–2' ಖಂಡಾಂತರ ಕ್ಷಿಪಣಿ ರಷ್ಯಾ ಯುದ್ಧಪಡೆಗೆ ಸೇರ್ಪಡೆ

ಮಾಸ್ಕೊ: ಅತ್ಯಂತ ವಿನಾಶಕಾರಿ, ಅಣ್ವಸ್ತ್ರ ಸಾಮರ್ಥ್ಯದ 'ಸತಾನ್ –2' ಖಂಡಾಂತರ ಕ್ಷಿಪಣಿಯನ್ನು ಇದೇ ಮೊದಲ ಬಾರಿಗೆ ಯುದ್ಧಪಡೆಗೆ ಸೇರ್ಪಡೆ ಮಾಡಿರುವುದಾಗಿ ರಷ್ಯಾ ಶುಕ್ರವಾರ ಘೋಷಿಸಿದೆ.

ಪಾಶ್ಚಿಮಾತ್ಯ ಮಾಧ್ಯಮಗಳು ಸಾಮಾನ್ಯವಾಗಿ 'ಸತಾನ್ –2' ಎಂದೇ ಕರೆಯುವ ರಷ್ಯಾದ ಆರ್‌ಎಸ್–28 ಸರ್ಮಾಟ್ ಖಂಡಾಂತರ ಕ್ಷಿಪಣಿಯನ್ನು, ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಇದು 'ಅಜೇಯ' ಅಸ್ತ್ರವೆಂದು ಒಮ್ಮೆ ಬಣ್ಣಿಸಿದ್ದರು. ಈ ಕ್ಷಿಪಣಿಯನ್ನು ಪುಟಿನ್ 2018ರಲ್ಲಿ ಅನಾವರಣಗೊಳಿಸಿದ್ದರು.

ಉಕ್ರೇನ್ ಮೇಲೆ ಒಂದೂವರೆ ವರ್ಷದಿಂದ ಆಕ್ರಮಣ ನಡೆಸುತ್ತಿರುವ ರಷ್ಯಾ ಇದೇ ಮೊದಲ ಬಾರಿಗೆ ಯುದ್ಧ ಕರ್ತವ್ಯಕ್ಕೆ ನಿಯೋಜಿಸಿರುವುದಾಗಿ ದೇಶದ ಬಾಹ್ಯಾಕಾಶ ಸಂಸ್ಥೆ ರೋಸ್ಕೊಸ್‌ಮಾಸ್ ಶುಕ್ರವಾರ ಅಧಿಕೃತ ಘೋಷಣೆ ಮಾಡಿದೆ.

'ಸರ್ಮಾಟ್' ಕಾರ್ಯತಂತ್ರದ ಕ್ಷಿಪಣಿ ವ್ಯವಸ್ಥೆಯು ಸಕ್ರಿಯ ಕರ್ತವ್ಯಕ್ಕೆ ಪ್ರವೇಶಿಸಿದೆ ಎಂದು ರೋಸ್ಕೊಸ್‌ಮಾಸ್ ಮುಖ್ಯಸ್ಥ ಯುರಿ ಬೊರಿಸೊವ್ ತಿಳಿಸಿದ್ದಾರೆ.

'ಆರ್‌ಎಸ್–28 ಸರ್ಮಾಟ್' ದೇಶದ ಮುಂದಿನ ಪೀಳಿಗೆಯ ಖಂಡಾಂತರ ಕ್ಷಿಪಣಿಯಾಗಿದ್ದು, ವಿಶ್ವದಲ್ಲಿ ಇದೊಂದು ಅತ್ಯಂತ ಶಕ್ತಿಶಾಲಿ ಮತ್ತು ವಿನಾಶಕಾರಿ ಅಣ್ವಸ್ತ್ರ ಕ್ಷಿಪಣಿ ಆಗಿದೆ ಎಂದು 'ಸ್ಪುಟ್ನಿಕ್ ನ್ಯೂಸ್' ವರದಿ ಮಾಡಿದೆ.

ಕ್ಷಿಪಣಿ ವಿಶೇಷತೆ: 'ಸರ್ಮಾಟ್' ಕ್ಷಿಪಣಿ ವ್ಯವಸ್ಥೆಯು ಕಿಂಜಾಲ್ ಮತ್ತು ಅವನ್‌ಗಾರ್ಡ್ ಹೈಪರ್‌ಸಾನಿಕ್ ಕ್ಷಿಪಣಿಗಳನ್ನು ಒಳಗೊಂಡಿದೆ. 200 ಟನ್‌ಗೂ ಅಧಿಕ ಮತ್ತು ಬಹು ಸಿಡಿತಲೆಗಳನ್ನು ಈ ಕ್ಷಿಪಣಿ ಸಾಗಿಸಲಿದೆ. ಇದನ್ನು ಕ್ಷಿಪಣಿ ನಿಗ್ರಹ ರಕ್ಷಣಾ ವ್ಯವಸ್ಥೆಗಳಿಂದ ತಪ್ಪಿಸಿಕೊಳ್ಳುವಂತೆ ವಿನ್ಯಾಸಗೊಳಿಸಲಾಗಿದೆ. ಶತ್ರುಪಡೆಗಳ ಕಣ್ಗಾವಲು ವ್ಯವಸ್ಥೆಯನ್ನು ಪತ್ತೆ ಹಚ್ಚಿ ಅದನ್ನು ನಿಗ್ರಹಿಸಿಕೊಂಡು ಗುರಿಮುಟ್ಟುವಂತೆ ರೂಪಿಸಲಾಗಿದೆ ಎಂದು 'ಮಾಸ್ಕೊ ಟೈಮ್ಸ್' ವರದಿ ಮಾಡಿದೆ.

ನೊಬೆಲ್ ವಿಜೇತ, ರಷ್ಯಾ ಪತ್ರಕರ್ತನಿಗೆ ಗೂಢಚರ ಪಟ್ಟ

ಮಾಸ್ಕೊ (ಎಪಿ): ನೊಬೆಲ್ ಶಾಂತಿ ಪ್ರಶಸ್ತಿ ವಿಜೇತ ಪತ್ರಕರ್ತ ಡಿಮಿಟ್ರಿ ಮುರಾಟೋವ್ ಅವರನ್ನು ವಿದೇಶಿ ಗೂಢಚಾರಿ ಎಂದು ರಷ್ಯಾ ಸರ್ಕಾರ ಶುಕ್ರವಾರ ಘೋಷಿಸಿದೆ. ರಾಷ್ಟ್ರವನ್ನು ಟೀಕಿಸುವ ಮತ್ತು ಸ್ವತಂತ್ರ ವರದಿಗಾರಿಕೆಯನ್ನು ಹತ್ತಿಕ್ಕುವ ಕ್ರಮಗಳನ್ನು ಈ ಮೂಲಕ ರಷ್ಯಾ ಸರ್ಕಾರ ಮುಂದುವರಿಸಿದೆ.

ಮುರಾಟೋವ್ ಅವರು 'ನೊವಾಯ ಗೆಜೆಟಾ' ಪತ್ರಿಕೆಯ ಮುಖ್ಯ ಸಂಪಾದಕರಾಗಿದ್ದಾರೆ. ತನಿಖಾ ವರದಿಗಾರಿಕೆ ಮತ್ತು ಆಗಾಗ್ಗೆ ಕ್ರೆಮ್ಲಿನ್ (ಪುಟಿನ್ ಆಡಳಿತ ಕಚೇರಿ) ವಿರುದ್ಧ ಟೀಕೆಗಳನ್ನು ಮಾಡುವುದರಿಂದಾಗಿ 'ನೊವಾಯ ಗೆಜೆಟಾ' ವಿದೇಶಗಳಲ್ಲಿ ವ್ಯಾಪಕ ಗೌರವ ಸಂಪಾದಿಸಿಕೊಂಡಿದೆ. ಮುರಾಟೋವ್ 2021ರ ಸಾಲಿನ ನೊಬೆಲ್ ಪ್ರಶಸ್ತಿಯ ಸಹ–ಪುರಸ್ಕೃತರಾಗಿದ್ದರು. ತಮ್ಮ ನೊಬೆಲ್ ಪದಕವನ್ನು ಹರಾಜಿಗೆ ಹಾಕಿ, ಅದರಿಂದ ಬಂದ 103.5 ದಶಲಕ್ಷ ಡಾಲರ್ ಹಣವನ್ನು ಉಕ್ರೇನ್ ನಿರಾಶ್ರಿತ ಮಕ್ಕಳ ನೆರವಿಗೆ ಬಳಸುವುದಾಗಿ ಪ್ರಕಟಿಸಿದ್ದರು.

ಅಮೆರಿಕ ಓಪನ್ ಟೆನಿಸ್: ಕೊಕೊ ಮುನ್ನಡೆ, ಶ್ವಾಂಟೆಕ್‌ಗೆ ನಿರಾಯಾಸ ಗೆಲುವು

ಹಿನ್ನಡೆಯಿಂದ ಪುಟಿದೆದ್ದ ಜೊಕೊವಿಚ್

ನ್ಯೂಯಾರ್ಕ್ (ಎಪಿ): ನೊವಾಕ್ ಜೊಕೊವಿಚ್ ಅವರನ್ನು ಕಡೆಗಣಿಸುವಂತೆಯೇ ಇಲ್ಲ. ಎಷ್ಟೇ ಹಿನ್ನಡೆಯಲ್ಲಿದ್ದರೂ, ಕೆಲಕಾಲ ಲಯ ಕಳೆದುಕೊಂಡರೂ ಸರ್ಬಿಯಾದ ಆಟಗಾರ ಸುಲಭವಾಗಿ ಪಂದ್ಯ ಬಿಟ್ಟುಕೊಡುವವರಲ್ಲ. ಶುಕ್ರವಾರ ಮೂರನೇ ಸುತ್ತಿನ ಪಂದ್ಯದಲ್ಲಿ ಹೀಗೇ ಆಯಿತು. ಅಮೋಘ ಆಟವಾಡಿದ ಸ್ವದೇಶದ ಲಾಸ್ಲೊ ಜಿಯರ್ ವಿರುದ್ಧ ಎರಡು ಸೆಟ್‌ಗಳ ಹಿನ್ನಡೆಯಿಂದ ಚೇತರಿಸಿಕೊಂಡ ಅವರು ಕೊನೆಗೂ ಗೆದ್ದು ಅಮೆರಿಕ ಓಪನ್ ಟೆನಿಸ್ ಟೂರ್ನಿಯ ನಾಲ್ಕನೇ ಸುತ್ತನ್ನು ತಲುಪಿದರು.

36 ವರ್ಷದ ಜೊಕೊವಿಚ್ 4-6, 4-6, 6-1, 6-1, 6-3 ರಿಂದ ಜಿಯರ್ ವಿರುದ್ಧ ಜಯಗಳಿಸಿದರು. ಒಂದು ಹಂತದಲ್ಲಿ ಆತಂಕದಲ್ಲಿದ್ದ ಅವರು 2006ರ ನಂತರ ಅತಿ ಬೇಗನೆ ಹೊರಬೀಳುವರೊ ಎಂಬಂತೆ ಕಂಡಿತ್ತು. ಆದರೆ ತಾವೇಕೆ ಸಾರ್ವಕಾಲಿಕ ಶ್ರೇಷ್ಠ ಆಟಗಾರ ಎಂಬುದನ್ನು ಮತ್ತೊಮ್ಮೆ ಶ್ರುತಪಡಿಸಿದರು.

ಆರ್ಥರ್ ಆ್ಯಷ್ ಕ್ರೀಡಾಂಗಣದಲ್ಲಿ ಶುಕ್ರವಾರ ರಾತ್ರಿ ಆರಂಭವಾದ ಪಂದ್ಯ ಸುಮಾರು ಮೂರೂವರೆ ಗಂಟೆಗಳ ಕಾಲ ನಡೆದು ಶನಿವಾರ ಬೆಳಗಿನ ಜಾವ 1.30ಕ್ಕೆ ಮುಗಿಯಿತು. ಮೂರನೇ ಸೆಟ್‌ನಲ್ಲಿ ಪಡೆದ ಬಿಗಿಹಿಡಿತವನ್ನು ಜೊಕೊ ಕೊನೆಯವರೆಗೆ ಬಿಟ್ಟುಕೊಡಲಿಲ್ಲ.

‘ಕಣದಲ್ಲಿ ಉಳಿದಿರುವ ಇತರರಿಗೆ ಈ ಗೆಲುವಿನಿಂದ ಸಂದೇಶ ಹೋಗಿದೆ. ನಿಸ್ಸಂದೇಹವಾಗಿ ನಾನು ಈಗಲೂ ಐದು ಸೆಟ್‌ಗಳನ್ನು ಆಡಬಲ್ಲೆ. ಎರಡು ಸೆಟ್ ಹಿನ್ನಡೆಯಿಂದ ಪುನರಾಗಮನ ಮಾಡುವುದು ಮುಂದಿನ ಎದುರಾಳಿಗಳಿಗೆ ಪ್ರಬಲ ಸಂದೇಶ ಕಳುಹಿಸಿದಂತೆ’ ಎಂದು ಜೊಕೊವಿಚ್ ಹೇಳಿದರು. ಅವರ ಮುಂದಿನ ಎದುರಾಳಿ 25 ವರ್ಷ ವಯಸ್ಸಿನ ಆಟಗಾರ ಬೊರ್ನಾ ಗೊಜೊ. ಕ್ರೊವೇಷ್ಯಾದ ಈ ಆಟಗಾರ ಮೊದಲ ಸಲ ನಾಲ್ಕನೇ ಸುತ್ತು ಪ್ರವೇಶಿಸುವ ಹಾದಿಯಲ್ಲಿ 6-4, 6-3, 6-2ರಿಂದ ಚೆಕ್ ಗಣರಾಜ್ಯದ ಜಿರಿ ವೆಸೆಲಿ ಅವರನ್ನು ಸೋಲಿಸಿದರು.

ಅವರ 23 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳಲ್ಲಿ ಮೂರು ಫ್ಲಷಿಂಗ್ ಮಿಡೊದಲ್ಲಿ (ಅಮೆರಿಕ ಓಪನ್) ಬಂದಿವೆ. ಅವರು ಅರ್ಧ ಡಜನ್ ಸಲ ರನ್ನರ್ ಅಪ್ ಆಗಿದ್ದಾರೆ. 2021ರಲ್ಲಿ ಕೊನೆಯ ಬಾರಿ.

ಪಂದ್ಯ ಮುಗಿದ ನಂತರ ಇಬ್ಬರೂ ಅಪ್ಪಿಕೊಂಡರು. ಜಿಯರ್ ನಿರ್ಗಮಿಸುತ್ತಿದ್ದಂತೆ ಜೊಕೊವಿಚ್ ಎದ್ದುನಿಂತು ಗೌರವ ಸಲ್ಲಿಸಿದರು.



ದೀರ್ಘ ಹೋರಾಟದ ಪಂದ್ಯದಲ್ಲಿ ಬ್ರೇಕ್ ಪಾಯಿಂಟ್ ಪಡೆದಾಗ ನೊವಾಕ್ ಜೊಕೊವಿಚ್ ಖುಷಿ.... –ಎಎಫ್‌ಪಿ ಚಿತ್ರ

ಎಲಿನಾ ರಿಬಾಕಿನಾ ನಿರ್ಗಮನ

ಮಹಿಳೆಯರ ಸಿಂಗಲ್ಸ್‌ನಲ್ಲಿ ನಾಲ್ಕನೇ ಶ್ರೇಯಾಂಕದ ಎಲಿನಾ ರಿಬಾಕಿನಾ ಹೊರಬಿದ್ದರು. 30ನೇ ಶ್ರೇಯಾಂಕದ ಸೊರಾನಾ ಸಿರ್ಸ್ಟಿಯಾ 6-3, 6-7 (6), 6-4 ರಿಂದ ರಿಬಾಕಿನಾ ಅವರನ್ನು ಸೋಲಿಸಿದರು. ಈ ಟೂರ್ನಿಯ ಮಹಿಳೆಯರ ವಿಭಾಗದಲ್ಲಿ ಇದುವರೆಗೆ ಹೊರಬಿದ್ದ ಅತಿ ಹೆಚ್ಚಿನ ಶ್ರೇಯಾಂಕ ಆಟಗಾರ್ತಿ ಎನಿಸಿದರು. ಫ್ಲಷಿಂಗ್ ಮಿಡೊದಲ್ಲಿ ಮೊದಲ ಬಾರಿ ರುಮೇನಿಯಾದ ಸೊರಾನಾ ನಾಲ್ಕನೇ ಸುತ್ತಿಗೆ ಕಾಲಿಟ್ಟಿದ್ದಾರೆ.

2022ರಲ್ಲಿ ವಿಂಬಲ್ಡನ್ ಚಾಂಪಿಯನ್ ಆಗಿದ್ದ, ಕಜಕಸ್ತಾನದ ರಿಬಾಕಿನಾ ಅಮೆರಿಕ ಓಪನ್‌ನಲ್ಲಿ ನಾಲ್ಕನೇ ಸುತ್ತನ್ನು ದಾಟಿಲ್ಲ.

ಅಗ್ರ ಶ್ರೇಯಾಂಕದ ಇಗಾ ಶ್ವಾಂಟೆಕ್ ನಿರಾಯಾಸ ಜಯಗಳಿಸಿ ಅಂತಿಮ 16ರ ಸುತ್ತಿಗೆ ಕಾಲಿಟ್ಟರು. ಅವರು ಆಪ್ತ ಸ್ನೇಹಿತೆ, ಸ್ಲೊವಾಕಿಯಾದ ಕಾಜಾ ಜುವಾನ್ ಅವರನ್ನು 6-0, 6-1 ರಿಂದ ಸದೆಬಡಿದರು.

ಆರನೇ ಶ್ರೇಯಾಂಕದ ಕೊಕೊ ಗಾಫ್ 3-6, 6-3, 6-0ಯಿಂದ 32ನೇ ರ್‍ಯಾಂಕಿನ ಎಲಿಸಿ ಮೆರ್ಟೆನ್ಸ್ ಅವರನ್ನು ಸೋಲಿಸಿದರು. ಅವರು ನಾಲ್ಕನೇ ಸುತ್ತಿನಲ್ಲಿ ಕರೋಲಿನ್ ವೋಜ್ನಿಯಾಕಿ ಅವರನ್ನು ಎದುರಿಸಲಿದ್ದಾರೆ. ವೋಜ್ನಿಯಾಕಿ ಇನ್ನೊಂದು ಪಂದ್ಯದಲ್ಲಿ ಜೆನಿಫರ್ ಬ್ರಾಡಿ ಅವರನ್ನು 4-6, 6-3, 6-1 ರಿಂದ ಸೋಲಿಸಿದರು.

10ನೇ ಶ್ರೇಯಾಂಕದ ಕರೋಲಿನಾ ಮುಚೊವಾ (ಚೆಕ್ ಗಣರಾಜ್ಯ) 7-6 (7-0), 6-3 ರಿಂದ ಅಮೆರಿಕದ ಟೇಲರ್ ಟೌನ್ಸೆಂಡ್ ಮೇಲೆ ಜಯಗಳಿಸಿದರು.

14ನೇ ಶ್ರೇಯಾಂಕದ ಟಾಮಿ ಪಾಲ್ ಕೂಡ ಮೊದಲ ಬಾರಿ ಈ ಟೂರ್ನಿಯ ನಾಲ್ಕನೇ ಸುತ್ತಿಗೆ ಕಾಲಿಟ್ಟರು. 26 ವರ್ಷದ ಪಾಲ್ 6-1, 6-0, 3-6, 6-3 ರಿಂದ 21ನೇ ಕ್ರಮಾಂಕದ ಅಲೆಜಾಂಡ್ರೊ ಡೇವಿಡೊವಿಚ್ ಫೊಕಿನಾ (ಸ್ಪೇನ್) ಅವರನ್ನು ಸೋಲಿಸಿದರು.

ಅಮೆರಿಕದ ಫ್ರಾನ್ಸಿಸ್ ಟಿಫೊ ಇನ್ನೊಂದು ಹೋರಾಟದ ಪಂದ್ಯದಲ್ಲಿ ಅಡ್ರಿಯಾನ್ ಮನ್ನಾರಿನೊ ಅವರನ್ನು 4-6, 6-2, 6-3, 7-6 (6) ರಿಂದ ಸೋಲಿಸಿದರು. ಕಳೆದ ವರ್ಷ ಟಿಫೊ ಈ ಟೂರ್ನಿಯ ಸೆಮಿಫೈನಲ್ ತಲುಪುವ ಮೂಲಕ, 1972ರ ನಂತರ ಈ ಹಂತಕ್ಕೆ ತಲುಪಿದ ಅಮೆರಿಕದ ಮೊದಲ ಕಪ್ಪು ವರ್ಣೀಯ ಆಟಗಾರ ಎನಿಸಿದ್ದರು. 1972ರಲ್ಲಿ ಆರ್ಥರ್ ಆ್ಯಷ್ ಈ ಸಾಧನೆ ಮಾಡಿದ್ದರು.

ಇನ್ನೊಂದೆಡೆ ಯಶಸ್ವಿನ ಓಟ ಮುಂದುವರಿಸಿರುವ, 22 ವರ್ಷದ ರಿಂಕಿ ಹಿಜಿಕಾಟಾ ಅವರು ಅಂತಿಮ 16ರ ಘಟ್ಟ ಪ್ರವೇಶಿಸಿದರು. ವೈಲ್ಡ್ ಕಾರ್ಡ್ ಪ್ರವೇಶ ಪಡೆದ ಆಸ್ಟ್ರೇಲಿಯಾದ ಆಟಗಾರ 6-3, 6-3, 4-6, 6-3 ರಿಂದ ಚೀನಾದ ಝಾಂಗ್ ಝಿಝೆನ್ ಅವರನ್ನು ಹಿಮ್ಮೆಟ್ಟಿಸಿದರು.

ಸ್ಯಾಫ್ ಫುಟ್‌ಬಾಲ್: ಭಾರತ ತಂಡಕ್ಕೆ ಜಯ

ಥಿಂಪು (ಪಿಟಿಐ): ಭಾರತ ಬಾಲಕರ ತಂಡ, ಸ್ಯಾಫ್ 16 ವರ್ಷದೊಳಗಿನವ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ‘ಎ’ ಗುಂಪಿನ ಪಂದ್ಯದಲ್ಲಿ ಶನಿವಾರ ಬಾಂಗ್ಲಾದೇಶ ವಿರುದ್ಧ ಪ್ರಯಾಸದ 1-0 ಗೆಲುವು ಪಡೆಯಿತು.

ಇಶ್ಫಾಖ್ ಅಹ್ಮದ್ ತರಬೇತಿಯ ಭಾರತ ತಂಡ ಮೊದಲ ಬಾರಿ ಅಂತರ ರಾಷ್ಟ್ರೀಯ ಪಂದ್ಯವಾಡುತ್ತಿದೆ. ತಂಡದ ಕೆಲವು ಗೋಲಿನ ಯತ್ನಗಳನ್ನು ಬಾಂಗ್ಲಾದ ಗೋಲ್‌ಕೀಪರ್ ತಡೆದರು. ಆದರೆ, 74ನೇ ನಿಮಿಸದಲ್ಲಿ ಭಾರತದ ತೌಂಗಂಬಾ ಸಿಂಗ್ ಉಷಮ್ ನಿರ್ಣಾಯಕ ಗೋಲು ದಾಖಲಿಸಿದರು.

ಹೈದರಾಬಾದ್ ರೇಸ್

ಸಿಂಥೆಸಿಸ್ ಗೆಲ್ಲುವ ನಿರೀಕ್ಷೆ

ರೇಸ್2ವಿನ್.ಕಾಮ್ ಡೆಕ್ಕನ್ ಕೋಲ್ಟ್ಸ್ ಚಾಂಪಿಯನ್‌ಶಿಪ್ ಸ್ಟೇಕ್ಸ್ ಭಾನುವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸಿಂಥೆಸಿಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಲೇಡಿ ರಿಸ್ಪೈನ್ಸ್ 6, ಸ್ಟನ್ನಿಂಗ್ ಆರ್ಟ್ 2, ಸೇಕ್ರೆಡ್ ಬಾಂಡ್ 1
2ನೇ ರೇಸ್: ಪ್ರೊಟೊಕಾಲ್ 2, ಸಿಲ್ವರ್ ಲೈನಿಂಗ್ 7, ಮೈ ಮಾಸ್ಟರ್ 2,
3ನೇ ರೇಸ್: ದಿ ಹ್ಯಾಂಬೋನ್ 4, ಬ್ಲಾಸ್ಟ್ ಇನ್ ಕ್ಲಾಸ್ 1, ಪ್ಲೆಥೋರ 3
4ನೇ ರೇಸ್: ಸ್ವಾರ್ಮಿ ಓಷನ್ 3, ಹ್ಯೂಮಾನಿಟೇರಿಯನ್ 1, ಟ್ರೂಥ್ 2
5ನೇ ರೇಸ್: ಸಿಂಥೆಸಿಸ್ 6, ಡೆಸ್ಟ್ರಾಯರ್ 2, ಕ್ವಾರ್ 1
6ನೇ ರೇಸ್: ಕೆನಾಫ್ 4, ಆರ್ಕ್‌ವೇ 2, ಲಾ ಮಿರೇಜ್ 1
7ನೇ ರೇಸ್: ಕ್ಲಾಸಿ ಡೇಮ್ 1, ಡೂ ಎ ಡೀರ್ 2, ಸೊಪ್ರಾನಾಸ್ 3

ಅತ್ಯುತ್ತಮ ಬೆಟ್: ಸ್ವಾರ್ಮಿ ಓಷನ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಹಾಕಿ: ಕರ್ನಾಟಕ ತಂಡ ಫೈನಲ್‌ಗೆ

ಚೆನ್ನೈ (ಪಿಟಿಐ): ಕರ್ನಾಟಕ ಮತ್ತು ಇಂಡಿಯನ್ ರೈಲ್ವೇಸ್ ತಂಡಗಳು ಇಲ್ಲಿ ನಡೆಯುತ್ತಿರುವ ಎಂಸಿಸಿ ಮುರುಗಪ್ಪ ಗೋಲ್ಡ್ ಕಪ್ ಹಾಕಿ ಟೂರ್ನಿಯ ಫೈನಲ್ ಪ್ರವೇಶಿಸಿದ್ದು, ಭಾನುವಾರ ಪ್ರಶಸ್ತಿಗೆ ಪೈಪೋಟಿ ನಡೆಸಲಿವೆ.

ಶನಿವಾರ ನಡೆದ ಸೆಮಿಫೈನಲ್‌ನಲ್ಲಿ ಕರ್ನಾಟಕ ತಂಡವು 3-3 ಗೋಲುಗಳೊಂದಿಗೆ ಇಂಡಿಯನ್ ಆರ್ಮಿ ತಂಡದ ಜತೆ ಸಮಬಲ ಸಾಧಿಸಿತು. ಬಳಿಕ ಪೆನಾಲ್ಟಿ ಶೂಟೌಟ್‌ನಲ್ಲಿ 4-3ರಿಂದ ಗೆಲುವು ಪಡೆಯಿತು. ಮತ್ತೊಂದು ಪಂದ್ಯದಲ್ಲಿ ಇಂಡಿಯನ್ ರೈಲ್ವೇಸ್ ತಂಡವು 3-2ರಿಂದ ಪಂಜಾಬ್ ನ್ಯಾಷನಲ್ ಬ್ಯಾಂಕ್ ತಂಡವನ್ನು ಮಣಿಸಿತು.

ಟಿಟಿ: ತೆಶುಬ್, ಹಿಯಾಗೆ ಪ್ರಶಸ್ತಿ

ಬೆಂಗಳೂರು: ತೆಶುಬ್ ದಿನೇಶ್ ಮತ್ತು ಹಿಯಾ ಸಿಂಗ್ ಅವರು ಬೆಳಗಾವಿ ಟೇಬಲ್ ಟೆನಿಸ್ ಸಂಸ್ಥೆ ಆಶ್ರಯದಲ್ಲಿ ನಡೆಯುತ್ತಿರುವ ರಾಜ್ಯ ರ್‍ಯಾಂಕಿಂಗ್ ಟಿ.ಟಿ. ಟೂರ್ನಿಯಲ್ಲಿ ಕ್ರಮವಾಗಿ 15 ವರ್ಷದೊಳಗಿನ ಬಾಲಕ, ಬಾಲಕಿಯರ ವಿಭಾಗದಲ್ಲಿ ಪ್ರಶಸ್ತಿ ಗೆದ್ದರು.

ಟೂರ್ನಿಯ ಮೂರನೇ ದಿನವಾದ ಶನಿವಾರ ನಡೆದ ಬಾಲಕರ ಫೈನಲ್ ಪಂದ್ಯದಲ್ಲಿ ತೆಶುಬ್ 11-5, 11-5, 11-7 ರಿಂದ ಆರ್ಯ ಎ. ಜೈನ್ ಅವರನ್ನು ಮಣಿಸಿದರು.

ಬಾಲಕಿಯರ ಫೈನಲ್ ಪಂದ್ಯದಲ್ಲಿ ಹಿಯಾ ಸಿಂಗ್ 11-8, 11-8, 12-10 ರಿಂದ ಹಿಮಾಂಶಿ ಚೌಧರಿ ಅವರನ್ನು ಪರಾಭವಗೊಳಿಸಿದರು.



ಭಾರತ ಕ್ರಿಕೆಟ್ ತಂಡದ ಆಟಗಾರ ಕೆ.ಎಲ್. ರಾಹುಲ್ ಮತ್ತು ಅವರ ಪತ್ನಿ ಆಥಿಯಾ ಶೆಟ್ಟಿ ಅವರು ದೊಡ್ಡಬಳ್ಳಾಪುರ ತಾಲ್ಲೂಕಿನ ಘಾಟಿ ಸುಬ್ರಹ್ಮಣ್ಯ ದೇವಾಲಯದಲ್ಲಿ ಶನಿವಾರ ಪೂಜೆ ಸಲ್ಲಿಸಿದರು. ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಎನ್.ಕೃಷ್ಣಪ್ಪ ಇದ್ದರು

ಡೈಮಂಡ್ ಲೀಗ್ ಫೈನಲ್‌ಗೆ ಸಾಬ್ಳೆ

ಷಾಮೆನ್ ಲೆಗ್‌ನ ಸ್ಟೀಪಲ್‌ಚೇಸ್ ಸ್ಪರ್ಧೆಯಲ್ಲಿ ಐದನೇ ಸ್ಥಾನ

ಷಾಮೆನ್ (ಚೀನಾ), (ಪಿಟಿಐ): ಭಾರತದ ಅವಿನಾಶ್ ಸಾಬ್ಳೆ, ಡೈಮಂಡ್ ಲೀಗ್ ಷಾಮೆನ್ ಲೆಗ್‌ನ ಪುರುಷರ 3000 ಮೀ. ಸ್ಟೀಪಲ್‌ಚೇಸ್ ಸ್ಪರ್ಧೆಯಲ್ಲಿ ಐದನೇ ಸ್ಥಾನ ಪಡೆದು ಗಮನ ಸೆಳೆದರು. ಆ ಮೂಲಕ ಅಮೆರಿಕದ ಯುಜೀನ್‌ನಲ್ಲಿ ಈ ತಿಂಗಳ 16 ಮತ್ತು 17ರಂದು ನಡೆಯಲಿರುವ ಡೈಮಂಡ್ ಲೀಗ್ ಗ್ರ್ಯಾಂಡ್ ಫಿನಾಲೆಗೆ ಅರ್ಹತೆ ಸಂಪಾದಿಸಿದರು.

ಕಳೆದ ತಿಂಗಳು ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ನಿರಾಸೆ ಮೂಡಿಸಿದ್ದ 28 ವರ್ಷದ ಸಾಬ್ಳೆ, ಶನಿವಾರ ಈ ಓಟವನ್ನು ಪೂರೈಸಲು 8ನಿ.16.27 ಸೆಕೆಂಡು ತೆಗೆದುಕೊಂಡರು. ಇದು ಅವರ ಶ್ರೇಷ್ಠ ಸಾಧನೆಯೇನಲ್ಲ. ಈ ಋತುವಿನಲ್ಲಿ ಅವರ ಉತ್ತಮ ಸಾಧನೆ 8ನಿ.11.63 ಸೆ. ಹಾಗೂ ವೈಯಕ್ತಿಕ ಶ್ರೇಷ್ಠ ಸಾಧನೆ 8ನಿ.11.20 ಸೆ. ಆಗಿದೆ.

ಒಲಿಂಪಿಕ್ ಮತ್ತು ವಿಶ್ವ ಚಾಂಪಿಯನ್ ಸುಫಿಯಾನ್ ಅಲ್ ಬಕಾಲಿ (ಮೊರಾಕೊ) 8ನಿ.10.31 ಸೆ.ಗಳಲ್ಲಿ ಗುರಿ ತಲುಪಿ ಸ್ವರ್ಣ ಗೆದ್ದರು. ಇಥಿಯೋಪಿಯಾದ ಸಾಮ್ಯುಯೆಲ್ ಫಿರೆವು (8:11.29) ಎರಡನೇ ಮತ್ತು ಕೆನ್ಯಾದ ಅಮೊಸ್ ಸೆರೆಮ್ (8:14.41) ಮೂರನೇ ಸ್ಥಾನ ಪಡೆದರು.

ಸಾಬ್ಳೆ ಈ ಋತುವಿನ 4 ಕೂಟಗಳಿಂದ 11 ಪಾಯಿಂಟ್ಸ್ ಗಳಿಸಿ ಆರನೇಯವರಾಗಿ ಡೈಮಂಡ್ ಲೀಗ್ ಫಿನಾಲೆಗೆ ಅರ್ಹತೆ ಪಡೆದರು. ಇದು ಅವರ ಮೊದಲ ಡೈಮಂಡ್ ಲೀಗ್ ಫೈನಲ್ ಆಗಿದೆ.

ಜಾವೆಲಿನ್ ಚಾಂಪಿಯನ್ ನೀರಜ್ ಚೋಪ್ರಾ (ಸೆ. 16) ಮತ್ತು ಲಾಂಗ್ ಜಂಪ್ ಪಟು ಮುರಳಿ ಶ್ರೀಶಂಕರ್ (ಸೆ. 17) ಅವರೂ ಫೈನಲ್‌ಗೆ ಅರ್ಹತೆ ಗಿಟ್ಟಿಸಿದ್ದಾರೆ.

ಪುರುಷರ ಟ್ರಿಪಲ್‌ಜಂಪ್‌ನಲ್ಲಿ ರಾಷ್ಟ್ರೀಯ ದಾಖಲೆ ಹೊಂದಿರುವ ಪ್ರವೀಣ್ ಚಿತ್ರವೇಲ್ 16.42 ಮೀ. ಜಿಗಿದು ಐದನೇ ಸ್ಥಾನ ಪಡೆದರೆ, ಅಬ್ದುಲ್ಲಾ ಅಬೂಬಕ್ಕರ್ 16.25 ಮೀ. ಜಿಗಿದು ಆರನೇ ಸ್ಥಾನ ಪಡೆದರು. ಆದರೆ ಇವರು ಒಟ್ಟಾರೆ ಲೆಗ್‌ಗಳಲ್ಲಿ ತೋರಿದ ಸಾಧನೆ ಆಧಾರದಲ್ಲಿ 9 ಮತ್ತು 10ನೇ ಸ್ಥಾನ ಪಡೆದರು. ಓಟದ ಸ್ಪರ್ಧೆಗಳಲ್ಲಿ ಮೊದಲ 10 ಸ್ಥಾನ ಪಡೆದವರು ಮತ್ತು ಫೀಲ್ಡ್ (ಜಿಗಿತ, ಎಸೆತ) ಸ್ಪರ್ಧೆಗಳಲ್ಲಿ ಮೊದಲ ಆರು ಸ್ಥಾನ ಪಡೆದವರು ಡೈಮಂಡ್ ಲೀಗ್ ಫೈನಲ್‌ಗೆ ಅರ್ಹತೆ ಪಡೆಯುತ್ತಾರೆ.

ಸ್ಟಿಮ್ಯಾಚ್‌ಗೆ ನೋಟಿಸ್ ಜಾರಿ

ನವದೆಹಲಿ (ಪಿಟಿಐ): ಭಾರತ ಸೀನಿಯರ್ ಫುಟ್‌ಬಾಲ್ ತಂಡದ ಹೆಡ್ ಕೋಚ್ ಇಗೊರ್ ಸ್ಟಿಮ್ಯಾಚ್ ಅವರಿಗೆ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಶನಿವಾರ ಷೋಕಾಸ್ ನೋಟಿಸ್ ಜಾರಿ ಮಾಡಿದೆ. ಅವರು ಮಾಡಿರುವ ಟೀಕೆಯಿಂದ ಒಪ್ಪಂದದ ಉಲ್ಲಂಘನೆಯಾಗಿದೆ ಎಂದು ಈ ಕ್ರಮ ಕೈಗೊಳ್ಳಲಾಗಿದೆ.

ಏಷ್ಯನ್ ಗೇಮ್ಸ್ ಸಿದ್ಧತೆಗಾಗಿ ನಡೆಯುತ್ತಿರುವ ರಾಷ್ಟ್ರೀಯ ಶಿಬಿರಕ್ಕೆ ಆಟಗಾರರನ್ನು ಬಿಟ್ಟುಕೊಡದ ಕೆಲವು ಐಎಸ್‌ಎಲ್ ಕ್ಲಬ್‌ಗಳ ನಡೆಗೆ ಸ್ಟಿಮ್ಯಾಚ್ ಆಕ್ರೋಶ ವ್ಯಕ್ತಪಡಿಸಿದ್ದು, ‘ಭಾರತದ ಫುಟ್‌ಬಾಲ್‌ಗೆ ತಮ್ಮ ನೆರವು ಬೇಕಾದರೆ ಸತ್ಯಹೇಳಬೇಕಾಗುವುದು ತಮಗೆ ಅನಿವಾರ್ಯ ಆಗುತ್ತದೆ’ ಎಂದು ಹೇಳಿದ್ದರು.

ಕ್ರೊವೇಷ್ಯಾದ ಮಾಜಿ ಡಿಫೆಂಡರ್ ಅವರ ಬಹಿರಂಗವಾಗಿ ಹೇಳಿಕೆ ನೀಡಿದ್ದು ಎಐಎಫ್‌ಎಫ್‌ನ ಉನ್ನತ ಅಧಿಕಾರವರ್ಗಕ್ಕೆ ರುಚಿಸಿಲ್ಲ ಎನ್ನಲಾಗಿದ್ದು, ಇದಕ್ಕೆ ಕೋಚ್ ಅವರಿಂದ ಸ್ಪಷ್ಟನೆ ಕೇಳಿದ್ದಾರೆ.

‘ಇದು ನಿನ್ನೆ-ಮೊನ್ನೆಯ ಹೇಳಿಕೆಗೆ ಸಂಬಂಧಿಸಿದ್ದಲ್ಲ. ಕೆಲವು ದಿನಗಳಿಂದ ಅವರು ಹೇಳಿಕೆಗಳನ್ನು ನೀಡುತ್ತಿದ್ದಾರೆ. ಎಐಎಫ್‌ಎಫ್ ಜೊತೆ ಮಾಡಿರುವ ಒಪ್ಪಂದದ ಕರಾರು ಮುರಿಯುತ್ತಿದ್ದಾರೆ. ಅವರಿಗೆ ಏನಾದರೂ ಸಮಸ್ಯೆಯಿದ್ದರೆ ಬಹಿರಂಗ ಹೇಳಿಕೆ ನೀಡುವ ಬದಲು ನಮ್ಮ ಜೊತೆ ಚರ್ಚಿಸಬಹುದಿತ್ತು. ನೋಟಿಸ್‌ಗೆ ಅವರು ಏನು ಉತ್ತರ ಕೊಡುತ್ತಾರೆ ಎನ್ನುವುದನ್ನು ನೋಡಿ ಚರ್ಚಿಸುತ್ತೇವೆ’ ಎಂದು ಫೆಡರೇಷನ್ ಮೂಲವೊಂದು ಪಿಟಿಐಗೆ ತಿಳಿಸಿದೆ.

ಡುರಾಂಡ್: ಇಂದು ಫೈನಲ್ ಬೆಂಗಾಲ್–ಬಾಗನ್ ಪೈಪೋಟಿ

ಕೋಲ್ಕತ್ತ (ಪಿಟಿಐ): ಸಾಂಪ್ರದಾಯಿಕ ಎದುರಾಳಿಗಳಾದ ಮೋಹನ್ ಬಾಗನ್ ಸೂಪರ್ ಜೈಂಟ್ಸ್ ಮತ್ತು ಈಸ್ಟ್ ಬೆಂಗಾಲ್ ಎಫ್‌ಸಿ ತಂಡಗಳು 132ನೇ ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯ ಪ್ರಶಸ್ತಿಗಾಗಿ ಭಾನುವಾರ ಸೆಣಸಾಡಲಿವೆ.

ಈಸ್ಟ್ ಬೆಂಗಾಲ್ ತಂಡವು 2004ರ ಬಳಿಕ ಇದೇ ಮೊದಲ ಬಾರಿಗೆ ಪ್ರಶಸ್ತಿ ಸುತ್ತಿಗೆ ಪ್ರವೇಶ ಪಡೆದಿದೆ. ಈ ಆವೃತ್ತಿಯಲ್ಲಿ ಒಟ್ಟು ಐದು ಪಂದ್ಯಗಳನ್ನು ಆಡಿರುವ ಬೆಂಗಾಲ್ ತಂಡ ನಾಲ್ಕರಲ್ಲಿ ಗೆದ್ದರೆ, ಒಂದು ಪಂದ್ಯದಲ್ಲಿ ಡ್ರಾ ಸಾಧಿಸಿ ಅಜೇಯವಾಗಿದೆ.

ಬಾಗನ್ ತಂಡವು 2000ರಲ್ಲಿ ಕೊನೆಯ ಬಾರಿ ಕಪ್ ಗೆದ್ದಿದೆ. ಇಂಡಿಯನ್ ಸೂಪರ್ ಲೀಗ್‌ನ ಹಾಲಿ ಚಾಂಪಿಯನ್ ಆಗಿರುವ ಬಾಗನ್ ತಂಡವು ಉತ್ತಮ ಪ್ರದರ್ಶನದ ವಿಶ್ವಾಸದಲ್ಲಿದೆ. ಲೀಗ್ ಹಂತದಲ್ಲಿ ಈಸ್ಟ್ ಬೆಂಗಾಲ್ ವಿರುದ್ಧ 0–1ರಿಂದ ಸೋತಿದ್ದ ಬಾಗನ್ ತಂಡ ಮುಯ್ಯಿ ತೀರಿಸಿಕೊಳ್ಳುವ ತವಕದಲ್ಲಿದೆ.

2004ರಲ್ಲಿಯೂ ಇದೇ ತಂಡಗಳು ಫೈನಲ್‌ನಲ್ಲಿ ಮುಖಾಮುಖಿಯಾಗಿದ್ದು, ಬೆಂಗಾಲ್ ತಂಡ ಗೆದ್ದಿತ್ತು.

ಪಂದ್ಯ ಆರಂಭ: ಸಂಜೆ 4, **ನೇರಪ್ರಸಾರ:** ಸೋನಿ ಸ್ಪೋರ್ಟ್ಸ್ ಟೆನ್ 2, ಸೋನಿ ಎಲ್‌ಐವಿ

ಏಷ್ಯನ್ ಗೇಮ್ಸ್: ಭಾರತ ಶೂಟಿಂಗ್ ತಂಡ ಆಯ್ಕೆ

ನವದೆಹಲಿ (ಪಿಟಿಐ): ಚೀನಾದಲ್ಲಿ ಇದೇ ತಿಂಗಳು ನಡೆಯಲಿರುವ ಏಷ್ಯನ್ ಕ್ರೀಡಾಕೂಟದಲ್ಲಿ ಕಣಕ್ಕಿಳಿಯುವ ಭಾರತದ ಶೂಟಿಂಗ್ ತಂಡದಲ್ಲಿ 35 ಆಟಗಾರರು ಸ್ಥಾನ ಪಡೆದಿದ್ದಾರೆ.

ಹಾಂಗಜೌನಲ್ಲಿ ಸೆ 23 ರಿಂದ ಏಷ್ಯನ್ ಗೇಮ್ಸ್ ಆರಂಭವಾಗಲಿದೆ. ಅ.22 ರಿಂದ ನ.2ರವರೆಗೆ ದಕ್ಷಿಣ ಕೊರಿಯಾದಲ್ಲಿ ಏಷ್ಯನ್ ಚಾಂಪಿಯನ್‌ಷಿಪ್ ಕೂಡ ನಡೆಯಲಿದೆ. ಇವೆರಡೂ ಕೂಟಗಳಿಗೆ ಭಾರತ ರಾಷ್ಟ್ರೀಯ ರೈಫಲ್ ಶೂಟಿಂಗ್ ಸಂಸ್ಥೆ (ಎನ್‌ಆರ್‌ಎಐ) ಶನಿವಾರ ತಂಡವನ್ನು ಪ್ರಕಟಿಸಿದೆ.

ಮುಂದಿನ ವರ್ಷ ನಡೆಯಲಿರುವ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಲು ಈ ಏಷ್ಯನ್ ಕ್ರೀಡಾಕೂಟದಲ್ಲಿ 24 ಮಂದಿಗೆ ಅವಕಾಶ ಇದೆ. ಅದರಲ್ಲಿ 12 ವೈಯಕ್ತಿಕ ವಿಭಾಗದ ಸ್ಪರ್ಧೆಗಳಲ್ಲಿ ತಲಾ ಎರಡು ಸ್ಥಾನಗಳಿವೆ. ರೈಫಲ್, ಪಿಸ್ತೂಲ್ ಮತ್ತು ಶಾಟ್‌ಗನ್ ಸ್ಪರ್ಧೆಗಳು ಇವೆ.

ಭಾರತವು 16 ಸ್ಪರ್ಧೆಗಳಲ್ಲಿ ಭಾಗವಹಿಸಲಿದೆ. ಇದರಲ್ಲಿ ಮಿಶ್ರ ವಿಭಾಗದ ನಾಲ್ಕು ಸ್ಪರ್ಧೆಗಳೂ ಇವೆ.

ಈ ಬಾರಿ ತಂಡದಲ್ಲಿ ನಾಲ್ವರು ಹೆಚ್ಚುವರಿ ಶೂಟರ್‌ಗಳೂ ಇದ್ದಾರೆ. ರುದ್ರಾಂಕ್ಷ್ ಪಾಟೀಲ, ಮೆಹುಲಿ ಘೋಷ್, ಸಿಫ್ಟ್ ಕೌರ್ ಸಮ್ರಾ ಹಾಗೂ ರಾಜೇಶ್ವರಿ ಕುಮಾರಿ ಅವರು ಸ್ಥಾನ ಗಳಿಸಿದ್ದಾರೆ.

ಮನು ಭಾಕರ್, ದಿವ್ಯಾಂಶ್ ಸಿಂಗ್ ಪನ್ವರ್, ಐಶ್ವರ್ಯಾ ಪ್ರತಾಪ್ ಸಿಂಗ್ ತೋಮರ್, ಅಖಿಲ್ ಶೇರಾನ್, ರಿದಂ ಸಂಗ್ವಾನ್, ಈಶಾ ಸಿಂಗ್, ಆದರ್ಶ ಸಿಂಗ್, ಕೈನನ್ ಚೆನಾಯ್, ಗಣೇಮತ್ ಸೆಕಾನ್ ಅವರಿಗೆ ಪ್ಯಾರಿಸ್ ರಹದಾರಿ ಗಿಟ್ಟಿಸಲು ಇದೊಂದು ಉತ್ತಮ ಅವಕಾಶವಾಗಿದೆ.

ಅಜರ್‌ಬೈಜಾನ್‌ನಲ್ಲಿ ಈಚೆಗೆ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಏಳು ಶೂಟರ್‌ಗಳು ಒಲಿಂಪಿಕ್ ಅರ್ಹತೆ ಗಿಟ್ಟಿಸಿದರು. ಭವನೀಶ್ ಮೆಡಿರಟಾ (ಪುರುಷರ ಟ್ರ್ಯಾಪ್), ರುದ್ರಾಂಕ್ಷ್ ಪಾಟೀಲ (ಪುರುಷರ 10 ಮೀ ರೈಫಲ್) ಮತ್ತು ಸ್ವಪ್ನಿಲ್ ಕುಶಾಲೆ (ಪುರುಷರ 50 ಮೀ ರೈಫಲ್, 3 ಪೊಸಿಷನ್ಸ್) ಹೋದ ವರ್ಷದ ಐಎಸ್‌ಎಸ್‌ಎಫ್ ವಿಶ್ವ ಶೂಟಿಂಗ್‌ನಲ್ಲಿ ಗೆದ್ದು ಪ್ಯಾರಿಸ್ ಒಲಿಂಪಿಕ್‌ಗೆ ಟಿಕೆಟ್ ಪಡೆದಿದ್ದರು.



ಪ್ರಜಾವಾಣಿ ಭಾನುವಾರದ ಪುರವಣಿ

ಭಾನುವಾರ, 3 ಸೆಪ್ಟೆಂಬರ್ 2023



ಬಿ–ಬಾಯಿಂಗ್ ಕನಸಿಗೆ ಒಲಿಂಪಿಕ್ಸ್ ರೆಕ್ಕೆ

2024ರಲ್ಲಿ ಪ್ಯಾರಿಸ್‌ನಲ್ಲಿ ನಡೆಯಲಿರುವ ಒಲಿಂಪಿಕ್ಸ್‌ನಲ್ಲಿ ಬಿ–ಬಾಯಿಂಗ್ ಸ್ಪರ್ಧೆ ಸೇರ್ಪಡೆಯಾಗಲಿದೆ. ಇದೊಂದು ಬೆಳ್ಳಿಗೆರೆಯನ್ನೇ ನೆಚ್ಚಿಕೊಂಡು ಧಾರಾವಿಯ ಯುವಮನ ಅದಾಗಲೇ ಅರಳತೊಡಗಿದೆ.

ಗುರುರಾಜ್ ಎಸ್. ದಾವಣಗೆರೆ

ಯುವಕನ ಹೆಸರು ಅಕ್ಕು ಅಲಿಯಾಸ್ ಆಕಾಶ್ ಥಂಗರ್. ಧಾರಾವಿಯಲ್ಲಿ ವಾಸವಿರುವ ಅಕ್ಕು ಕಳೆದೊಂದು ತಿಂಗಳಿನಿಂದ ಜಗತ್ತನ್ನೆ ಗೆದ್ದಷ್ಟು ಖುಷಿಯಲ್ಲಿದ್ದಾನೆ. ಅದಕ್ಕೆ ಕಾರಣ ಅಕ್ಕುವಿಗೆ ತಾನು ಚಿಕ್ಕಂದಿನಲ್ಲಿ ಕಲಿತ ಬ್ರೇಕ್ ಡ್ಯಾನ್ಸ್‌ಗೆ ಅಂತರರಾಷ್ಟ್ರೀಯ ಆಟದ ಮಾನ್ಯತೆ ಸಿಕ್ಕಿರುವುದು. ಇದರಿಂದಾಗಿ ಧಾರಾವಿಯ ಗಣೇಶ ವಿದ್ಯಾಮಂದಿರ ಮತ್ತೆ ಸುದ್ದಿಯಲ್ಲಿದೆ. ಶಾಲೆಯ ಬಣ್ಣ ಮಾಸಿದ ಗೋಡೆಗಳು ಹೊಸ ನಾದ ಹೊಮ್ಮಿಸುತ್ತಿವೆ. ವಾರದ ನಾಲ್ಕು ಸಾಯಂಕಾಲಗಳಲ್ಲಿ ನೂರಾರು ಬಿ-ಬಾಯಿಂಗ್ ಅಂದರೆ ಬ್ರೇಕ್‌ಡ್ಯಾನ್ಸ್ ಕಲಿತಿರುವ ಯುವಕರ ದಂಡೇ ಅಲ್ಲಿ ನೆರೆಯುತ್ತದೆ. ಬ್ಯಾಗಿ ಪ್ಯಾಂಟು, ತಲೆಯಿಂದ ಮೊಳಕಾಲವರೆಗೆ ಇಳಿಬೀಳುವ ಪುಲ್‌ಓವರ್‌ಗಳು, ತಾಳಬದ್ಧ ಕುಣಿತಕ್ಕೆ ಹುಮ್ಮಸ್ಸು ನೀಡುವ ಬಣ್ಣದ ಬೂಟುಗಳು, ಕೈ–ಕೊರಳಿನಲ್ಲಿ ರಾರಾಜಿಸುವ ಮಣಿಸರ, ಮೈಕೆಲ್ ಜಾಕ್ಸನ್ ಪದಕಗಳೆಲ್ಲ ಧಾರಾವಿಯ ಸಂಜೆಯ ಬೆಳಕಿನ ರಂಗನ್ನೇ ಬದಲಾಯಿಸಿವೆ. ಅಕ್ಕು ತನ್ನ ಗೆಳೆಯರಾದ ರಂಜಿತ್, ಕೇಶವ್, ನಂದು, ರೇವಂತ್ ಜೊತೆ ಸೇರಿ ಪ್ರಾರಂಭಿಸಿರುವ 'ಪಾಠಶಾಲಾ'ಗೀಗ ಭರಪೂರ ಅಡ್ಮಿಷನ್. ಸ್ಲಂ ಹುಡುಗರ ಡ್ಯಾನ್ಸ್ ಎಂದೇ ಖ್ಯಾತವಾಗಿದ್ದ ಬಿ-ಬಾಯಿಂಗ್‌ಗೆ 2018ರವರೆಗೆ ಯೂಥ್ ಒಲಿಂಪಿಕ್ಸ್‌ನಲ್ಲಿ ಮಾತ್ರ ಜಾಗವಿತ್ತು. ಈಗ ಬಿ-ಬಾಯಿಂಗ್ 2024ರಲ್ಲಿ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಸ್ಪರ್ಧೆಯಾಗಿ ಪರಿಗಣಿತವಾಗಲಿದೆ. ಈ ಸುದ್ದಿ ತಿಳಿದ ದಿನ ಜನತಾಬಜಾರಿಗೆ ಓಡಿದ ಅಕ್ಕು ನೆಲ ಒರೆಸುತ್ತಿದ್ದ ತಾಯಿಯ ಕೈ ತಡೆದು, 'ಆಯೀ ಅಮ್ಹೀ ಜೀಂಕ್ಲೋ'(ನಾವು ಗೆದ್ದುಬಿಟ್ವಿ) ಎಂದು ಕೂಗಿ ಹೇಳಿದ್ದ.

ಒಲಿಂಪಿಕ್ಸ್ ಸಮಿತಿಯು ಇತ್ತೀಚೆಗಷ್ಟೇ ಸಭೆ ಸೇರಿ ಬ್ರೇಕ್‌ಡ್ಯಾನ್ಸ್ ನೃತ್ಯಮಾದರಿಯನ್ನು ಸ್ಪರ್ಧೆಯೆಂದು ಪರಿಗಣಿಸಿ ಗೆದ್ದವರಿಗೆ ಮೆಡಲ್ ನೀಡುವುದೆಂದು ತೀರ್ಮಾನಿಸಿದೆ. ಇದೇ ಪ್ರಪ್ರಥಮ ಬಾರಿಗೆ ಬೀದಿ ಹುಡುಗರ ನೃತ್ಯವೊಂದು ಅಂತರರಾಷ್ಟ್ರೀಯ ಸ್ಪರ್ಧೆಯ ಮಾನ್ಯತೆ ಪಡೆದಿದೆ. ಚಿಕ್ಕಂದಿನಿಂದಲೂ ಹಿಪ್ ಹಾಪ್ ನೃತ್ಯ ಮಾಡುತ್ತ ಬಂದಿರುವ ಜೋಗೇಶ್ವರಿಯ ಬ್ರೇಕ್‌ಡ್ಯಾನ್ಸರ್ ಆರಿಫ್ ಚೌಧರಿ ಪ್ಯಾರಿಸ್‌ಗೆ ಹೋಗಲಿದ್ದಾನೆ ಎಂಬ ಸುದ್ದಿ ಅಕ್ಕುವಿನ ಗುಂಪಿಗೆ ಭಾರಿ ಹುರುಪು ಮೂಡಿಸಿದೆ. ವಿನಾಯಕ ಚತುರ್ಥಿಯ ದಿನಗಳಲ್ಲಿ 'ಗಣಪತಿ ಬಪ್ಪಾ ಮೋರಿಯ' ಎಂಬ ಘೋಷಣೆ ಗಣೇಶ ವಿದ್ಯಾಮಂದಿರದ ಎಲ್ಲ ಅಂಗಳಗಳಲ್ಲೂ ಮೊರೆಯುತ್ತಿತ್ತು. ಈಗ ವಾರಕ್ಕೆ ನಾಲ್ಕು ಬಾರಿ ಹಿಪ್-ಹಾಪ್ ಸಂಗೀತ ಮತ್ತು ನೃತ್ಯದ ಘಮಲು ಏರುತ್ತದೆ.

'ಸ್ಲಂ ಡಾಗ್ ಅಲ್ಲ ಸ್ಲಂ ಗಾಡ್'

ಇದೆಲ್ಲ ಶುರುವಾದದ್ದು 2008ರಲ್ಲಿ. ಆಗ ತಾನೆ ಡ್ಯಾನಿ ಬಾಯ್ಲ್‌ನ 'ಸ್ಲಂಡಾಗ್ ಮಿಲಿಯನೇರ್' ಸಿನಿಮಾ ವಿಶ್ವದಾದ್ಯಂತ ಸದ್ದುಮಾಡಿತ್ತು. ಮುಂಬೈ ಎಂದರೆ ಕೊಳೆಗೇರಿ, ಹೊಲಸಿನ ಗುಂಡಿ ಎಂಬ ಭಾವ ಬರುವಂತೆ ಇಡೀ ಸಿನಿಮಾ ಚಿತ್ರಿತವಾಗಿತ್ತು. ಅಲ್ಲಿನ ಹುಡುಗನೊಬ್ಬ ಕೋಟಿ ಗೆದ್ದರೂ ಅದು ತ್ಯಾಜ್ಯದಲ್ಲಿ ಅರಳಿದ ಹೂವು ಎಂದೇ ಬಿಂಬಿಸಿದ್ದು ಮುಂಬೈನ ಜೋಪಡಪಟ್ಟಿಯಲ್ಲಿ ವಾಸಿಸುವ ಅನೇಕರಿಗೆ ಸಿಟ್ಟು ತರಿಸಿತ್ತು. ಯುವಕರಂತೂ 'ಸಿನಿಮಾ ನಮ್ಮನ್ನು ಅವಮಾನಿಸಿದೆ' ಎಂದು ಬಹಿರಂಗವಾಗಿಯೇ ರೇಡಿಯೊ ಚಾನೆಲ್‌ಗಳಲ್ಲಿ ಕಿಡಿ ಕಾರಿದ್ದರು. "ನಾವೇಕೆ 'ಸ್ಲಂಡಾಗ್'ಗಳಾಗುತ್ತೇವೆ? ನಾವೇನೆಂದು ಜಗತ್ತಿಗೆ ತೋರಿಸುತ್ತೇವೆ" ಎಂದು ತಮ್ಮ ನೃತ್ಯ ತಂಡಕ್ಕೆ 'ಸ್ಲಂ ಗಾಡ್' ಎಂದು ನಾಮಕರಣ ಮಾಡಿಕೊಂಡ ಅಕ್ಕುವಿನ ದೋಸ್ತರು ಹಿಪ್ ಹಾಪ್‌ನಿಂದ ಆಗಸವನ್ನೇ ಚಿಂದಿ ಮಾಡುವುದಾಗಿ ಎಂದು ಪಣತೊಟ್ಟರು. ಲೋಕಲ್ ಟ್ರೇನು, ಸಂತೆ ಬೀದಿ, ಟ್ಯಾಕ್ಸಿ ಸ್ಟ್ಯಾಂಡ್, ದೇವಸ್ಥಾನ ಎಲ್ಲೆಲ್ಲಿಯೂ ನಿಕೃಷ್ಟ ನೋಟ ಎದುರಿಸಿ ಸಾಕಾಗಿಹೋಗಿದ್ದ ಆಕಾಶ್ ಡಂಗರ್‌ಗೆ ಸಂಜೀವಿನಿಯಂತೆ ಸಿಕ್ಕವನು ಅಮೆರಿಕದಲ್ಲಿ ಓದಿ ಮುಂಬೈನ ಕೊಳೆಗೇರಿಗಳ ಫೋಟೊ ತೆಗೆಯಲು ವಾರ್ಷಿಕ ಪ್ರವಾಸಕ್ಕಾಗಿ ಬಂದಿದ್ದ 'ನೇತ್ರಪಾಲ್ ಹೀರಾ ಸಿಂಗ್'. ಅಕ್ಕು ಹೋಗುತ್ತಿದ್ದ ಕಂಪ್ಯೂಟರ್ ಕ್ಲಾಸಿಗೆ ಅಚಾನಕ್ಕಾಗಿ ಕಾಲಿಟ್ಟ ಹೀರಾ, ಧಾರಾವಿಯ ಗಣೇಶ್ ವಿದ್ಯಾ ಮಂದಿರದ ಗೆಳೆಯರ ಪಾಲಿಗೆ ಬೆಲೆ ಕಟ್ಟಲಾಗದ 'ಹೀರಾ'ನೇ ಆಗಿ ಹೋದ. ಗಣೇಶ ಪೆಂಡಾಲಿನಲ್ಲಿ ಮನಬಂದಂತೆ ಕುಣಿಯುತ್ತಿದ್ದ ಅಕ್ಕುವಿನ ತಂಡಕ್ಕೆ ಅಮೆರಿಕ–ಆಫ್ರಿಕ ಮೂಲದ ಹಿಪ್-ಹಾಪ್ ಸಂಸ್ಕೃತಿಯ ಬಿ-ಬಾಯಿಂಗ್ ನೃತ್ಯ ಪರಿಚಯ ಮಾಡಿಕೊಟ್ಟ.

ಮೊರ್ಛಾಂಗ್ ಮತ್ತು ಡಿಡ್‌ಗೆರಿಡೂ

ಅಕ್ಕುವಿಗೀಗ ಮೂವತ್ತೊಂದರ ಹರೆಯ. ಅರ್ಧದಲ್ಲೇ ಶಾಲೆಯಿಂದ ಹೊರಬಿದ್ದು, ಅಲ್ಪಸ್ವಲ್ಪ ಕಂಪ್ಯೂಟರ್ ಕಲಿತು, ಹಿಪ್-ಹಾಪ್ ತೆಕ್ಕೆಯಲ್ಲಿ ಮಿಂದೆದ್ದು ಈಗ ಮುಂಬೈನ ಎಲ್ಲ ಜಾಗಗಳಿಗೂ ಟ್ಯಾಕ್ಸಿ ಓಡಿಸುತ್ತ ಉಪನಗರಗಳಲ್ಲೆಲ್ಲಾ ಓಡಾಡಿ ನೂರಾರು ಮಕ್ಕಳನ್ನು ಹಿಪ್-ಹಾಪ್ ನೃತ್ಯಕ್ಕೆ ಸಜ್ಜುಗೊಳಿಸಿದ್ದಾನೆ. ಹದಿನೈದು ವರ್ಷದ ಹಿಂದಿನ 'ಸ್ಲಂಗಾಡ್' ತಂಡದವರ ಜೊತೆ ಸೇರಿ ಆರು ತಿಂಗಳು ತರಗತಿ ನಡೆಸುತ್ತಿದ್ದಾನೆ. ಹಿಪ್-ಹಾಪ್‌ನ ನಾಲ್ಕು ವಿಭಾಗಗಳಾದ ರ್‍ಯಾಪಿಂಗ್, ಬೀಟ್ ಬಾಕ್ಸಿಂಗ್, ಬಿ-ಬಾಯಿಂಗ್ ಮತ್ತು ಗ್ರಾಫಿಟ್ಟಿ ಬಗ್ಗೆ ಮಂಗಳವಾರದಿಂದ ಶನಿವಾರದವರೆಗೆ ಸಂಜೆ 6ರಿಂದ ರಾತ್ರಿ 9ರ ವರೆಗೆ ತಪ್ಪದೇ ತರಗತಿಗಳು ನಡೆಯುತ್ತವೆ. ನೃತ್ಯಪ್ರಕಾರ ಹೊರದೇಶಗಳ ನೆಲದ್ದೇ ಆಗಿದ್ದರೂ ರಾಜಸ್ಥಾನದ ಮೊರ್ಛಾಂಗ್ ಮತ್ತು ಆಸ್ಟ್ರೇಲಿಯಾದ ಡಿಡ್‌ಗೆರಿಡೂ ವಾದ್ಯಗಳ ಮೂಲಕ ಮರಾಠಿ, ತಮಿಳು ಮತ್ತು ಹಿಂದಿ ಪ್ರಾಸಗೀತೆಗಳಿಗೆ ಜೀವ ತುಂಬುವ ರ್‍ಯಾಪರ್‌ಗಳು ಬರೀ ಮನರಂಜನೆಯಷ್ಟೇ ಅಲ್ಲ, ಅದನ್ನೇ ವೃತ್ತಿಯನ್ನಾಗಿಸಿಕೊಳ್ಳಬಹುದು ಎಂದು ಮುಂದುವರೆಯುತ್ತಿದ್ದಾರೆ. 'ಧಾರಾವಿಯ ಮಕ್ಕಳು ಪುಂಡತನ, ಕಳ್ಳತನ ಮತ್ತು ಮಾದಕವಸ್ತು ಸೇವನೆಯ ಚಟಗಳಿಂದ ದೂರವಿರುವಂತೆ ಮಾಡಲು ನಮ್ಮ ಪಾಠಶಾಲಾ ಸದಾ ಸಿದ್ಧ' ಎನ್ನುವ ಅಕ್ಕುವಿನ ಗೆಳೆಯರು ಈಗ ತಮ್ಮ ಕಣ್ಣ ಮುಂದಿರುವ ಗುರಿ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುವುದಷ್ಟೆ ಎನ್ನುವಾಗ ಪದಕ ಗೆದ್ದ ಖುಷಿಯೇ ಕಾಣಿಸುತ್ತದೆ.

ಜಗವೇ ರಂಗಸ್ಥಳ

ಶಾಲೆ ಕೊಠಡಿಗಳಲ್ಲಿ ಕಲಿತ ನೃತ್ಯವೀಗ ಮುಂಬೈನ ಜನಸಂದಣಿಯ ಸಾವಂತ್ ಪಾರ್ಕ್, ಶಾಹುನಗರದ ಇಮಾಮ್ ಸರ್ಕಲ್, ಬೀದಿಬದಿಯ ಖಾಲಿ ಜಾಗ, ಸಿಯನ್ ಫೋರ್ಟ್, ಗಣೇಶ ಪೆಂಡಾಲ್, ತೆರೆಯದ ಅಂಗಡಿಗಳ ಮುಂಭಾಗದ ಜಾಗಗಳಲ್ಲೆಲ್ಲ ನೋಡಲು ಸಿಗುತ್ತಿದೆ.

11ನೇ ಪುಟಕ್ಕೆ...



ಗುರುತ್ವಕ್ಕೆ ಸಡ್ಡು ಹೊಡೆಯುವ ಡ್ಯಾನ್ಸ್

ಎದೆ, ತಲೆ, ಹೆಗಲು, ಹೊಟ್ಟೆ, ಪೃಷ್ಠ, ಕಾಲು, ಕೈ ಹೀಗೆ ದೇಹದ ಎಲ್ಲಾ ಭಾಗಗಳನ್ನು ನಿರಂತರವಾಗಿ ಬಳುಕಿಸುತ್ತ, ತಿರುಗಿಸುತ್ತಾ, ಮಗುಚಿಹಾಕುತ್ತ ಮಾಡುವ ವೇಗದ ನೃತ್ಯವನ್ನೇ ಹಿಪ್-ಹಾಪ್ ಅಥವಾ ಬಿ-ಬಾಯಿಂಗ್ ಎನ್ನುತ್ತಾರೆ. ಕುಣಿಯುವವರನ್ನು ನೋಡಿದಾಗ ಭೂಮಿಯ ಗುರುತ್ವಾಕರ್ಷಣೆಯ ಶಕ್ತಿಗೆ ಅವರ ಮೇಲೆ ಯಾವ ಹಿಡಿತವೂ ಇಲ್ಲ ಎನ್ನಿಸುತ್ತದೆ. ಕೈ-ತಲೆ-ಹೆಗಲುಗಳೇ ಕಾಲುಗಳಾಗಿ ಕುಣಿಯುತ್ತವೆ. ಇಡೀ ದೇಹ ಸ್ಪ್ರಿಂಗಿನಂತೆ ಬಾಗಿ ಬುಗುರಿಯಂತೆ ತಿರುಗುತ್ತದೆ. ಉನ್ಮಾದವೆಬ್ಬಿಸುವ ಬೀಟ್‌ಬಾಕ್ಸ್ ಸಂಗೀತ ನೋಡುಗರನ್ನು ಹೊಸ ಸೆಳೆತಕ್ಕೆ ಸಿಕ್ಕಿಸುತ್ತದೆ. ತಾಳಬದ್ಧವಾಗಿ ಕುಣಿಯುವ 5ರಿಂದ 15 ವಯೋಮಾನದ ಹುಡುಗರು ಕಲಿಕೆಯ ಭಾಗವಾಗಿ ಭಿತ್ತಿಚಿತ್ರ ಬರೆದು ಶಾಲೆಯ ಮಾಸಲು ಗೋಡೆಗಳನ್ನು ನೃತ್ಯ, ಸಂಗೀತ, ತಾಳಗಳಿಗೆ ಸಂಬಂಧಿಸಿದ ಅಮೂರ್ತ ಚಿತ್ರಗಳ ಕ್ಯಾನವಾಸುಗಳನ್ನಾಗಿಸುತ್ತಾರೆ.



ಚಿತ್ರದುರ್ಗದ ಚಳ್ಳಕೆರೆಯಲ್ಲಿ ಇತ್ತೀಚೆಗೆ 'ತಪಸ್–201' ಎಂಬ ಪೈಲಟ್‌ರಹಿತ ವಿಮಾನವು ಪತನಗೊಂಡಿತು. ರಕ್ಷಣಾ ಸಂಶೋಧನೆ ಹಾಗೂ ಅಭಿವೃದ್ಧಿ ಅಭಿಯಾನದ ಪ್ರಯೋಗದ ವಿಷಯದಲ್ಲಿ ಇದನ್ನು ಯಶೋಗಾಥೆ ಎಂದೇ ನೋಡಬೇಕು.

ತಪಸ್ ಪತನ ಪ್ರಯೋಗದ ಸೋಪಾನ

ಜಯಪ್ರಕಾಶ ಪುತ್ತೂರು

ಇತ್ತೀಚೆಗೆ ಚಿತ್ರದುರ್ಗದ ಚಳ್ಳಕೆರೆಯಲ್ಲಿ 'ತಪಸ್-201' ಎಂಬ ಪೈಲಟ್‌ರಹಿತ ವಿಮಾನ ಪತನಗೊಂಡ ಘಟನೆಯ ಹಿಂದೆ ದೇಶದ ರಕ್ಷಣಾ ಸಂಶೋಧನೆ ಹಾಗೂ ಅಭಿವೃದ್ಧಿ ಅಭಿಯಾನದ ಯಶೋಗಾಥೆಯು ಅಡಗಿದೆ.

ಸತತವಾಗಿ 24 ಗಂಟೆ 28,000 ಅಡಿಗಳಷ್ಟು ಎತ್ತರದಲ್ಲಿ ಹಾರಬಲ್ಲ ಮಧ್ಯಮ ವರ್ಗದ ಹಾಗೂ ಸುದೀರ್ಘ ಸಾಮರ್ಥ್ಯವುಳ್ಳ ಪ್ರಾಯೋಗಿಕ ವಿಮಾನ ಇದು. ಆಗಲೇ ದೋಷರಹಿತ 200 ಯಶಸ್ವಿ ಹಾರಾಟಗಳನ್ನು, ವಿವಿಧ ಹಂತಗಳ ಅಗ್ನಿಪರೀಕ್ಷೆಗಳನ್ನು ಅದು ಮುಗಿಸಿತ್ತು. ಭಾರತೀಯ ಸೈನ್ಯ ಹಾಗೂ ನೌಕಾದಳ ಸುಪರ್ದಿಗೆ ಪಡೆಯಲು ಅಗತ್ಯವಿರುವ ಹಾರಾಟ ನಡೆಸಲು 'ತಪಸ್–201' ಸಜ್ಜಾಗಿತ್ತು.

ಚಾಲಕರಹಿತ ವಿವಿಧ ವಿಮಾನಗಳ ವಿನ್ಯಾಸ ಹಾಗೂ ಅಭಿವೃದ್ಧಿಯಲ್ಲಿ ಹಲವು ವರ್ಷಗಳ ಯಶಸ್ವಿ ದಾಖಲೆ ನಿರ್ಮಿಸಿದ ಬೆಂಗಳೂರಿನ ಎ.ಡಿ.ಇ (ಏರೋನಾಟಿಕಲ್ ಡೆವಲಪ್‌ಮೆಂಟ್ ಎಷ್ಟಾಬ್ಲಿಷ್‌ಮೆಂಟ್) 1990ರಿಂದಲೇ ಇಂತಹ ರಾಷ್ಟ್ರ ನಿರ್ಮಾಣದ ಕಾಯಕದಲ್ಲಿ ತೊಡಗಿಸಿಕೊಂಡಿದೆ. ಇಲ್ಲಿಯೇ ಎ.ಪಿ.ಜೆ. ಅಬ್ದುಲ್ ಕಲಾಂ ಅವರಂತಹ ಮೇಧಾವಿಗಳು ತಮ್ಮ ವೈಜ್ಞಾನಿಕ ಸೇವಾಯಾತ್ರೆಯನ್ನು ಆರಂಭಿಸಿದ್ದೂ ನಿಜ.

ಈ 'ತಪಸ್' ವಿಮಾನ ಆಗಸ್ಟ್ 20ರಂದು ಸರ್ವ ತಯಾರಿಗಳೊಂದಿಗೆ ಎಂದಿನಂತೆ ಚಿತ್ರದುರ್ಗದ ಚಳ್ಳಕೆರೆ ಸಮೀಪದ ಹಳ್ಳಿಯಲ್ಲಿ ಡಿ.ಆರ್.ಡಿ.ಒ. ನಿರ್ಮಿಸಿರುವ ವೈಮಾನಿಕ ಪರೀಕ್ಷಾ ಹಾರಾಟ ಕೇಂದ್ರದಿಂದ, ನೆರೆದಿದ್ದ ವಿಜ್ಞಾನಿಗಳ ಬಹು ವಿಶ್ವಾಸಪೂರ್ಣ ನಿರೀಕ್ಷೆಗಳೊಂದಿಗೆ ಗಗನಕ್ಕೇರಿತು. ಇನ್ನೊಂದು ಪೂರ್ವ ನಿರ್ಧರಿತ ಪರೀಕ್ಷೆಗಳ ದೀಕ್ಷೆ ಹೊತ್ತು ಅದು ಸಾಗಿದಾಗ, 20 ಸಾವಿರ ಅಡಿಗಳ ಎತ್ತರದಲ್ಲಿ ಅನಿರೀಕ್ಷಿತವಾಗಿ ಅತ್ಯಂತ ಶಕ್ತಿಶಾಲಿ ವಾಯು ಸಂವರ್ಧನೆಯ ಏರಿಳಿತಕ್ಕೆ ಸಿಲುಕಿತು. 350 ಕೆ.ಜಿ. ತೂಕವಿದ್ದ ಈ ವಿಮಾನದ ರೆಕ್ಕೆಗಳಿಗೆ ತೀವ್ರ ಪ್ರಮಾಣದಲ್ಲಿ ಏಟು ಬಿದ್ದು, ಅವುಗಳು ಕಳಚಿಕೊಂಡಾಗ ಮುಂದೆ ಈ ವಿಮಾನವನ್ನು ನಿಯಂತ್ರಿಸಲು ಕೆಳಗಿನ ಪರೀಕ್ಷಾ ಕೇಂದ್ರದ ಪೈಲಟ್‌ಗೆ ಸಾಧ್ಯವಾಗದೆ ಹೋಯಿತು. ಹಾಗಾಗಿಯೇ 'ತಪಸ್' ವಿಮಾನ ಅಷ್ಟೊಂದು ಭಾರಿ ಎತ್ತರದಿಂದ ಉರುಳಿಬಿತ್ತು. ಇಲ್ಲವಾದರೆ ಇಂತಹ ಆತಂಕಕಾರಿ ಸಂದರ್ಭಗಳಲ್ಲಿ ರನ್ ವೇ ಇಲ್ಲದ ಕಡೆಯಲ್ಲಿ, ಜನರ ವಾಸಸ್ಥಾನ ಇಲ್ಲದೆಡೆ ಸುರಕ್ಷಿತವಾಗಿ ತಾನಾಗಿಯೇ ಉಬ್ಬುವ ಪ್ಯಾರಾಚ್ಯೂಟ್‌ಗಳಿಂದ ಕೆಳಗಿಳಿಸಿ, ಮತ್ತೆ ಚಿಕ್ಕಪುಟ್ಟ ರಿಪೇರಿಗಳನ್ನು ನಡೆಸಿ ಪ್ರಯೋಗಗಳಿಗಾಗಿ ಬಳಸುವ ಸಾಧ್ಯತೆ ಖಂಡಿತ ಈ ವ್ಯವಸ್ಥೆಯಲ್ಲಿ ಇದೆ.

12ನೇ ಪುಟಕ್ಕೆ...

ಮೊಮ್ಮಗನ ಕಣ್ಣಲ್ಲಿ ಅಜ್ಜ ನರಸಿಂಹರಾಜು



ಮಗನ ಸಾವಿನ ದುಃಖದಲ್ಲಿದ್ದ ನರಸಿಂಹರಾಜು ಅವರಿಗೆ ರಾಜ್‌ಕುಮಾರ್ ಸಮಾಧಾನದ ಅಪ್ಪುಗೆ

ಕನ್ನಡದ ಚಾರ್ಲಿ ಚಾಪ್ಲಿನ್ ಎಂದೇ ಜನಜನಿತರಾಗಿದ್ದವರು ನಟ ಟಿ.ಆರ್. ನರಸಿಂಹರಾಜು. ಇದು ಅವರ ಜನ್ಮ ಶತಮಾನೋತ್ಸವದ ವರ್ಷ. ಮರೆಯಲಾಗದ ನಟ ತಮ್ಮ ಬದುಕಿನಲ್ಲಿ ಹೇಗೆಲ್ಲ ಬೆರೆತಿದ್ದಾರೆ ಎನ್ನುವುದನ್ನು ಅವರ ಮೊಮ್ಮಗ ಈ ಲೇಖನದಲ್ಲಿ ಕಟ್ಟಿಕೊಟ್ಟಿದ್ದಾರೆ.

ಎಸ್.ಡಿ. ಅರವಿಂದ

ಸಾಮಾನ್ಯವಾಗಿ ಪೂರ್ವಜರ ಅನುಭವದಿಂದ, ಸಾಧನೆಗಳಿಂದ ಬಳುವಳಿಯಾಗಿ ಬಹಳಷ್ಟು ಯೋಗ್ಯತೆಗಳು ಮುಂದಿನ ಪೀಳಿಗೆಗೆ ಸೇರಿಕೊಳ್ಳುತ್ತವೆ. ಅವುಗಳಿಗೆ ಮಕ್ಕಳು, ಮೊಮ್ಮಕ್ಕಳು ಯೋಗ್ಯರೋ, ಅಲ್ಲವೋ ಎಂಬ ದ್ವಂದ್ವ ಒಂದು ರೀತಿಯ ಧರ್ಮಸಂಕಟವೇ. ಅದರಲ್ಲೂ ಹಾಸ್ಯ ಚಕ್ರವರ್ತಿ ನರಸಿಂಹರಾಜು ಅವರಂತಹ ಮೇರು ಕಲಾವಿದನ ವಂಶಸ್ಥರು ಅಂದಮೇಲೆ ಬಳುವಳಿಗಳ ಸರಮಾಲೆ, ಜೊತೆಗೆ ಅದನ್ನು ಹೊರುವ ಜವಾಬ್ದಾರಿ ಕೂಡ.

25 ವರ್ಷಗಳ ಸಿನಿಮಾ ವೃತ್ತಿಯಲ್ಲಿ 256 ಚಿತ್ರಗಳಲ್ಲಿ ಅಭಿನಯ, ಸಿನಿಮಾ ನಿರ್ಮಾಣ, ಊರೂರು ಸುತ್ತಿ ನಾಟಕವಾಡುತ್ತ ಜನರ ಪ್ರೀತಿಯನ್ನು ಗಳಿಸಿ ಮಧ್ಯಮ ವರ್ಗದ ಪ್ರತೀಕವಾಗಿ ಆಲದ ಮರದಂತೆ ಬೆಳೆದರು ನರಸಿಂಹರಾಜು. ಅಂತಹ ಆಲದ ಮರದ ನೆರಳಿನಲ್ಲಿ ಬೆಳೆಯೋದು, ಬೆಳಗೋದು ಮಕ್ಕಳು ಮತ್ತು ಮೊಮ್ಮಕಳಿಗೆ ಸಂಭ್ರಮವೇ ಸರಿ. 'ಇವರು ನರಸಿಂಹರಾಜುರವರ ಮಕ್ಕಳು/ಮೊಮ್ಮಕ್ಕಳು' ಎಂದು ಯಾರಾದರೂ ಪರಿಚಯಿಸಿದರೆ ಸಾಕು, ಎಲ್ಲರ ಗಮನ ನಮ್ಮ ಮೇಲೆ. ನಮಗೆಲ್ಲ ಏನೋ ಸಂಭ್ರಮ. ನಾವು ಏನೂ ಸಾಧನೆ ಮಾಡದಿದ್ದರೂ ನಮ್ಮ ಮೇಲೆ ಜನರ ಪ್ರೀತಿಯ ಕಣ್ಣು.

ಮಕ್ಕಳು ಮತ್ತು ಮೊಮ್ಮಕ್ಕಳು ಅವರನ್ನು 'ಅಣ್ಣಾ' ಎಂದೇ ಕರೆಯುವುದು ಚಿಕ್ಕ ವಯಸ್ಸಿನಿಂದಲೇ ಅಭ್ಯಾಸ. ಅವಕಾಶ ಅರಸಿ ಮದರಾಸಿಗೆ ಹೋದ ಕಲಾವಿದರಿಗೆ ನರಸಿಂಹರಾಜುರವರ ಮನೆಯೇ ಆಶ್ರಯ. ಆ ರೀತಿ ಬಂದೋರೆಲ್ಲ 'ನರಸಿಂಹರಾಜಣ್ಣ', 'ಅಣ್ಣಾ' ಅಂತಲೇ ಕರೆಯುತ್ತಿದ್ದರು. ಹೀಗಾಗಿ ಅವರ ಮಕ್ಕಳು ಅಪ್ಪನನ್ನು 'ಅಣ್ಣಾ' ಅಂದರು. ಮೊಮ್ಮಕ್ಕಳು ತಾತನನ್ನು 'ಅಣ್ಣಾ' ಎಂದೆವು.

ಬಾಲ್ಯವೇ ನೆನಪು

ಅಣ್ಣಾ ತೀರಿಹೋದಾಗ ನನಗೆ ಆರು ವರ್ಷ. ಒಂದಷ್ಟು ನೆನಪುಗಳು ಇನ್ನೂ ಅಚ್ಚಳಿಯದೆ ಉಳಿದಿವೆ. ಅವರ ಕೊನೆ ಚಿತ್ರವಾದ 'ಪ್ರೀತಿ ಮಾಡು ತಮಾಷೆ ನೋಡು'ವಿನ ಡಬ್ಬಿಂಗ್ ಕೆಲಸ ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ ನಡೀತಿತ್ತು. ಅದೇ ಮೊದಲ ಬಾರಿ ನಾನು ಅವರ ಜೊತೆ ಸ್ಟುಡಿಯೋಗೆ ಹೋಗಿದ್ದು. ಡಬ್ಬಿಂಗ್ ಮಾಡುತ್ತಿದ್ದ ನಟಿ ಮಂಜುಳ 'ಅಯ್ಯೋ ಕಾಪಾಡಿ, ಬಿಟ್ಬಿಡು ನನ್ನ...ಅಯ್ಯೋ' ಅಂತ ಚೀರುತ್ತಿರುವುದು ಕೇಳಿ ನಾನು ಗಾಬರಿಯಾಗಿ ಅಣ್ಣನ ಬಳಿ ಓಡಿದ್ದೆ.

ಎರಡು ತಿಂಗಳಿಗೊಮ್ಮೆ ಮಕ್ಕಳಿಗೆ ಮನೆಯ ಅಂಗಳದಲ್ಲಿ ಹೇರ್ ಕಟ್. ಅದೊಂದು ಸಂಭ್ರಮ. ಜಯಮಹಲಿನ ಪ್ರಸಿದ್ಧ ಕ್ಷೌರಿಕ ಸೀನಪ್ಪನೇ ಕಟಿಂಗ್ ಮಾಡಬೇಕು. ನಾವೆಲ್ಲ ಒಬ್ಬೊಬ್ಬರಾಗಿ ತಾತನ ಎದುರಿಗಿರುವ ಕುರ್ಚಿಯ ಮೇಲೆ ಕೂತಾಗ ಅವರೇ ಖುದ್ದಾಗಿ ನಮ್ಮ ಕೂದಲನ್ನು ಪರಿಶೀಲಿಸಿ 'ಇವನಿಗೆ ಸಮ್ಮರ್ ಕಟ್, ಇವಳಿಗೆ ಬಾಬ್ ಕಟ್. ಇವನಿಗೆ ಸ್ಟೆಪ್ ಕಟ್' ಎಂದು ಆಜ್ಞೆ ಹೊರಡಿಸಿದ ಮೇಲೆ ನಾವೇನೂ ಮಾತಾಡುವ ಹಾಗಿರಲಿಲ್ಲ. ಇಷ್ಟವಿಲ್ಲದೇ ಎಷ್ಟೋ ಬಾರಿ ಅಳುತ್ತಲೇ ಕಟಿಂಗ್ ಮಾಡಿಸಿಕೊಂಡಿದ್ದು ಉಂಟು.


ನಮ್ಮ ನೆನಪಿಗೆ ಬರದ ಕೆಲವೊಂದು ಘಟನೆಗಳನ್ನು ಫೋಟೊಗಳು ನೆನಪಿಸುತ್ತವೆ. ಹಿರಿಯ ಛಾಯಾಗ್ರಾಹಕರಾದ 'ಪ್ರಗತಿ' ಅಶ್ವಥ್ ನಾರಾಯಣ್ ಅವರು ತಮ್ಮ ಮದುವೆ ಆರತಕ್ಷತೆಯ ಫೋಟೊವನ್ನು ಇತ್ತೀಚೆಗೆ ಫೇಸ್ ಬುಕ್‌ನಲ್ಲಿ ಹಂಚಿಕೊಂಡಿದ್ದರು. ಫೋಟೋದಲ್ಲಿ ತಾತನಿಗೆ ಅಂಟಿಕೊಂಡು ನಾನು ನಿಂತಿರುವುದನ್ನು ನೋಡಿ ಭಾವುಕನಾದೆ.

ಯೌವನದಲ್ಲಿ ಫ್ಯಾನ್ ಆದೆ

ನರಸಿಂಹರಾಜುರವರು ನನ್ನ ತಾತ ಎನ್ನುವುದಕ್ಕಿಂತ ಹೆಚ್ಚಾಗಿ ಒಬ್ಬ ಕಲಾವಿದನಾಗಿ ಪರಿಚಯ ಆಗಿದ್ದು ದೂರದರ್ಶನದಲ್ಲಿ ಪ್ರಸಾರವಾಗುತ್ತಿದ್ದ ಚಿತ್ರಗಳ ಮೂಲಕ. ಮನೆಯವರ ಜೊತೆ ಸಿನೆಮಾಗಳನ್ನು ನೋಡುವಾಗ ಆ ಚಿತ್ರಗಳಿಗೆ ಸಂಬಂಧಿಸಿದ ಘಟನೆಗಳನ್ನು, ಉಪಕಥೆಗಳನ್ನು ಅಜ್ಜಿ, ಅಮ್ಮ, ಅಪ್ಪ ಹೇಳುವುದನ್ನು ಕೇಳುತ್ತ ನಾನು ತಾತನ ಅಭಿಮಾನಿಯಾದೆ.

ನರಸಿಂಹರಾಜುರವರ ಮೊಮ್ಮಗ ಅನ್ನೊ ಕಾರಣಕ್ಕೊ ಅಥವಾ ನನ್ನಲ್ಲೂ ನಟನೆಯ ಕಲೆ ಇತ್ತೋ ಏನೋ ಗೊತ್ತಿಲ್ಲ, ಶಾಲಾ–ಕಾಲೇಜಿನ ನಾಟಕಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದೆ. ಅಭಿನಯ ಅಷ್ಟಕ್ಕಷ್ಟೇ! ಆದರೂ ಮೇಷ್ಟ್ರುಗಳು, ಸ್ನೇಹಿತರು 'ರಕ್ತದಲ್ಲೇ ಇದೆ ಬಿಡಪ್ಪ' ಅಂತ ಹೇಳುತ್ತಿದ್ದರು.

ಸ್ನಾತಕೋತ್ತರ ಪದವಿ ಮುಗಿಸುವ ಹೊತ್ತಿಗೆ ಎಲ್ಲಾ ಸೆಲೆಬ್ರಿಟಿ ಕುಟುಂಬದವರಿಗೂ ಕಾಡುವಂತೆ ನನ್ನನ್ನು ಒಂದು ಗಂಭೀರ ಪ್ರಶ್ನೆ ಕಾಡುತ್ತಿತ್ತು. ತಾತನ ಸಾಧನೆಯ ನೆರಳಿನಲ್ಲಿ ನಾನು ಬೆಳೆದಿದ್ದೇನೆ, ಅದರ ಫಲ ಪಡೆದಿದ್ದೇನೆ. ನಾನೂ ಏನಾದರೂ ಸಾಧನೆ ಮಾಡಬೇಕು ಅಥವಾ ನರಸಿಂಹರಾಜುರವರ ಸಾಧನೆಯನ್ನು ಶಾಶ್ವತವಾಗಿ ಉಳಿಸುವಂತಹ ಕೆಲಸ ಮಾಡಬೇಕೆಂಬ ಮನದಾಳದ ಕಸಿವಿಯನ್ನು ಗುರುಗಳಾದ ಕೆ.ವೈ. ನಾರಾಯಣಸ್ವಾಮಿಯವರ ಬಳಿ ಹೇಳಿಕೊಂಡೆ. 'ಪಾಪ್ಯುಲರ್ ಕಲ್ಚರ್ ಬಗ್ಗೆ ಪಿಎಚ್.ಡಿ ಮಾಡು. ನರಸಿಂಹರಾಜು, ಬಾಲಕೃಷ್ಣರಂತಹ ಕಲಾವಿದರು ಜನರ ಮನಸ್ಸಿನಲ್ಲಿ ಆತ್ಮೀಯತೆಯ ಸಂಕೇತವಾಗಿದ್ದಾರೆ. ಅದರ ಬಗ್ಗೆ ಸಾಂಸ್ಕೃತಿಕ ಸಂಶೋಧನೆ ನಡೆಸು' ಎಂದರು ಮೇಷ್ಟ್ರು.



ಪತ್ನಿ ಶಾರದಮ್ಮ, ಮಗಳು ಧರ್ಮಾವತಿ ಹಾಗೂ ಮೊಮ್ಮಗಳು ಅಖಿಲಾ ಜತೆಗೆ ನರಸಿಂಹರಾಜು

ನೀರಿಗಿಳಿಯುವ ಮುನ್ನ ಆಳ ತಿಳಿಯಲು ಚಿಕ್ಕದಾಗಿ ಸಂಶೋಧನೆ ಆರಂಭಿಸಿದೆ. ಸಾಹಿತಿಗಳನ್ನು, ಸಂಶೋಧಕರನ್ನು ಭೇಟಿ ಮಾಡಿ ಕೆಲವು ವಿಷಯಗಳನ್ನು ಸಂಗ್ರಹಿಸಿದೆ. ಆದರೆ ಬಹಳ ಸ್ವಾರಸ್ಯಕರ ಅನಿಸಿದ್ದು ಒಬ್ಬ ಜನಸಾಮಾನ್ಯನ ನೆನಪಿನಲ್ಲಿ ನರಸಿಂಹರಾಜು ಮರೆಯಲಾಗದ ಗುರುತಾಗಿ ಉಳಿದಿದ್ದು. ಊರೂರು ಸುತ್ತಿ ನಾಟಕವಾಡುವಾಗ ನರಸಿಂಹರಾಜುರವರನ್ನು ಕನ್ನಡಿಗರು ಮನೆ ಮಗನಂತೆ ನೋಡಿಕೊಂಡಿದ್ದಾರೆ ಎಂದು ಅಜ್ಜಿ ಹೇಳುತ್ತಿರುತ್ತಾರೆ. ಸಂಜೆ ನಾಟಕ ಪ್ರದರ್ಶನವಿದ್ದರೆ ಹಗಲೆಲ್ಲ ಆ ಊರಿನವರ ಜೊತೆ ಒಡನಾಟ. ಯಾರದೋ ಮನೆಯಲ್ಲಿನ ಪೂಜೆ, ಇನ್ನಾರದೋ ಮಗಳ ಮದುವೆ, ಅಂಗಡಿಯ ಉದ್ಘಾಟನೆ, ಅರಳಿ ಮರದಡಿ ಕೂತು ಹರಟೆ, ಇಸ್ಪೀಟಾಟ....ಹೀಗೆ ಯಾವುದೇ ಹಮ್ಮು–ಬಿಮ್ಮು ಇಲ್ಲದೇ ಎಲ್ಲರೊಡೊನೆ ಬೆರೆಯುವುದು ತಾತನಿಗೆ ಮಹದಾನಂದ. ತಮ್ಮ ಚಿತ್ರಗಳಲ್ಲಿನ ಅನೇಕ ಪಾತ್ರಗಳ ರಚನೆ, ಪೋಷಣೆ ಇಂತಹ ಸಹವಾಸಗಳ ಸ್ಫೂರ್ತಿ.

ಲೆಕ್ಕ ಇಡಲಾಗದ ಇಂತಹ ಅನುಭವಗಳನ್ನು ದಾಖಲು ಮಾಡುವುದು ನನ್ನ ಸಂಶೋಧನೆಯ ಭಾಗವಾಗಿತ್ತು. ಈ ವಿಷಯವನ್ನು ನನ್ನ ಚಿಕ್ಕಮ್ಮ ಸುಧಾ ನರಸಿಂಹರಾಜು ಜೊತೆ ಚರ್ಚಿಸಿದ ನಂತರ ನನ್ನ ಪ್ರಯತ್ನ ಬೇರೆ ರೂಪ ಪಡೆದು, ಒಂದು ನಿರ್ಧಾರಕ್ಕೆ ಬಂದು 'ಹಾಸ್ಯ ಚಕ್ರವರ್ತಿ' ಎಂಬ ಧಾರಾವಾಹಿಯನ್ನು ದೂರದರ್ಶನಕ್ಕೆ ತಯಾರಿಸಿದೆವು. ಈ ಕಾರ್ಯಕ್ರಮ ನರಸಿಂಹರಾಜುರವರ ಜೀವನಗಾಥೆಯನ್ನು ಬಿಂಬಿಸುವ ಏಕೈಕ ಹಾಗೂ ಅಪರೂಪದ ದಾಖಲೆಯಾಗಿ ಉಳಿಯಿತು. ತಾತ ತೀರಿಹೋಗಿ ಸುಮಾರು ಇಪ್ಪತ್ತು ವರ್ಷಗಳ ನಂತರ ಅವರ ಆಪ್ತರು ತಮ್ಮ ನೆನಪಿನ ಅಂಗಳದಿಂದ ಆರಿಸಿ ಹಂಚಿಕೊಂಡ ಅಪರೂಪದ ಕ್ಷಣಗಳು 'ಹಾಸ್ಯ ಚಕ್ರವರ್ತಿ' ಧಾರಾವಾಹಿಯಲ್ಲಿ ದಾಖಲಾಯಿತು. ರಾಜ್‌ಕುಮಾರ್, ವರದಪ್ಪ, ಪಾರ್ವತಮ್ಮ, ಜಿ.ವಿ. ಅಯ್ಯರ್, ವಾದಿರಾಜ್, ಹರಿಣಿ, ವಿಷ್ಣುವರ್ಧನ್, ಭಾರತಿ ವಿಷ್ಣುವರ್ಧನ್, ಲೋಕೇಶ್, ಕಲ್ಯಾಣ್ ಕುಮಾರ್, ದ್ವಾರಕೀಶ್, ಎಂ.ಎನ್. ಲಕ್ಷ್ಮೀದೇವಿ, ಆರ್.ಟಿ. ರಮಾ, ಕುಳ್ಳಿ ಜಯ, ಬಿ.ವಿ. ರಾಧ, ಬಿ.ಎಸ್. ರಂಗಾ, ಮಾಸ್ಟರ್ ಹಿರಣ್ಣಯ್ಯ, ಗುಬ್ಬಿ ಬಸವರಾಜಪ್ಪ ಮುಂತಾದ ಗಣ್ಯರು ನರಸಿಂಹರಾಜುರವರ ಜೊತೆ ಕಳೆದ ಆಪ್ತ ಸಮಯವನ್ನು ಹಂಚಿಕೊಂಡರು. ರಾಜ್‌ಕುಮಾರ್ ಮತ್ತು ನರಸಿಂಹರಾಜುರವರಿಗೆ ಸಂಗೀತ ಪಾಠ ಹೇಳಿಕೊಟ್ಟ ಬಿ.ಎನ್. ಚಿನ್ನಪ್ಪ ಅವರನ್ನು ಭೇಟಿಯಾಗಿದ್ದು ಸ್ಮರಣೀಯ.

ಹಿಂದೊಮ್ಮೆ 'ಇವರು ನರಸಿಂಹರಾಜುರವರ ಮೊಮ್ಮಗ' ಎಂದು ಸರ್ಕಾರಿ ಅಧಿಕಾರಿಯೊಬ್ಬರು ನನ್ನನ್ನು ಹಿರಿಯ ನಿರ್ಮಾಪಕರಾದ ಅಬ್ಬಯ್ಯ ನಾಯ್ಡುರವರಿಗೆ ಪರಿಚಯಿಸಿದರು.

11ನೇ ಪುಟಕ್ಕೆ...

ವರ್ತಮಾನಕ್ಕೆ ಒಗ್ಗಿಸಿದ ಪ್ರಯೋಗ

ದೇವು ಪತ್ತಾರ

ಸರಿಯಾಗಿ ನೂರು ವರ್ಷಗಳ ಹಿಂದೆ ಪ್ರಕಟವಾಗಿದ್ದ ರವೀಂದ್ರನಾಥ ಟ್ಯಾಗೋರ್ ಅವರ ಕಾದಂಬರಿ 'ಘರೆ ಬೈರೆ' (1923) ಆಧರಿಸಿದ ನಾಟಕವನ್ನು 50ರ ಸಂಭ್ರಮದಲ್ಲಿರುವ 'ರಂಗಸಂಪದ' ರಂಗದ ಮೇಲೆ ತಂದಿದೆ. 'ಬೀಸು' ಎಂದೇ ಪರಿಚಿತರಿರುವ ಬಿ. ಸುರೇಶ್ ನಿರ್ದೇಶನದ 'ಲೋಕದ ಒಳ ಹೊರಗೆ' ಇತ್ತೀಚೆಗಷ್ಟೆ ಬೆಂಗಳೂರಿನ ಕಲಾಗ್ರಾಮದಲ್ಲಿ ಪ್ರದರ್ಶನಗೊಂಡಿತು. ರಂಗಭೂಮಿಯ ಹಲವು ಸಾಧ್ಯತೆಗಳನ್ನು ಯಶಸ್ವಿಯಾಗಿ ದುಡಿಸಿಕೊಂಡಿರುವ ಈ ನಾಟಕವು ಸಮಕಾಲೀನ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಹುಡುಕಾಟ.

ರಂಗಭೂಮಿಯಲ್ಲಿನ ಪ್ರದರ್ಶನವನ್ನು ಸಮಕಾಲೀನಗೊಳಿಸುವ ಪ್ರಯತ್ನ ನಡೆದಾಗಲೆಲ್ಲ ಢಾಳಾಗಿ ಎದ್ದುಕಾಣುವಂತೆ/ಘೋಷಣೆಗಳ ಮೂಲಕ ಅಥವಾ ತಮ್ಮ ಅಜೆಂಡಾಗಳನ್ನು 'ಹಿಡನ್' ಆಗಿರಿಸದೇ ವಾಚ್ಯಗೊಳಿಸಲಾಗುತ್ತದೆ. ಈ ನಾಟಕದ ನಿರ್ದೇಶಕರಿಗೆ ಒಂದು ರಾಜಕೀಯ ನಿಲುವು ಖಂಡಿತವಾಗಿಯೂ ಇದೆ. ಅದು ಒಟ್ಟಾರೆ ನಾಟಕವನ್ನು ಕಟ್ಟುವ ಕ್ರಿಯೆಯಲ್ಲಿ ಅಡ್ಡಿಯಾಗಿಲ್ಲ. ಅಂದರೆ ನಿರ್ದೇಶಕರು ತಮ್ಮ ಅಜೆಂಡಾವನ್ನು ಹೇರುವ ಪ್ರಯತ್ನ ನಡೆಸದೇ ಇರುವುದರಿಂದ ನಾಟಕ 'ಕಲಾಕೃತಿ'ಯಾಗಿದೆ.

ಸುರೇಶ್ ಅವರ ನಾಟಕದ ಪಾತ್ರಗಳು 'ಕಪ್ಪು-ಬಿಳುಪು' ಶೇಡ್‌ನಲ್ಲಿ ದಾಖಲಾಗಿಲ್ಲ. ಹಲವು ಬಣ್ಣದ ಛಾಯೆಗಳನ್ನು ದಾಖಲಿಸಲು ಯತ್ನಿಸಿದ್ದಾರೆ. ನಾಯಕಿ ಶಾರದೆಯು ಉಟ್ಟ ಸೀರೆಯ ಬಣ್ಣಗಳು ಅವಳ ಒಳತೋಟಿ-ಹುಡುಕಾಟವನ್ನು ಹೇಳುತ್ತವೆ. ನೀಲಿ-ಹಳದಿಯಾಗುವ, ಹಳದಿ ಕೆಂಪಾಗುವ ಹಾಗೆಯೇ ಕೆಂಪು-ಬಿಳಿಯಾಗುವ ರೀತಿಯಲ್ಲಿ ಗೋಚರವಾಗುವ ಹೊರ ಜಗತ್ತು. ಮತ್ತೊಂದು ಅನುಭವಕ್ಕೆ ದಕ್ಕುವ ಆದರೆ ಆಡಲಾಗದ ಒಳಲೋಕ. ಎರಡನ್ನೂ ರಂಗದ ಮೇಲೆ ಮಾತ್ರವಲ್ಲ, ಯಾವುದೇ ಕಲಾಕೃತಿಯಲ್ಲಿ ತರುವುದು ಸವಾಲಿನ ಕಷ್ಟದ ಕೆಲಸವೇ. ಅದನ್ನು ಇಷ್ಟವಾಗುವ ಹಾಗೆ ಕಟ್ಟಿರುವುದು ವಿಶೇಷ.

ನಾಟಕದೊಳಗಿನ ಕತೆ 1905ರಲ್ಲಿ ಬ್ರಿಟಿಷ್ ಸರ್ಕಾರವು ಧರ್ಮದ ಆಧಾರದ ಮೇಲೆ ಬಂಗಾಳದ ವಿಭಜನೆ ಮಾಡಿದ ನಂತರದ ದಿನಗಳದ್ದು. ಸಹಜವಾಗಿಯೇ 'ಧರ್ಮ' ಮತ್ತು ಅದು ತರುವ ಸಂಕಟ ಕೂಡ ಇದೆ.

ವಿಲಾಯತಿಯಿಂದ ಮರಳಿದ ಸುಶಿಕ್ಷಿತ ಶ್ರೀಮಂತ ಪತಿ ಸಿದ್ಧಾರ್ಥನಿಗೆ ತನ್ನ ಪತ್ನಿ ಶಾರದೆ ಕೇವಲ ಮನೆಯೊಳಗೆ ಇದ್ದರೆ ಸಾಲದು, ಹೊರಗಿನ ಲೋಕವನ್ನೂ ಅರಿಯಬೇಕು ಎಂಬ ಆಸೆ-ಹಂಬಲ. ಅದಕ್ಕೆ ಪೂರಕವಾದ ಚಟುವಟಿಕೆಗಳಿಗೆ ಅನುವು ಮಾಡಿ ಕೊಡುತ್ತಾನೆ. ಉದಾಹರಣೆಗೆ ಇಂಗ್ಲಿಷ್ ಕಲಿಯುವುದು ಮತ್ತು ಪಾಶ್ಚಾತ್ಯ ಸಂಸ್ಕೃತಿ ಅರಿಯುವುದು ಇತ್ಯಾದಿ. ಎಲ್ಲ ಸರಿಯಾಗಿರುತ್ತದೆ. ಎಲ್ಲವೂ ಸರಿಯಿದ್ದರೆ ನಾಟಕ ಹೇಗಾಗುತ್ತದೆ?


'ಲೋಕದ ಒಳಹೊರಗೆ' ನಾಟಕದ ದೃಶ್ಯ


'ಲೋಕದ ಒಳಹೊರಗೆ' ನಾಟಕದ ದೃಶ್ಯ

ಚದುರಂಗರ 'ಉಯ್ಯಾಲೆ'ಯಲ್ಲಿ ಆದಹಾಗೆ ಗೆಳೆಯನ ಪ್ರವೇಶ. ತುಂಬಿದ ಮನೆಯೊಳಗೆ ನಾಗರ ಹೊಕ್ಕಂತೆ. 'ಉಯ್ಯಾಲೆ'ಯಲ್ಲಿ ಒಳಗಿನ ಲೋಕದ ಹುಡುಕಾಟ ಮಾತ್ರ ಇದ್ದರೆ 'ಲೋಕದ ಒಳಹೊರಗೆ'ಯಲ್ಲಿ ಶೀರ್ಷಿಕೆಯೇ ಸೂಚಿಸುವಂತೆ ಒಳ-ಹೊರಗಿನ ಲೋಕಗಳೆರಡೂ ಮುಖಾಮುಖಿ ಆಗುತ್ತವೆ. ಇಂದ್ರಜಿತ್ ಪ್ರೇಕ್ಷಕರತ್ತ ಬೆನ್ನು ಮಾಡಿ ನಿಂತು ಕೈಗಳನ್ನು ತನ್ನ ಬೆನ್ನಲ್ಲಿಯೇ ಆಡಿಸುವ ಮೈಮಾತು (ದೇಹಭಾಷೆ) ಸೂಚ್ಯವೂ ಸೂಕ್ತವೂ ಆಗಿದೆ.

ಸದ್ಯದ ವರ್ತಮಾನ ಮತ್ತು ರಾಜಕಾರಣ-ಬದುಕುಗಳನ್ನು 'ಕತೆ'ಯ ಮೂಲಕ ಕಟ್ಟುವ ಕ್ರಿಯೆ ಕಾಣಿಸುತ್ತದೆ. ಹಾಗಾಗಿಯೇ ಏಕಕಾಲಕ್ಕೆ 'ಭೂತ'ದ ಕತೆಯೊಂದು ವರ್ತಮಾನಕ್ಕೆ ಮುಖಾಮುಖಿ ಆಗುತ್ತದೆ. ಸ್ವದೇಶಿ ಚಳವಳಿಯಲ್ಲಿ ಸಕ್ರಿಯವಾಗಿದ್ದ ಇಂದ್ರಜಿತ್‌ನ ಆಗಮನ ಮನೆಯನ್ನು ಮಾತ್ರವಲ್ಲ ನಗರ/ಪ್ರದೇಶವನ್ನೇ ಪ್ರಕ್ಷುಬ್ಧಗೊಳಿಸುತ್ತದೆ. ಕತೆಗೆ ಹಲವು ಆಯಾಮ ಮತ್ತು ಶೇಡ್‌ಗಳನ್ನು ಕೊಡಲು-ಕಲ್ಪಿಸಲು ಸಾಧ್ಯವಾಗಿರುವುದೇ ಈ ಪ್ರದರ್ಶನದ ವಿಶೇಷ.

ಉರಿಯುವ ಬೆಂಕಿಯ ರೂಪಕವನ್ನು ಸುರೇಶ್ ಸಶಕ್ತವಾಗಿ ಬಳಸಿಕೊಂಡಿದ್ದಾರೆ. ಅದು ಹರಡುವ ಜ್ವಾಲೆಗಳು ಸುಡುವುದು ಕೂಡ ಮನೆಯ ಒಳ ಹಾಗೂ ಹೊರಗನ್ನು. ಮೂರು ಬಾರಿ 'ಬೆಂಕಿ' ಕಾಣಿಸಿಕೊಳ್ಳುತ್ತದೆ. ಆದರೆ, ಅದರ ಕಿಚ್ಚು ನಾಟಕದುದ್ದಕ್ಕೂ ಇದೆ. ರಂಗಕ್ರಿಯೆಯಾಗಿ ಕಾಣಿಸುವ ಪ್ರಕ್ರಿಯೆ ಪ್ರೇಕ್ಷಕ ಇದನ್ನೇ ಗಮನಿಸಬೇಕು ಎನ್ನುವ ರೀತಿಯಲ್ಲಿದೆ. ಈ ಹೇರಿಕೆಯ ವಾಚ್ಯ ಹೊರತುಪಡಿಸಿದರೆ ಇಡೀ ಪ್ರಯೋಗ ಯಶಸ್ವಿ. ವಾಚ್ಯ ಕೂಡ ಮಿತಿ ಮೀರಿಲ್ಲವಷ್ಟೆ.

ಇಂದ್ರಜಿತ್ ಮನೆಯೊಳಗೆ ಮಾತ್ರವಲ್ಲ ಶಾರದೆಯ ಮನದೊಳಗೂ ಇದ್ದಾನೆ. ಹೌದು, ಇಂದ್ರನು ಅಹಲ್ಯೆಯ ಬದುಕಿನಲ್ಲಿ ಪ್ರವೇಶಿಸಿದಂತೆ. ಹೀಗಾಗಿಯೇ ಈ ಹಂತದಲ್ಲಿ 'ಇಂದ್ರ' ಎಂಬ ಪದ ಬಳಸಲಾಗಿದೆ. ಅತಿಥಿಯನ್ನು ಹೊರಹಾಕಲಾಗದ ಪತಿ ಸಿದ್ಧ ಅರ್ಥಗಳ ಸಿದ್ಧಾರ್ಥ 'ಬಿಡುಗಡೆ'ಯ ಮಾತನ್ನೂ ಆಡುತ್ತಾನೆ. ಸ್ಟೇಜ್ ಮೇಲೆ ನಾಟಕವನ್ನು ಕಟ್ಟಿದ-ತೋರಿಸಿದ ಕ್ರಮ ಚೆನ್ನಾಗಿದೆ. ಮನೆಯ ಮೂರು ಭಾಗಗಳು. ಬೆಡ್‌ರೂಮ್ ಎಂದು ಹೇಳಲಾಗುವ ಒಳಗಿನ ಕೋಣೆ, ಅತಿಥಿಗಳು ಕೂರುವ ಡ್ರಾಯಿಂಗ್ ರೂಮ್ ಮತ್ತು ಸಿದ್ಧಾರ್ಥನ ಹೊರ ಚಟುವಟಿಕೆಗಳ ಮತ್ತೊಂದು ಕೋಣೆ. ಇವು ಮೂರಲ್ಲದೆ ಪಾತ್ರಗಳು ತಮ್ಮ ಒಳತೋಟಿಯ ಸ್ವಗತಗಳನ್ನು ಹೇಳುವುದಕ್ಕೆ ಬಳಸಿರುವ ಮೂರು ಪುಟ್ಟ ಸ್ಟ್ಯಾಂಡ್‌ಗಳು. ರಂಗದ ವಿಭಜನೆ ಹಾಗೂ ಬೆಳಕಿನ ವಿನ್ಯಾಸ ಗಮನ ಸೆಳೆಯುತ್ತದೆ. ರಂಗಪರಿಕರ ಹಾಗೂ ವಸ್ತ್ರವಿನ್ಯಾಸಗಳು 20ನೇ ಶತಮಾನದ ಬಂಗಾಳಿ ಲೋಕವನ್ನು ಅನಾವರಣ ಮಾಡುತ್ತವೆ.

'ಮಾತು' ಕತೆಯಾಗಿಸುವ-ಕಾವ್ಯವಾಗಿಸುವ ಗುಣ ಟ್ಯಾಗೋರರಿಗೆ ಇದೆ ಎಂದು ಗೊತ್ತು. ಅದನ್ನು ಸುರೇಶ್ ಕನ್ನಡೀಕರಿಸಿದ್ದಾರೆ. ಸೃಜನಶೀಲ ಸ್ವಾತಂತ್ರ್ಯವನ್ನೂ ಸುರೇಶ್ ತೆಗೆದುಕೊಂಡಿದ್ದಾರೆ. ಅದು ಪಾತ್ರಗಳಿಗೆ ಇಟ್ಟಿರುವ ಹೆಸರು ಹಾಗೂ 'ಗಾಂಧೀಜಿ'ಯ ಬಳಕೆ. ಅದು ಔಚಿತ್ಯಪೂರ್ಣವಾಗಿವೆ. ವರ್ತಮಾನವನ್ನು ವಾಚ್ಯಗೊಳಿಸದೇ ಕಟ್ಟಿದ ಕಾವ್ಯಾತ್ಮಕ ಪ್ರಯತ್ನ 'ಜಗತ್ತಿನ ಒಳಹೊರಗೆ'.

'ರಂಗಸಂಪದ'ಕ್ಕೆ 50

'ರಂಗಸಂಪದ' ತಂಡ 50 ವಸಂತಗಳನ್ನು ಕೂಡ ಪೂರೈಸಿದೆ. ಆ ಸಂದರ್ಭಕ್ಕೆ ಬಿ. ಸುರೇಶ್ ನಿರ್ದೇಶನದ ನಾಟಕ ಅರ್ಥ ದಕ್ಕಿಸಿಕೊಟ್ಟಿತು. ಆರ್. ನಾಗೇಶ್, ಜೆ. ಲೋಕೇಶ್, ಸುಬ್ರಹ್ಮಣ್ಯಂ, ಎಂ.ಸಿ. ಆನಂದ, ಹರಿಕೃಷ್ಣ ಮತ್ತು ಕೇಶವರಾವ್ ಮೊದಲು ಕಟ್ಟಿದ ತಂಡ 'ರಂಗಸಂಪದ'. ಆಮೇಲೆ ಅದನ್ನು ಮುನ್ನಡೆಸಿದವರಲ್ಲಿ ಚಡ್ಡಿ ನಾಗೇಶ್, ಚಂದ್ರಕಾಂತ, ಶಿವಲಿಂಗ ಪ್ರಸಾದ್, ಚನ್ನಕೇಶವಮೂರ್ತಿ ಅವರೂ ಇದ್ದಾರೆ. 'ಯಯಾತಿ', 'ಕದಡಿದ ನೀರು', 'ಏವಂ ಇಂದ್ರಜಿತ್', 'ಚೋಮ', 'ಸಂಗ್ಯಾ ಬಾಳ್ಯಾ' ತಂಡವು ನಿರ್ಮಿಸಿದ ಪ್ರಮುಖ ನಾಟಕಗಳು. ಕಾರ್ಯಾಗಾರಗಳು, ನಾಟಕ ರಚನಾ ಸ್ಪರ್ಧೆಗಳನ್ನು ನಡೆಸುವ ಮೂಲಕವೂ ರಂಗಭೂಮಿಗೆ ಈ ತಂಡವು ಕಾಣ್ಕೆ ನೀಡಿದೆ.

ಕನ್ನಡ ಕಲರವದ ನೆರಳು 'ಚಿಣ್ಣರಬಿಂಬ'

ಜಿ.ಎನ್.ಉಪಾಧ್ಯ

ಚಿಣ್ಣರಬಿಂಬವು ಮುಂಬೈನಲ್ಲಿ ಮಕ್ಕಳಿಂದ ಮಕ್ಕಳಿಗಾಗಿ ಮಕ್ಕಳೇ ನಡೆಸುವ ಒಂದು ವಿಶಿಷ್ಟ ಸಂಸ್ಥೆ. ಒಂದು ವಿಶ್ವವಿದ್ಯಾಲಯ, ಒಂದು ಅಕಾಡೆಮಿ ಮಾಡಬಹುದಾದ ಕಾರ್ಯವನ್ನು ಇದರ ರೂವಾರಿ ಪ್ರಕಾಶ್ ಭಂಡಾರಿ ಅವರು ಮಾಡಿ ತೋರಿಸಿದ್ದಾರೆ. ಚಿಣ್ಣರಬಿಂಬದ ಮೂಲಕ ಸುಮಾರು ಏಳು ಸಾವಿರ ಮಕ್ಕಳು ಕನ್ನಡ ಕಲಿಕೆಯಲ್ಲಿ ನಿರತರಾಗಿರುವುದು ಉಲ್ಲೇಖನೀಯ.

ಮುಂಬೈ ಮಹಾನಗರ ಹಾಗೂ ಉಪನಗರಗಳಲ್ಲಿ ಸುಮಾರು ಹದಿನೆಂಟು-ಇಪ್ಪತ್ತು ಲಕ್ಷ ಕನ್ನಡಿಗರು ನೆಲೆಸಿದ್ದಾರೆ. ಇಲ್ಲಿರುವ ಎಂಬತ್ತು ಪ್ರತಿಶತ ಹೋಟೆಲ್‌ಗಳು ಕನ್ನಡಿಗರದ್ದು ಎಂಬುದು ಅಭಿಮಾನದ ಸಂಗತಿ. ಕರ್ನಾಟಕದ ರಾಜಧಾನಿ ಬೆಂಗಳೂರನ್ನು ಬಿಟ್ಟರೆ ಅತಿ ಹೆಚ್ಚು ಕನ್ನಡಿಗರಿರುವ ಮಹಾನಗರವಿದು. ಮುಂಬೈನಲ್ಲಿ ನೂರಾರು ಕನ್ನಡ ಸಂಘ-ಸಂಸ್ಥೆಗಳು ಕನ್ನಡ ಪರಿಚಾರಿಕೆಯಲ್ಲಿ ನಿರತವಾಗಿವೆ. ಈ ಮಹಾನಗರದಲ್ಲಿ ಹೊಸ ಪೀಳಿಗೆ ಕನ್ನಡದಿಂದ ದೂರ ಸರಿಯಬಹುದಾದ ಕಾಲಘಟ್ಟದಲ್ಲಿ ಭಾಷೆಯ ಬಲವರ್ಧನೆಗೆ ಟೊಂಕಕಟ್ಟಿ ನಿಂತ ಸಂಸ್ಥೆ 'ಚಿಣ್ಣರಬಿಂಬ'. ಮುಂಬೈ ಕನ್ನಡಿಗರ ಮಕ್ಕಳಿಂದ ಮಕ್ಕಳಿಗಾಗಿ ಮಕ್ಕಳೇ ನಡೆಸುವ ಒಂದು ವಿಶಿಷ್ಟ ಸಾಂಸ್ಕೃತಿಕ ಸಂಸ್ಥೆ ಇದು. 'ಕಲಾಜಗತ್ತು' ಮುಂಬೈನ ಪ್ರಸಿದ್ಧ ನಾಟಕ ತಂಡಗಳಲ್ಲಿ ಒಂದು. ಅದರ ರೂವಾರಿ ನಟ–ನಾಟಕಕಾರ ವಿಜಯಕುಮಾರ್ ಶೆಟ್ಟಿ. 'ಕಲಾಜಗತ್ತಿ'ನ ಇನ್ನೊಂದು ಮುಖ್ಯ ಅಂಗ ಈ 'ಚಿಣ್ಣರಬಿಂಬ'. 2003ರಲ್ಲಿ 'ಚಿಣ್ಣರಬಿಂಬ' ಅಸ್ತಿತ್ವಕ್ಕೆ ಬಂದಿತು. ಮಕ್ಕಳ ಸರ್ವತೋಮುಖ ಅಭಿವೃದ್ಧಿ, ವಿಕಾಸದ ದೃಷ್ಟಿಯಿಂದ ಇಪ್ಪತ್ತು ವರ್ಷಗಳಲ್ಲಿ 'ಚಿಣ್ಣರಬಿಂಬ' ಬೃಹತ್ ಸಂಸ್ಥೆಯಾಗಿ ಬೆಳೆದಿದೆ. ಈ ಸಂಸ್ಥೆಯಲ್ಲಿ ಈಗ ಏಳು ಸಾವಿರಕ್ಕೂ ಹೆಚ್ಚು ಮಕ್ಕಳು ಹೆಸರು ನೋಂದಣಿ ಮಾಡಿಕೊಂಡು ವಿಭಿನ್ನ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದಾರೆ. ಮುಂಬೈ ಮಹಾನಗರ, ಉಪನಗರಗಳಲ್ಲಿ ಇದರ ಇಪ್ಪತ್ತೇಳು ಶಾಖೆಗಳಿವೆ. 7ರಿಂದ 14 ವರ್ಷದವರೆಗಿನ ಕರ್ನಾಟಕ ಮೂಲದ ಮಕ್ಕಳು ಯಾವುದೇ ತಾರತಮ್ಯವಿಲ್ಲದೆ ಪ್ರವೇಶ ಪಡೆಯಬಹುದು.

ಕಲೆ, ಸಾಹಿತ್ಯ, ಸಂಸ್ಕೃತಿ, ಭಾಷೆ ಹೀಗೆ ಮಗುವಿನ ಬಾಳಿಗೆ ಬೆಳಕಾಗಬಲ್ಲ ಯೋಗ್ಯ ಮಾರ್ಗದರ್ಶನ ನೀಡಿ, ಪ್ರತಿಭೆಯನ್ನು ಗುರುತಿಸುವ ಕಾರ್ಯ ನಿರಂತರವಾಗಿ ನಡೆಯುತ್ತಿದೆ. ಕೇವಲ ಐವತ್ತು ಮಕ್ಕಳೊಂದಿಗೆ ಆರಂಭವಾದ ಚಿಣ್ಣರಬಿಂಬ ಇಂದು ಸಾವಿರಾರು ಮಕ್ಕಳಿಗೆ ತಮ್ಮ ಪ್ರತಿಭೆ, ಕೌಶಲ ಅಭಿವ್ಯಕ್ತಗೊಳಿಸಲು ಸೂಕ್ತ ವೇದಿಕೆಯನ್ನು ಕಲ್ಪಿಸಿಕೊಟ್ಟಿದೆ.


'ಚಿಣ್ಣರ ಬಿಂಬ'ದ ಸಾಂಸ್ಕೃತಿಕ ಕಾರ್ಯಕ್ರಮವೊಂದರಲ್ಲಿ ಮಕ್ಕಳ ಪ್ರತಿಭಾ ಪ್ರದರ್ಶನ

ಯಕ್ಷಗಾನ, ಭಜನೆ, ಭೂತಾರಾಧನೆ, ಜಾನಪದ ಕಲೆ, ರಂಗೋಲಿ, ನೃತ್ಯ, ಪುಷ್ಪ ಶೃಂಗಾರ, ನಾಟಕ, ಗ್ರಾಮೀಣ ಕ್ರೀಡೆ ಹೀಗೆ ವೈವಿಧ್ಯಮಯ ಶಿಬಿರಗಳ ಮೂಲಕ ಮಕ್ಕಳಲ್ಲಿ ಉತ್ತಮ ಜೀವನಮೌಲ್ಯಗಳ ಬಗೆಗೆ ಅರಿವು ಮೂಡಿಸಲಾಗುತ್ತಿದೆ. ರಜಾದಿನಗಳಲ್ಲಿ 'ಚಿಣ್ಣರಬಿಂಬ' ನಡೆಸಿಕೊಂಡು ಬರುತ್ತಿರುವ ವಿಭಿನ್ನ ಬಗೆಯ ಶಿಬಿರ, ಕಮ್ಮಟಗಳಿಂದ ಎಳೆಯ ಮಕ್ಕಳ ಬುದ್ಧಿ, ಹೃದಯಗಳು ಅರಳಲು ಅವಕಾಶ ದೊರಕಿದೆ. ಮಕ್ಕಳಲ್ಲಿ ಭಯ, ಸಭಾಕಂಪನ, ಅನಾಥಪ್ರಜ್ಞೆ, ಏಕಾಕಿತನಗಳು ಕಾಣೆಯಾಗಿ ಸ್ನೇಹ, ಸಹಕಾರ, ಖುಷಿ ಗರಿಗೆದರಿದೆ ಎಂಬುದು 'ಚಿಣ್ಣರಬಿಂಬ'ದ ಪಾಲಕರು ಕಂಡುಕೊಂಡ ಸತ್ಯ.

'ಚಿಣ್ಣರಬಿಂಬ'ವು ಮುಂಬೈ ಮಹಾನಗರದಲ್ಲಿ ಸಾವಿರಾರು ಮಕ್ಕಳಿಗೆ ಕನ್ನಡದ ದೀಕ್ಷೆಯನ್ನು ನೀಡಿದೆ. ಕಳೆದ ಅನೇಕ ವರ್ಷಗಳಿಂದ ತನ್ನದೇ ಆದ ಕನ್ನಡ ಕಲಿಕಾ ಪಠ್ಯವನ್ನು ಸಿದ್ಧಪಡಿಸಿಕೊಂಡು ನುರಿತ ಶಿಕ್ಷಕರಿಂದ ಕನ್ನಡ ಕಲಿಸುವ ಯೋಜನೆಯನ್ನು ಶಿಸ್ತುಬದ್ಧವಾಗಿ ನಡೆಸಿಕೊಂಡು ಬರುತ್ತಿದೆ. ಈ ಮೂಲಕ ಮುಂಬೈ ಮಹಾನಗರದಲ್ಲಿ ಆಂಗ್ಲ ಮಾಧ್ಯಮದಲ್ಲಿ ಓದುತ್ತಿರುವ ಮಕ್ಕಳಿಗೆ ಕನ್ನಡ-ಕರ್ನಾಟಕ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಪರಿಚಯಿಸುವಲ್ಲಿ ಯಶಸ್ವಿಯಾಗಿದೆ.

ರೂವಾರಿ ಪ್ರಕಾಶ್ ಭಂಡಾರಿ: ವೃತ್ತಿಯಲ್ಲಿ ಪ್ರಕಾಶ್ ಭಂಡಾರಿ ಹಿರಿಯ ಪೊಲೀಸ್ ಅಧಿಕಾರಿ. ಅವರ ಪ್ರವೃತ್ತಿ ಸಂಸ್ಕೃತಿ ಪ್ರಸಾರ, ನುಡಿಸೇವೆ. ಮಹಾರಾಷ್ಟ್ರ ಸರ್ಕಾರದ ಗುಪ್ತಚರ ಇಲಾಖೆಯಲ್ಲಿ ಉನ್ನತ ಅಧಿಕಾರಿಯಾಗಿ ಸೇವೆ ಸಲ್ಲಿಸಿರುವ ಅವರದು ಬಹುಮುಖ ಪ್ರತಿಭೆ. ಅವರು 'ಚಿಣ್ಣರಬಿಂಬ'ದ ಕುಲಪತಿ. ಮಕ್ಕಳ ಪ್ರಗತಿಗೆ ಅವರು ಪಟ್ಟ ಪರಿಶ್ರಮ, ನಡೆಸಿದ ಹೋರಾಟ, ಮಾಡಿದ ತ್ಯಾಗ ಮುಂಬೈ ಕನ್ನಡಿಗರಿಗೆ ಗೊತ್ತಿದೆ. ಅವರ ಇಡೀ ಕುಟುಂಬವೇ ಈ ಸಂಸ್ಥೆಯ ಏಳಿಗೆಗೆ ಟೊಂಕಕಟ್ಟಿ ನಿಂತಿದೆ. ಅವರ ಪುತ್ರಿ ಪೂಜಾ ಭಂಡಾರಿ 'ಚಿಣ್ಣರಬಿಂಬ'ದ ಸ್ಥಾಪಕ ಅಧ್ಯಕ್ಷೆಯಾಗಿದ್ದರು. ಕಿರಿಯ ಮಗಳು ನಯನಾ ಭಂಡಾರಿ ಕಾರ್ಯಾಧ್ಯಕ್ಷೆಯಾಗಿ ಸತತವಾಗಿ ಕೆಲಸ ಮಾಡಿದ್ದಾರೆ. ಪ್ರಕಾಶ್ ಭಂಡಾರಿ ಅವರ ಪತ್ನಿ ರೇಣುಕಾ ಭಂಡಾರಿ ಅವರೂ ಚಿಣ್ಣರ ಶ್ರೇಯೋಭಿವೃದ್ಧಿ ಚಟುವಟಿಕೆಯಲ್ಲಿ ತೊಡಗಿರುವುದು ಅನುಕರಣೀಯ.

'ಚಿಣ್ಣರಬಿಂಬ'ದ ಕನ್ನಡ ಸರ್ಟಿಫಿಕೇಟ್ ಕೋರ್ಸ್ ಮಾನ್ಯತೆ ನೀಡುವಂತೆ ಪ್ರಕಾಶ್ ಭಂಡಾರಿ ಅವರು ಕೋರುತ್ತಲೇ ಇದ್ದಾರೆ. ಅವರ ಮನವಿಗೆ ಕರ್ನಾಟಕ ಸರ್ಕಾರ ಈವರೆಗೆ ಸ್ಪಂದಿಸಿಲ್ಲ. ಬಾಲವಿಕಾಸ ಅಕಾಡೆಮಿಯೊಂದು ಮಾಡಬಹುದಾದ ಕೆಲಸಗಳನ್ನು ಈ ಸಂಸ್ಥೆ ಮಾಡುತ್ತಿರುವುದಂತೂ ಶ್ಲಾಘನೀಯ.

ನುಡಿಪ್ರೀತಿ

ಮೊಮ್ಮಗನ ಕಣ್ಣಲ್ಲಿ ಅಜ್ಜ...


10ನೇ ಪುಟದಿಂದ...

ಅಬ್ಬಯ್ಯ ನಾಯ್ಡು, 'ನೋಡು ಮರಿ, ನರಸಿಂಹರಾಜು ಮೊಮ್ಮಗ ಅನ್ನೋದು ಮುಖ್ಯ ಅಲ್ಲ. ನೀನು ಏನು ಸಾಧನೆ ಮಾಡಿ ನಿನ್ನ ತಾತನ ಹೆಸರಿಗೆ ಗೌರವ ತರ್ತೀಯ ಅನ್ನೋದು ಮುಖ್ಯ' ಎಂದಷ್ಟೇ ನುಡಿದು ಸುಮ್ಮನಾದರು. ಅವರ ಮಾತು ಗಾಢವಾಗಿ ನನ್ನನ್ನು ತಟ್ಟಿತು. ನನ್ನ ಪ್ರತಿ ಸಾಧನೆಯಲ್ಲಿ ಅಬ್ಬಯ್ಯ ನಾಯ್ಡು ಅವರನ್ನು ಇಂದಿಗೂ ಸ್ಮರಿಸುತ್ತೇನೆ.

ಉತ್ತರ ಕರ್ನಾಟಕದ ಜನರು ನರಸಿಂಹರಾಜುರವರನ್ನು 'ಹಲ್ಲುಬ್ಬ' ಎಂದೇ ಕರೆಯುವುದು. ಒಂದು ಸಣ್ಣ ಆಕ್ಸಿಡೆಂಟ್ ಆಗಿ ತಾತನ ಉಬ್ಬುಹಲ್ಲು ಮುರಿದುಹೋಯಿತು! ಹುಬ್ಬುಹಲ್ಲು ಇಲ್ಲದಿದ್ದರೆ ಸಿನಿಮಾದಲ್ಲಿ ಕೆಲಸ ಸಿಗೋಲ್ಲ ಅನ್ನೋ ಗಾಬರಿ. ಡೆಂಟಿಸ್ಟ್‌ಗೆ ಹೇಳಿ ಒಂದು ಆರ್ಟಿಫಿಷಿಯಲ್ ಉಬ್ಬುಹಲ್ಲನ್ನು ರೆಡಿ ಮಾಡಿಸಿ ತಮ್ಮ ಜೇಬಲ್ಲೇ ಇಟ್ಟುಕೊಳ್ಳುತ್ತಿದ್ದರು. ನಿರ್ದೇಶಕರು 'ಉಬ್ಬುಹಲ್ಲು' ಅಂದ್ರೆ ರೆಡಿ. ಒಂದೆರಡು ಸಿನಿಮಾಗಳಲ್ಲಿ ಮಾತ್ರ ಆ ಕೃತಕ ಹಲ್ಲನ್ನು ಬಳಸಿದ್ದು. ಉಳಿದಂತೆ ಒರಿಜಿನಲ್ ಟ್ಯಾಲೆಂಟ್!

ಎರ್ನಾಕುಲಂನಲ್ಲಿ ಒಮ್ಮೆ ಮಮ್ಮುಟ್ಟಿಯವರನ್ನು ಭೇಟಿಯಾದ ಸಂದರ್ಭದಲ್ಲಿ ನನ್ನ ಹಿನ್ನೆಲೆ ಅವರಿಗೆ ತಿಳಿಸಿದೆ. ಆಗ ಮಮ್ಮುಟ್ಟಿಯವರು ತಮ್ಮ ಹಲ್ಲನ್ನು ಉಬ್ಬಿಸಿ, 'ಗ್ರೇಟ್ ಮ್ಯಾನ್! ಬೆಸ್ಟ್ ಕಾಮಿಡಿಯನ್... ಪ್ರೌಡ್ ಟು ಮೀಟ್ ಹಿಸ್ ಗ್ರ್ಯಾಂಡ್ ಸನ್' ಎಂದು ನನ್ನನ್ನು ತಬ್ಬಿಕೊಂಡರು. ನಮ್ಮ 'ಹಲ್ಲುಬ್ಬ' ಎಲ್ಲೆಡೆ ಆವರಿಸಿದ್ದರು.

'ಚೋರಿ ಚೋರಿ' ಹಿಂದಿ ಚಿತ್ರದಲ್ಲಿನ ತಾತನ ಅಭಿನಯವನ್ನು ಕಂಡು ರಾಜ್‌ಕಪೂರ್ 'ಹಿಂದಿ ಚಿತ್ರರಂಗಕ್ಕೆ ಬನ್ನಿ' ಎಂದು ಆಹ್ವಾನಿಸಿದ್ದರಂತೆ. 'ನನಗೆ ಕನ್ನಡ ಚಿತ್ರರಂಗವೇ ಜಗತ್ತು. ಹಿಂದಿಯಲ್ಲಿ ನನ್ನ ಗೆಳೆಯರಾದ ಮೆಹಮೂದ್ ಇದ್ದಾರೆ' ಎಂದು ತಮ್ಮ ಸ್ನೇಹ, ಕನ್ನಡಾಭಿಮಾನವನ್ನು ನರಸಿಂಹರಾಜುರವರು ಮೆರೆದಿದ್ದರು.


ಮಗ ನರಹರಿ ಜೊತೆಗೆ ನರಸಿಂಹರಾಜು

ಆ ಅಗಾಧವಾದ ಆಲದಮರದ ನೆರಳಿನಿಂದ ಈಗಲೂ ನಾವು ಹೊರಬಂದಿಲ್ಲವೆಂದು ಅನಿಸುತ್ತೆ. ಇಂದಿನ ರೀತಿಯ ನೆಟ್ವರ್ಕ್ ಇಲ್ಲದ ಕಾಲದಲ್ಲಿ ಅಷ್ಟೆಲ್ಲ ಸಾಧನೆ ಮಾಡಿದ ಕೀರ್ತಿವಂತರ ಹತ್ತಿರವೂ ನಾವು ಸುಳಿದಿಲ್ಲ. ವಿಶ್ವವಿದ್ಯಾಲಗಳಂತಿರುವ ಆ ಕಲಾವಿದರನ್ನು, ಅವರ ಸಾಧನೆಯ ಹಿಂದಿದ್ದ ಶ್ರಮಗಳನ್ನು, ಅವರ ಯೋಚನೆಗಳನ್ನು, ಯೋಜನೆಗಳನ್ನು ನಾವು ಅಧ್ಯಯನ ಮಾಡಬೇಕು.

ನರಸಿಂಹರಾಜುರಂತಹ ಕಲಾವಿದರಿಗೆ ಯಾವುದೇ ಚೌಕಟ್ಟಿಲ್ಲ. ಅವರು ತಮ್ಮ ಕುಟುಂಬದವರಿಗೆ, ಊರಿನವರಿಗೆ, ಸರ್ಕಾರಕ್ಕೆ, ಕನ್ನಡಿಗರಿಗೆ ಮಾತ್ರ ಸೀಮಿತವಲ್ಲದ ವಿಶ್ವದ ಆಸ್ತಿ. ಇದು ನರಸಿಂಹರಾಜುರವರ ಜನ್ಮ ಶತಮಾನೋತ್ಸವದ ವರ್ಷ. ಒಂದು ರಸ್ತೆಗೆ ಅಥವಾ ಭವನಕ್ಕೆ ಅವರ ಹೆಸರಿಟ್ಟು ಮರೆತು ಹೋಗುವುದು ಸೂಕ್ತವಲ್ಲ. ಅವರು ಶೋಧಿಸಿ, ಸೃಷ್ಟಿಸಿ, ಸುಗಮಗೊಳಿಸಿದ ಹಾದಿಯಲ್ಲಿ ಸಾಗುವುದು ಒಂದೆಡೆಯಾದರೆ, ಅವರ ನಟನಾ ಶೈಲಿ ಮತ್ತು ಅವರಿಗಂತಲೇ ರಚಿಸಿದ ಚಿತ್ರಸಾಹಿತ್ಯದ ಬಗೆಗಿನ ಅಧ್ಯಯನವೂ ನಡೆಯಬೇಕಿದೆ.

ಬಿ–ಬಾಯಿಂಗ್...

10ನೇ ಪುಟದಿಂದ...

ಸಾರ್ವಜನಿಕರಿಗೆ ತೊಂದರೆಯಾಗದಂತೆ ಕುಣಿಯುವ ಹಿಪ್-ಹಾಪ್ ನೃತ್ಯಪಟುಗಳು ಪುಕ್ಕಟೆ ಮನರಂಜನೆಯ ಮುಖಾಂತರ ಅನ್ಯ ನೆಲದ ನೃತ್ಯಕ್ಕೆ ಇಲ್ಲಿ ನೆಲೆ ಒದಗಿಸುತ್ತಿದ್ದಾರೆ. ಹಿನ್ನೆಲೆಯಲ್ಲಿ ಮೊಬೈಲ್ ಸ್ಟ್ಯಾಂಡ್‌ಗೆ ತೂಗುಬಿಟ್ಟ ಫ್ಲೆಕ್ಸ್‌ನಲ್ಲಿ 'Will do this in Olympics' ಎಂಬ ಬರಹ ನೋಡುಗರಲ್ಲಿ ಅಚ್ಚರಿಯದ ಜೊತೆಗೆ ಹುಡುಗರ ನೃತ್ಯದ ಬಗ್ಗೆ ಅಭಿಮಾನವನ್ನೂ ಉಕ್ಕಿಸುತ್ತಿದೆ. ನೃತ್ಯದ ವಿಡಿಯೊ ಚಿತ್ರಿಸಿ ಸಾಮಾಜಿಕ ಜಾಲತಾಣಗಳಲ್ಲಿ ಲೈವ್ ಹೋಗುವವರ ಸಂಖ್ಯೆ ದಿನೇದಿನೇ ಹೆಚ್ಚುತ್ತಿರುವುದೇ ಇದಕ್ಕೆ ಸಾಕ್ಷಿ.

ಒಲಿಂಪಿಕ್ಸ್ ಹಾದಿಯ ಹೂವು

ಅಕ್ಕುವಿನಂತೆಯೇ ಮುಂಬೈನ ಜೋಗೇಶ್ವರಿಯಲ್ಲಿ ಹಿಪ್-ಹಾಪ್‌ಗೆ ಸಮರ್ಪಿಸಿಕೊಂಡ ಆರಿಫ್ ಚೌಧರಿ ಪ್ಯಾರಿಸ್‌ನಲ್ಲಿ ನಡೆಯುವ ಒಲಿಂಪಿಕ್ಸ್‌ನಲ್ಲಿ 'ಬ್ರೇಕ್ ಡ್ಯಾನ್ಸ್' ಅನ್ನು ಸ್ಪರ್ಧೆಯೆಂದು ಪರಿಗಣಿಸಿರುವುದು ತನ್ನ ನೃತ್ಯ ಪ್ರಕಾರಕ್ಕೆ ಸಿಕ್ಕ ಅತಿ ದೊಡ್ಡ ಗೌರವವೇ ಸರಿ. ಅಲ್ಲಿಗೆ ತೆರಳಿ ಪ್ರತಿಭೆ ಪ್ರದರ್ಶಿಸುವುದಾಗಿ ಹೇಳುತ್ತಾನೆ. ಗುರುವಿಲ್ಲದೇ ಕಲಿತ ವಿದ್ಯೆಯನ್ನು ಜಗತ್ತಿನೆದುರು ಪ್ರದರ್ಶಿಸಬೇಕೆನ್ನುವ ಆರಿಫ್, ಹತ್ತು ವರ್ಷಗಳ ಹಿಂದೆ ಮುಂಬೈನಲ್ಲಿ ನಡೆದ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಚಿನ್ನ ಗೆದ್ದಿದ್ದ. ನಂತರ ಆಸ್ಟ್ರಿಯಾ, ನೆದರ್‌ಲ್ಯಾಂಡ್ಸ್, ಸ್ಲೊವಾಕಿಯ, ಚೀನಾ, ಜಪಾನ್, ತೈವಾನ್‌ಗಳಲ್ಲೂ ಪ್ರದರ್ಶನ ನೀಡಿರುವ ಆರಿಫ್, ಬ್ರೇಕ್ ಡ್ಯಾನ್ಸ್ ಎನ್ನುವುದು ಆಟ ಮತ್ತು ಕಲೆಯ ಮಿಶ್ರಣ ಎನ್ನುತ್ತಾನೆ.

1970ರ ದಶಕದಲ್ಲಿ ನ್ಯೂಯಾರ್ಕ್‌ನಲ್ಲಿ ಶುರುವಾದ ಬ್ರೇಕ್‌ಡ್ಯಾನ್ಸ್ ಅಥವಾ ಬಿ-ಬಾಯಿಂಗ್ ಜಿಮ್ನಾಸ್ಟಿಕ್ಸ್, ಜಾಝ್‌ನಿಂದ ಸ್ಫೂರ್ತಿ ಪಡೆದಿದೆ. ಹದಿನಾರು ಗಂಡು ಮತ್ತು ಹದಿನಾರು ಹೆಣ್ಣು ಒಟ್ಟು 32 ಜನರಿಗೆ ಪ್ರತ್ಯೇಕ ಸ್ಪರ್ಧೆಗಳಿರುತ್ತವೆ. ಹುಡುಗರನ್ನು ಬಿ-ಬಾಯ್ಸ್ ಎನ್ನುತ್ತಾರೆ. ಹುಡುಗಿಯರಿಗೆ ಬಿ-ಗರ್ಲ್ಸ್ ಎಂಬ ಹೆಸರಿದೆ. ಒಬ್ಬರಿಗೆ ಎದುರಾಗಿ ಇನ್ನೊಬ್ಬರು ನೃತ್ಯ ಮಾಡಬೇಕು. ಇದನ್ನು 'ಬ್ಯಾಟಲ್ಸ್' ಎನ್ನುತ್ತಾರೆ. 2004ರಿಂದ ನೃತ್ಯ ಸ್ಪರ್ಧೆ ನಡೆಸುತ್ತಿರುವ ಆಲ್ ಇಂಡಿಯ ಡ್ಯಾನ್ಸ್ ಸ್ಪೋರ್ಟ್ಸ್ ಫೆಡರೇಶನ್ ಇನ್ನು ಮುಂದೆ ಒಲಿಂಪಿಕ್ಸ್ ಅನ್ನು ದೃಷ್ಟಿಯಲ್ಲಿಟ್ಟುಕೊಂಡು ನೃತ್ಯ ಸ್ಪರ್ಧೆ ನಡೆಸಬೇಕು ಎನ್ನುವುದು ಆರಿಫ್ ಆಗ್ರಹ. ಐಪಿಎಲ್, ಪ್ರೊ ಕಬಡ್ಡಿಯಂತೆ ಬಿ-ಬಾಯಿಂಗ್‌ಗಾಗಿ 'ಬ್ರೇಕ್ ಡ್ಯಾನ್ಸ್ ಸೂಪರ್ ಲೀಗ್'ನಡೆಸಲು ಕಾರ್ಪೊರೇಟ್ ಕಂಪನಿಗಳು ಆಸಕ್ತಿ ತೋರಿಸಬೇಕು. ಹಾಗಾದಲ್ಲಿ ಬೆಂಗಳೂರು, ದೆಹಲಿ, ಚೆನ್ನೈ, ಚಂಡೀಗಢ, ಕೇರಳದಲ್ಲೂ ಶುರುವಾಗಿರುವ ಬಿ-ಬಾಯಿಂಗ್ ಇನ್ನು ಕೆಲವೇ ದಿನಗಳಲ್ಲಿ ಉಳಿದ ರಾಜ್ಯಗಳ ಪ್ರಮುಖ ನಗರಗಳ ಯುವಕರೂ ತಲೆಗಳನ್ನು ಗಿರಗಿರ ತಿರುಗಿಸಲು ಪ್ರೇರಕವಾಗಲಿದೆ.

ಮುನ್ನೋಟ 03-09-2023 ರಿಂದ 09-09-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಬೌದ್ಧಿಕ ಚಟುವಟಿಕೆಗಳಿಗೆ ಬೇಕಾದ ಸೂಕ್ತ ಪ್ರತಿಭಾನ್ವಿತರು ನಿಮಗೆ ದೊರೆಯುತ್ತಾರೆ. ಅವರನ್ನು ಸರಿಯಾಗಿ ಬಳಸಿಕೊಳ್ಳುವುದು ಅವಶ್ಯ. ನಿಮ್ಮ ದಾಂಪತ್ಯದಲ್ಲಿ ಅನ್ಯೋನ್ಯತೆಯನ್ನು ಕಂಡುಕೊಳ್ಳಲು ಯತ್ನಿಸುವಿರಿ. ಹೈನುಗಾರಿಕೆಯ ವೆಚ್ಚ ಏರಬಹುದು. ಸ್ಪರ್ಧಾತ್ಮಕ ಪರೀಕ್ಷೆ ತೆಗೆದುಕೊಳ್ಳುವವರು ಅದರ ಕಡೆ ಹೆಚ್ಚಿನ ಗಮನ ಹರಿಸಿ ಓದುವುದು ಒಳ್ಳೆಯದು. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶವಿರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ನಿಮ್ಮ ಯೋಜನೆಗಳನ್ನು ಬದಲಿಸುವಾಗ ಅದರಿಂದಾಗುವ ಪರಿಣಾಮಗಳನ್ನು ಗಮನಿಸಿ ಬದಲಿಸಿ. ಕಾರ್ಯಕ್ಷೇತ್ರದಲ್ಲಿ ಹಿಡಿತಕ್ಕೆ ಸಿಗದಿರುವ ಕೆಲವು ಕೆಲಸಗಳನ್ನು ಸಮರ್ಥವಾಗಿ ಮಾಡಿ ಮುಗಿಸುವಿರಿ. ಹಣಕಾಸಿನ ಸಮಸ್ಯೆಗಳು ಪರಿಹಾರವಾಗುತ್ತವೆ. ಸಾಲದ ಹಣ ಮರುಪಾವತಿ ಮಾಡಿ ಆತ್ಮಗೌರವ ಕಾಪಾಡಿಕೊಳ್ಳುವಿರಿ. ನಿಮ್ಮ ಉದ್ಯೋಗ ಸ್ಥಳದಲ್ಲಿದ್ದ ಕೆಲವು ಸಮಸ್ಯೆಗಳು ತಾನಾಗಿಯೇ ಬಗೆಹರಿಯುತ್ತವೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಭೂ ಸಂಬಂಧಿ ವ್ಯವಹಾರ ಮಾಡುವವರಿಗೆ ಆದಾಯ ಜಾಸ್ತಿ ಇರುತ್ತದೆ. ಗೃಹ ನಿರ್ಮಾಣ ಕಾರ್ಯ ಮಾಡುವವರಿಗೆ ಹೆಚ್ಚಿನ ನಿರ್ಮಾಣದ ಆದೇಶ ದೊರೆಯಬಹುದು. ರಾಜಕೀಯ ವ್ಯಕ್ತಿಗಳ ಜೊತೆ ಒಡನಾಟ ಹೆಚ್ಚಾಗಿ, ನಿಮ್ಮ ವೈಯಕ್ತಿಕ ಕೆಲಸಗಳಿಗೆ ಹೆಚ್ಚಿನ ಅನುಕೂಲವಾಗುತ್ತದೆ. ತಾಂತ್ರಿಕ ವರ್ಗದಲ್ಲಿ ಕೆಲಸ ಮಾಡುತ್ತಿರುವವರಿಗೆ ಕೆಲಸದ ಒತ್ತಡ ಹೆಚ್ಚಾಗಬಹುದು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ವ್ಯಾಪಾರ ವ್ಯವಹಾರಗಳಲ್ಲಿ ಚಾಣಾಕ್ಷತೆ ಮತ್ತು ಚಾಕಚಕ್ಯರಾಗಿರುವುದು ಬಹಳ ಒಳ್ಳೆಯದು. ಮೆಡಿಕಲ್ ವಿದ್ಯಾರ್ಥಿಗಳು ಅವರ ವಿದ್ಯೆಗಾಗಿ ಹೆಚ್ಚಿನ ಶ್ರಮ ಹಾಕಬೇಕಾದ ಅಗತ್ಯವಿದೆ. ಕೆಲವು ನಿರುದ್ಯೋಗಿಗಳು ಸಾಮಾಜಿಕ ಕಾರ್ಯಗಳಲ್ಲಿ ಹೊಸ ತಿರುವು ಪಡೆದುಕೊಳ್ಳುವ ಸಾಧ್ಯತೆ ಇದೆ. ಮನೋಬಲದಿಂದ ಹಿಡಿದ ಕಾರ್ಯಗಳನ್ನು ಸಾಧಿಸಿದಲ್ಲಿ ನಿಮಗೆ ಉತ್ತಮ ಹೆಸರು ಬರುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಕಾರ್ಯ ಕ್ಷೇತ್ರದಲ್ಲಿ ಅನುಭವಸ್ಥರ ಸಹಯೋಗದಿಂದ ನಿಮ್ಮ ಕೆಲಸ ಸರಾಗವಾಗಿ ಆಗುತ್ತದೆ. ರಾಜಕೀಯ ವ್ಯಕ್ತಿಗಳ ವಿರುದ್ಧವಾಗಿ ಎದುರಾಳಿಗಳು ಚಟುವಟಿಕೆಗಳನ್ನು ಪ್ರಾರಂಭಿಸುವರು. ನ್ಯಾಯಾಲಯದಲ್ಲಿ ಅಡೆತಡೆಗಳು ಉಂಟಾದರೂ ಕಾನೂನು ಹೋರಾಟವನ್ನು ಮುಂದುವರೆಸಬಹುದು. ಕೃಷಿಯಿಂದ ಲಾಭವಿರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ನಿಮ್ಮ ಅತಿಯಾದ ಅಹಂಭಾವವನ್ನು ಬಿಟ್ಟು ಆತ್ಮೀಯರ ಜೊತೆ ಹೊಂದಿಕೊಳ್ಳುವುದು ಉತ್ತಮ, ಇದರಿಂದ ನಿಮಗೆ ಹೆಚ್ಚು ಅನುಕೂಲವಾಗುತ್ತದೆ. ನಾಟಕ ಕಲಾವಿದರುಗಳಿಗೆ ಹೆಚ್ಚಿನ ಮನ್ನಣೆ ದೊರೆಯುತ್ತದೆ. ನ್ಯಾಯಾಧೀಶರುಗಳಿಗೆ ಸಂಕಷ್ಟಕರವಾದ ಅನಿವಾರ್ಯದ ಸಂದರ್ಭ ಬರಬಹುದು. ವಿದ್ಯುತ್ ಉಪಕರಣಗಳನ್ನು ತಯಾರಿಸುವವರಿಗೆ ಬೇಡಿಕೆ ಹೆಚ್ಚಾಗುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಮನೆಯಲ್ಲಿ ಎದುರಾಗುವ ಕೆಲವು ಸಂದರ್ಭಗಳಿಗೆ ನೀವು ಹೊಂದಿಕೊಳ್ಳಲೇಬೇಕಾದ ಅನಿವಾರ್ಯ ಪರಿಸ್ಥಿತಿ ಎದುರಾಗಬಹುದು. ವಿದ್ಯಾರ್ಥಿಗಳು ಪ್ರಗತಿಯಲ್ಲಿ ಮಂದಗತಿ ಕಾಣಬಹುದು. ಅಧಿಕಾರದಲ್ಲಿನ ಸ್ಥಾನಮಾನಗಳಿಗಾಗಿ ಮುಖಂಡರ ಸೇವೆ ಮಾಡುವಿರಿ. ನಿಮ್ಮ ವ್ಯವಹಾರದಲ್ಲಿ ಬರುವ ಹೊಸಬರ ಬಗ್ಗೆ ಹೆಚ್ಚು ಎಚ್ಚರ ವಹಿಸಿ. ಹಣದ ಒಳ ಹರಿವು ಮಂದಗತಿಯಲ್ಲಿ ಇರುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಸಮಾಜದಿಂದ ನೀವು ನಿರೀಕ್ಷಿಸಿದ್ದ ಸಹಾಯ ಈಗ ದೊರೆಯುತ್ತದೆ. ಉದ್ಯೋಗಿಗಳಿಗೆ ಅಪೇಕ್ಷಿತ ಧನ ಸಹಾಯ ದೊರೆಯುತ್ತದೆ. ಕಟ್ಟಡ ನಿರ್ಮಾಣ ಸಾಮಗ್ರಿಗಳನ್ನು ಮಾರಾಟ ಮಾಡುವವರಿಗೆ ಹೆಚ್ಚಿನ ಲಾಭವಿರುತ್ತದೆ. ತಾಮ್ರದ ವಸ್ತುಗಳನ್ನು ಮಾರಾಟ ಮಾಡುವವರಿಗೆ ವ್ಯವಹಾರ ವಿಸ್ತರಿಸುತ್ತದೆ. ಉನ್ನತ ವಿದ್ಯೆಗಾಗಿ ಯತ್ನಿಸುತ್ತಿರುವವರು ಹೆಚ್ಚು ಪರಿಶ್ರಮ ಪಡಬೇಕು.


ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ನಿಮ್ಮ ಉತ್ತಮ ಗುಣಗಳು ಎಲ್ಲರೊಂದಿಗೆ ಸ್ನೇಹದಿಂದ ಇರಲು ಅನುವು ಮಾಡಿಕೊಡುತ್ತವೆ. ಲೇಖಕರಿಗೆ ಅವರ ಲೇಖನಗಳಿಗೆ ಬೇಕಾದ ಉತ್ತಮ ಸಾಮಗ್ರಿಗಳು ದೊರೆಯುತ್ತವೆ ಹಾಗೂ ಅದಕ್ಕೆ ಬೇಕಾದ ಪೂರಕವಾದ ಸಾಕ್ಷಿಗಳು ದೊರೆಯುತ್ತವೆ. ಮನೆಯಲ್ಲಿ ಹಿರಿಯರ ಆರೋಗ್ಯ ಸಾಕಷ್ಟು ಸುಧಾರಿಸುತ್ತದೆ. ಸೌಂದರ್ಯ ವರ್ಧಕಗಳನ್ನು ತಯಾರಿಸುವವರಿಗೆ ನಿಧಾನವಾಗಿ ಬೇಡಿಕೆ ಹೆಚ್ಚಾಗುತ್ತದೆ. ಉದ್ಯೋಗಕ್ಕೆ ಸಂಬಂಧಿಸಿದ ಸಂಶೋಧನೆ ಕೆಲಸಗಳಿಗೆ ಹೆಚ್ಚು ಸಹಕಾರ ಸಿಗುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ನಿಮ್ಮ ಕೆಲಸ ಕಾರ್ಯಗಳಿಗೆ ಸ್ವಂತ ಪ್ರಯತ್ನದ ಜೊತೆಗೆ ದೈವ ಬಲವು ದೊರೆಯುತ್ತದೆ. ಕಾರ್ಯದ ಒತ್ತಡವು ಕಡಿಮೆಯಾದಂತೆ ಕಂಡರೂ ಅಷ್ಟೇ ಇರುತ್ತದೆ. ಹಣದ ಒಳಹರಿವು ಮಂದಗತಿಯಲ್ಲಿದ್ದರೂ ಅದನ್ನು ನಿಭಾಯಿಸುವ ಶಕ್ತಿ ಇರುತ್ತದೆ. ವಿದೇಶಕ್ಕೆ ಹೋಗಬೇಕೆನ್ನುವ ನಿಮ್ಮ ಇಚ್ಛೆಗೆ ಈಗ ಪೂರಕ ವಾತಾವರಣ ದೊರೆಯಬಹುದು. ವಿದೇಶದಲ್ಲಿ ಆಸ್ತಿ ವ್ಯವಹಾರ ನಡೆಸುವವರಿಗೆ ಅಭಿವೃದ್ಧಿ ಇರುತ್ತದೆ. ಮಕ್ಕಳಿಂದ ಧನಸಹಾಯ ದೊರೆಯಬಹುದು.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ವ್ಯವಹಾರಗಳನ್ನು ವಿಸ್ತರಿಸುವ ಮುಂಚೆ ಅದರ ಬಗ್ಗೆ ಸರಿಯಾಗಿ ಅವಲೋಕನ ಮಾಡಿ. ಯಾವುದೇ ಮುಂದಾಲೋಚನೆ ಇಲ್ಲದೆ ಯಾರಿಗೂ ಭರವಸೆ ನೀಡಬೇಡಿ. ಸರ್ಕಾರಿ ಕಚೇರಿಗಳಲ್ಲಿ ಕೆಲಸ ಮಾಡುವವರಿಗೆ ಕಾರ್ಯದ ಒತ್ತಡ ಹೆಚ್ಚಾಗಬಹುದು. ನಿಮ್ಮ ಸಹೋದ್ಯೋಗಿಗಳೊಡನೆ ಬಾಂಧವ್ಯ ಹೆಚ್ಚಿಸಿಕೊಳ್ಳುವುದು ಒಳ್ಳೆಯದು. ಕುಟುಂಬದ ಸದಸ್ಯರ ಜೊತೆ ಪ್ರವಾಸ ಹೋಗುವ ಸಾಧ್ಯತೆ ಇದೆ. ಹಣದ ಒಳಹರಿವು ನಿಮ್ಮ ನಿರೀಕ್ಷೆಯನ್ನು ತಲುಪುತ್ತದೆ. ನಿಮ್ಮ ಒಡಹುಟ್ಟಿದವರು ಆಸ್ತಿ ವಿಚಾರಗಳಲ್ಲಿ ಕಿರಿಕಿರಿ ಮಾಡಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ವೃತ್ತಿರಂಗದಲ್ಲಿ ದಿಢೀರ್ ಬದಲಾವಣೆಗಳು ಆಗಬಹುದು. ವ್ಯಾಪಾರ ವ್ಯವಹಾರಗಳ ಬಗ್ಗೆ ಸರಿಯಾಗಿ ಗಮನ ಇಡದಿದ್ದಲ್ಲಿ ಹಾದಿ ತಪ್ಪುವ ಸಾಧ್ಯತೆ ಇದೆ. ವಿದೇಶಿ ವ್ಯವಹಾರ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಮೋಟಾರ್ ವಾಹನಗಳನ್ನು ಮಾರಾಟ ಮಾಡುವವರಿಗೆ ವ್ಯಾಪಾರ ಹೆಚ್ಚಾಗಿ ಆದಾಯವು ಹೆಚ್ಚುತ್ತದೆ. ಆಸ್ತಿಯ ಬಗ್ಗೆ ಹೆಂಗಸರಿಂದ ಕಿರಿಕಿರಿಗಳು ಉಂಟಾಗಬಹುದು. ರಕ್ತಸಂಬಂಧಿ ದೋಷಗಳಿರುವವರು ಆಹಾರದಲ್ಲಿ ಎಚ್ಚರಿಕೆ ತೆಗೆದುಕೊಳ್ಳುವುದು ಉತ್ತಮ.

ಪದಬಂಧ 2805




ಮೇಲಿನಿಂದ ಕೆಳಕ್ಕೆ
1. ಮಹತೋಮಹೀಯನಾದ ಕೃಷ್ಣ ಅಣುವಿನಲ್ಲಿ ಅಣುವಾಗಿರುವ 5
2. ಕೊನೆಯತನಕ ಹೋರಾಡು 3
3. ಗಾಳಿಯ ಮಿತ್ರ 5
4. ಹರಿಯತ್ತಾ ಬರುವ ವಿಷ್ಣುವಿನ ಹೆಸರು 4
5. ವನದಲ್ಲಿ ಬೆಳೆಯುತ್ತಾ ಹೋಗುವ ಕೀರ್ತಿ 3
7. ದುರ್ಗಿಯ ಹೆಸರಲ್ಲಿ ಏಳು ನೂರು ಮಂತ್ರ 4
9. ರಾಜ್ಯದ ಆಡಳಿತ ಸೂತ್ರ ಇವರ ಕೈಲಿ 4
10. ಮಣಭಾರವಾಗುವ ರಮಾಳ ಪತಿ 3
11. ತಲೆಯ ಮೇಲೆ ಮೂಡಿರುವ ಉತ್ತರಕನ್ನಡ ಜಿಲ್ಲೆಯ ಊರು 3
13. ಪಶುಗಳದ್ದೇ ಪ್ರಪಂಚ 5
15. ಮೋಸಮಾಡಿ ಏನನ್ನಾದರೂ ಲಪಟಾಯಿಸಬಲ್ಲವ 3
16. ಇನ್ನೊಬ್ಬರಿಗೆ ಕೆಟ್ಟದ್ದನ್ನು ಬಯಸುವ ಗುಣ 5
17. ಅರಸಿ ನೆಲೆಸಿರುವ ಗೃಹ 4
19. ಊರದನದಲ್ಲಿ ಆನೆಯದಾಡೆ ಸಿಗಬಹುದೆ 3

ಎಡದಿಂದ ಬಲಕ್ಕೆ
1. ತಮ್ಮ ತಮ್ಮ ಕಾಲಕ್ಕೆ ಕಾಯುವ ಗಂಡನ ತಾಯಿ ಮತ್ತು ಮಗನ ಪತ್ನಿ 4
3. ಜೇನುತುಪ್ಪದ ವ್ಯಾಮೋಹದಿಂದ ಬರುವ ಸಿಹಿ ಕಾಯಿಲೆ 4
5. ಭೂ ಒಡೆಯನ ಮಗ ಶ್ರೀಕೃಷ್ಣ 6
6. ಸಂಗೀತದಲ್ಲಿ ಮೊದಲೆರಡು ಸ್ವರಗಳು ಸಮಾನವೇ? 4
8. ಮುರಾರಿ ವಿಹರಿಸಿದ ನದಿಯ ತಟ 5
11. ಶಿಖರದ ಪ್ರಾರಂಭದಲ್ಲಿ ಸಿಗುವ ಜುಟ್ಟು 2
12. ಕೃಷ್ಣನ ಸೋದರಮಾವ ಅರಸನಾಗಿದ್ದ ಪಟ್ಟಣ 3
13. ಜೀವವನ್ನು ಹಿಡಿದಿರುವ ಉಸಿರು 2
14. ಐಶ್ವರ್ಯವನ್ನು ಹೊಂದಿರುವ ಸಾಹುಕಾರನ ಗುಣ 5
17. ಇರುಳಿನಲ್ಲಿ ಅರಸಿಯಾಗಿ ಮೆರೆವ ಹೂವು 4
18. ದಾಸರ ನುಡಿಯಲ್ಲಿ ಉಡುಪಿಯ ಶ್ರೀಕೃಷ್ಣ ವಿಶ್ವವನ್ನೇ ಮೇಲೆತ್ತುವವ 6
20. ಕರಾರುವಾಕ್ಕಾದ ಕಾಲ, ಬೆಸವಾಗುವುದೇ ಇಲ್ಲ 4
21. ಸ್ವಂತಿಕೆಯ ಮಂದಿ 4

ಪದಬಂಧ ಉತ್ತರ -2804

ಮೇಲಿಂದ ಕೆಳಕ್ಕೆ
1.ಚತುರ 2.ಮಾಧವ 4.ಕಲ್ಪನಾ 5.ದರ್ಪಣ 7.ಸಪೂರ 8.ಳವದ 9.ವಿರಹಾ 10.ರಜಾಯಿ 13.ಸಮುದ್ರ 15.ಬಾಲಿಕಾ 21.ಜಯತೆ 22.ಲಕಡಿ 24.ಗರತಿ 25.ಖಿನ್ನತೆ

ಎಡದಿಂದ ಬಲಕ್ಕೆ
1.ಚಕ್ಕುಲಿಮಾಮ 3.ಶಂಕರಾನಂದ 6.ರಸಗವಳ 9.ವಿನಾಕಾರಣ 11.ವಠಾರ 12.ರಸವಾದ 14.ಹಾಲುಬಾಯಿ 16.ಚಂದ್ರಯಾನ 18.ಬಾಹ್ಯಾಕಾಶ 20.ರವಳಿ 21.ಜನಪಾಲಕ 23.ಗಗನಸಖಿ 26.ತೆನೆಗೂಡಿಸು 27.ನೀತಿಚರಿತೆ



ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆಯ 1941ರ ಜೂನ್ ಸಂಚಿಕೆಯ ಮುಖಪುಟ

ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆಯು ಅಕ್ಷರ ಲೋಕಕ್ಕೆ ಮರೆಯಲಾಗದ ಅನೇಕ ಸಂಚಿಕೆಗಳನ್ನು ನೀಡಿದೆ. ಈಗ ನೂರನೇ ಸಂಚಿಕೆ ರೂಪುಗೊಂಡಿರುವ ಹೊತ್ತಿನಲ್ಲಿ ಈ ಪತ್ರಿಕೆ ನಡೆದುಬಂದ ದಾರಿಯ ಮೇಲೆ ಬೆಳಕು ಚೆಲ್ಲುವ ಲೇಖನವಿದು.

‘ಪರಿಷತ್ಪತ್ರಿಕೆ’ ನೂರು ನಾಟ್‌ಔಟ್


ಎನ್.ಎಸ್.ಶ್ರೀಧರ ಮೂರ್ತಿ

ಕನ್ನಡ ಸಾಹಿತ್ಯ ಪರಿಷತ್ತು 1915ರ 5ರಂದು ಆರಂಭವಾಯಿತು. ಇದಕ್ಕೆ ಕಾರಣವಾದ ಮೊದಲ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ 1915ರ ಮೇ 3ರಿಂದ 5ರವರೆಗೆ ಬೆಂಗಳೂರು ಗೌರ್ನಮೆಂಟ್ ಹೈಸ್ಕೂಲಿನ ವಿಶಾಲ ಹಜಾರದಲ್ಲಿ 1915ರ ಮೇ 3ರಿಂದ 6ರ ವರೆಗೆ ನಡೆಯಿತು. ಅಲ್ಲಿ ಕೈಗೊಂಡ ನಿರ್ಧಾರಗಳಲ್ಲಿ ಕನ್ನಡಕ್ಕಾಗಿಯೇ ಒಂದು ವಿದ್ವತ್ ಪತ್ರಿಕೆ ಆರಂಭಿಸುವುದೂ ಕೂಡ ಒಂದಾಗಿತ್ತು. ಇದಕ್ಕಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಮೊದಲ ಅಧ್ಯಕ್ಷರಾದ ಎಚ್.ವಿ.ನಂಜುಂಡಯ್ಯನವರು ಕಾರ್ಯನಿರ್ವಾಹಕ ಮಂಡಳಿ ಸ್ಥಾಪಿಸಿದರು. ಇದರಲ್ಲಿ ಆರ್.ರಘುನಾಥರಾಯರು, ಎಂ.ಲಕ್ಷ್ಮೀನಾರಾಯಣಪ್ಪ, ಎಚ್.ಚೆನ್ನಕೇಶವಯ್ಯಂಗಾರ್ಯರು ಇದ್ದರು. ಆದಷ್ಟು ಬೇಗ ಮೊದಲ ಸಂಚಿಕೆ ತರುವ ಉದ್ದೇಶವಿದ್ದರೂ ಲಕ್ಷ್ಮೀನಾರಾಯಣಪ್ಪನವರ ನಿಧನ, ಮಹಾಯುದ್ಧದ ಕಾರಣ ಕಾಗದದ ಅಭಾವ, ದ್ರವ್ಯದ ಸಮಸ್ಯೆ. ಹೀಗೆ ಹಲವಾರು ತೊಂದರೆಗಳಿಂದ ಸಂಚಿಕೆ ವಿಳಂಬವಾಗಿ ಪ್ರಥಮ ಸಂಚಿಕೆ ನಳ ಸಂವತ್ಸರದ ಚೈತ್ರಮಾಸದಲ್ಲಿ (ಏಪ್ರಿಲ್ 1916ರಲ್ಲಿ) ಉದಯಿಸಿತು.

ಮೊದಲ ಸಂಚಿಕೆಯಲ್ಲಿಯೇ ಹದಿನಾರು ಅಂಶಗಳಲ್ಲಿ ಪತ್ರಿಕೆಯ ಉದ್ದೇಶವನ್ನು ಸ್ಪಷ್ಟಪಡಿಸಲಾಗಿದೆ. ಪರಂಪರೆಯ ಪರಾಮರ್ಶೆ, ಪ್ರಾಚೀನ ಕಾವ್ಯಗಳ ಸಾರಾಂಶವನ್ನು ಸಾಮಾನ್ಯರಿಗೂ ತಿಳಿಸುವುದು, ಭಾಷೆಯಲ್ಲಿನ ಪ್ರಬೇಧಗಳ ಏಕತೆ ಮತ್ತು ತಾರತಮ್ಯ, ಆಗಾಗ ನಡೆಯುವ ಉಪನ್ಯಾಸಗಳ ಪರಿಚಯ, ಕೃತಿ ಪರಿಚಯ ಇವುಗಳಲ್ಲಿ ಮುಖ್ಯವಾದುದು. ಮುಂದೆ ಕನ್ನಡ ಸಾಹಿತ್ಯ ಪರಿಷತ್ತು ಇದೇ ದಾರಿಯಲ್ಲಿ ನಡೆದಿದ್ದರಿಂದ ಒಂದು ರೀತಿಯಲ್ಲಿ ಈ ಮೊದಲ ಸಂಚಿಕೆ ಮಾರ್ಗಸೂಚಿ ಕೂಡ ಆಗಿದೆ.

ಪರಿಷತ್ ಪತ್ರಿಕೆಯ ಮೊದಲ ಹೆಸರು ‘ಕರ್ನಾಟಕ ಸಾಹಿತ್ಯ ಪರಿಷತ್ ಪತ್ರಿಕೆ’. ಆಗ ‘ಕರ್ಣಾಟಕ’ ಮತ್ತು ‘ಕರ್ನಾಟಕ’ ಎರಡೂ ಪ್ರಯೋಗಗಳಿದ್ದವು. ಮೈಸೂರು ಭಾಗದಲ್ಲಿ ‘ಕರ್ಣಾಟಕ’ ಎಂಬ ಪ್ರಯೋಗವಿದ್ದರೆ, ಬೊಂಬಾಯಿ ಪ್ರಾಂತ್ಯದಲ್ಲಿ ‘ಕರ್ನಾಟಕ’ ಎನ್ನುವ ಪ್ರಯೋಗವಿತ್ತು. ಕನ್ನಡ ಸಾಹಿತ್ಯ ಪರಿಷತ್ತನ್ನು ಕೂಡ ಆಗ ‘ಕರ್ಣಾಟಕ ಸಾಹಿತ್ಯ ಪರಿಷತ್ತು’ ಎಂದೇ ಕರೆಯಲಾಗುತ್ತಿತ್ತು. ಇದು ಆರಂಭದಿಂದಲೂ ವಾದ-ಪ್ರತಿವಾದಕ್ಕೆ ವಸ್ತುವಾಗಿತ್ತು. ಪರಿಷತ್ಪತ್ರಿಕೆಯ 23ನೆಯ ಸಂಪುಟದ ಮೊದಲ ಸಂಚಿಕೆಯನ್ನು (ಏಪ್ರಿಲ್ 1938ರ ಸಂಚಿಕೆ) ‘ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ’ ಎಂದು ಕರೆಯಲಾಯಿತು. ಇದಕ್ಕೆ ಆಗಿನ ಸಂಪಾದಕ ಮಂಡಳಿಯ ಅಧ್ಯಕ್ಷರಾಗಿದ್ದ ಬಿ.ಎಂ. ಶ್ರೀಕಂಠಯ್ಯನವರು ಅನುಮತಿ ನೀಡಿದ್ದರು. ಇದೂ ದೊಡ್ಡ ವಿವಾದಕ್ಕೆ ಕಾರಣವಾಯಿತು. ಕೊನೆಗೆ 1938ನೆಯ ಡಿಸೆಂಬರ್ ತಿಂಗಳಿನಲ್ಲಿ ಬಳ್ಳಾರಿಯಲ್ಲಿ ನಡೆದ ಸಕಲ ಸದಸ್ಯರ ಸಭೆಯಲ್ಲಿ ಎರಡೂ ವಾದವನ್ನು ಬಿಟ್ಟು ‘ಕನ್ನಡ ಸಾಹಿತ್ಯ ಪರಿಷತ್’ ಎಂಬ ಹೆಸರನ್ನು ಅಂಗೀಕರಿಸಲಾಯಿತು. ಅದರಂತೆ ‘ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ’ ಎಂದು ಪತ್ರಿಕೆಯ ಹೆಸರನ್ನೂ ಕೂಡ ಬದಲಾಯಿಸಲಾಯಿತು.

ಡಿ.ವಿ.ಗುಂಡಪ್ಪನವರು ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾದ ಕಾಲದಲ್ಲಿ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಲು ವಿಶೇಷ ಪ್ರಯತ್ನಗಳು ನಡೆದವು. ಆಗ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸುತ್ತಾ ಇದ್ದಿದ್ದು ‘ಪರಿಷತ್ಪತ್ರಿಕೆ’ಯನ್ನು ಮಾತ್ರ. ಅದು ವಿದ್ವತ್ ಪತ್ರಿಕೆಯಾಗಿತ್ತು. ಜನಸಾಮಾನ್ಯರು ಮತ್ತು ಪರಿಷತ್ತಿನ ನಡುವೆ ಸಂಪರ್ಕ ಇಟ್ಟುಕೊಳ್ಳಲು ಪ್ರತ್ಯೇಕ ಪತ್ರಿಕೆಯ ಅಗತ್ಯ ಬಿದ್ದಿತು. ಇದಕ್ಕಾಗಿ ‘ಪರಿಷತ್ ಪತ್ರಿಕೆಯ ಸಂಗ್ರಹ ಪತ್ರಿಕೆ’ ಎನ್ನುವುದನ್ನು ಆರಂಭಿಸಲಾಯಿತು. ಆರು ರೂಪಾಯಿ ಚಂದಾ ಕೊಡುವವರಿಗೆ ಪರಿಷತ್ ಪತ್ರಿಕೆ, ಮೂರು ರೂಪಾಯಿ ಕೊಟ್ಟವರಿಗೆ ಸಂಗ್ರಹ ಪತ್ರಿಕೆಯನ್ನು ಕಳುಹಿಸಲಾಗುತ್ತಿತ್ತು. ಇದನ್ನು ವಿಸ್ತರಿಸುವ ಉದ್ದೇಶದಿಂದ ‘ಸಂಗ್ರಹ ಪತ್ರಿಕೆ’ಯನ್ನು ‘ಕನ್ನಡ ನುಡಿ’ ಎಂದು ಬದಲಾಯಿಸಲಾಯಿತು. 1938ರ ಅಕ್ಟೋಬರ್ 4ನೆಯ ತಾರೀಖು ವಿಜಯದಶಮಿಯಂದು ‘ಕನ್ನಡ ನುಡಿ’ಯ ಪ್ರಕಟಣೆ ಆರಂಭವಾಯಿತು. ಅ.ನ.ಕೃಷ್ಣರಾಯರು ಇದರ ಮೊದಲ ಸಂಪಾದಕರಾದರು.



1963ರ ಜೂನ್ ಸಂಚಿಕೆ

ಇಲ್ಲಿಂದ ಮುಂದೆ ಪ್ರೊ.ಎ.ಆರ್. ಕೃಷ್ಣಶಾಸ್ತ್ರಿಗಳು ‘ಪರಿಷತ್ಪತ್ರಿಕೆ’ಯ ಸಂಪಾದಕರಾದರು.ಆಗ ಕನ್ನಡ ಭಾಷೆ, ಸಾಹಿತ್ಯ ಚರಿತ್ರೆ, ಸಂಸ್ಕೃತಿ, ಕಾವ್ಯಮೀಮಾಂಸೆಗೆ ಮಹತ್ವ ದೊರಕಿತು. ಮುಂದೆ ಪತ್ರಿಕೆಯ ಕಾಲಾವಧಿ ಆಗಾಗ ಬದಲಾದರೂ ಹೂರಣದಲ್ಲಿ ಹೆಚ್ಚಿನ ಬದಲಾವಣೆಯಾಗದೆ ವಿದ್ವತ್ ಪರಂಪರೆ ಮುಂದುವರೆಯಿತು. ಇದು ಕನ್ನಡ ಸಾಹಿತ್ಯ ಕಂಡ ಎಲ್ಲಾ ಸ್ಥಿತ್ಯಂತರಗಳಿಗೆ ಸಾಕ್ಷಿಯಾಯಿತು. ಎ.ಆರ್.ಕೃಷ್ಣಶಾಸ್ತ್ರಿಗಳ ಅವಧಿಯಲ್ಲಿ ಆದ ಬಹಳ ಮುಖ್ಯ ಬದಲಾವಣೆ ಎಂದರೆ ಇದಕ್ಕೆ ದೊರಕಿದ ಅಖಿಲ ಕರ್ನಾಟಕ ವ್ಯಾಪ್ತಿ. ನಾಡಿನ ವಿವಿಧೆಡೆಯಲ್ಲಿ ಹಂಚಿಹೋಗಿದ್ದ ವಿದ್ವಾಂಸರನ್ನು ಕನ್ನಡದ ಕಾರಣಕ್ಕೆ ಒಂದುಗೂಡಿಸಿದ ಹೆಗ್ಗಳಿಕೆ ಪರಿಷತ್ತಿನ ಪತ್ರಿಕೆಗೆ ಸಲ್ಲುತ್ತದೆ. ವಿಶೇಷವೆಂದರೆ ಪತ್ರಿಕೆಯು ಇಂಗ್ಲೆಂಡ್, ಜರ್ಮನಿ, ಅಮೆರಿಕ ಮೊದಲಾದ ದೇಶಗಳಲ್ಲಿದ್ದ ವಿದ್ವತ್ ಪತ್ರಿಕೆಗಳಿಗೂ ಮತ್ತು ಅಲ್ಲಿನ ವಿದ್ವತ್ ಸಂಸ್ಥೆಗಳಿಗೂ ಹೋಗುತ್ತಿತ್ತು. ಅಲ್ಲಿನವರನ್ನು ತಲುಪುವ ಕಾರಣದಿಂದಲೇ ಇಂಗ್ಲಿಷ್‌ನಲ್ಲಿ ವಿಷಯ ಸಂಗ್ರಹವನ್ನೂ ನೀಡಲಾಗುತ್ತಿತ್ತು. ಈ ಎಲ್ಲಾ ಅಂಶಗಳೂ ಕನ್ನಡ ಸಾಹಿತ್ಯ ಪರಿಷತ್ತಿನ ಪತ್ರಿಕೆ ಕನ್ನಡ ಸಾರಸ್ವತ ಪರಂಪರೆಯಲ್ಲಿ ಎಷ್ಟು ಮುಖ್ಯವಾದ ಪಾತ್ರವನ್ನು ವಹಿಸಿತ್ತು ಮತ್ತು ಕನ್ನಡ ಭಾಷೆಯ ಬೆಳವಣಿಗೆಯಲ್ಲಿ ಎಷ್ಟು ಮಹತ್ವದ ಪಾತ್ರವನ್ನು ವಹಿಸಿತ್ತು ಎನ್ನುವುದನ್ನು ಸೂಚಿಸುತ್ತದೆ.

ಪರಿಷತ್ ಪತ್ರಿಕೆ ಕನ್ನಡದ ಅತ್ಯಂತ ಹಳೆಯ ವಿದ್ವತ್ ಪತ್ರಿಕೆಯಾಗಿದ್ದು, ನಾಡಿನ ಎಲ್ಲಾ ಹಿರಿಯ ಮತ್ತು ಕಿರಿಯ ಬರಹಗಾರರ ಲೇಖನಗಳು ಇದರಲ್ಲಿ ಪ್ರಕಟವಾಗಿವೆ. ಕಲೆ, ಸಾಹಿತ್ಯ, ವಿಜ್ಞಾನ, ಇತಿಹಾಸ, ಪುರಾತತ್ವ, ಕಾವ್ಯ ಸೇರಿ ಬಹುತೇಕ ಎಲ್ಲಾ ಜ್ಞಾನಶಿಸ್ತುಗಳ ಕುರಿತ ಲೇಖನಗಳು ಇಲ್ಲಿ ಪ್ರಕಟವಾಗಿವೆ. ಅಷ್ಟೇ ಅಲ್ಲ, ಎಷ್ಟೋ ಜ್ಞಾನಶಿಸ್ತುಗಳ ಆರಂಭಿಕ ಹೆಜ್ಜೆಗುರುತುಗಳನ್ನು ಕೂಡ ಇಲ್ಲಿ ನೋಡಬಹುದು. ಈ ಅರ್ಥದಲ್ಲಿ ಪತ್ರಿಕೆಗೆ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಮಹತ್ವಗಳಿವೆ. 1948-49ರಲ್ಲಿ ‘ಹರಿದಾಸ ಸಾಹಿತ್ಯ’ಕ್ಕೆ ಸಂಬಂಧಿಸಿದಂತೆ 254 ಪುಟಗಳ ಬೃಹತ್ ಸಂಚಿಕೆ ರೂಪುಗೊಂಡಿತ್ತು. ಅದೇ ಮಾದರಿಯಲ್ಲಿ ನೂರನೆಯ ಸಂಪುಟದ ಸಂಗ್ರಾಹ್ಯ ಸಂಚಿಕೆಯನ್ನು ಈಗ ರೂಪಿಸಲಾಗಿದ್ದು, ಐವತ್ತು ಸಂಪುಟಗಳಲ್ಲಿ ಹಿಂದೆ ಪ್ರಕಟವಾಗಿರುವ ಆಯ್ದ ಲೇಖನಗಳನ್ನು ಬಳಸಿಕೊಳ್ಳಲಾಗಿದೆ. ರಾ.ಹ.ದೇಶಪಾಂಡೆ, ಆಲೂರ ವೆಂಕಟರಾವ್, ಟಿ.ಎಸ್.ವೆಂಕಣ್ಣಯ್ಯ, ಎಂ.ಆರ್.ಶ್ರೀನಿವಾಸ ಮೂರ್ತಿ, ಮಾಸ್ತಿ, ತೀ.ನಂ.ಶ್ರೀ, ಕುವೆಂಪು, ಗೋವಿಂದ ಪೈ, ಬೇಂದ್ರೆ, ಅ.ನ.ಕೃ, ಪು.ತಿ.ನ, ಡಿ.ವಿ.ಜಿ, ಬಿ.ಎಂ.ಶ್ರೀ ಹೀಗೆ ಹಲವು ಸಾಹಿತ್ಯ ಲೋಕದ ದಿಗ್ಗಜರ ಲೇಖನಗಳು ಒಟ್ಟಾಗಿ ದೊರಕುತ್ತಿರುವುದು ಸಾಂಸ್ಕೃತಿಕ ಮಹತ್ವದ ಸಂಗತಿಯಾಗಿದೆ.

ಉದ್ಘಾಟನಾ ಕೃತಿ ಹೆಗ್ಗಳಿಕೆಗೆ ಪಕ್ಕಾಗುವ ಕಾದಂಬರಿ

ವಿಮರ್ಶೆ

ಎಂ.ಎಸ್. ಆಶಾದೇವಿ

ಕೆಲವು ಕೃತಿಗಳಿಗೆ ಉದ್ಘಾಟನಾ ಕೃತಿಗಳ ಹೆಗ್ಗಳಿಕೆ ಸಿಗುತ್ತದೆ. ಸತೀಶ್ ಚಪ್ಪರಿಕೆಯವರ ಕಾದಂಬರಿ ‘ಫಾಂದ್ರುಕ್’ ಇಂಥ ಹೆಗ್ಗಳಿಕೆಗೆ ಸಕಾರಣವಾಗಿ ಪಾತ್ರವಾಗಬಲ್ಲ ಕಾದಂಬರಿ. ಹೊಸ ದಾರಿಯಲ್ಲಿ ತನ್ನ ಹೆಜ್ಜೆಯನ್ನು ಭದ್ರವಾಗಿ ಊರಬಲ್ಲ ಶಕ್ತಿ ಇರುವ ಕೃತಿಗಳು ಮುಂದೆ ಆ ದಾರಿಯಲ್ಲಿ ನಡೆಯಬಲ್ಲ ಸಾಧ್ಯತೆಯನ್ನು ತೆರೆಯುತ್ತವೆ, ಇಲ್ಲವೆ ಆ ದಾರಿಯಲ್ಲಿ ನಡೆಯಲು ಸಾಧ್ಯವಾಗದ ಅಪೂರ್ವ ಕೃತಿಗಳಾಗಿಯೂ ಉಳಿಯುತ್ತವೆ. ಸತೀಶರ ಈ ಕೃತಿ ಈ ಎರಡರಲ್ಲಿ ಯಾವ ಕಡೆಗೆ ವಾಲುತ್ತದೆ ಎಂದು ಹೇಳುವುದು ಕಷ್ಟ. ಇದು ಒಂದು ಅಂಶವಾದರೆ, ಇನ್ನೊಂದು ಮುಖ್ಯವಾದ ಸಂಗತಿಯೂ ಈ ಕಾದಂಬರಿಯ ವಿಷಯದಲ್ಲಿದೆ. ತನ್ನ ಕಾಲವನ್ನು ಅದರ ಮೂಲಭಿತ್ತಿಯಲ್ಲಿ ಹಿಡಿಯುವ ಪ್ರಯತ್ನವನ್ನು ಈ ಕಾದಂಬರಿ ಮಹತ್ವಾಕಾಂಕ್ಷೆಯಿಂದ, ಅದಕ್ಕೆ ಬೇಕಾದ ಎಲ್ಲ ತಯಾರಿಗಳಿಂದ, ಈ ಎರಡರಷ್ಟೇ ಮುಖ್ಯವಾದ ಉತ್ಕಟತೆಯಿಂದಲೂ ಮಾಡುತ್ತದೆ. ಮೊದಲ ಎರಡು ಯಾರಿಗಾದರೂ ಇರಬಹುದು, ಆದರೆ ಅದಮ್ಯ ಉತ್ಕಟತೆ ಮಾತ್ರ ಅಪ್ಪಟ ಬರೆಹಗಾರರಿಗೆ ಮಾತ್ರ ಸಾಧ್ಯವಾಗುವಂಥದ್ದು. ಅದು ಸತೀಶರಿಗೆ ಸಾಧ್ಯವಾಗಿದೆ ಎನ್ನುವುದು ಈ ಕೃತಿಯನ್ನು ಮುಖ್ಯವಾಗಿಸುವಲ್ಲಿ ನಿರ್ಣಾಯಕವಾದ ಪಾತ್ರ ವಹಿಸಿದೆ.

ಇರುವುದೆಲ್ಲವ ಬಿಟ್ಟು ಇರುವುದೆಂದರೆ ಏನು ಎನ್ನುವುದನ್ನು ಬೆನ್ನುಹತ್ತಿ ಹೋಗುವುದು ಎಲ್ಲ ಕಾಲದ ಹುಡುಕಾಟಗಳಲ್ಲಿ ಒಂದಾಗಿ ಸದಾ ಉಳಿದಿದೆ. ಅದು ಮನುಷ್ಯರ ಆದಿಮ ಹುಡುಕಾಟಗಳಲ್ಲಿ ಒಂದು ಎನ್ನುವುದೂ ಅಷ್ಟೇ ನಿಜ. ಆದರೆ ಇದನ್ನು ಸಾಧಿಸುವ ದಾರಿಯ ಹುಡುಕಾಟ, ಆ ದಾರಿಯಲ್ಲಿ ನಡೆಯುವ ಪ್ರಯಾಣ, ಆ ಪ್ರಯಾಣದ ಪುಳಕಗಳು ಮತ್ತು ಸಂಕಟಗಳು... ಇವುಗಳಷ್ಟೇ ಅಲ್ಲದೆ, ಆ ಪ್ರಯಾಣದುದ್ದಕ್ಕೂ ನೆರಳಿನಂತೆ ಹಿಂಬಾಲಿಸುವ ಪ್ರಶ್ನೆಯೊಂದಿದೆ. ಇದು ದಾರಿ ಹೌದಾ? ನಾನು ಹುಡುಕುತ್ತಿದ್ದುದು ಇದೇ ದಾರಿಯನ್ನೇ? ಗುರಿ ತಲುಪುವುದು ಮುಖ್ಯವೋ ಪ್ರಯಾಣವೇ ಅಂತಿಮವೋ? ಇಷ್ಟಕ್ಕೂ ಅದನ್ನು ಗುರಿ ಎನ್ನಬಹುದೆ? ಇಂಥ ಮೂರ್ತ, ಅಮೂರ್ತ ಪ್ರಶ್ನೆಗಳು ದಾರಿಗಂಟಿನಂತೆ ಹಿಂಬಾಲಿಸುವುದನ್ನು ಈ ಕೃತಿ ತಾತ್ವಿಕ ಪ್ರಶ್ನೆಯಂತೆ ಎದುರಿಸುವುದಿಲ್ಲ, ಅದು ಬದುಕುವ ಬಗೆಯೇ ಎನ್ನುವಷ್ಟು ಪ್ರಾಯೋಗಿಕ ನೆಲೆಯಲ್ಲಿಯೂ ಎದುರಿಸುತ್ತದೆ.


ಕಾದಂಬರಿಯ ನಾಯಕ ಸಿದ್ಧಾರ್ಥ, ಮೋಕ್ಷ ಹುಡುಕುತ್ತಾ ಪ್ರೀತಿಯ ಬಂಧನದಲ್ಲಿ ಅಥವಾ ಅಪ್ಪಟ ಬದುಕಿನ ಬಂಧನಕ್ಕೆ ವಾಪಸಾಗುವ ಭಿತ್ತಿಯನ್ನು ಹೊಂದಿದೆ. ಈ ಭಿತ್ತಿಯೂ ಹೊಸದಲ್ಲ, ಪರಿಣಾಮವೂ ಹೊಸದಲ್ಲ. ಹಾಗಾದರೆ ಸತೀಶರ ಈ ಕಾದಂಬರಿಯನ್ನು ‘ಹೊಚ್ಚ ಹೊಸದಾಗಿ’ಸಿರುವ ಅಂಶ ಯಾವುದು? ಪ್ರತಿ ಕಾಲವೂ ಬದುಕನ್ನು ಆದರ ಆದಿ-ಅಂತ್ಯವಿಲ್ಲದ ನೆಲೆಯಲ್ಲಿ ಒಪ್ಪುತ್ತಲೇ ತನ್ನ ಕಾಲದ ವ್ಯಾಖ್ಯಾನಕ್ಕೆ ಅದನ್ನು ಸಜ್ಜುಗೊಳಿಸಿಕೊಳ್ಳುವ ಪ್ರಯತ್ನವನ್ನೂ ಮಾಡುತ್ತಲೇ ಇರುತ್ತದೆ. ಆಧುನಿಕತೆಯ ಭವ ನಿಮಜ್ಜನ ಚಾತುರ್ಯದಲ್ಲಿ ನಂಬಿಕೆಯಿಟ್ಟ ಕಾಲಘಟ್ಟ ಇದು. ಭವವೆನ್ನುವುದು, ಅದರೆಲ್ಲ ಭವಾವಳಿಗಳನ್ನೂ ಒಂದೇ ಭವದಲ್ಲಿ ಉಂಡು ತೇಗ ಬಯಸುವ ದುರಾಸೆಯ ಕಾಲ ಇದು. ಅದರ ತುದಿಯಲ್ಲೇ ಮನುಷ್ಯರನ್ನು ಆ ಶಿಖರಾಗ್ರದಿಂದ ತೆಗೆದು ಬಿಸುಡವ ಶಕ್ತಿಯಿರುವುದೂ ಈ ಬದುಕಿಗೇ. ಅಸಾಧಾರಣವೆನಿಸುವ ಮಾನವ ಶಕ್ತಿಯು ಹುಲುಮಾನವರ ಕ್ಷುದ್ರ ಶಕ್ತಿಯಾಗಿಬಿಡುವ ವಿಪರ್ಯಾಸಗಳನ್ನು ಇಲ್ಲಿಯ ನಾಯಕ ಸಿದ್ಧಾರ್ಥ ಗ್ರಹಿಸುತ್ತಾನೆ. ಆದ್ದರಿಂದಲೇ ಅವನು ಈ ಕಾಲದ ಪ್ರತಿನಿಧಿ.

ಮುಂದೆ ಇವನು ಸೋಫಿಯಾಳ ಪಾಶಕ್ಕೆ ಅಥವಾ ಸೋಫಿಯಾ ಇವನ ಪಾಶಕ್ಕೆ ಸಿಕ್ಕುವುದು ಎಂದೆಲ್ಲ ಹೇಳಬಹುದು. ಆದರೆ ನಿಜದಲ್ಲಿ ಇವರಿಬ್ಬರೂ ವಾಪಸಾಗುವುದು ಬದುಕುವ ಮೋಕ್ಷದ ದಾರಿಗೆ. ಆದರೆ ಈ ಮರಳುವಿಕೆಯಲ್ಲಿಯೇ ಅವರು ಮೋಕ್ಷವನ್ನು ಪಡೆದ ಹೊಸ ಮನುಷ್ಯರಾಗಿದ್ದಾರೆ ಎನ್ನುವುದನ್ನು ಹಿಡಿಯುವಲ್ಲಿ ಈ ಕೃತಿ ಗೆದ್ದಿದೆ. ಈ ಕೃತಿಯ ಯಶಸ್ಸು ಇದು ಎನ್ನುವುದಕ್ಕಿಂತ, ತಾನು ಬದುಕುತ್ತಿರುವ ಕಾಲದ ಕನವರಿಕೆಯನ್ನು ಬಲು ಸಾಂದ್ರವಾಗಿ ಹೇಳಲು ಇದಕ್ಕೆ ಸಾಧ್ಯವಾಗಿದೆ ಎನ್ನುವುದು ಹೆಚ್ಚು ಸರಿ.

ವಾಚಾಳಿಯಾದ ಸಿದ್ಧಾರ್ಥ, ಕೆಲವೇ ಮಾತುಗಳ ಸೋಫಿಯಾ ಇವರಿಬ್ಬರೂ ಗಂಡು ಮತ್ತು ಹೆಣ್ಣುಗಳ ವ್ಯಕ್ತಿತ್ವಗಳನ್ನೇ ಘನೀಭವಿಸಿದ್ದಾರೆ. ಸಿದ್ಧಾರ್ಥನಿಗೆ ಹೋಲಿಸಿದರೆ ಅನೂಹ್ಯವಾದ ದುರಂತ, ಕ್ರೌರ್ಯ, ಹಿಂಸೆ, ಅಭದ್ರತೆಗಳ ಸರಣಿಯನ್ನೇ ಅನುಭವಿಸಿಯೂ ಸೋಫಿಯಾ ಬದುಕಿನ ಬಗೆಗಾಗಲೀ, ಸಂಬಂಧಗಳ ಬಗೆಗಾಗಲೀ ಸಿನಿಕಳಲ್ಲ, ಅವುಗಳ ಬಗೆಗೆ ತನ್ನ ನಂಬಿಕೆಯನ್ನೂ ಅವಳು ಎಂದೂ ಕಳೆದುಕೊಳ್ಳುವುದಿಲ್ಲ. ಇದಕ್ಕೆ ವಿರುದ್ಧವಾಗಿ ಸಿನಿಕತನದ ದಾರಿಗೆ ಹತ್ತಿರವಿದ್ದ ಸಿದ್ಧಾರ್ಥನನ್ನು ಅವಳು ಅದರಿಂದ ಪಾರು ಮಾಡಿ ಬದುಕಿನ ಅಪ್ಪುಗೆಗೆ ಜಾರುವಂತೆ ಮಾಡುತ್ತಾಳೆ. ಹೆಣ್ಣಿನ ಅದಮ್ಯ ಜೀವ ಜೀವನಪ್ರೀತಿಯನ್ನು ಇವಳು ಪ್ರತಿನಿಧಿಸುತ್ತಾಳೆ ಎಂದೇ ಅನ್ನಿಸುತ್ತದೆ. ಇದರ ನಡುವೆ ಸಿದ್ಧಾರ್ಥನ ಅಪ್ಪನ ಇನ್ನೊಂದು ಹೆಣ್ಣಿನ ಜೊತೆಗಿನ ಸಂಬಂಧವೂ ಅನಾವರಣಗೊಂಡು ಅದಕ್ಕೆ ಸಿದ್ಧಾರ್ಥ ಸ್ಪಂದಿಸುವ ಬಗೆಯೇ ಅವನ ಮರಳುವಿಕೆಯ ಮೊದಲ ಹೆಜ್ಜೆಯಾಗುತ್ತದೆ ಎನ್ನುವುದು ಅವನು ಅಪ್ಪಟ ಮನುಷ್ಯನಾಗುವ ಪ್ರಕ್ರಿಯೆಯೆ ಆರಂಭವೂ ಆಗುತ್ತದೆ.

ಸೋಲು, ಗೆಲುವುಗಳ ವ್ಯಾಖ್ಯಾನವೇ ಇವತ್ತಿನ ಮುಖ್ಯ ಪ್ರಶ್ನೆಗಳಲ್ಲಿ ಒಂದಾಗಿದೆ. ಸಂತೋಷ, ಸಮಾಧಾನಗಳ ಅರ್ಥವಿವರಣೆಯೂ ಇವತ್ತು ಬಹಳ ಸಂಕೀರ್ಣ. ಹಣ, ಅಧಿಕಾರ, ಸವಲತ್ತು ಇವುಗಳಿಗೆ ಬಲಿಯಾಗುತ್ತಿರುವಾಗಲೂ ಒಳಗಿನಿಂದ ಹುಟ್ಟುವ ಅನುಮಾನ, ಅಪನಂಬಿಕೆಗಳನ್ನು ಗಂಭೀರವಾಗಿ ತೆಗೆದುಕೊಂಡಾಗಲೇ ಬದುಕು ತನ್ನ ಬೆಳಕು, ಸೌಂದರ್ಯಗಳನ್ನು ಕಾಣಿಸುತ್ತದೆ. ಆದರೆ ಬೇಕಿರುವುದು ಅಂತರಾತ್ಮ ಕೇಳುವ ಈ ಪ್ರಶ್ನೆಗಳನ್ನು ಕೇಳಿಸಿಕೊಳ್ಳಬೇಕಾದ ಜಾಗರ ಸ್ಥಿತಿಯೊಂದನ್ನು ಕಾಪಿಟ್ಟುಕೊಳ್ಳಬೇಕು ಎನ್ನುವುದು.

ಈ ಎಲ್ಲವನ್ನೂ ಬಿಚ್ಚಿಹೇಳದೇ ಕಥನದ ರೂಪಕದಲ್ಲಿ, ರೂಪಕದ ಭಾಷೆಯಲ್ಲಿ ಕಟ್ಟಿಕೊಟ್ಟಿದೆ ‘ಫಾಂದ್ರುಕ್.’



ಪು: 424 ₹495

ಫಾಂದ್ರುಕ್
ಲೇ: ಸತೀಶ್ ಚಪ್ಪರಿಕೆ
ಪ್ರ: ಅಂಕಿತ ಪುಸ್ತಕ
ಸಂ:080-2661 7100

ತಪಸ್ ಪತನ...

10ನೇ ಪುಟದಿಂದ...

ಕೆಲ ವರ್ಷಗಳ ಹಿಂದೆ ಕೋಲಾರದ ಬಳಿಯ ಹಳ್ಳಿಯ ಮೇಲೆ ಹಾರಾಟ ನಡೆಸುತ್ತಿದ್ದ ‘ನಿಶಾಂತ್’ ಎಂಬ ಪರೀಕ್ಷಾ ವಿಮಾನವನ್ನು ತಾಂತ್ರಿಕ ಕಾರಣಗಳಿಂದ ಬರಡು ಭೂಮಿಯಲ್ಲಿ ಇಳಿಸಿ ದೊಡ್ಡ ಪ್ರಮಾದವನ್ನು ತಪ್ಪಿಸಿದ್ದೂ ಇದೆ. 2019ರಲ್ಲಿ ಕೂಡ ಎ.ಡಿ.ಇ. ನಿರ್ಮಿತ ಪರೀಕ್ಷಾ ವಿಮಾನ ಪತನಗೊಂಡಿತ್ತು. ಮುಂದೆ ದೇವನಹಳ್ಳಿಯಲ್ಲಿ ಬೆಂಗಳೂರಿನ ಹೊಸ ನಾಗರಿಕ ವಿಮಾನ ನಿಲ್ದಾಣ ಆರಂಭವಾದ ಬಳಿಕ ಇಂತಹ ಪ್ರಯೋಗಗಳನ್ನು ಅಲ್ಲಿ ಮುಂದುವರಿಸುವುದು ಖಂಡಿತ ಅಪಾಯಕಾರಿಯೇ ಆಯಿತು. ಹಾಗಾಗಿ ಈ ವಲಯದಲ್ಲಿಯೇ ಯಲಹಂಕದಲ್ಲಿನ ಭಾರತೀಯ ವಾಯುಸೇನೆಯ ಕಾರ್ಯನಿರತವಾದ ವಾಯುಕೇಂದ್ರ ಇರುವುದು. ಜಗತ್ತಿನ ಯಾವುದೇ ವೈಮಾನಿಕ ವಾಹಕಗಳ ವಿನ್ಯಾಸ ಕೇಂದ್ರ ಹಾಗೂ ಹಾರಾಟಗಳ ಪರೀಕ್ಷಾರ್ಥ ಪ್ರಯೋಗಗಳಲ್ಲಿ ಇಂತಹ ಅಪಘಾತಗಳು ತೀರಾ ಸಾಮಾನ್ಯ. ಅಮೆರಿಕ ದೇಶದಲ್ಲಿ ವಿನ್ಯಾಸಗೊಂಡು ಅಭಿವೃದ್ಧಿ ಪಡಿಸಿದ ಎಂ.ಕ್ಯೂ. ಜಿ. ಎಂಬ ಯು.ಎ.ವಿ (ಚಾಲಕರಹಿತ ವಿಮಾನ) ಕೂಡ ನಮ್ಮ ‘ತಪಸ್‘ ವಿಮಾನದ ಶ್ರೇಣಿಯಲ್ಲಿ ನಿರ್ಮಿತವಾಗಿದ್ದು, ಈ ವಿಮಾನವು ಪರೀಕ್ಷಾರ್ಥ ಹಾರಾಟದ ವೇಳೆ ಹಲವು ಬಾರಿ ಅಪಘಾತಕ್ಕೊಳಗಾಗಿತ್ತು. ಅದೂ ಅಲ್ಲದೆ ಈ ಯು.ಎ.ವಿ. ಶ್ರೇಣಿಯಿಂದ ಹಿಂದಾದ ಲಘು ಹಾಗೂ ಮಧ್ಯಮ ಗಾತ್ರದ ಚಾಲಕಸಹಿತ ಯುದ್ಧ ವಿಮಾನಗಳು ಕೂಡ ಹಲವು ಅಪಘಾತಗಳನ್ನು ಎದುರಿಸಿವೆ. ಆ ಬಳಿಕ ಪೂರ್ಣ ಪ್ರಮಾಣದಲ್ಲಿ ಉತ್ಪನ್ನ ಹಂತವನ್ನು ತಲುಪಿದ್ದೂ ಸತ್ಯ. ಆದರೆ ದೊಡ್ಡ ರಾಷ್ಟ್ರಗಳು ಇವನ್ನೆಲ್ಲಾ ಅತ್ಯಂತ ಗೌಪ್ಯವಾಗಿ ನಿರ್ವಹಿಸುತ್ತವೆ. ಹೀಗಾಗಿ ಇದೆಲ್ಲ ಬೆಳಕಿಗೆ ಬಾರದೆ ಹೋಗುತ್ತದೆ. ಅಭಿವೃದ್ಧಿಶೀಲ ರಾಷ್ಟ್ರಗಳು ಮೊದಲಿಗೆ ಮೂಲಸೌಕರ್ಯಗಳನ್ನು ನಿರ್ಮಿಸಿಕೊಂಡು ಸ್ವದೇಶೀಯವಾಗಿ ವಿನ್ಯಾಸ, ರಚನೆ, ಅಭಿವೃದ್ಧಿ ಮುಂತಾದ ಹಂತಗಳನ್ನು ದಾಟಿ ಪರೀಕ್ಷಾ ಹಾರಾಟಗಳನ್ನು ನಡೆಸುವಾಗ ಇಂತಹ ಅಪಘಾತಗಳು ಸಾಮಾನ್ಯ. ಏಕೆಂದರೆ, ಈ ಎಲ್ಲಾ ಪ್ರಯತ್ನಗಳ ಹಿಂದೆ ತಮ್ಮ ದೇಶಕ್ಕೆ ಅಗತ್ಯ ಇರುವ ಯುದ್ಧ ಸಲಕರಣೆಗಳನ್ನು ಸ್ವದೇಶೀಯವಾಗಿ ಮಾಡುತ್ತಾ ಬಹುಕೋಟಿಯ ಆಮದು ಕ್ರಿಯೆಯನ್ನು ಕಡಿಮೆ ಮಾಡುವ ಉದ್ದೇಶ ಅಡಗಿರುತ್ತದೆ.

ಬಡ ಹಾಗೂ ಇನ್ನೂ ಅಭಿವೃದ್ಧಿ ಹೊಂದಲಿರುವ ಸಣ್ಣ ರಾಷ್ಟ್ರಗಳಿಗೆ ಶಸ್ತ್ರಾಸ್ತ್ರಗಳನ್ನು ಮಾರುವ ದೊಡ್ಡ ಬಲಾಢ್ಯ ರಾಷ್ಟ್ರಗಳು ಲಾಭಕ್ಕಾಗಿ ರಫ್ತು ಮಾಡುವ ಅವಕಾಶವನ್ನು ಮುಂದುವರಿಸುವ ದೃಷ್ಟಿಯಿಂದ ಶಸ್ತ್ರಾಸ್ತ್ರ ಸಲಕರಣೆ ನಿರ್ಮಾಣದಲ್ಲಿ ಏಕಸ್ವಾಮ್ಯವನ್ನು ಕಾಪಾಡಿ, ಯಾರಿಗೂ ಸ್ವದೇಶೀಯವಾಗಿ ಈ ಕ್ಷೇತ್ರದಲ್ಲಿ ಸ್ವಾವಲಂಬನೆ ಪಡೆಯಲು ಬಿಡಲಾರವು. ಇಂತಹ ಆತಂಕಕಾರಿ, ಸ್ವಾರ್ಥ ವಹಿವಾಟುಗಳ ನಡುವೆ ನಮ್ಮ ದೇಶ ಹೋಮಿ ಜಹಾಂಗೀರ್ ಭಾಭಾ, ವಿಕ್ರಂ ಸಾರಾಭಾಯಿ, ಅಬ್ದುಲ್ ಕಲಾಂ ಹಾಗೂ ಇನ್ನಿತರ ವಿಜ್ಞಾನಿ ಶ್ರೇಷ್ಠರ ಕಾರ್ಯವೈಖರಿಗಳಿಂದಾಗಿ ಗಣನೀಯವಾಗಿ ಪ್ರಗತಿ ಸಾಧಿಸಿ ಇದೀಗ ಶೇ 65ರಷ್ಟು ನಮ್ಮ ರಕ್ಷಣಾ ಬೇಡಿಕೆಗಳನ್ನು ಸ್ವದೇಶೀಯವಾಗಿ ತಯಾರಿಸುತ್ತಿದ್ದೇವೆ. ಇದು ನಿಜಕ್ಕೂ ಅಭಿಮಾನದ ಸಂಗತಿ. ಈ ಸ್ವದೇಶಿ ಅಭಿಯಾನ ಅಂದರೆ ಆತ್ಮನಿರ್ಭರ ಭಾರತದ ಕಲ್ಪನೆಯಲ್ಲಿ ಬೆಂಗಳೂರಿನಲ್ಲಿ ವಿನ್ಯಾಸಗೊಂಡು ತಯಾರಾದ ‘ತೇಜಸ್’ ಲಘು ಯುದ್ಧ ವಿಮಾನ ಇದೀಗ ವಾಯುಪಡೆಯಲ್ಲಿ ಸೇವಾ ನಿಯುಕ್ತಿಗೊಂಡಿದೆ. ಈ ವಿಮಾನದ ಅಭಿವೃದ್ಧಿಯ ಸುದೀರ್ಘ ಯಾತ್ರೆಯಲ್ಲಿ ದೋಷರಹಿತ ಸಾವಿರಾರು ಪರೀಕ್ಷಾ ಹಾರಾಟಗಳನ್ನು ಯಾವುದೇ ಅಪಘಾತಗಳಿಲ್ಲದೆ ನಡೆಸಿದ ಕೀರ್ತಿ ಡಿ.ಆರ್.ಡಿ.ಒ. ಹಾಗೂ ವಾಯುಪಡೆಗೆ ಸಲ್ಲುತ್ತದೆ. ಹೀಗಾಗಿ ವೈಜ್ಞಾನಿಕ ಹಾಗೂ ತಾಂತ್ರಿಕ ಅಭಿಯಾನದ ಆವಿಷ್ಕಾರ ಚಿಂತನೆಯೊಂದಿಗೆ ಕೈಗೊಳ್ಳುವಾಗ ಇಂತಹ ಸಣ್ಣಪುಟ್ಟ ಅಪಘಾತಗಳು ತೀರಾ ಸಾಮಾನ್ಯ.



ಪತನಗೊಂಡ ‘ತಪಸ್-2’ ವಿಮಾನ

ಏನೇ ಇರಲಿ, ನಮ್ಮ ಬಹು ಆಕಾಂಕ್ಷೆಯ ‘ತಪಸ್’ ವಿಮಾನ ಎಲ್ಲಾ ವಿಧದ ಪರೀಕ್ಷೆಗಳಲ್ಲಿ ತೇರ್ಗಡೆಯಾದಾಗ ಇದರ ಕಾರ್ಯಾಚರಣೆ ಕ್ಷೇತ್ರ ಸಾವಿರ ಕಿಲೋಮೀಟರ್‌ಗಳಿಗೆ ವಿಸ್ತಾರಗೊಂಡು ಬೇಹುಗಾರಿಕೆ, ಎಚ್ಚರದ ಕ್ಷೇತ್ರಪಾಲನೆ ಹಾಗೂ ಭವಿಷ್ಯದ ಆಕ್ರಮಣ ಸೂಚನೆಗಳಂತಹ ಗಹನ ಕಾರ್ಯಗಳನ್ನು ಮಾಡಲು ಸಾಧ್ಯವಾಗುತ್ತದೆ ಎಂಬುದರಲ್ಲಿ ಸಂಶಯವಿಲ್ಲ. ಒಟ್ಟು ಬೇಡಿಕೆಯ 70 ವಿಮಾನಗಳಲ್ಲಿ 58 ಭಾರತೀಯ ಸೈನ್ಯಕ್ಕೂ ಉಳಿದ 12 ಭಾರತೀಯ ನೌಕಾಪಡೆಗೂ ಸೇರ್ಪಡೆಗೊಳ್ಳುವ ಮೊದಲು ಈ ಅಪಘಾತಕ್ಕೆ ಕಾರಣೀಭೂತವಾದ ತಾಂತ್ರಿಕ ದೋಷಗಳನ್ನು ನಿವಾರಿಸಿ, ಮತ್ತೆ ಹಾರಾಟದ ಅಖಾಡಕ್ಕಿಳಿದ ಬಳಿಕವೇ ಬಳಕೆದಾರರ ನಿರೀಕ್ಷಿತ ಮಜಲುಗಳನ್ನು ಸಾಗುವ ಪರೀಕ್ಷಾ ಹಾರಾಟಗಳನ್ನು ನಡೆಸಬೇಕಾಗಿದೆ. ಈ ಯೋಜನೆಯ ನಿರ್ಮಾಣದಲ್ಲಿ ‘ಭಾರತ್ ಎಲೆಕ್ಟ್ರಾನಿಕ್ಸ್’ನ ಪಾತ್ರವೂ ಮುಖ್ಯವಾಗಿದೆ.


ಬೆಂಗಳೂರಿನ ಎ.ಡಿ.ಇ. (ವೈಮಾನಿಕ ಅಭಿವೃದ್ಧಿ ಸಂಸ್ಥೆ) 1980ರಿಂದಲೇ ಚಾಲಕರಹಿತ ಯುದ್ಧ ವಿಮಾನದ ವಿನ್ಯಾಸ, ರಚನೆ ಹಾಗೂ ಪರೀಕ್ಷಾ ಹಾರಾಟಗಳಲ್ಲಿ ತೊಡಗಿಸಿಕೊಂಡು, ‘ಪೈಲಟ್‌ಲೆಸ್ ಟಾರ್ಗೆಟ್ ಏರ್‌ಕ್ರಾಫ್ಟ್’ (ಪಿ.ಟಿ.ಎ.) ನಿರ್ಮಿಸಿ, 1990-2000 ಅವಧಿಯಲ್ಲಿ ನಾಂದಿ ಹಾಡಿತು. ಆ ಬಳಿಕ ಲಕ್ಷ್ಯ-2, ಅಭ್ಯಾಸ್, ನಿಶಾಂತ್ (2000-2010), ರುಸ್ತುಂ-1 (2008-2015), ರುಸ್ತುಂ-2 (2014-2022)... ಇವುಗಳೆಲ್ಲಾ ಸೇನೆಯ ಬಳಕೆಗೆ ನಿಯೋಜಿತಗೊಂಡವು. ಇದೀಗ ಸುಧಾರಿತ ‘ತಪಸ್’ ಎಂಬ ಬಹು ಆಕಾಂಕ್ಷೆಯ ಯು.ಎ.ವಿ. ನಿರ್ಮಾಣದಲ್ಲಿ ತೊಡಗಿದೆ.

ಲೇಖಕರು: ನಿವೃತ್ತ ಪ್ರಾದೇಶಿಕ ಸಾರ್ವಜನಿಕ ಸಂಪರ್ಕಾಧಿಕಾರಿ
ಡಿ.ಆರ್.ಡಿ.ಒ. ಕೇಂದ್ರ ರಕ್ಷಣಾ ಇಲಾಖೆ

ಮೊದಲ ಓದು

ಅಗ್ರಹಾರದ ‘ಮನುಕುಲಾಧ್ಯಯನ’

ಸುಚೇತ ಕೆ.ಎಸ್. ಅವರ ‘ಬರಿ ಕತೆಯಲ್ಲ; ಅಗ್ರಹಾರದ ಕಥನ’ ಕೃತಿಯು ಕಾದಂಬರಿ ಹಾಗೂ ಕಥನಶೈಲಿಯ ಬರವಣಿಗೆಯ ಮಾದರಿ ಕಟ್ಟಿಕೊಡಬಹುದಾದ ಓದಿನ ಸುಖವನ್ನೇ ಉಣಿಸುತ್ತದೆ. ಅಗ್ರಹಾರ ಬ್ರಾಹ್ಮಣರ ನಿತ್ಯದ ಬದುಕಿನ ವಿವಿಧ ಮುಖಗಳನ್ನು ಲೇಖಕಿ ಈ ಪುಸ್ತಕದಲ್ಲಿ ತೆರೆದಿಟ್ಟಿದ್ದಾರೆ. 40 ಅಧ್ಯಾಯಗಳಿದ್ದು, ಉಪಭಾಗಗಳೂ ಸೇರಿದಂತೆ ನಾಲ್ಕು ಭಾಗಗಳಿವೆ. ಮೇಗಿನ ಬೀದಿಯಲ್ಲಿ ಹೊಯ್ಸಳ ಕರ್ನಾಟಕ ಹಾಗೂ ಕಮ್ಮೆ ಜನರಿದ್ದಾರೆ. ಕೆಳಗಿನ ಬೀದಿಯಲ್ಲಿ ಕಾಶ್ಮೀರಿ ಬ್ರಾಹ್ಮಣರು. ಮೇಲಿನವರಿಗೆ ಕೆಳಗಿನವರು ಒಂದು ರೀತಿಯಲ್ಲಿ ಹೊರಗಿನವರು. ಮಡಿವಂತಿಕೆಯಿಲ್ಲದೆ ಹೆಣ್ಣುಕಣ್ಣು ಅಗ್ರಹಾರದ ಬದುಕಿನ ಸಾಮಾಜಿಕ ಸೂಕ್ಷ್ಮಗಳನ್ನು ಹಿಡಿದು ಕೊಟ್ಟಿದೆ. ಸಂಶೋಧಕಿ ಆರ್. ಇಂದಿರಾ ಅವರು ಈ ಕೃತಿಯನ್ನು ಬ್ರಾಹ್ಮಣರ ಪೇಟೆಯೊಂದರ ವಿವಿಧ ಮುಖಗಳ ‘ಮನುಕುಲಾಧ್ಯಯನ’ ಎಂದೇ ಗುರುತಿಸಿದ್ದಾರೆ. ‘ಸಮುದಾಯದ ಬದುಕಿನ ಚರಿತ್ರೆಯ, ಹಲವು ಜೀವಂತ ವ್ಯಕ್ತಿಗಳ ಬದುಕಿನ ಜೀವನ ಚರಿತ್ರೆಯ ರೂಪದ ಚಿತ್ರಣ ಮತ್ತು ಆತ್ಮಕಥೆಯ ಲಕ್ಷಣಗಳನ್ನು ಒಳಗೊಂಡ ಈ ಕೃತಿ ಕನ್ನಡದ ವಿಶಿಷ್ಟ ಕೃತಿಗಳಲ್ಲಿ ಒಂದು’-ಇದು ವಿಮರ್ಶಕ ಓ.ಎಲ್. ನಾಗಭೂಷಣ ಮೆಚ್ಚುಗೆ. ‘ನಮ್ಮ ಸಂವೇದನೆಗಳಿಗೆ ಚುರುಕ್ ಎನ್ನುವಂತೆ ಬರೆ ಹಾಕುತ್ತಾ ಸಾಗುವ ಕಥನವಿದು’ ಎಂದು ಬಂಜಗೆರೆ ಜಯಪ್ರಕಾಶರು ಹೇಳಿದ್ದಾರೆ. ಒಂದೇ ಜಾತಿ-ಉಪಜಾತಿಗಳ ಹಲವು ಮನಸ್ಸುಗಳ ನಡುವಿನ ಸಾಮಾಜಿಕ-ಆರ್ಥಿಕ ತಾಕಲಾಟಗಳು ಹೇಗಿರುತ್ತವೆ ಎನ್ನುವ ಸತ್ಯಕ್ಕೆ ಕನ್ನಡಿ ಹಿಡಿಯುವ ಪುಸ್ತಕವಿದು.



ಪು: 384 ₹400


ಬರಿ ಕತೆಯಲ್ಲ;
ಅಗ್ರಹಾರದ ಕಥನ
ಲೇ: ಸುಚೇತ ಕೆ.ಎಸ್.
ಪ್ರ: ಅಭಿರುಚಿ ಪ್ರಕಾಶನ, ಮೈಸೂರು
ಸಂ: 9980560013

ಶಿಕ್ಷಣ ವ್ಯವಸ್ಥೆಯ ಚಿತ್ರಣ ಕಟ್ಟಿಕೊಡುವ ಕೃತಿ

ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದ ನೀತಿ, ಕಾರ್ಯಕ್ರಮ ಮತ್ತು ಅವುಗಳ ಜಾರಿಗಾಗಿ ಹೂಡುವ ಸಂಪನ್ಮೂಲಗಳ ಸ್ಥಿತಿಗತಿ ಬಗ್ಗೆ ಬೆಳಕು ಚೆಲ್ಲುವ ಕೃತಿ ‘ಶಿಕ್ಷಣ ಕಥನ’. ನಮ್ಮ ನಾಡಿನ ಶಿಕ್ಷಣ ತಜ್ಞರಲ್ಲಿ ಒಬ್ಬರಾದ ನಿರಂಜನಾರಾಧ್ಯ ವಿ.ಪಿ. ಈ ಕೃತಿಯ ಲೇಖಕರು. ಶಿಕ್ಷಣಕ್ಕೆ ಸಂಬಂಧಿಸಿದ ಬೆಳವಣಿಗೆಗಳ ಕುರಿತು ಆಯಾ ಕಾಲಘಟ್ಟದಲ್ಲಿ ಬರೆದ ಬಿಡಿ ಬಿಡಿ ಲೇಖನಗಳನ್ನು ಹೊಂದಿರುವ ಕೈಪಿಡಿಯಂತಹ ಕೃತಿಯಿದು.

‘ಸಾಂವಿಧಾನಿಕ ಮೌಲ್ಯಗಳ ನೆಲೆಯಲ್ಲಿ ಒಂದು ಸುಭದ್ರ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಸಮಾನತೆ ನೆಲೆಯಲ್ಲಿ ನೆರೆಹೊರೆಯ ಸಮಾನ ಶಾಲೆಯ ಚೌಕಟ್ಟಿನಲ್ಲಿ ಕಟ್ಟಿಕೊಳ್ಳುವ ಮೂಲಕ ಭಾರತವನ್ನು ಒಂದು ಸಾರ್ವಭೌಮ ಗಣರಾಜ್ಯವನ್ನಾಗಿಸುವ ಗಂಭೀರ ಚಿಂತನೆಗೆ ಸಕಾಲವಿದು. ಆ ನಿಟ್ಟಿನಲ್ಲಿನ ಬರಹಗಳನ್ನು ಈ ಕೃತಿ ಹೊಂದಿದೆ’ ಎಂದು ಲೇಖಕರು ಪ್ರಸ್ತಾವನೆಯಲ್ಲಿಯೇ ತಿಳಿಸಿದ್ದಾರೆ.

ಪುಸ್ತಕದಲ್ಲಿ ಆರು ವಿಭಾಗಗಳಿವೆ. ರಾಷ್ಟ್ರೀಯ ಶಿಕ್ಷಣ ನೀತಿಯ ಸುತ್ತಮುತ್ತಲಿನ ಚರ್ಚೆಗಳು ಮೊದಲ ವಿಭಾಗದಲ್ಲಿವೆ. ಈ ನೀತಿಯ ಆಗುಹೋಗುಗಳ ಕುರಿತಾದ ಸ್ಪಷ್ಟ ಚಿತ್ರವಣನ್ನು ಲೇಖಕರು ಕಟ್ಟಿಕೊಡುತ್ತಾರೆ. ನೀತಿಯ ಅವಸರದ ಅನುಷ್ಠಾನ ಹೇಗೆ ಅಸಾಂವಿಧಾನಿಕ ಎಂಬುದನ್ನು ಈ ವಿಭಾಗದಲ್ಲಿ ಚರ್ಚಿಸಿದ್ದಾರೆ. ಶಿಕ್ಷಣದಲ್ಲಿ ಭಾಷಾ ಮಾಧ್ಯಮ ಕುರಿತ ಚರ್ಚೆಗಳನ್ನು ಎರಡನೇ ಅಧ್ಯಾಯ ಹೊಂದಿದೆ. ಮಾತೃಭಾಷೆ ಶಿಕ್ಷಣದ ಪ್ರಾಮುಖ್ಯವನ್ನು ಇಲ್ಲಿನ ಲೇಖನಗಳು ವಿವರಿಸುತ್ತವೆ. ಕಲಿಕೆಯಲ್ಲಿ ಪರೀಕ್ಷೆಯ ಪಾತ್ರ, ಶಾಲಾ ಶಿಕ್ಷಣ ಮತ್ತು ಆಯವ್ಯಯ, ಕರ್ನಾಟಕದಲ್ಲಿ ಶಾಲಾ ಶಿಕ್ಷಣದ ಸುತ್ತಲಿನ ಪ್ರಶ್ನೆಗಳು, ಕೋವಿಡ್ ಕಾಲದಲ್ಲಿ ಶಿಕ್ಷಣದ ಕೂಗು ಸೇರಿದಂತೆ ಶಿಕ್ಷಣ ವ್ಯವಸ್ಥೆ ಸುತ್ತಲಿನ ಸಾಕಷ್ಟು ವಿಚಾರಗಳು ಕೃತಿಯಲ್ಲಿವೆ.



ಪು: 160 ₹165

ಶಿಕ್ಷಣ ಕಥನ
ಲೇ: ನಿರಂಜನಾರಾಧ್ಯ ವಿ.ಪಿ.
ಪ್ರ: ಅಹರ್ನಿಶಿ ಪ್ರಕಾಶನ
ಸಂ: 9449174662

ಮೂರು ಕೃತಿಗಳಲ್ಲಿ ‘ಚೊಕ್ಕಾಡಿ ಸಮಗ್ರ’

ಕವಿಯಾಗಿ ಛಾಪು ಮೂಡಿಸಿರುವ ಸುಬ್ರಾಯ ಚೊಕ್ಕಾಡಿ ಅವರು ಕಥೆ, ಕಾದಂಬರಿ ಪ್ರಕಾರಗಳಲ್ಲೂ ಕೈಯಾಡಿಸಿದವರು. ವಿಮರ್ಶಾ ಕೃಷಿಯನ್ನೂ ಮಾಡಿರುವ ಅವರು, ಸಾಹಿತ್ಯ ಪ್ರವೇಶಿಸುವವರಿಗೆ ಮೂಲಪಾಠ ಹೇಳುವ ಬಗೆಯಲ್ಲಿ ವಿಮರ್ಶಾ ಪಠ್ಯ ಕಟ್ಟಿಕೊಟ್ಟವರು. ರೂಪ ಪ್ರಕಾಶನವು ಅವರ ಸಮಗ್ರ ಬರಹಗಳನ್ನು ಮೂರು ಕೃತಿಗಳ ರೂಪದಲ್ಲಿ ಹೊರತಂದಿದೆ. ಅರವಿಂದ ಚೊಕ್ಕಾಡಿ ಇವನ್ನು ಸಂಪಾದಿಸಿದ್ದಾರೆ. ಮೊದಲ ಸಂಪುಟದ ಶೀರ್ಷಿಕೆ ‘ಬಂಟಮಲೆಯ ಧ್ಯಾನ’- ಕಾವ್ಯ ಸಂಕಲನ (ಪುಟ: 868, ಬೆಲೆ: ₹950). ಆರು ದಶಕಗಳ ಕಾಲ ಸುಬ್ರಾಯ ಚೊಕ್ಕಾಡಿಯವರು ಬರೆದ 400ಕ್ಕೂ ಹೆಚ್ಚು ಕವನಗಳು ಇದರಲ್ಲಿವೆ. ಎರಡನೆಯ ಸಂಪುಟ ‘ಕಥಾಲೋಕ’ (ಪುಟ: 284, ಬೆಲೆ: ₹300). ಇದರಲ್ಲಿ ಹತ್ತು ಕಥೆಗಳಿವೆ. ‘ಸಂತೆಮನೆ’ ಎನ್ನುವ ಕಾದಂಬರಿಯೂ ಸೇರಿದೆ. ಮೂರನೇ ಸಂಪುಟ ‘ಅವಲೋಕನ’ (ಪುಟ: 580, ಬೆಲೆ: ₹600). ಇದರಲ್ಲಿ ‘ದಕ್ಷಿಣ ಕನ್ನಡ ಕಾವ್ಯ ಸಮೀಕ್ಷೆ-ಕೃತಿ ಶೋಧ’, ‘ಒಳಹೊರಗು’ (ವಿಮರ್ಶಾ ಲೇಖನಗಳ ಸಂಕಲನ), ‘ಸಮಾಲೋಕ’ ಎಂಬ ಮೂರು ವಿಭಾಗಗಳಿವೆ. ಗಂಗಾಧರ ಚಿತ್ತಾಲರ ಸಮಗ್ರ ಕಾವ್ಯದ ಹೊಸ ಓದಿಗೆ ಸಂಬಂಧಿಸಿದ ಒಂದು ಲೇಖನವಲ್ಲದೆ, ಕೆ.ಟಿ. ಗಟ್ಟಿ, ವೈದೇಹಿ, ಕುಸುಮಾ ಶಾನುಭಾಗ ಮೊದಲಾದವರ ಸಾಹಿತ್ಯದ ಬಗೆಗಿನ ವಿಮರ್ಶೆಗಳಿವೆ. ಜಯಂತ ಕಾಯ್ಕಿಣಿಯವರ ಅಂಕಣ ಬರಹಗಳು ಹಾಗೂ ಜೋಗಿ ಕತೆಗಳಿಗೆ ಸಂಬಂಧಿಸಿದ ವಿಮರ್ಶಾ ಬರಹವೂ ಮೂರನೇ ಸಂಪುಟದಲ್ಲಿದೆ. ಸಾಹಿತ್ಯವನ್ನು ಅಭ್ಯಾಸ ಮಾಡುವವರಿಗೆ ಈ ಸಂಪುಟದ ಎಷ್ಟೋ ಲೇಖನಗಳು ಹೊಸ ಹೊಳಹುಗಳನ್ನು ನೀಡಬಲ್ಲವು.



ಸುಬ್ರಾಯ ಚೊಕ್ಕಾಡಿ ಸಮಗ್ರ ಬರಹಗಳು
ಸಂ: ಅರವಿಂದ ಚೊಕ್ಕಾಡಿ
ಪ್ರ: ರೂಪ ಪ್ರಕಾಶನ
ಸಂ: 9342274331

ರಾಜಸ್ಥಾನದ ನೆನಪಿನಬುತ್ತಿ... ರಾಜಸ್ಥಾನದ ನೆನಪಿನಚ್ಚುಗಳು

